ಕರ್ಣಾಟಕ ಕಾವ್ಯಕಲಾನಿಧಿ

ಕೋಶಸಂಖ್ಯೆ— ೨೫

ಭಾಳಲೋಚನ

ವಿರಚಿತ

ಬತ್ತೀಸಪುತ್ತಳಿ ಕಥೆ

ಮಂ. ಅ. ರಾಮಾನುಜಯ್ಯಂಗಾರ್ಯರಿಂ

ಸಂಶೋಧಿತವಾಗಿ ಪ್ರಕಾಶಮಾಡಿದುದು

ಕ್ರಯ ೧—೦—೦]

002

KARNATAKA

Kavya Kalanidhi Series No. 25.

BATTISA PUTTALI KATHE

BY

BHALA LOCHANA.

ಭಾಳಲೋಚನ ವಿರಚಿತ

ಬತ್ತೀಸ ಪುತ್ತಳಿ ಕಥೆ

EDITED BY

M. A. Ramanuja Iyengar
Asst. Master, Maharani's College, Mysore.

MYSORE:
PRINTED AT THE G. T. A. PRESS.

1908

ಬತ್ತೀಸಪುತ್ಥಳಿ ಕಥೆ.

ಪ್ರವೇಶ

ಈ ಗ್ರಂಥವನ್ನು ಎರಡು ಪ್ರತಿಗಳ ಸಹಾಯದಿಂದ ಮುದ್ರಿಸಿರುತ್ತೇನೆ. ಅವುಗಳಲ್ಲಿ ಒಂದು ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಗೆ ಸೇರಿದ ಕತ್ತಕಾಗದದ ಪ್ರತಿಯು. ಮತ್ತೊಂದು ಓಲೆಗರಿಯ ಪುಸ್ತಕ. ಇವೆರಡು ಮಾತೃಕೆಗಳೂ ಯಾವುದೋ ಒಂದು ಪ್ರಾಚೀನ ಚಂಪುವಿನ ಆಧಾರದಮೇಲೆ ಹುಟ್ಟಿದುವುಗಳೆಂಬದಾಗಿ ತೋರುತ್ತದೆ. ನಮ್ಮ ಭಂಡಾರದಲ್ಲಿ ಬಹಳ ಅಶುದ್ಧವಾದ ಬತ್ತೀಸಪುತ್ಥಳಿಯೆಂಬ ಒಂದು ಚಂಪೂಗ್ರಂಥವು ಇದೆ. ಆಗ್ರಂಥಕ್ಕೂ ಈಗ ಅಚ್ಚಿಟ್ಟ ಗ್ರಂಥಕ್ಕೂ ಕೆಲಕೆಲವು ಕಡೆ ಒತ್ತು ಬರುತ್ತದೆ; ಕೆಲಕೆಲವುಕಡೆ ವ್ಯತ್ಯಾಸಬರುತ್ತದೆ. ಆದುದರಿಂದ ಆಚಂಪೂಗ್ರಂಥದ ಆಧಾರದಮೇಲೆಯೇ ಈಪ್ರಕೃತಗ್ರಂಥವು ಹುಟ್ಟಿತೆಂದು ನಿರ್ಧರವಾಗಿ ಹೇಳುವುದಕ್ಕಾಗುವುದಿಲ್ಲ. ದೇವಣಾರ್ಯ ಅಥವಾ ಕವಿದೇವನಿಂದ ರಚಿತವಾದ "ದ್ವಾತ್ರಿಂಶತ್ಪುತ್ತಳಿಕೆ" ಯೆಂಬ ಚಂಪೂವಿನ ಮೇಲೆ ಹುಟ್ಟಿತೆಂದೂ ಹೇಳುವುದಕ್ಕಾಗುವುದಿಲ್ಲ. ಓಲೆಯ ಮಾತೃಕೆಯ ಕೊನೆಯಲ್ಲಿಯಾದರೊ --

"ಕ್ಷೇಮೇಂದ್ರ ಭೂಭುಜಂ ಪೇಳ್ದ ಹದಿನೆಂಟನೆಯ ಲಂಬಕದ ಬತ್ತೀಸಪುತ್ಥಳಿಕಥಾಪ್ರಬಂಧವ ಇಂಬೊದವಿದ ಬೃಹತ್ಕಥಾರಸದೊಳುಳ್ಳ ಜಗಕ್ಕೆ ನೆಗಳ್ತೆವೆತ್ತ ಸಂದನುಪಮವಿಕ್ರಮಾರ್ಕನ ಸುವೀರತೆಯ ಕಡುಭೋಗದೇಳ್ಗೆಯೆಂಬ ಅನನುತ್ತಮಮಾದ ಪುತ್ಥಳಿಯ ಸತ್ಕಥೆಯ ಕನಕಪಾಂಡುರಂಗನಾಥನ ಸುತ ಭಾಳಲೋಚನಕರಂ ಕವಿದೇವನಿಂದ ನೆಗಳ್ಚಿದಂ ಸಲೆ ಧೈರ್ಯಾಮೃತಮಂನೆಗಳ್ತವಡೆದಿರ್ಪ ವಾಮನೂರಿಕ ಕಥಾದಿನಿಯಂ ಮೇಣಾಶಕುನ ಪ್ರಪಂಚ ಜಯಮಂ ಬತ್ತೀಸ ಸತ್ಪುತ್ರಿಕಾಸ್ತೀಲ ಸಿಂಹಾಸನದೊಂದು ಸತ್ಕಥೆಗಳಂ ದಕ್ಷಾಧ್ವರಧ್ವಂಸಮುಜ್ವಲಚಾರಿತ್ರವನ್ನೈದೆ ನಿರ್ಮಿಸಿದನೀ ಭಾಳೇಕ್ಷ ದೇವೋತ್ತಮಂ. ಕುಳಿರ್ವೆರಲಂತೆ ನಂದನ ತಮಾಲದ ಕಣ್ಗಳಂತೆ ಪುಷ್ಪಮಂಡಲ ನವಗಂಧದಂತೆ ಪುದಿದಿನ್ನ ಪಿರಂತೆ ನಿಜಪ್ರಿಯಾಂಗನೋಜ್ವಲರಕ್ತಿಯಂತೆ ಚಂದನದಂತೆ ಇದು ಇನಸೌರಭದಂತೆ ಜನರಂ ತಲೆದೂಗಿಸದೇ ನಿರಂತರಂ"— ಎಂದಿದೆ. ಇದನ್ನು ನೋಡಿದರೆ ಭಾಳೇಕ್ಷದೇವನೆಂಬುವನು ಬರೆದ ಗ್ರಂಥಗಳಲ್ಲಿ ಬತ್ತೀಸಪುತ್ಥಳಿಯೆಂಬುದೊಂದು ಗ್ರಂಥವು ಇರುವುದೆಂದೂ, ಆ ಗ್ರಂಥವು ಚಂಪೂರೂಪದಲ್ಲಿರಬೇಕೆಂದೂ,(೧೩೭ ಪುಟದ ಪಾಠಾಂತರವನ್ನು ನೋಡಿ). ಆ ಚಂಪೂರೂಪವಾದ ಗ್ರಂಥವನ್ನು ನೋಡಿ ಯಾವನೋ ಒಬ್ಬನು ಬಾಲಕರ ಸೌಕರ್ಯಕ್ಕಾಗಿ ಹೊಸಗ

ನ್ನಡದ ಗದ್ಯದಲ್ಲಿ ಆ ಗ್ರಂಥವನ್ನು ಬರೆದು ಅದಕ್ಕೆ ಆ ಕವಿಯ ಹೆಸರನ್ನೇ ಕೊಟ್ಟಿರಬಹುದೆಂದೂ ತೋರುತ್ತದೆ. ಆ ಚಂಪೂಗ್ರಂಥವು ಸುಮಾರು ೧೬ ನೆಯ ಶತಮಾನದಲ್ಲಿ ಹುಟ್ಟಿದುದಾಗಿರಬೇಕು. ಈ ಗದ್ಯಗ್ರಂಥವು ೧೮ನೆಯ ಶತಮಾನಕ್ಕೆ ಪೂರ್ವದಲ್ಲಿಯೇ ಬರೆಯಲ್ಪಟ್ಟಿರಬೇಕು. ಅದೇಕಾಲದಲ್ಲಿ ಹುಟ್ಟಿರಬೇಕೆಂದು ಹೇಳುವುದಕ್ಕೆ ಬಹಳ ಅವಕಾಶವೂ ಇದೆ.

ಈ ಗ್ರಂಥಕರ್ತನು ಭಾಳಲೋಚನನೆಂದು ಗ್ರಂಥಾದಿಯಲ್ಲಿ ಬರೆದಿದೆ. ಈತನು ಗ್ರಂಥಕರ್ತನಲ್ಲವೆಂಬದಾಗಿಯೂ ತೋರುತ್ತದೆ. ಏಕೆಂದರೆ— ಗ್ರಂಥಾದಿಯಲ್ಲಿ ಒಂದು ಪದ್ಯವೂ ಬರೆದಿಲ್ಲ. ಒಂದು ಮಾತೃಕೆಯ ಕೊನೆಯಲ್ಲಿ ಮಾತ್ರ "ಭಾಳಲೋಚನಕರಂ ಕವಿದೇವನಿಂದ ನೆಗಳ್ದಿದಂ" ಎಂದೂ, "ಶಕುನ ಪ್ರಪಂಚ, ದಕ್ಷಾಧ್ವರಧ್ವಂಸ ಚಾರಿತ್ರಮನ್ನೈದೆ ನಿರ್ಮಿಸಿದನೀ ಭಾಳೇಕ್ಷ ದೇವೋತ್ತಮಂ' ಎಂದೂ ಇದೆ.

ಈ ಗ್ರಂಥವು ಪಾಠಕರಿಗೆ ಬಹಳ ಉತ್ಸಾಹವನ್ನುಂಟುಮಾಡುತ್ತದೆ. ಇದರಲ್ಲಿ ಅನೇಕ ಧರ್ಮಬೋಧನೆಗಳು ಬಾಲಕರ ಮನಸ್ಸಿನಲ್ಲಿ ನಿಲ್ಲುವಂತೆ ಕಥಾಮೂಲಕ ನಿರೂಪಿಸಲ್ಪಟ್ಟಿವೆ. ಪ್ರಚಾರದಲ್ಲಿರುವ ವಿಕ್ರಮಾರ್ಕಚರಿತ್ರೆಯಲ್ಲಿ ಪುತ್ತಳಿಗಳು ಹೇಳಿದ ಕಥೆಗಳು ಮಾತ್ರವೇ ಇವೆ. ಈಗ್ರಂಥದಲ್ಲಿ ಪುತ್ತಳಿಗಳು ಹೇಳಿದ ಕಥೆಗಳಲ್ಲದೆ ಭೋಜರಾಯನು ವಿಕ್ರಮಾರ್ಕನಷ್ಟು ತನ್ನಲ್ಲಿಯೂ ವೀರವಿತರಣಾದಿಗಳೂ ಇದ್ದುವೆಂದೂ, ತಾನೂ ಆ ಸಿಂಹಾಸನವನ್ನು ಏರಲು ಯೋಗ್ಯನೆಂದೂ ವಿಘ್ನಮಾಡಿದ ಪುತ್ತಳಿಗಳಿಗೆ ತಿಳಿಸುವುದಕ್ಕೆ ತನ್ನ ಮಂತ್ರಿಯಮೂಲಕ ಹೇಳಿಸಿದ ಕಥೆಗಳೂ ಇವೆ.

ಭಾಷಾಶೈಲಿಯು ಬಹಳ ರಮಣೀಯವಾಗಿಯೂ ಅಭಿಪ್ರಾಯವನ್ನು ನೆಟ್ಟಗೆ ತಿಳಿಸುವುದಾಗಿಯೂ ವಾಡಿಕೆಯ ಭಾಷಾಶೈಲಿಗೆ ಸರಿಹೋಲುವುದಾಗಿಯೂ ಇದೆ. ಇಂಥ ಗದ್ಯಗ್ರಂಥಗಳು ಕನ್ನಡ ಭಾಷೆಯಲ್ಲಿ ವಿರಳವಾಗಿರುವುದರಿಂದ ಇದು ಪಾಠಕರಿಗೆ ಆದರಣೀಯವಾಗದೆ ಇರದೆಂದು ತಿಳಿಯುತ್ತೇನೆ.

ಮಂ. ಅ. ರಾ.

ಪ್ರವರ್ತಕ.

ಅಧ್ಯಾಯ ವಿಷಯಸೂಚಿ.

ಪುಟಾದಿಸಂಖ್ಯೆ

ಪೀಠಿಕೆ ೧

ಪುತ್ತಳಿಗಳು ವಿಕ್ರಮಾದಿತ್ಯರಾಯನ ಚರಿತ್ರೆಯ ವಿಸ್ತರಿಸಿದ ಪ್ರಕರಣ ೪

ಚಿತ್ರಶರ್ಮನು ಹೇಳಿದ ೧ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಜಯವತಿ ಹೇಳಿದ ಉಪಕಥೆ ೧೧

ಚಿತ್ರಶರ್ಮನು ಹೇಳಿದ ೨ ನೆಯ ಕಥೆ; ಅದಕ್ಕೆ ಪ್ರತಿಯಾಗಿ ವಿಜಯವತಿ ಹೇಳಿದ ಕಥೆ. ೧೪

ಚಿತ್ರಶರ್ಮನ ೩ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಇಳೆಯವತಿ ಹೇಳಿದಕಥೆ. ೧೬

ಚಿತ್ರಶರ್ಮನ ೪ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಸುರತಪ್ರಿಯೆಯ ಉಪಕಥೆ. ೧೯

ಚಿತ್ರಶರ್ಮನ ೫ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಹೇಳಿದ ಆನಂದಸಂಜೀವಿನಿಯ ಉಪಕಥೆ. ೨೨

ಚಿತ್ರಶರ್ಮನ ೬ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಹೇಳಿದ ರತಿಪ್ರಿಯೆಯ ಉಪಕಥೆ. ೨೮

ಚಿತ್ರಶರ್ಮನ ೭ ನೆಯ ಕಥೆ; ಅದಕ್ಕೆ ಪ್ರತಿಯಾಗಿ ಹೇಳಿದ ನವಮೋಹಿನಿಯ ಉಪಕಥೆ. ೩೮

ಚಿತ್ರಶರ್ಮನ ೮ ನೆಯ ಕಥೆ; ಅದಕ್ಕೆ ಪದ್ಮಾವತಿಯ ಉಪಕಥೆ. ೪೨

ಚಿತ್ರಶರ್ಮನ ೯ ನೆಯ ಕಥೆ; ಅದಕ್ಕೆ ಪ್ರಭಾವತಿಯ ಉಪಕಥೆ. ೪೮

ಚಿತ್ರಶರ್ಮನ ೧೦ ನೆಯ ಕಥೆ; ಅದಕ್ಕೆ ವಿಷ್ಣುನಂದಿನಿಯ ಉಪಕಥೆ. ೫೦

ಚಿತ್ರಶರ್ಮನ ೧೧ ನೆಯ ಕಥೆ; ಅದಕ್ಕೆ ಅನಂಗಜೆಯ ಉಪಕಥೆ. ೫೪

ಚಿತ್ರಶರ್ಮನ ೧೨ ನೆಯ ಕಥೆ; ಅದಕ್ಕೆ ಇಂದ್ರಾವತಿಯ ಉಪಕಥೆ. ೫೭

ಚಿತ್ರಶರ್ಮನ ೧೩ ನೆಯ ಕಥೆ; ಅದಕ್ಕೆ ಕುರಂಗಸೇನೆಯ ಉಪಕಥೆ. ೬೦

ಚಿತ್ರಶರ್ಮನ ೧೪ ನೆಯ ಕಥೆ; ಅದಕ್ಕೆ ಲಾವಣ್ಯವತಿಯ ಉಪಕಥೆ. ೬೨

ಚಿತ್ರಶರ್ಮನ ೧೫ ನೆಯ ಕಥೆ; ಅದಕ್ಕೆ ಮೋಹಿನಿಯ ಉಪಕಥೆ. ೬೫

ಚಿತ್ರಶರ್ಮನ ೧೬ ನೆಯ ಕಥೆ; ಅದಕ್ಕೆ
ಕುರಂಗಲೋಚನೆಯ ಉಪಕಥೆ. ೬೯

ಚಿತ್ರಶರ್ಮನ ೧೭ ನೆಯ ಕಥೆ; ಅದಕ್ಕೆ
ಕಾಮಕೇಳಿಯ ಉಪಕಥೆ. ೭೨

ಚಿತ್ರಶರ್ಮನ ೧೮ ನೆಯ ಕಥೆ; ಅದಕ್ಕೆ
ರತ್ನಚಂಡಿಕೆಯ ಉಪಕಥೆ. ೭೫

ಚಿತ್ರಶರ್ಮನ ೧೯ ನೆಯ ಕಥೆ; ಅದಕ್ಕೆ
ವಿದ್ಯಾಧರಿಯ ಉಪಕಥೆ. ೮೨

ಚಿತ್ರಶರ್ಮನ ೨೦ ನೆಯ ಕಥೆ; ಅದಕ್ಕೆ
ರತ್ನವತಿಯ ಉಪಕಥೆ. ೮೭

ಚಿತ್ರಶರ್ಮನ ೨೧ ನೆಯ ಕಥೆ; ಅದಕ್ಕೆ
ಮದನಮೋಹಿನಿಯ ಉಪಕಥೆ. ೯೧

ಚಿತ್ರಶರ್ಮನ ೨೨ ನೆಯ ಕಥೆ; ಅದಕ್ಕೆ
ಪದ್ಮನಯನೆಯ ಉಪಕಥೆ. ೯೫

ಚಿತ್ರಶರ್ಮನ ೨೩ ನೆಯ ಕಥೆ; ಅದಕ್ಕೆ
ರತಿರೂಪಿಣಿಯ ಉಪಕಥೆ. ೧೦೦

ಚಿತ್ರಶರ್ಮನ ೨೪ ನೆಯ ಕಥೆ; ಅದಕ್ಕೆ
ಹಂಸಗಮನೆಯ ಉಪಕಥೆ. ೧೦೫

ಚಿತ್ರಶರ್ಮನ ೨೫ ನೆಯ ಕಥೆ; ಅದಕ್ಕೆ
ಇಂದ್ರಜಿತೆಯ ಉಪಕಥೆ. ೧೦೭

ಚಿತ್ರಶರ್ಮನ ೨೬ ನೆಯ ಕಥೆ; ಅದಕ್ಕೆ
ತ್ರೈಲೋಕ್ಯಮೋಹಿನಿಯ ಉಪಕಥೆ. ೧೧೨

ಚಿತ್ರಶರ್ಮನ ೨೭ ನೆಯ ಕಥೆ; ಅದಕ್ಕೆ
ಕನಕಾವತಿಯ ಉಪಕಥೆ. ೧೧೫

ಚಿತ್ರಶರ್ಮನ ೨೮ ನೆಯ ಕಥೆ: ಅದಕ್ಕೆ
ಅನಂಗಸೇನೆಯ ಉಪಕಥೆ; ೧೧೭

ಚಿತ್ರಶರ್ಮನ ೨೯ ನೆಯ ಕಥೆ; ಅದಕ್ಕೆ
ಸಂಧ್ಯಾವತಿಯ ಉಪಕಥೆ. ೧೨೦

ಚಿತ್ರಶರ್ಮನ ೩೦ ನೆಯ ಕಥೆ; ಅದಕ್ಕೆ
ಕಾಮಕರ್ಣಿಕೆಯ ಉಪಕಥೆ. ೧೨೪

ಚಿತ್ರಶರ್ಮನ ೩೧ ನೆಯ ಕಥೆ; ಅದಕ್ಕೆ
ಕರ್ಣಾವತಿಯ ಉಪಕಥೆ. ೧೨೮

ಚಿತ್ರಶರ್ಮನ ೩೨ ನೆಯ ಕಥೆ; ಅದಕ್ಕೆ
ವಾಮಲೋಚನೆಯ ಉಪಕಥೆ. ೧೩೧

ಭಾಳಲೋಚನ ವಿರಚಿತ

ಬತ್ತೀಸಪುತ್ತಳಿ ಕಥೆ.

ಪೀಠಿಕೆ. *

ಕೈಲಾಸವಾಸಿ ಕಪಾಲಪಾಣಿಯಾದ ಪರಶಿವನಾದ ಮೂರ್ತಿಯೂ ಪಾರ್ವತೀದೇವಿಯೂ ಲೀಲಾವಿನೋದದಲ್ಲಿ ಇರುವಂಥ ವೇಳೆಯಲ್ಲಿ ಗಿರಿಜಾತೆ ಇಂತೆಂದಳು :—ದೇವಾಧಿದೇವನಾದ ಮಹಾದೇವನೇ! ನನಗೊಂದು ಅಪೂರ್ವವಾದ ಕಥೆಯನ್ನು ನಿರೂಪಿಸಬಹುದೆಂಬುದಾಗಿ ಬಿನ್ನಹಂಗೆಯ್ದು ಶ್ರುತಪಡಿಸಲಾಗಿ; ಆ ಗಿರಿಜೆಯ ವಾಕ್ಕಿಗೆ ಪರಶಿವನು ಪರಿಣಾಮಚಿತ್ತದಿಂದ ಇಂತೆಂದನು :—ಅಹೋ! ಪಾರ್ವತಿಯೇ, ಲಾಲಿಸು. ಭುವನ ಬ್ರಹ್ಮಾಂಡದಲ್ಲಿ ಯಾರೂ ಅಱಿಯದೆ ಅತಿಶಯವಾಗಿರುವಂಥ ಬತ್ತೀಸಪುತ್ತಳಿ ಕಥೆಗಳನ್ನು ಅಱುಹುವೆವು. ನೀನು ಏಕಚಿತ್ತದಲ್ಲಿ ಕೇಳು—ಎಂದು ಹೇಳಿದುದಕ್ಕೆ ಜಗದಂಬಿಕೆಯಾದ ಶ್ರೀಗೌರಿ-ಮಹಾಪ್ರಸಾದ ನಿರೂಪಿಸಿ-ಎನ್ನಲಾಗಿ; ಮಹೇಶನು ಇಂತೆಂದನು :—

ಕಾಂಭೋಜದೇಶದಲ್ಲಿ ಇರುವ ಉಜ್ಜನಿಪಟ್ಟಣದ ರಾಜ್ಯಭಾರವನ್ನು ಚಂದ್ರಗುಪ್ತರಾಯನು ಸುಖದಿಂದಾಳುತ್ತ ಇರುವಲ್ಲಿ, ಆತನಿಗೆ ಪುತ್ರರಿಲ್ಲದೆ ಒಬ್ಬ ಮಾಲಿಕಾದೇವಿ ಎಂಬ ಮಗಳು ಇರಲಾಗಿ, ಆ ಮಗಳು ಯೌವನಸ್ಥೆಯಾದುದಱಿಂದ ಆ ರಾಯನು ಆಲೋಚಿಸಿದನು :—ಈ ಮಗಳನ್ನು ರಾಜಕುಮಾರರಿಗೆ ಕೊಟ್ಟು ವಿವಾಹವಂ ಮಾಡಿದರೆ ತನಗೆ ಸದ್ಗತಿಯಿಲ್ಲವೆಂದು ಅಱಿತು ಒಬ್ಬ ವಿಪ್ರಕುಮಾರನಿಗೆ ಕೊಟ್ಟರೆ ಮುಕ್ತಿಯುಂಟೆಂಬುದಾಗಿ ತಿಳಿದವನಾಗಿ, ತನ್ನ ಮಂತ್ರಿಯನ್ನು ಕರೆಸಿ ಇಂತೆಂದನು :--ನಮ್ಮ ಮಗಳಿಗೆ ತಕ್ಕ ವರವಾದಂಥ ಒಬ್ಬ ದ್ವಿಜಸುತನ ನೋಡಿ ಕರೆದುಕೊಂಡು ಬರಹೇಳ

---

* ಈ ಪೀಠಿಕೆಯು ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇರುವುದು.

ಲಾಗಿ; ಆ ಪ್ರಧಾನನು-ಬಳ್ಳಿಯದು ಎಂಬುದಾಗಿ ಅರಮನೆಯಿಂದ ಹೊಱಗೆ ಬಂದು, ಆ ಪಟ್ಟಣದ ಬ್ರಾಹ್ಮಣರ ಮನೆಗಳಲ್ಲಿ ಹೋಗಿ ನೋಡುತ್ತ ಇರುವಲ್ಲಿ, ಅಲ್ಲೊರ್ವ ಗೋವಿಂದಭಗವಾನ್ ಎಂಬ ವಿಪ್ರನು ಸಕಲ ಶಾಸ್ತ್ರಮುಂತಾದ ಚೌಷಷ್ಟಿವಿದ್ಯಾಕಳಾಪ್ರವೀಣನೆಂಬುದನ್ನು ಕೇಳಿ, ನೋಡಿ, ತಿಳಿದುಕೊಂಡವನಾಗಿ, ಆ ಗೋವಿಂದಭಗವಾನನೊಡನೆ ಇಂತೆಂದನು :—ಕೇಳ್ಳೆಯ್ಯಾ ಭೂಸುರೋತ್ತಮನೇ ! ನಿನ್ನನ್ನು ನಮ್ಮ ರಾಯನು ಕರೆತರಹೇಳಿ ಕಟ್ಟುಮಾಡಿಸಿ ಇದ್ದಾನೆ, ಬಾರೆಂದು, ಮಂತ್ರಿಯು ತನ್ನ ಸಂಗಾತ ಕರೆದುಕೊಂಡು ಬಂದು ರಾಯನ ಸಮ್ಮುಖದಲ್ಲಿ ನಿಲ್ಲಿಸಲಾಗಿ, ಆ ರಾಯನಿಗೆ ಆ ಗೋವಿಂದಭಗವಾನನು ಆಶೀರ್ವಾದಮಂ ಮಾಡಿದನು.

† ... ...

ಎಂದು ಆಶೀರ್ವಾದಂಗೆಯ್ದುದಂ ಕೇಳಿ, ಆ ರಾಯಂ ಮಹಾಹರುಷಮಂ ತಾಳಿ ಇಂತೆಂದನು :—ಎಲೈ ಗೋವಿಂದಭಗವಾನನೇ, ನಿನ್ನ ಯೋಗ್ಯತೆಗೆ ನಮ್ಮ ಮಗಳ ಕೊಟ್ಟು ಮದುವೆಯಂ ಮಾಡಿ ಕೊಟ್ಟೆವು. ನಿನ್ನಿಂದ ನಮ್ಮ ರಾಜ್ಯವುಳಿದು ನಮಗೆ ಸದ್ಗತಿಯಾಗಬೇಕು—ಎಂದ ಮಾತಿಗೆ ಅವನಿಂತೆಂದನು:—ನಾನು ಬ್ರಾಹ್ಮಣನು. ನಿತ್ಯವೂ ಕರ್ಮಾನುಷ್ಠಾನುವನ್ನು ಮಾಡಿಕೊಂಡು ಸುಖವಾಗಿ ಇದ್ದೇನೆ. ಸ್ತ್ರೀಯೆಂಬುವುದು ಪುರುಷನಿಗೆ ಬಂಧನವಾದುದಱಿಂದ ನನಗೆ ಭೀತಿಯಾಗುತಿದೆ-ಎಂದ ಮಾತಿಗೆ ಆ ರಾಯನ ಪ್ರಧಾನನಿಂತೆಂದನು :—ಕೇಳ್ಳೆಯ್ಯಾ ವಿಪ್ರೋತ್ತಮನೇ ! ಗೃಹಸ್ಥಾಶ್ರಮವಿಲ್ಲದವನಿಗೆ ಸಾಯುಜ್ಯವಿಲ್ಲ; ಅದು ನಿಮಿತ್ತ ಗೃಹಸ್ಥಾಶ್ರಮವೇ ಅಧಿಕವೆಂಬುದಾಗಿ ಅನೇಕವಿಧದಿಂದ ಬೋಧಿಸಿ, ಒಪ್ಪಿಸಿದ ಬಳಿಕ, ಆ ರಾಯನು ತನ್ನ ತನುಜೆ ಮಾಲಿಕಾದೇವಿಯನ್ನು ಕೃಷ್ಣಾರ್ಪಣವೆಂದು ಧಾರೆಯನ್ನೆಱೆದು ವಿವಾಹಮಂ ಮಾಡಿ, ಸಕಲರಿಗೂ ಭೂರಿಯಂ ಕೊಟ್ಟು, ಚತುರ್ಥದಿನದಮೇಲೆ ಸತಿಪತಿಗೆ ಬೇಕಾದುದೆಲ್ಲವನ್ನು ಕೊಟ್ಟು ಆತನ ಮನೆಗೆ ಕಳುಹಿಸಲಾಗಿ; ಆತನು ತನ್ನ ಗೃಹಕ್ಕೆ ಬಂದು ಆಲೋಚಿಸಿದನು :—ಸ್ವಜಾತಿ

† ಸುರರೇರಿಪುಭೃತ್ಯಸ್ಯಗುರುತಾಪಿತ್ತವಾಹನಾ ।
....................ಕಾತಂತಿಶಿರೋಜವಃ ॥ ಎಂಬ ಅಶುದ್ಧವಾದ ಒಂದು ಪದ್ಯ ಈಕಡೆ ಇದೆ.

ಸ್ತ್ರೀಯಿಲ್ಲದೆ ಇರುವುದರಿಂದ ಯೋಗ್ಯತೆ, ಗತಿಯಿಲ್ಲವೆಂದು ತನ್ನಲ್ಲಿ ತಾನೇ ತಿಳಿದುಕೊಂಡವನಾಗಿ, ಆ ಪಟ್ಟಣದ ಹೇಮವರ್ಮನೆಂಬ ಬ್ರಾಹ್ಮಣನ ಮಂದಿರಕ್ಕೆ ಹೋಗಲಾಗಿ, ಆ ಮನೆಯ ವಿಪ್ರನು ಕಂಡೆದ್ದು ಮನ್ನಣೆಯಿಂದ ಕುಳ್ಳಿರಿಸಿಕೊಂಡು ಇಂತೆಂದನು :--ನೀವು ಸರ್ವಶಾಸ್ತ್ರಜ್ಞರು. ರಾಯನ ಅಳಿಯಂದಿರು. ಏನು ಕಾರಣಾರ್ಥವಾಗಿ ದಯೆಮಾಡಿದಿರಿ ?--ಎಂಬುದಾಗಿ ಬೆಸಗೊಳ್ಳಲಾಗಿ, ಆ ಗೋವಿಂದಭಗವಾನನು ಇಂತೆಂದನು :-ಕೇಳಿರೈಯ್ಯಾ, ಕನ್ಯಾರ್ಥಿಯಾಗಿ ನಾನು ನಿಮ್ಮಾಲಯಕ್ಕೆ ಬಂದೆನು—ಎಂದು ಪೇಳಿದ ಮಾತ ಕೇಳಿ, ತನ್ನಲ್ಲಿ ತಾನೇ—ಈತನಿಗೆ ತನ್ನ ತನುಜೆ ಹೇಮವರ್ಣಿನಿಯನ್ನು ಕೊಟ್ಟರೆ ಇಹದಲ್ಲಿ ಸುಖ, ಪರದಲ್ಲಿ ಮೋಕ್ಷವಾಗುವುದೆಂದು ಅರಿತವನಾಗಿ, ಆ ಕ್ಷಣವೇ ಆ ಮನೆಯ ವಿಪ್ರನು ಗೋವಿಂದಭಗವಾನನ ಪಾದಾರ್ಚನೆಯಂಗೆಯ್ದು ತನ್ನ ಪುತ್ರಿ ಹೇಮವರ್ಣಿನಿಯ ಧಾರೆಯನೆರೆದನು.

ಚತುರ್ಥದಿನವಾದ ಬಳಿಕ ಆ ಹೇಮವರ್ಣಿನಿಯನ್ನು ಕರೆದುಕೊಂಡು ಗೋವಿಂದಭಗವಾನನು ತನ್ನಯ ಗೃಹಕ್ಕೆ ಹೋಗಿ ನಿತ್ಯದಲ್ಲೂ ಕೃತ್ಯವಂ ನಡೆಸಿಕೊಂಡು ಸುಖವಾಗಿ ಇರುತ್ತಿರುವ ಕಾಲದಲ್ಲಿ—ಆ ಪಟ್ಟಣದಲೊರ್ವ ರತ್ನಪಾಲನೆಂಬ ವೈಶ್ಯನು ದ್ರವ್ಯಸಂಪನ್ನನಾಗಿ ತನ್ನ ವೃತ್ತಿ ವಾಣಿಜದಲ್ಲಿ ಇರುತ್ತಿಹನು. ಆ ಸೆಟ್ಟಿಗೆ ಒಬ್ಬಳು ರತ್ನಚೂಳಿಕೆಯೆಂಬ ಸುತೆಯಿಹಳು. ಮದುವೆಗೆ ಬವಗಿದವಳಂ ಕಂಡು ಆ ವೈಶ್ಯನು ತನ್ನ ಮನದಲ್ಲಿ ಯೋಚಿಸಿಕೊಂಡು—ಈ ಮಗಳನ್ನು ಒಬ್ಬ ಬ್ರಾಹ್ಮಣೋತ್ತಮಂಗೆ ಕೊಟ್ಟರೆ ಆತನ ಸುಚರಿತೆಯಿಂದ ನನಗೆ ಮೋಕ್ಷವುಂಟಾಗುವುದು ಎಂದು ತಿಳಿದು, ಗೋವಿಂದಭಗವಾನನು ವಿಪ್ರಶ್ರೇಷ್ಠನೆಂಬುದಂ ಕೇಳಿದ್ದ ಕಾರಣ, ಆತನ ಮನೆಗೆ ಹೋಗಿ, ಆತನಿಗೆ ನಮಸ್ಕರಿಸಿ, ಇಂತೆಂದನು :--ಸ್ವಾಮೀ ! ನನಗೊಬ್ಬಳು ಸುತೆಯಿರುವಳು. ಅವಳ ನೀವು ಅಂಗೀಕರಿಸಿಕೊಂಡು ನನಗೆ ಮುಕ್ತಿಸಾಧನವಂ ಮಾಡಬೇಕೆಂಬುದಾಗಿ, ನಾನಾಬಗೆಯಲ್ಲಿ ಹೇಳಿ ಬೇಡಿ, ಶರಣಾಗತನಾಗಲಾಗಿ, ಒಪ್ಪಿಕೊಂಡನು. ಆ ಬಳಿಕ ವೈಶ್ಯನು ತನ್ನ ಮನೆಗೆ ಹೋದನು.

ಈತನು ತನ್ನ ಅನುಷ್ಠಾನವಂ ಮಾಡಿಕೊಂಡು ಇರುವಲ್ಲಿ, ಒಂದು ದಿನ ಪುರಾಣಾಗಮವ ನೋಡುತಿರುವಲ್ಲಿ, ನಾಲ್ಕು ಜಾತಿ ನಾರಿಯರ ಮನು

ವೆಯಾಗಬಹುದೆಂದು ಹೇಳಿರುವುದಂ ಕಂಡು—ತನಗೆ ಮೂರುಜಾತಿ ಸತಿಯು ರಿಹರು. ಶೂದ್ರಜಾತಿ ಸ್ತ್ರೀಯುಳಾಗಬೇಕು—ಎಂದು ಯೋಚಿಸಿಕೊಂಡು, ಆಗ ಆ ಪಟ್ಟಣದಲ್ಲಿರುವ ಕ್ಷೇತ್ರಪಾಲನೆಂಬ ಶೂದ್ರನ ಮನೆಗೆ ಹೋದನು. ಆ ಕ್ಷೇತ್ರಪಾಲನು ಕಂಡು ಎದ್ದು ಎದುರುಗೊಂಡು ಬಂದು ಕರೆದುಯ್ದು ಮರ್ಯಾದೆಯಿಂದ ಕುಳ್ಳಿರಿಸಿಕೊಂಡು ಇಂತೆಂದನು :—ನೀವು ಏನುಬಗೆ ಬಂದಿರಿ ?—ಎಂದು ಬೆಸಕೊಳ್ಳಲಾಗಿ, ಆ ಮಾತಿಗೆ-ಕನ್ಯಾರ್ಥಿಗಳಾಗಿ ನಾವು ಬಂದೆವೆಂದು ಹೇಳಲಾಗಿ—ನಾನು ಧನ್ಯನಾದೆನೆಂದು ಆಗಳೇ ತನ್ನ ಮಗಳಾದ ಸುವರ್ಣಿಕೆಯನ್ನು ಧಾರೆಯೆರೆದು ಕೊಟ್ಟನು. ಚತುರ್ದಿನದಮೇಲೆ ಅಲ್ಲಿಂದ ಸುವರ್ಣಿಕೆಯು ಕರೆದುಕೊಂಡು ತನ್ನ ಆಲಯಕ್ಕೆ ಹೋಗಿ, ತನ್ನ ಕೃತ್ಯಾದಿಗಳನಾಚರಿಸಿಕೊಂಡು, ಪರಿಣಾಮದಲ್ಲಿ ಕೂಡಿಕೊಂಡಿರುತ್ತಿರುವಲ್ಲಿ, ಕೆಲವು ಕಾಲವಾದ ಬಳಿಕ ಆ ಚತುರ್ಜಾತಿ ಸತಿಯರಿಗೂ ಗರ್ಭೋತ್ಪತ್ತಿಯಾಗಿ ನಾಲ್ವರಿಗೂ ಪುತ್ರಸಂತಾನವಾಯಿತು. *

ಇಂತು ಪೀಠಿಕೆ.

ಕಾಂಭೋಜ ದೇಶದಲ್ಲಿ ಉಜ್ಜನಿಯೆಂಬ ಪಟ್ಟಣದಲ್ಲಿ ಗೋವಿಂದ ಭಗವಾನನು ಎಂಬ ಬುಧನಿದ್ದನು. ಆ ಬ್ರಾಹ್ಮಣನು ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಇವು ನಾಲ್ಕು ಜಾತಿಯಲ್ಲಿ ವಿವಾಹವಾಗಿ ಆ ಸ್ತ್ರೀಯರಿಗೆ ಪುತ್ರಸಂತಾನವಾಗಿ, ಆ ಪುತ್ರರ ಹೆಸರೇನೆಂದರೆ—ಬ್ರಾಹ್ಮಣ ಸ್ತ್ರೀಯಲ್ಲಿ ಜನಿಸಿದನು ವರರುಚಿ, ಕ್ಷತ್ರಿಯ ಸ್ತ್ರೀಯಲ್ಲಿ ಉದಿಸಿದವನು ವಿಕ್ರಮ, ವೈಶ್ಯಸ್ತ್ರೀಯಲ್ಲಿ ಉತ್ಪತ್ತಿಯಾದವನು ಭಟ್ಟಿ, ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಭರ್ತೃಹರಿ. ಈ ನಾಲ್ಕು ಮಂದಿ ಮಕ್ಕಳು ಸಹಿತವಾಗಿ ಸುಖದಿಂದ ಇರುವಲ್ಲಿ, ಆ ಬ್ರಾಹ್ಮಣನಿಗೆ ಅವಸಾನಕಾಲ ಸಮೀಪಿಸಲಾಗಿ, ಬಂದಾನೊಂದು ದಿವಸ ಮಕ್ಕಳ ಕರೆದು ಕುಳ್ಳಿರಿಸಿಕೊಂಡು, ಬ್ರಾಹ್ಮಣಸ್ತ್ರೀಗೆ ಹುಟ್ಟಿದ ವರರುಚಿಯನ್ನು ಕರೆದು—ಎಲೈ ಸುಪುತ್ರನೇ ! ನೀನು ಶಾಸ್ತ್ರಗಳನೋದಿಕೊಂಡು ರಾಜರುಗಳ ಬಳಿಯಲ್ಲಿ ಪ್ರಸಂಗವ ಮಾಡಿಕೊಂಡು ಇರು ಎಂದು ನೇಮಿಸಿ, ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ ವಿಕ್ರಮನಂ ಕರೆದು, -ಎಲೈ ಕುಮಾರನೇ, ನೀನು ವಿಂಧ್ಯಪರ್ವತದಲ್ಲಿ ಈಶ್ವರನ ಕುರಿತು ತಪಸ್ಸಂ

ಮಾಡಿ ಸಕಲ ಇಷ್ಟಾರ್ಥಮಂ ಪಡೆದು, ಈ ಉಜ್ಜಿನಿ ಪಟ್ಟಣದ ರಾಜ್ಯಭಾರಮಂ ಮಾಡೆಂದು ಕಟ್ಟಳೆಯಂ ಮಾಡಿ, ಆಬಳಿಕ ವೈಶ್ಯಸ್ತ್ರೀಗೆ ಹುಟ್ಟಿದ ಭಟ್ಟಿಯಂ ಕರೆದು—ಎಲೈ ತನುಜನೇ, ನೀನು ವಿಕ್ರಮನ ಬಳಿಯಲ್ಲಿ ಮಂತ್ರಿತನವ ಮಾಡಿಕೊಂಡು ಇರು ಎಂದು ಬುದ್ಧಿಗಲಿಸಿ, ಆಮೇಲೆ ಶೂದ್ರಸ್ತ್ರೀಗೆ ಮಗನಾದ ಭರ್ತೃಹರಿಯಂ ಕರೆದು—ಎಲೈ ಮಗನೇ, ನೀನು [1]ಮಲಯ[1] ಪರ್ವತದಲ್ಲಿ ಶಿವನಂ ಕುಱಿತು ತಪಸ್ಸಂ ಮಾಡಿ ಮುಕ್ತಿಯಂ ಪಡೆ ಎಂದು ನಾಲ್ವರಿಗೂ ಪೇಳಿ, ಆತ [2]ಮರಣಹೊಂದಲಾಗಿ[2] ; ಆ ಕುಮಾರರು ತಂದೆಗೆ ಉತ್ತರಕ್ರಿಯೆಗಳಂ ಮಾಡಿದರು.

ಆ ಬಳಿಕ ತಂದೆಯ ಅನುಗ್ರಹದಮೇರೆ ವಿಕ್ರಮನು ವಿಂಧ್ಯಪರ್ವತದಲ್ಲಿ ಈಶ್ವರನಂ ಕುಱಿತು ತಪಸ್ಸಂ ಮಾಡಲು, ಈಶ್ವರನು ಪ್ರಸನ್ನನಾಗಿ—ಎಲೈ ರಾಯನೇ, ನಿನ್ನ ಭಕ್ತಿಗೆ ಮೆಚ್ಚಿದೆನು, ವರನಂ ಬೇಡು, ಎನ್ನಲು ; ಎಲೈ ದೇವನೇ, ನನಗೆ ಧೈರ್ಯ, ಶೌರ್ಯ, ಸಾಹಸ, ಪರಾಕ್ರಮ, ಔದಾರ್ಯ, ಮೊದಲಾದ ಮಹದೈಶ್ವರ್ಯವ ಕೊಟ್ಟು ರಕ್ಷಿಸಬೇಕು ಎನ್ನಲಾಗಿ; ಈಶ್ವರನು ಕರುಣಚಿತ್ತನಾಗಿ ಅದೇಪ್ರಕಾರಕ್ಕೆ ಕರುಣದಿಂ ಆ ವರವಂ ಕೊಟ್ಟು ಕೈಲಾಸಶಿಖರಕ್ಕೆ ಹೋದನು.

ಇತ್ತಲಾ ವಿಕ್ರಮನು ಉಜ್ಜನಿಪಟ್ಟಣಕ್ಕೆ ಬಂದು ರಾಯನಾಗಿ, ಮಹದೈಶ್ವರ್ಯ ತೇಜಸ್ಸಿನಿಂದ ಭಟ್ಟಿ ಸಮೇತನಾಗಿ ಕೆಲವುಕಾಲ ರಾಜ್ಯವನಾಳುತಿರ್ದು, ಆ ಬಳಿಕ ದೇಶಾಧಿಪತಿಗಳಾದ ದೊರೆಗಳಮೇಲೆ ದಿಗ್ವಿಜಯಕ್ಕೆ ಹೊಱಟು, ದೊರೆಗಳಂ ಜಯಿಸಿ, ನವರತ್ನಧನಕನಕ ವಾಹನಾದಿಯಾಗಿ ಮಹಾ ಬಿರುದುಗಳ ತೆಗೆದುಕೊಂಡು, ಪರಾಕ್ರಮದಿಂದ ಸೇನೆ ಸಹಿತ ಪುರುಹೂತನಂತೆ ತನ್ನ ಉಜ್ಜನಿ ಪಟ್ಟಣಕ್ಕೆ ಬಂದು ರಾಜ್ಯವನಾಳುತಿರ್ದು, ಪುನಃ ಆಮೇಲೆ ಸೂರ್ಯನ ಬಳಿಗೆ ಹೋಗಿ [3]ಆಯುಷ್ಯಮಂ[3] ಪಡೆಯಬೇಕೆಂದು ರಥಾರೂಢನಾಗಿ ಹೊಱಟು ಪರಾಕ್ರಮದಿಂ ಲಕ್ಷಯೋಜನದಲ್ಲಿರುವ ಸೂರ್ಯನಂ ಕಂಡು, ಆತನ ಪಾದಗಳಿಗೆ ನಮಿಸಿ ನುತಿಸಲು; ದಿವಾಕರನಾದ ಆದಿತ್ಯನಾರಾಯಣನು ಪ್ರಸನ್ನಮೂರ್ತಿಯಾಗಿ ಇಂತೆಂದನು :—ಎಲೈ ರಾಯ! ನಿನ್ನ ಮನೋಭೀಷ್ಟ ತಿಳಿಯಿತು. ಸಿಂಹಾಸನಾರೂಢನಾಗಿ ಸಾವಿರ ವರುಷ

---

1. ಮಾಲ್ಯ. 2. ದೇವರಯಾತ್ರೆಯ ಮಾಡಲಾಗಿ. 3. ಆಯುಷ್ಯಕೀರ್ತಿಯಂ.

ರಾಜ್ಯವನಾಳೆಂದು ಪರಸಿ, ಮತ್ತು ತನ್ನ ಅಂಕಿತ ನೇಮಿಸಿ, ವಿಕ್ರಮಾದಿತ್ಯರಾಯನೆಂಬ ನಾಮಾಂಕಿತವಂ ಕೊಟ್ಟು, ಮಹಾಲಕ್ಷ್ಮಿಯು ಅವನಿಗೆ ಪ್ರಸನ್ನವಾಗುವಹಾಗೆ ವರವ ಕೊಟ್ಟು, ಚೌಷಷ್ಟಿ ವಿದ್ಯೆಗಳ ಉಪದೇಶವಿತ್ತು, ದಿವ್ಯಾಯುಧಾಭರಣಗಳ ಪಾಲಿಸಿ, ಸುಖದಿಂದಿರು ಎಂದು ನಿರೂಪಿಸಿ, ಅನುಗ್ರಹ ಮಾಡಿ ಕಳುಹಲು; ಅಲ್ಲಿಂ ಬಳಿಕ ವಿಕ್ರಮಾದಿತ್ಯರಾಯನು ಸಂಭ್ರಮದಿಂದ ಅಷ್ಟದಿಕ್ಪಾಲಕರ ಜಯಿಸಬೇಕೆಂದು ಇಂದ್ರಲೋಕಕ್ಕೆ ಹೋಗಿ, ದೇವೇಂದ್ರನಂ ಕಂಡು ವಂದಿಸಲಾಗಿ; ಆ ಇಂದ್ರನು ವಿಕ್ರಮಾದಿತ್ಯರಾಯನ ರೂಪು ರೇಖೆ ಲಾವಣ್ಯಪರಾಕ್ರಮ ವಿದ್ಯಾತಿಶಯಗಳ ಕಂಡು, ಮೆಚ್ಚಿ, ಅತನಿಗೆ ದೇವನಿರ್ಮಿತವಾದ ಮೂವತ್ತೆರಡು ಪುತ್ಥಳಿಯುಕ್ತವಾದ ನವರತ್ನಖಚಿತವಾದ ಸಿಂಹಾಸನವ ವಜ್ರಾಯುಧ ಸಹ ಕೊಟ್ಟು ಕಳುಹಿಸಲು; ಈ ಮೇರೆಗೆ ಅಷ್ಟದಿಕ್ಕಿಗೂ ಹೋಗಿ, ಅವರವರ ಕೈಯಲ್ಲಿ ದಿವ್ಯಾಯುಧ ದಿವ್ಯಾಭರಣವ ತೆಗೆದುಕೊಂಡು, ಮಾರ್ಗದಲ್ಲಿ ಸಕಲಮುನಿಯ ಮುಖದಿಂದ ಯಕ್ಷನಲ್ಲಿ ಅಷ್ಟಮಹಾಸಿದ್ಧಿ ನವನಿಧಿಗಳಂ ಗ್ರಹಿಸಿ, ಬೇತಾಳನ ವಶವ ಮಾಡಿಕೊಂಡು, ಅಲ್ಲಿಂದ ಈಶ್ವರನ ರಜತಾದ್ರಿಗೆ ಹೋಗಿ, ಈಶ್ವರನಿಗೆ ನಮಸ್ಕರಿಸಿ ಸ್ತುತಿಸಲಾಗಿ; ಈಶ್ವರನು ಮೆಚ್ಚಿ-ಎಲೈ ರಾಯಾ! ನಿನಗೆ ಬೇಕಾದ ವರವಂ ಕೇಳಿಕೊ—ಎಂದು ನಿರೂಪಿಸಲು; ಎಲೈ ಹರನೇ! ನನಗೆ ದೀರ್ಘಾಯುಷ್ಯವಂ ಕೊಟ್ಟು ಸಲಹಬೇಕೆನ್ನಲಾಗಿ; ಈಶ್ವರನು ರಾಯನಿಗೆ, ಸಿಂಹಾಸನಾರೂಢನಾಗಿ ಸಾವಿರವರ್ಷ ಭಟ್ಟಿಯೊಡನೆ ರಾಜ್ಯವಾಳಿ ಕಲಿಪುರುಷನ ಜಯಿಸೆಂದನುಗ್ರಹಿಸಿ ಕಳುಹಿಸಲು; ಬರುವ ಮಾರ್ಗದಲ್ಲಿ ಕಲಿಪುರುಷನಂ ಕಂಡು, ಮಹಾಕೋಪಾರೂಢನಾಗಿ—ಎಲೇ ಕಲಿಪುರುಷನೇ! ನನ್ನ ದೊರೆತನವಿರುವತನಕ ನನ್ನ ರಾಜ್ಯದಲ್ಲಿ ನೀನು ಸಂಚರಿಸೆ ಕಾರಣವೇನೆಂದು ಕೋಪಿಸಿ, ವಜ್ರಾಯುಧದಿಂದ ಹೊಡೆಯುವುದಕ್ಕೆ ಹೋಗಲಾಗಿ; ಅವನಾಗ ಭಯಪಟ್ಟು—ಎಲೈ ರಾಯನೇ! ನಾನು ನಿನ್ನ ಸಭೆಯಲ್ಲಿ ಬರುವುದಿಲ್ಲವೆಂದು ಉಂಗರವ ಕೊಟ್ಟು ಹೊರಟು ಹೋಗಲಾಗಿ, ಆ ಬಳಿಕ ರಾಯನು ತನ್ನ ಪಟ್ಟಣಕ್ಕೆ ಬಂದು ಭಟ್ಟಿ ಸಹಿತ ಧೈರ್ಯ ಶೌರ್ಯಾದಾರ್ಯ ಸಾಹಸ ಕೀರ್ತಿಯಿಂದ ರಾಜ್ಯವಾಳುತ್ತಿದ್ದನು.

ಇತ್ತಲಾ ವರರುಚಿಯು ಶಾಸ್ತ್ರಂಗಳ ಪಾಠ ಹೇಳುತ್ತ ವಿಕ್ರಮಾದಿತ್ಯನ ಬಳಿಯಲ್ಲಿ ಪ್ರಧಾನಿಯೆನಿಸಿಕೊಂಡಿದ್ದನು.

ಆ ಬಳಿಕ ಭರ್ತೃಹರಿಯು ಅಣ್ಣಂದಿರ ಅಪ್ಪಣೆ ತೆಗೆದುಕೊಂಡು [1]ಮಲಯ[1] ಪರ್ವತಕ್ಕೆ ಹೋಗಿ, ಮಹಾ ಜ್ಞಾನಿಯಾಗಿ ತಪಸ್ಸಿನಿಂದ ಇರುತ್ತಿದ್ದನು.

ಆ ಬಳಿಕ ವಿಕ್ರಮಾದಿತ್ಯರಾಯನು ಎರಡುಸಾವಿರ ವರ್ಷ ರಾಜ್ಯ ಭಾರವಂ ಮಾಡಿ ಕೀರ್ತಿಯಿಂದ ಇರುತ್ತಿರ್ದು ತನ್ನ ಶಕೆ ತೀರಿದ ಬಳಿಕ ಶಾಲಿವಾಹನನಿಂದ ಪರಾಜಿತನಾಗಿ ಸುರಲೋಕವನ್ನೈದಿದಮೇಲೆ ಅತನ ಮಂತ್ರಿಗಳು ಮೂವತ್ತೆರಡು ಪುತ್ತಳಿಯುಕ್ತವಾದ ಆ ರತ್ನಖಚಿತವಾದ ಆತನ ಸಿಂಹಾಸನವನ್ನು ಬಳ್ಳಿಯ ಭೂಮಿಯಲ್ಲಿ ಚಂದ್ರಕಾಂತದ ಶಿಲೆಯ ಕಾಲ್ಕಲ್ಲಿನ ಮಂಟಪದಲ್ಲಿ ಇರಿಸಿ, ನಿಕ್ಷೇಪವಮಾಡಿದರು.

ಆ ಬಳಿಕ ಆ ಕಾಂಭೋಜದೇಶದ ರಾಜ್ಯಾಧಿಪತ್ಯ ರಾಜೋತ್ತಮನಾದ ಭೋಜರಾಯನಿಗಾಗಲಾಗಿ, ಆತನು ಪರಾಕ್ರಮಯುಕ್ತಿ ಚಾತುರ್ಯಧರ್ಮದಿಂದ ರಾಜ್ಯಭಾರ ಮಾಡುತ್ತಿರಲು ;

ಆ ಪಟ್ಟಣದ ಒಂದು ಅಗ್ರಹಾರದ ರುದ್ರಶರ್ಮನೆಂಬ ದ್ವಿಜನು ದಿನಚರಿ ಬಂದು, ತನಗೆ ಆಶೀರ್ವಾದವ ಮಾಡಿ, ಸುಮ್ಮನೆ ಹೋಗುತ್ತಿರುವುದ ಕಂಡು, ರಾಯಂ ಒಂದು ದಿನ ತನ್ನ ಪ್ರಧಾನ ಚಿತ್ರಶರ್ಮನೊಡನೆ— ಈ ಬ್ರಾಹ್ಮಣನು ನಿತ್ಯದಲ್ಲೂ ಬಂದು ಆಶೀರ್ವಾದವ ಮಾಡಿ ಬರಿದೆ ಹೋಗುತ್ತಿದಾನೆ. ಈ ಬ್ರಾಹ್ಮಣನ ಮನೋಭೀಷ್ಟವೇನೆಂದು ಕೇಳಿ ತಿಳಿದರೆ ಇಷ್ಟಾರ್ಥವ ಕೊಡಿಸಿಕೊಡಬಹುದೆಂದು ವಿವರಿಸಲಾಗಿ ; ಚಿತ್ರ ಶರ್ಮನು ಮಱುದಿವಸ ಆ ಬ್ರಾಹ್ಮಣನು ಬಂದು ಆಶೀರ್ವಾದವ ಮಾಡಿ ಹೋಗುವ ಸಮಯದಲ್ಲಿ, ಆ ಬ್ರಾಹ್ಮಣನ ಕರೆದು——ಎಲೈ, ನೀನು ದಿನಂಪ್ರತಿ ಬಂದು ರಾಯನಿಗಾಶೀರ್ವಾದವಂ ಮಾಡಿ ಬರಿದೆ ಹೋಗುವ ವಿವರವೇನೆಂದು ಕೇಳಲು ; ಆ ಬ್ರಾಹ್ಮಣನು—ಎಲೈ ಪ್ರಧಾನಿಯೇ, ನನ್ನ ಮನೋಭೀಷ್ಟವೇನೆಂದರೆ :—ಒಂದು ಕಂಡುಗದ ಹೊಲವನ್ನು ದಾನ ಪೂರ್ವಕವಾಗಿ ಕೊಡಿಸಿಕೊಟ್ಟರೆ ಅದಱಲ್ಲಿ ಜೀವನವ ಮಾಡಿಕೊಂಡು ಅಗ್ರಹಾರದಲ್ಲಿ ಅಗ್ನಿಹೋತ್ರಗಳ ಮಾಡಿಕೊಂಡಿರುವೆನೆಂದು ಹೇಳಲಾಗಿ;

ಪಾ—1, ಮಾಲ್ಯ.

ಇದನೇನು ಕೇಳಿದೆ! ಇನ್ನೂ ನಿನಗೆ ಬೇಕಾದಷ್ಟು ದ್ರವ್ಯವ ಕೇಳಿದರೂ ರಾಯಂ ಕೊಡುವನು, ಎಂದು ಆ ಬ್ರಾಹ್ಮಣನ ಜರೆಯಲಾಗಿ; ಆ ಬ್ರಾಹ್ಮಣನು—ಎಲೈ ಪ್ರಧಾನಿಯೇ! ತಪ್ಪದೆ ಈ ಹೊಲ ನನಗೆ ಕೊಡಿಸಿಕೊಟ್ಟರೆ ಅದೇ ನನಗೆ ಸಾಕು—ಎಂದು ಹೇಳಲಾಗಿ; ಆ ಮಾತ ಕೇಳಿ ಬಂದು, ರಾಯನಿಗೆ ವಿಸ್ತಾರವಾಗಿ ಅಱಿಕೆಯಂ ಮಾಡಲಾಗಿ; ರಾಯನು ಆತ ಕೇಳಿದ ಬಳಿಯಲ್ಲಿ ಭೂಮಿಯಂ ಕೊಡಿಸಿಕೊಟ್ಟನು.

ಅನಂತರ ಆ ಬುಧನು ಆ ಸ್ಥಳದಲ್ಲಿ ನಾನಾ ಫಲವೃಕ್ಷಂಗಳ ಹಾಕಿ, ಕಡಲೆ, ಜೋಳ, ಮುಂತಾದ ಪೈರುಗಳ ಮಾಡಿ, ಆನಿಕ್ಷೇಪದಮೇಲೆ ಬಂದು ಮಂಚಿಕೆ ಮಾಡಿ ಅದಱಲ್ಲಿ ಕುಳಿತುಕೊಂಡು, ಪಕ್ಷಿಗಳ ಹೊಡೆಯುತಿರ್ದು— ಅಲ್ಲಿ ಮಾರ್ಗದಲ್ಲಿ ಸಂಚಾರ ಮಾಡುವ ಜನರಂ ಕಂಡು—ಎಲೆ ಪ್ರಾಣಿಗಳಿರಾ! ನೀವು ಬಿಸಿಲಲ್ಲಿ ಶ್ರಮಪಟ್ಟು ಏಕೆ ಸುಮ್ಮನೆ ಹೋಗುತ್ತೀರಿ? ಈ ಹೊಲದಲ್ಲಿ ಬೇಕಾದಷ್ಟು ಹಣ್ಣುಗಳು ಹೇರಳವಾಗಿವೆ, ಈ ಹಣ್ಣುಗಳೆಲ್ಲವಂ ತಿಂದು ನೀರ ಕುಡಿದು, ಶ್ರಮಪರಿಹಾರವ ಮಾಡಿಕೊಂಡು ಹೋಗಿ—ಎಂದು ನುಡಿಯಲಾಗಿ; ಆ ಜನರುಗಳು ಬಂದು ಹೊಲಕ್ಕೆ ನುಗ್ಗಲಾಗಿ, ಈ ಬ್ರಾಹ್ಮಣನು ಕೆಳಕ್ಕೆ ಇಳಿದು—ಎಲೈ ಮನುಷ್ಯರುಗಳಿರಾ! ನೀವು ನಮ್ಮೊಡವೆಯನ್ನು ಮುಟ್ಟಬೇಡಿ, ಎಂದು ಕೋಪವ ಮಾಡಿ ಮೊರೆಯಿಡಲು; ಅವರು—ಇದೇನಾಶ್ಚರ್ಯವೆಂದು ಸುಮ್ಮನೆ ಹೋಗಲಾಗಿ, ಆ ಬ್ರಾಹ್ಮಣನು ತಿರಿಗಿ ಮಂಚಿಕೆಯನೇಱಿ ಕುಳಿತಿರಲಾಗಿ ; ಆ ವೇಳೆಯಲ್ಲಿ ಭೋಜರಾಯನು ತನ್ನ ಸೇನೆ ಸಹಿತ ಬೇಂಟೆಯಾಡಿ ಬಳಲಿ ಬಿಸಿಲಲ್ಲಿ ಬರುವುದಂ ಕಂಡು—ಎಲೈ ರಾಜೇಂದ್ರನೇ! ನೀವು ಸೇನೆ ಸಹಿತ ಬಳಲಿದಿರಿ. ನನ್ನ ಹೊಲದಲ್ಲಿ ದಿವ್ಯೋದಕ, ಪರಿಪರಿ ಫಲಗಳಿವೆ. ತರಿಸಿಕೊಂಡು ಭಕ್ಷಿಸಿಕೊಂಡು ಜಲವಂ ತೆಗೆದುಕೊಂಡು ನೆಳಲಲ್ಲಿ ವಿಶ್ರಮಿಸಿಕೊಂಡು, ದಯೆಮಾಡಬೇಕೆನಲಾಗಿ; ರಾಯನ ಸೇನೆ ಹೊಲಕ್ಕೆ ನುಗ್ಗಲು, ಆವನು ಮಂಚಿಕೆಯಿಂದಿಳಿದು—ಎಲೈ ರಾಯ! ನೀನು ನಿನ್ನ ಬಲವೆಲ್ಲ ನನ್ನ ಹೊಲ ಮೂವತ್ತು ಪೈರುಫಲ ಹಲಾಕು ಮಾಡಿದರುಂಟೆ? ಎನ್ನಲಾಗಿ ; ರಾಯನು ಆ ಜನವನ್ನು ಹಿಂದಕ್ಕೆ ಕರೆಸಿ, ವೃಕ್ಷದ ಕೆಳಗೆ ಕುಳಿತನು. ಆಬಳಿಕ ಅವನು ಮತ್ತೆ ಮಂಚಿಕೆಯೇಱಿ—ಎಲೈ ಭೂಪಾಲನೇ! ಸುಮ್ಮನೆ

ಏತಕ್ಕೆ ಕುಳತಿದ್ದೀರಿ? ಬೇಕಾದ ಸುಫಲ ತರಿಸಿಕೊಂಡು ಶ್ರಮ ಪರಿಹರಿಸಿ ದಯೆಮಾಡಿಸಬಹುದೆನ್ನಲಾಗಿ;

ಪುನಃ ಜನಗಳು ಹೋಗಿ ಫಲಗಳ ನೋಡುತ್ತಿರಲು; ಆ ಬ್ರಾಹ್ಮಣನು ಮಂಚಿಕೆಯನಿಳದು ರಾಯನ ಸಮೀಪಕ್ಕೆ ಬಂದು—ಎಲೈ ರಾಯಾ! ನೀನು ಮಹಾ ದುಷ್ಟನು. ನನ್ನ ಹೊಲವ ಹಾಳುಮಾಡಿಬಿಟ್ಟೆಯಲ್ಲಾ, ಎಂದು ಕೋಪಿಸಲಾಗಿ;

ಆ ಮಾತ ಕೇಳಿ, ರಾಯ ಆತನ ಸಂತೈಸಿ, ಜನರ ಕರೆಸಿ, ಹೊಲಕ್ಕೆ ಹೋಗದಂತೆ ನೇಮಿಸಿ, ತನ್ನ ಪ್ರಧಾನ ಚಿತ್ರಶರ್ಮನೊಡನೆ ಆಶ್ಚರ್ಯಪಟ್ಟು ಇಂತೆಂದನು:—ಈ ಬ್ರಾಹ್ಮಣನಿಗೆ ಮಂಚಿಕೆಯೇರಿದಾಗ ಬಂದು ಬುದ್ಧಿ; ಕೆಳಯಿಂಕೆ ಇಳಿದಾಗ ಬಂದು ಬುದ್ಧಿ, ಇದೇನೆಂದು ಕೇಳಲಾಗಿ; ಚಿತ್ರಶರ್ಮನು—ಇವ ಹಾಕಿರುವ ಮಂಚಿಕೆಯ ಕೆಳಗೆ ಏನಾದರೂ ಬಂದು ವಿಶೇಷವುಂಟಾಗಿರುವುದೆಂದು ರಾಯನಿಗೆ ಬಿನ್ನೈಸಲಾಗಿ; ರಾಯನು ಅವನ ಕರೆಸಿ ನಿನಗೀಭೂಮಿಯಲ್ಲಿ ಏನು ಲಾಭವುಂಟೆನಲು; ಅವನು ವರುಷಕ್ಕೆ ನೂರು ವರಹ ಉತ್ಪತ್ತಿಯಾಗುತ್ತದೆ ಎನ್ನಲು;— ಇಷ್ಟು ಮಾತ್ರ ಕಷ್ಟಪಡುವುದೇತಕ್ಕೆ? ನಿನಗೆ ಬೇಕಾದಷ್ಟು ದ್ರವ್ಯವಂ ಕೊಡುವೆ. ಈ ಭೂಮಿ ನಮಗೆ ಬಿಟ್ಟುಕೊಡು—ಎಂದು ಕೇಳಿದುದಕ್ಕೆ, ಅವನು ಆ ಭೂಮಿಯನೊಪ್ಪಿಸಿದನು. ಆಗ ಅವನಿಗೆ ಸವಾಲಕ್ಷ ವರಹ ಕೊಡಿಸಿ ಸಾವಿರ ಕಂಡುಗ ಧಾನ್ಯ ಬರುವಂಥ ಭೂಮಿ ಸಹ ಕೊಟ್ಟು ಕಳುಹಿಸಿ ಬಿಟ್ಟು, ಬಳಿಕ ಆ ಹೊಲದ ಸುತ್ತ ಸರವತ್ತಿಗೆ ಬಿಡಿಸಿ ಮಂಚಿಕೆಯ ಕೀಳಿಸಿ ಶೋಧಿಸಲಾಗಿ; ಪುರುಷಪ್ರಮಾಣದ ಕೆಳಗೆ ಕಲ್ಲುಮಂಟಪದಲ್ಲಿ ಕೋಟಿಸೂರ್ಯಪ್ರಕಾಶಕಾಂತಿಯಿಂದ ನವರತ್ನಮಯವಾದ ಮೂವತ್ತೆರಡು ಪುತ್ಥಳೀಯುಕ್ತವಾದ ಸಿಂಹಾಸನ ಮಹಾ ಆರ್ಭಟಿಸುವುದಂ ಕಂಡು, ಭೋಜರಾಯನು ಬಹುಹರ್ಷದಿಂದ ಅದಕ್ಕೆ ಬಲಿಯಂ ಕೊಡಿಸಿ, ಮೇಲಕ್ಕೆ ತೆಗೆಸಿ, ಉತ್ಸಾಹದಿಂದ ಪಟ್ಟಣಕ್ಕೆ ಕೊಂಡು ಹೋಗಿ, ಆಸ್ಥಾನಮಂಟಕ್ಕೆ ಇರಿಸಿ, ಷೋಡಶೋಪಚಾರದಿಂದ ಪೂಜೆಯಂ ಮಾಡಿಸಿ, ಬಹುದೇವಬ್ರಾಹ್ಮಣರಿಗೆ ಸಂತರ್ಪಣೆಯಂ ಮಾಡಿಸಿ, ಧನಕನಕ ವಸ್ತುವಾಹನಗಳ ದಾನವಂ ಕೊಟ್ಟು, ತಾನು ನವರತ್ನಾಭರಣಾಲಂಕೃತನಾಗಿ, ತನ್ನ ಪುರಜನ ಪರಿಜನ ವಿದ್ವಾಂಸಜನ ಮುಂತಾದ ಜನಕೆಲ್ಲ ದಿವ್ಯಾ

ಭರಣ ದುಕೂಲಂಗಳ ಕೊಟ್ಟು, ಸರ್ವರ ಸಂತೋಷಪಡಿಸಿ, ತಾನು ಶುಚಿರ್ಭೂತನಾಗಿ, ಗಂಧಕುಸುಮ ವಸ್ತ್ರಾಭರಣ ಭೂಷಿತನಾಗಿ, ತನ್ನ ಪ್ರಧಾನ ಚಿತ್ರಶರ್ಮನ ಕೈವಿಡಿದು ನಾನಾವಾದ್ಯ ಮುಂತಾಗಿ ಓಲಗಸಾಲೆಗೆ ಬಂದು, ನವರತ್ನಖಚಿತವಾದ ಮೂವತ್ತೆರಡು ಪುತ್ಥಳಿಯುಳ್ಳ ಆ ಸಿಂಹಾಸನದ ಬಳಿಯಲ್ಲಿ ನಿಂತು, ಅದನೇರುವುದಕ್ಕೆ ತನ್ನ ಬಲಗಾಲ ನೀಡುವ ಸಮಯದಲ್ಲಿ—ಸಕಲ ಜನ ಜಯಜಯ ಎನ್ನಲು ; ಆಗ ಆ ಸಿಂಹಾಸನದ ಮೂವತ್ತೆರಡು ಬೊಂಬೆಗಳಿಗೆ ಜೀವವುಂಟಾಗಿ ಅವು ಅತಿ ಅರ್ಭಟಿಸಿ—ಎಲೈ ಭೋಜರಾಯನೇ! ಈ ಸಿಂಹಾಸನ ಹತ್ತಬೇಡ ಹತ್ತಬೇಡ ಎಂದು ಒದರುತ್ತಿರಲಾಗಿ ; ರಾಯನು ವಿಸ್ಮಿತನಾಗಿ ಇಂತೆಂದನು:—ಎಲೆ ಪುತ್ಥಳಿಗಳಿರಾ! ನೀವು ಯಾರು ? ಈ ಅಟ್ಟಹಾಸಂಗೆಯ್ಯುವುದೇನು ? ಈ ಸಿಂಹಾಸನ ಯಾರದು ? ನಿಮ್ಮ ಹೆಸರೇನು? ಎಂದು ಕೇಳಲಾಗಿ; ಪುತ್ಥಳಿಗಳಿಂತೆಂದುವು :— ಎಲೈ ರಾಯನೇ ! ಕೇಳು. ಇದು ದೇವದತ್ತ ಸಿಂಹಾಸನ; ನಾವು ದೇವಕನ್ನಿಕೆಯರು; ನಮ್ಮ ಹೆಸರೇನೆಂದರೆ :—೧. ಜಯವತಿ, ೨. ವಿಜಯವತಿ, ೩. ಇಳೆಯವತಿ, ೪. ಸುರತಪ್ರಿಯೆ, ೫. ಆನಂದಸಂಜೀವಿನಿ, ೬. ರತಿಪ್ರಿಯೆ, ೭. ಸವಮೋಹಿನಿ, ೮. ಪದ್ಮಾವತಿ, ೯. ಪ್ರಭಾವತಿ, ೧೦. ವಿಷ್ಣುವಂದಿನಿ, ೧೧. ಅನಂಗಜೆ, ೧೨. ಇಂದ್ರವತಿ, ೧೩. ಕುರಂಗನೇನೆ, ೧೪. ಲಾವಣ್ಯವತಿ, ೧೫. ಮೋಹಿನಿ. ೧೬. [1]ಕುರಂಗಲೋಚನೆ,[1] ೧೭. ಕಾಮಕಳೆ, ೧೮. ರತ್ನಚಂಡಿಕೆ, ೧೯. ವಿದ್ಯಾಧರಿ, ೨೦. ರತ್ನಾವತಿ, ೨೧. ಮದನಮೋಹಿನಿ. ೨೨. ರತಿರೂಪಿಣಿ, ೨೩. ಹಂಸಗಮನೆ, ೨೪. ಇಂದ್ರಜಿತೆ, ೨೫. ತ್ರಿಲೋಕಮೋಹಿನಿ, ೨೬. ಕನಕಾವತಿ, ೨೭. ಅನಂಗಶಯನೆ, ೨೮. ಸಂಧ್ಯಾವಳಿ, ೨೯. ಕಾಮಕರ್ಣಿಕೆ, ೩೦. ಕರ್ಣಾವತಿ, ೩೧. ವಾಮಲೋಚನೆ, ಈ ಹೆಸರುಗಳು ನಮಗೆ. ನಾವು ವಿಕ್ರಮಾದಿತ್ಯನ ಸೇವಕರಲ್ಲ. ಮತ್ತೊಬ್ಬರ ಸೇವೆ ಮಾಡಿದವರಲ್ಲ. ನಾವು ಪರಶಿವನ ಸೇವಕರು. ಆಬಳಿಕ ದೇವೇಂದ್ರನ ಊಳಿಗವಮಾಡಿದರು. ಈ ಸಿಂಹಾಸನವನ್ನು ವಿಕ್ರಮಾದಿತ್ಯರಾಯನಿಗೆ ದೇವೇಂದ್ರನು ಕೊಟ್ಟುದರಿಂದ ಆಬಳಿಕ ವಿಕ್ರಮಾದಿತ್ಯನ ಸೇವೆ ಮಾಡಿದವರು. ಇದನೇರುವುದಕ್ಕೆ ನಮ್ಮ ವಿಕ್ರಮಾದಿತ್ಯರಾಯನ

ಪಾ—1. ಕುರಂಗವದನೆ.

ಲ್ಲದೆ ಮಿಕ್ಕ ರಾಯರುಗಳು ಯೋಗ್ಯರಲ್ಲ. ನಮ್ಮ ರಾಯನಿಗೆ ಸರಿಯಾದವರು ಚಪ್ಪನ್ನದೇಶ ಸಪ್ತದ್ವೀಪಗಳಲ್ಲಿಯೂ ಇಲ್ಲ. ವಿಕ್ರಮಾದಿತ್ಯರಾಯಂಗೆ ವಿಕ್ರಮಾದಿತ್ಯರಾಯನೇ ಹೊರತು ಮತ್ತೆಯಾರೂ ಸರಿಯಿಲ್ಲ.

ಇಂತು ಕರ್ಣಾಟಕ ಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ
ಚರಿತ್ರೆಯಲ್ಲಿ ಪುತ್ತಳಿಗಳು ವಿಕ್ರಮಾದಿತ್ಯರಾಯನ ಚರಿತ್ರೆಯ
ವಿಸ್ತರಿಸಿದ ಪ್ರಕರಣ.

೧ ನೆಯ ಕಥೆ.

ಮೊದಲು ದಿನದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತೀರಿಸಿ, ತಾಂಬೂಲ ಸ್ವೀಕರಿಸಿ, ಸಕಲ ಪರಿಮಳ ಕುಸುಮಸುಗಂಧವಂ ಧರಿಸಿ, ನವವಿಧಮಕುಟಾಭರಣಭೂಷಿತನಾಗಿ ತನ್ನ ಪ್ರಧಾನ ಚಿತ್ರಶರ್ಮನ ಕೈವಿಡಿದು ಸಿಂಹಾಸನದೆಡೆಗೆ ಬಂದು, ತನ್ನ ಬಲಗಾಲಂ ನೀಡುವ ಸಮಯದಲ್ಲಿ ಬಂದನೆಯ ಸೋಪಾನದ ಜಯವತಿಯೆಂಬ ಪುತ್ತಳಿ—ಹೋ ಹೋ! ನಿಲ್ಲು ನಿಲ್ಲು! ನಮ್ಮ ವಿಕ್ರಮಾದಿತ್ಯರಾಯನ ಸಾಹಸಪರಾಕ್ರಮವೀರವಿತರಣೌದಾರ್ಯ ಧೈರ್ಯಶೌರ್ಯವುಳ್ಳವನಾದರೆ, ಎಲೈ ಭೋಜರಾಯನೇ! ಈ ಸಿಂಹಾಸನವನ್ನೇರು. ಇಲ್ಲದೆ ಇದ್ದರೆ ಕೆಲಸಾರು. ಮೀರಿ ಕುಳಿತರೆ ನಿನ್ನ ತಲೆ ಸಹಸ್ರ ಹೋಳಾಗುವುದೆನ್ನಲಾಗಿ; ಭೋಜರಾಯನು ಖಿನ್ನನಾಗಿ ಬೇರೆ ಬದಲು ಸಿಂಹಾಸನವ ತರಿಸಿ ಅದರಲ್ಲಿ ಕುಳಿತು ಚಿತ್ರಶರ್ಮನ [1]ತನ್ನ[1] ವೃತ್ತಾಂತವ ವಿವರಿಸೆನ್ನಲಾಗಿ, ಚಿತ್ರಶರ್ಮ ಹೇಳಿದ ಕಥೆ:—

ಎಲೆ ಪುತ್ತಳಿಯೆ! ಕೇಳು. ನಮ್ಮ ಭೋಜರಾಜನು ಧಾರಾಪುರದಲ್ಲಿ ಸುಖರಾಜ್ಯಂಗೈವಲ್ಲಿ ಒಂದು ದಿನ ಬಬ್ಬ ಅಹಿತುಂಡಿಕನೆಂಬ ಹಾವಾಡಿಗ ಬಂದು ಲಕ್ಷವೂ ತೊಂಬತ್ತುಸಾವಿರ ಕವಿಗಳು ವಿದ್ವಾಂಸರು ಸಹಿತ

1. 'ಈ' ಎಂದು ಪ್ರತಿಗಳಲ್ಲಿದೆ.

ರಾಯನು ಸದರಿನಲ್ಲಿ ಕುಳಿತಿರುವಾಗ, ಅನೇಕ ಹಾವಿನ [2]ಪೆಟ್ಟಿಗೆಯುಂ[2] ಬಿಟ್ಟು, ಡಕ್ಕೆಗಳಂ ಬೆಳಗಿ, ನಾಗಸರದ ಧ್ವನಿಯಂ ತೋಱಿ, [3]ಹಾವುಗಳ ವಿಚಿತ್ರದಿಂದಾಡಿಸಿ, ಹಾವಿನ ಮಣಿ ಹೆಡೆ ವಿಷವಂ ತೋಱಿಸಿ, ಹಾವುಗಳ ಕಚ್ಚಿಸಿ ಮುದ್ದಾಡಿಸಿ ಮುದ್ದಿಸಿ[3] ಈ ಮೇರೆಯಲ್ಲಿ ತನ್ನ ಅನೇಕವಿದ್ಯೆಯ ತೋಱಿಸಲಾಗಿ, ರಾಯನು ಇಂತೆಂದನು.—ಎಲೋ ಅಹಿತುಂಡಿಕನೇ ! ಸಕಲಜೀವರಾಶಿಗಳಿಗೂ ಕಿವಿಗಳುಂಟಪ್ಪೆ, ಈ ಸರ್ಪಜಾತಿಗೆ ಏನುಕಾರಣ ಕಿವಿಗಳಿಲ್ಲ? ಎಂದು ಕೇಳಲಾಗಿ ಅವನು ಅದಕ್ಕೆ ಹೇಳಿದುದು :—ಎಲೈ ಮಹಾರಾಯನೇ ! ಬ್ರಹ್ಮದೇವನು ಕಿವಿಗಳುಂಟುಮಾಡಿದರೆ ಮುಂದೆ ಭೂಲೋಕದಲ್ಲಿ ಭೋಜಚಕ್ರವರ್ತಿಯ ಕೀರ್ತಿ ಸ್ವರ್ಗಮರ್ತ್ಯ ಪಾತಾಳ ತುಂಬುವುದಱಿಂದ ಈ ಉರಗಜಾತಿಗಳ ಒಡೆಯನಾದ ಭೂಮಿಯ ಹೊತ್ತಿಹ ಮಹಾಶೇಷನು ಕೇಳಿದರೆ, ಆ ಮಹಾಶೇಷನ ಮಕುಟದ ಮೇಲಿರುವ ಲೋಕಂಗಳು ಮಡಕೆಯ ಅಡಿಕಲು ಬಿದ್ದೋಪಾದಿಯಲ್ಲಿ ಕೀಲು ಸಡಲಿ ಕೆಳಯಿಂಕೆ ಬೀಳುವುವು. ಇದ ತಿಳಿದವನಾಗಿ ಅಜನು ಈ ಜಾತಿಗೆ ಕಿವಿಗಳ ಮಾಡಲಿಲ್ಲ—ಎಂದು ಅಱಿಕೆಯಂ ಮಾಡಲಾಗಿ ; ರಾಯನು ಮೆಚ್ಚಿ, ಅವನಿಗೆ ಸವಾಲಕ್ಷ ವರಹವಂ ಕೊಟ್ಟು ಕಳುಹಿಸಿದನು. ಇಂತಹ ಉದಾರತ್ವ ನಿಮ್ಮ ರಾಯನಿಗೆ ಉಂಟೇ ? ಎನ್ನಲಾಗಿ; ಪ್ರಥಮ ಸೋಪಾನದ ಜಯವತಿ ಎಂಬ ಪುತ್ತಳಿ ನಸುನಕ್ಕು ಮುಖವಂ ನೋಡಿ,—ಐಸಲೆ ! ನಿಮ್ಮ ರಾಯನ ಉದಾರ ಇದೆ ! ಎಂದು, ಹಾಸ್ಯವಂ ಮಾಡಿ ಪೇಳಿದ ಉಪಕಥೆ. ಅದೆಂತೆಂದರೆ :—

ಕೇಳೈಯ ಚಿತ್ರಶರ್ಮನೇ ! ಚಕ್ರೇಶ್ವರನಾದ ಈ ನಮ್ಮ ವಿಕ್ರಮಾದಿತ್ಯರಾಯನು ಸಿಂಹಾಸನಾರೂಢನಾಗಿ ಈ ರಾಜ್ಯಪ್ರಜೆಗಳ ಪರಿಪಾಲನೆ ಮಾಡುತ್ತಿರುವಲ್ಲಿ ಆತನ ವೀರವಿತರಣವನು ಬಣ್ಣಿಸಿ ಪೇಳುವುದಕ್ಕೆ [4]ಸಹಸ್ರ ಪೆಡೆ ಅಂಗಳಿಗೆ ತೀರದು[4]. ಅದೆಂತೆಂದರೆ—ಹಿಮವತ್ಪರ್ವತ, ಗೋಕರ್ಣ, ಕೇದಾರ, ಗಯೆ, ಕಾಶಿ, ಕಾಂಚಿ, ಶ್ರೀರಂಗ, ಮಧುರೆ,

---

2. ಪಿಟಿಗೆಗಳಂ. 3. ಹಾವಿನ ವಿಷವಂತೋಱಿಸುವ, ಹಾವುಗಳಂ ಮುದ್ದಿಸುವ, ಹಾವುಗಳಂ ವಿಚಿತ್ರದಿಂದಾಡಿಸುವ, ಹಾವಿನ ಮಣಿ ಹೆಡೆಗಳಂ ತೋಱಿಸುವ, ಹಾವುಗಳ ರಾಶಿಯಂ ತುಳಿವ, ಹಾವುಗಳಂ ಗೀತಗಳಿಂದ ಆಡಿಸುವ, ಬಂಧಗಳಂ ತೋಱಿಸುವ 4. ಸಹಸ್ರ ಹೆಡೆಯುಳ್ಳ ಆದಿಶೇಷನಿಗೆ ಆಳವಲ್ಲ.

ದ್ವಾರಾವತಿ, ಅಯೋಧ್ಯೆ, ರಾಮೇಶ್ವರ ಮುಂತಾಗಿರುವ ಪುಣ್ಯಸ್ಥಳಗಳಲ್ಲಿ ಒಂದೊಂದು ಯೋಜನಪ್ರಮಾಣದ ಮಂಟಪಗಳನ್ನು ಕಟ್ಟಿಸಿ, ಆ ಮಾರ್ಗದಲ್ಲಿ ಸಂಚರಿಸುವಂಥ ಜನರುಗಳಿಗೆ ಅನ್ನೋದಕ ನಡೆಸುವಂತೆ ದಾನಸತ್ರಗಳಂ ಮಾಡಿಸಿ, ಬಂದು ಕೇಳಿದವರಿಗೆ ಮನೋಭೀಷ್ಟಾರ್ಥಂಗಳಂ ಸದಾ ಕಾಲದಲ್ಲೂ ಸರ್ವತ್ರ ತಪ್ಪದೆ ಕೊಡುತ್ತ ಇರುವನು. ಇದು ಹೊಱತಾಗಿ ಅರಮನೆಯ ಬಳವಾಗಿಲ ಬಳಿಯಲ್ಲಿ ಒಂದು ಮಹಾನಾದವಾಗುವಂಥ ಗಂಟೆಯಂ ಕಟ್ಟಿಸಿರುವನು. ಅದೆಂತೆಂದರೆ—ಒಂದು ಕೋಟಿ ಬ್ರಾಹ್ಮಣರಿಗೆ ಭೋಜನವಾಗುವುದು, ಒಂದು ಸಾರಿ ಢಣಾರೆಂದು ಧ್ವನಿಯಾಗುವುದು. ಈ ಮೇರೆಗೆ ಹಗಲು ರಾತ್ರಿ ಸಹ ಹದಿನೆಂಟು ಸಾರಿ ಸದ್ದಾಗುವುದು. ರಾಯನ ದರ್ಶನ ಮಾಡಿದವರಿಗೆ ಬಡತನ ಬಯಲಾಗುವುದು. ರಾಯನ ಮುಖವ ನೋಡಿದ ಮಾತ್ರಕ್ಕೆ ಸಕಲ ವಿದ್ಯೆ ಬರುವುದು. ಯಾರಾದರೂ ಒಂದು ಕಾಣಿಸಿಕೊಂಡರೆ ಸಾವಿರ ವರಹ ಕೊಡುವ ; ಮಾತನಾಡಿಸಿದವರಿಗೆ ಲಕ್ಷ ವರಹ ಕೊಡುವ ; ತ್ಯಾಗವ ಕೊಟ್ಟರೆ ಹತ್ತು ಲಕ್ಷ ವರಹ ಕೊಡುವ ; ಮೆಚ್ಚಿದರೆ ಒಂದು ಕೋಟಿವರಹ ಕೊಡುವ : ಈ ಪ್ರಕಾರ ಉಚಿತಾರ್ಥ ಕೊಡುವ ಉದಾರ ದಯಾಗುಣ ಚತುರ ನೀತಿ ಮಹಿಮೆ ನಮ್ಮ ವಿಕ್ರಮಾದಿತ್ಯ ರಾಯಂಗಲ್ಲದೆ ಅನ್ಯರಾಯರಿಗಿಲ್ಲವೆಂದು ಭುಜವಂ ತಟ್ಟಿ, ಶಾಭಾಸೆನುತ್ತ, ಬಳಿಕ [1]ಧನಿಕತನದಲ್ಲಿ ಕುಬೇರನಂತೆ, ದಾತೃತ್ವದಲ್ಲಿ ಕರ್ಣನಂತೆ, ಸತ್ಯದಲ್ಲಿ ಹರಿಶ್ಚಂದ್ರನಂತೆ, ಭೋಗದಲ್ಲಿ ಇಂದ್ರನಂತೆ, ವಿವೇಕಜಾಣ್ಮೆಯಲ್ಲಿ ಸರಸ್ವತಿಯಂತೆ, ರೂಪಿನಲ್ಲಿ ರತೀಶನಂತೆ, ದಾನದಲ್ಲಿ ಬಲೀಂದ್ರನಂತೆ, ಕೀರ್ತಿಯಲ್ಲಿ ಷೋಡಶಮಹಾರಾಯರಂತೆ[1], ಷಟ್ಚಕ್ರವರ್ತಿಗಳ ಸದೃಶವಾದವ ನಮ್ಮ ವಿಕ್ರಮಾದಿತ್ಯರಾಯ ಒಬ್ಬನಲ್ಲದೆ ಲೋಕಂಗಳಲ್ಲಿ ಬೇಱಿಲ್ಲ, ಕಣಾ !

ಇಂತು ಕರ್ಣಾಟಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ಜಯವತಿ ಪೇಳಿದ ಪ್ರಥಮಕಥೆ.

ಪಾ,—1. ಧನಿಕನೆಂಬರೆ ಕುಬೇರಂಗೆಣೆ, ದಾನಿಯೆಂಬರೆ ಕರ್ಣಂಗೆಣೆ, ಸತ್ಯನಿಧಿಯೆಂಬರೆ ಹರಿಶ್ಚಂದ್ರಂಗೆಣೆ.

೨ನೆಯ ಕಥೆ.

ಎರಡನೆಯ ದಿವಸದಲ್ಲಿ ಭೋಜರಾಯನು ಸದರಿಮೇರೆ ಸಿಂಹಾಸನ ದೆಡೆಗೆ ಬಂದು ಬಲದ ಕಾಲಂ ನೀಡುವಲ್ಲಿ ಆ ಸೋಪಾನದ ವಿಜಯವತಿ ಯೆಂಬ ಪುತ್ಥಳಿಯು ಧಿಕ್ಕರಿಸಲು, ಭೋಜರಾಯನು ಹಿಂದಿನಂತೆ ಬೇರೆ ಸಿಂಹಾಸನದಲ್ಲಿ ಕುಳಿತುಕೊಂಡು, ಚಿತ್ರಶರ್ಮನಿಂದ ಹೇಳಿಸಲು, ಚಿತ್ರ ಶರ್ಮ ಹೇಳಿದ ಕಥೆ.—

ಎಲೆ ಪುತ್ಥಳಿಯೇ ಕೇಳು. ನಮ್ಮ ರಾಯನು ಧಾರಾಪುರದಲ್ಲಿ ಸುಖ ರಾಜ್ಯಂಗೆಯ್ವುವಲ್ಲಿ ಬಂದು ದಿನ ಕುದುರೆಯ ಲಾಯವಂ ಹೊಕ್ಕು ಅಶ್ವಂ ಗಳಂ ನೋಡುತ್ತ, ಅದಱಲ್ಲಿ ಲಕ್ಷಣವಾದ ತನ್ನ ಪಟ್ಟದ ಕುದುರೆಯನ್ನು ಕೊರಲ ಸವುಱುತ್ತ—ಹರಿ ಪವಡಿಸಿದೆ ಏಕೆ? ಎಂದು ನುಡಿದುದಕ್ಕೆ, ಆ ಕುದು ರೆಯ ಬಳಿ ಹುಲ್ಲಿನಲ್ಲಿ ಪರಶೀಮೆಯಿಂದ ಬಂದು ಯಾರೂ ಕಾಣದಂತಿದ್ದ ಒಬ್ಬ ಕಳ್ಳನು ರಾಯನಾಡಿದ ಮಾತಿಗೆ—ಹರಿ ಪವಡಿಸಿ ನಿದ್ದೆಗೆಯ್ವುದೇ ನತಿಶಯವೆನ್ನಲಾಗಿ, ರಾಯ—ನೀನಾರೆಂದು ಕೇಳಲು, ಆ ಕಳ್ಳ ರಾಯನ ಮುಖವಂ ನೋಡಿ, ಈ ತೇಜಿಯಂ ಕದ್ದುಕೊಂಡು ಹೋಗಿ ನಮ್ಮ ರಾಯ ನಿಗೆ ಕೊಟ್ಟು ಬಹುಮಾನವಂ ಪಡೆಯಬೇಕೆಂದು ಬಂದವನೆಂದು ಆಡಿದ ಮಾ ತಿಗೆ ರಾಯನು ಮೆಚ್ಚಿ ಅವನಿಗೆ ಸವಾಲಕ್ಷ ವರಹವನ್ನಿತ್ತು ಕಳುಹಿದನೆಂದು ನುಡಿಯಲು; ವಿಜಯವತಿ ನಗುತ್ತ ಹಾಸ್ಯಂಗೆಯ್ದು ಹೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಪಾಲಿಸುತ್ತ ಸುಖವಾಗಿ ಇರುವಲ್ಲಿ ಬಂದು ದಿನ ಒಬ್ಬ ದೇಶಾಂ ತರಿಕ ಸಿದ್ಧನು ಬಂದು ಕಾಣಿಸಿಕೊಂಡು, ರಾಯನು ಪೀಠವಂ ತೋಱಿ ಕುಳ್ಳಿ ರಿಸಿ— ನೀವೆಲ್ಲಿಂದ ಬಂದಿರಿ ಎಂದು ಕೇಳಲಾಗಿ,—ಎಲೈ ಮಹಾರಾಯನೇ! ನಿನ್ನ ಕೀರ್ತಿ ಆದಿತ್ಯನಂತೆ ಬಹು ಪ್ರಜ್ವಲಿಸುತ್ತಿರುವುದಂ ಕೇಳಿ ನಿನ್ನ ದರ್ಶನ ವಾಗಬೇಕೆಂದು ಬಂದೆವು—ಎನ್ನಲಾಗಿ; ರಾಯಂ ಸಂತೋಷದಿಂದ—ನೀವು ಚರಿಸಿದ ಸ್ಥಳಗಳಲ್ಲಿ ವಿಶೇಷವೇನೆಂದು ಕೇಳಲಾಗಿ; ಅದಕ್ಕಾ ಸಿದ್ಧನು—ಚಿತ್ರ ಕೂಟವೆಂಬ ಪರ್ವತಲ್ಲಿ ಬಂದು ಕೂಟೋತ್ತರವುಂಟು. ಅದಱಲಿ ದೇವರ ಗಂಗೆಯುಂಟು; ಅಲ್ಲಿ ಸ್ನಾನವ ಮಾಡಿ ಆ ತೀರ್ಥ ಸೇವಿಸಲು ದಿವ್ಯ

ಶರೀರವಾಗುವುದು ; ಆ ನದೀತೀರದಲ್ಲಿ ಕಾಳಿಕಾದೇವಿಯ ಗುಡಿಯಿರುವುದು. ಅಲ್ಲೊಬ್ಬ ಜಗಚ್ಛಕ್ಷುವೆಂಬ ಮುನಿಯು ಆ ದೇವಿಯ ಕುರಿತು ದೇವಸಾಹಸ್ರ ವರ್ಷದಿಂದ ನಿರಂತರಹೋಮವಂ ಮಾಡುತ್ತ ಪೂರ್ಣಾಹುತಿಯಲ್ಲಿ ತನ್ನ ಶಿರವ ಛೇದಿಸಿ ಸಮರ್ಪಿಸಲು ಆ ಕ್ಷಣವೇ ಆ ಶಿರಸ್ಸು ಹುಟ್ಟುವುದು. ಈ ಮೇರೆ ಮಾಡಿದ ಹೋಮದ ವಿಭೂತಿ ಶ್ವೇತಾದ್ರಿಯಾಗಿರುವುದು. ಹೀಗೆ ಮಾಡುತ್ತಿದ್ದರೂ ಆತನಿಗೆ ಫಲಸಿದ್ಧಿಯಿಲ್ಲ-ಎನ್ನಲಾಗಿ; ರಾಯ ಕೇಳಿ, ಅದ ನೋಡಬೇಕೆಂದು ಭೇತಾಳಾರೂಢನಾಗಿ ಆ ಸಿದ್ಧಸಹಿತ ಖೇಚರಮಾರ್ಗದಿಂದ ಚಿತ್ರಕೂಟಪರ್ವತಕ್ಕೆ ಹೋಗಿ, ಆ ಗಂಗಾನದಿಯ ಸ್ನಾನವ ಮಾಡಿ ಅದ ಸೇವಿಸಿ, ಆ ದೇವಿಯ ಪೂಜಿಸಿ, ಜಗಚ್ಛಕ್ಷುಮುನಿಗೆ ವಂದಿಸಿ ಅಲ್ಲಿರಲಾಗಿ; ಆ ಮುನಿ ಜಲಸ್ತಂಭದಲ್ಲಿ ಹೋಮವಮ್ ಮಾಡಿ ಪೂರ್ಣಾಹುತಿಗೆ ತನ್ನ ಶಿರವಂ ಕೊಡುವ ವೇಳೆಯಲ್ಲಿ ರಾಯಂ ತನ್ನ ಶಿರವಂ ಕತ್ತರಿಸಿ ಅಗ್ನಿಗೆ ಸಮರ್ಪಿಸಲಾಗಿ; ಅದಕ್ಕೆ ಆ ಕಾಳಿಕಾ ಅಮ್ಮನವರು ಮೆಚ್ಚಿ ರಾಯನಿಗೆ ಆಗಲೇ ಶಿರವನ್ನಿತ್ತು, ನಿಜರೂಪವಂ ತೋರಿ,—ಎಲೈ ರಾಯನೇ! ನಿನ್ನ ದೃಢಕ್ಕೆ ಮೆಚ್ಚಿದೆನು, ವರವಂ ಬೇಡೆನ್ನಲಾಗಿ; ರಾಯನು—ಓ ದೇವಿಯೆ ! ದೇವಸಹಸ್ರ ವರ್ಷದಿಂದ ಹೋಮವಂ ಮಾಡುವ ಜಗಚ್ಛಕ್ಷುವಿಗೆ ವರವಂ ಕೊಡದೆ ನನಗೆ ಕೊಡುವ ಕಾರಣವೇನೆಂದು ಕೇಳಲಾಗಿ; ಆ ದೇವಿಯು ಆತ ದೃಢಚಿತ್ತದಿಂದ ಹೋಮವ ಮಾಡಲಿಲ್ಲ; ನಿನ್ನ ದೃಢ ಅವನಿಗಿಲ್ಲ; ಆದರೂ ನೀನು ಕೊಡಬೇಕೆಂದರೆ—ಹೋಮಫಲ ನಿನಗೆ ಕೊಡುವೆ, ನೀನು ಆತನಿಗೆ ಕೊಡು ಎನ್ನುತ್ತ, ಸಾಯುಜ್ಯದ ವರವನು ನವರತ್ನಾಭರಣಸಹ ದಯೆಪಾಲಿಸಿ ದೇವಿ ಮಾಯವಾದಳು. ಆ ಬಳಿಕ ರಾಯ ಆ ಮುನಿಯಂ ಕರೆದು—ಎಲೈ, ಮಹಾಮುನಿಯೇ! ನೀವು ಬಹುಕಾಲದಿಂದ ಮಾಡಿದ ಹೋಮಫಲ ದೇವಿ ಕೃಪೆ ಮಾಡಿದರು: ತೆಗೆದುಕೊಳ್ಳಿ, ಎಂದು ಆ ಫಲ ಕೊಟ್ಟು, ಅಲ್ಲಿಂದ ಇಲ್ಲಿಗೆ ಬಂದು, ದೇವಿ ಕೊಟ್ಟ ಆಭರಣ ಹತ್ತು ಸಾವಿರದ್ರವ್ಯಸಹ ಆ ಸಿದ್ಧನಿಗೆ ಕೊಟ್ಟು ಕಳುಹಿಸಿ, ಸುಖವಾಗಿ ಇದ್ದನು.

ಇಂತು ಕರ್ನಾಟಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ವಿಜಯವತಿ ಹೇಳಿದ ಎರಡನೆಯ ಕಥೆ.

೩ ನೆಯ ಕಥೆ.

ಮೂಱನೆಯ ದಿವಸದಲ್ಲಿ ಎಂದಿನಂತೆ ಭೋಜರಾಯನು ಸ್ನಾನ ದೇವತಾರ್ಚನೆಯಂ ಮಾಡಿಕೊಂಡು, ಭೋಜನವಂ ತೀರಿಸಿ ತಾಂಬೂಲವಂ ಸೇವಿಸಿಕೊಂಡು, ಸಿಂಹಾಸನದ ಬಳಿಗೆ ಬಂದು ಬಲದ ಕಾಲಂ ನೀಡುವ ಸಮಯದಲ್ಲಿ ಆ ಸೋಪಾನದ ಇಳೆಯವತಿಯೆಂಬ ಮೂಱನೆಯ ಹಂತದ ಪುತ್ತಳಿಯು ಅಟ್ಟಹಾಸಂಗೆಯ್ದು,-ಎಲೈ ಭೋಜರಾಯನೇ ! ಹೋಹೋ ! ನಿಲ್ಲು ನಿಲ್ಲು. ನಮ್ಮೊಡೆಯನಾದ ವಿಕ್ರಮಾದಿತ್ಯರಾಯನ ಧೈರ್ಯ ಶೌರ್ಯಾದಿ ಗುಣಗಳುಳ್ಳೊಡೆ ಈ ಸಿಂಹಾಸನವನೇಱು, ಇಲ್ಲದಿದ್ದರೆ ಕೆಲಸಾರು. ಮೀಱಿ ಕುಳಿತೆಯಾದರೆ ನಿನ್ನ ತಲೆ ಸಹಸ್ರಹೋಳಾಗುವುದು--ಎಂದು ಧಿಕ್ಕರಿಸಲಾಗಿ, ಭೋಜರಾಜನು ಬೇಱಿ ಸಿಂಹಾಸನದಲ್ಲಿ ಕುಳಿತುಕೊಂಡು ಚಿತ್ರಶರ್ಮನಿಂದ ಕೇಳಿಸಿದ ಕಥೆ :--

ಎಲೈ ಪುತ್ತಳಿಯೇ ಕೇಳು. ನಮ್ಮ ರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ, ಒಂದು ದಿನ ಮಂಥರೆಯೆಂಬ ವೇಶಿಯು ತನ್ನ ವಿಟನಾದ ಚಿತ್ರಚೋರನೆಂಬ ಕಳ್ಳನ ಇಟ್ಟುಕೊಂಡು ಇರಲು; ಆ ಕಳ್ಳನು ಆ ವೇಶ್ಯಾಸ್ತ್ರೀಗೆ ಹೊಱಗೆಲ್ಲಾ ಕಳ್ಳತನ ಮಾಡಿದ ಆಭರಣಗಳ ತಂದು ಕೊಡುತ್ತಾ ಇರಲು, ಒಂದಾನೊಂದು ದಿವಸದಲ್ಲಿ ಚಿತ್ರಚೋರನೊಡನೆ ಇಂತೆಂದಳು :—ಎಲೈ ಕಾಂತನೇ, ಚೋರನಾದ ನೀನು ಎನಗೆ ಪ್ರಾಣಕಾಂತನೆಂಬುವುದು ಲೋಕಪ್ರಸಿದ್ಧವಾದುದು. ಆದರೂ ನನಗೊಂದಭಿಲಾಷೆಯುಂಟು. ಅದನೇನೆಂಬೆಯಾ ಕೇಳು. ಭೋಜರಾಯನ ಪತ್ನಿ ಪುಷ್ಪಧನ್ವಿನಿ ಕೊರಳಲ್ಲಿ ಹಾಕಿಯಿರುವ ರತ್ನಪದಕವ ತಂದುಕೊಟ್ಟೆಯಾದರೆ ನನ್ನ ಮನಸ್ಸಿಗೆ ಬಹಳ ಸಂತೋಷವಾದೀತು, ಎಂದು ಹೇಳಲು ಅದ ತಂದು ಕೊಟ್ಟೇನೆಂದು ಹೊಱಟು, ರಾಯನರಮನೆಯ ಬಳಿಗೆ ಬಂದು, ಕನ್ನವಿಕ್ಕಿ, ಒಳಹೊಕ್ಕು, ಚಂದ್ರಶಾಲೆಯ ತೂಗುಮಂಚದಲ್ಲಿ ಮಲಗಿರುವ ರಾಯನ ಸತಿಯಂ ನೋಡಿ, ಸೌಂದರ್ಯ ರೂಪ ಕಂಡು, ಆಕೆಯ ಕೊರಳ ಮಧ್ಯದಲ್ಲಿರುವ ರತ್ನಪದಕವಂ ಕಂಡು, ಆಶ್ಚರ್ಯಗೊಳುತ್ತ, ಮಱೆಯಾಗಿ ನಿಂದಿರುವ ವೇಳೆಯಲ್ಲಿ ಚಂದ್ರೋದಯವಾಗಿ ಚಂದ್ರಕಿರಣ ಜಾಳಾಂದ್ರರಂಧ್ರದಲ್ಲಿ

ಬಂದು, ಎಸೆಯುವ ರಾಣಿಯ ಸ್ತನದ ಮಧ್ಯದಲ್ಲಿರುವುದ ರಾಯ ನೋಡಿ, [1]ಅತಿಶಯವಂ ಮಾಡಿ, ಈ ಚಂದ್ರ ಹೀಗೆ ಇರೆ ಕಾರಣವೇನೆಂದು[1] ಯೋಚನೆಯಂ ಮಾಡುವುದ ಚೋರ ತಿಳಿದು ಇಂತೆಂದನು :—ಎಲೈ ರಾಯನೇ ! ಪರಸ್ತ್ರೀಯರಿಗೆ ಮನಸ್ಸು [2]ಉಂಟಾದ ನಿಮಿತ್ತ ಚಂದ್ರ ಛಿದ್ರನಾದ[2]ನೆಂದು ಹೇಳಿದ ಮಾತ ಕೇಳಿ, ಮೆಚ್ಚಿ, ಎಲೋ ನಿನಾರು? ಎಂದು ರಾಯಂ ಕೇಳಲಾಗಿ;—ನಾನು ಚಿತ್ರಚೋರನೆಂಬ ಕಳ್ಳನು, ನನ್ನ ವೇಶಿ ಮಂಥರೆ ನಿಮ್ಮರಸಿಯ ಕೊರಲ ರತ್ನಪದಕವಂ ಬಯಸಿ ತರಹೇಳಿದುದಱಿಂದ ಬಂದೆ ಎಂದೆದ ಮಾತಿಗೆ ಮೆಚ್ಚಿ, ಅವಗಾಪದಕ ಸವಾಲಕ್ಷವರಹ ಸಹ ಕೊಟ್ಟು ಮನ್ನಿಸಿ ಕಳುಹಿದನು. ಆದಕಾರಣ ನಮ್ಮ ರಾಯನ ಔದಾರ್ಯವೆಂತು ! ಎಂದು ಪೇಳಿದುದಕ್ಕೆ ಇಳೆಯವತಿಯು ನಸುನಗುತ್ತ ಹಾಸ್ಯಂಗೈದು ನಿನ್ನೊಡೆಯನೌದಾರ್ಯವೈಸೆ ! ಎನ್ನೊಡೆಯನೌದಾರ್ಯವಂ ಕೇಳೆಂದು ಪೇಳಿದ ಉಪಕಥೆ :—

ಕೇಳೈ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಸುಖದಿಂದ ಪಾಲಿಸುವಲ್ಲಿ ಒಂದುದಿನ ಬ್ರಹ್ಮರ್ಷಿಗಳು ಬ್ರಾಹ್ಮಣರು ವಿದ್ವಾಂಸರುಗಳ ಕರೆಸಿ,—ದೇವತೆಗಳಿಗೆ ತೃಪ್ತಿಪಡಿಸುವುದಕ್ಕೆ ಏನ ಮಾಡಬೇಕೆನ್ನಲಾಗಿ ; ಸರ್ವರೂ—ಎಲೈ ರಾಯನೇ ! ನೀನು ಮಹಾಪುರುಷ ; ಕ್ಷತ್ರಿಯೋತ್ತಮನಾದ ನಿಮಿತ್ತ ರಾಜಸೂಯಯಾಗವ ಮಾಡಿದರೆ ದೇವತಾತೃಪ್ತಿಯಾಗಿ ಪಿತೃಗಳಿಗೆ ಸಂತೋಷವಾಗುವುದೆನ್ನಲಾಗಿ ; ರಾಯನು ಒಪ್ಪಿ, ಅಶ್ವಮೇಧಯಾಗವ ಕೈಕೊಂಡು, ಚಪ್ಪನ್ನ ದೇಶದಮೇಲೆ ಕುದುರೆಯಂ ಬಿಟ್ಟು, ದಿಗ್ವಿಜಯಮಾಡಿ, ಗಂಗಾತೀರಕ್ಕೆ ಹೋಗಿ, ಯಾಗಶಾಲೆಯ ಕಟ್ಟಿಸಿ, ತನ್ನ ಪುರೋಹಿತನಾದ ಇಂದ್ರಶರ್ಮನ ಕರೆದು, ಸಮುದ್ರ ಮಧ್ಯಕ್ಕೆ ಹೋಗಿ, ಬಹು ಜ್ಞಾನಶಕ್ತನಾಗಿ ತಪಸ್ಸು ಮಾಡುವ ಸತ್ಯಜ್ಞಾನಋಷಿಯಂ ಕರತರಹೇಳಿ ಕಳುಹಿಸಲಾಗಿ, ಆ ಪುರೋಹಿತನು ಸಮುದ್ರದ ಸಮೀಪಕ್ಕೆ ಹೊಱಟುಬಂದು, ಸಮುದ್ರರಾಜನ ನುತಿಸಲು ; ಸಮುದ್ರರಾಜ ಪ್ರಸನ್ನನಾಗಿ—ಎಲೈ ವಿಪ್ರ ! ನಿನಗೇನು ಬೇಕು, ಕೇಳು-ಎನ್ನಲು ; ಅದಕ್ಕೆ ಅವನು

ಪಾ—1. ಪೂರ್ಣಚಂದ್ರನ ತೇಜಸ್ಸು ಈ ಸ್ತ್ರೀಸ್ತನದ ಮೇಲೆ ಏಕೆ ಭಿನ್ನವಾಗಿದೆಯೋ. 2. ಮನಸ್ಸು ಮಾಡಿದವನು ತಾನೇ ಭಿನ್ನನಾದಾನು.

ಸತ್ಯಜ್ಞಾನಋಷಿಯಿರುವ ಸ್ಥಳ ತೋಱಿಸಬೇಕೆನ್ನಲಾಗಿ; ಸಮುದ್ರರಾಜ ಆರುಷಿಯ ತಪೋವನವಂ ತೋಱಿಸಲು ; ಆ ದ್ವಿಜನು ಮುನಿಯ ಬಳಿಗೆ ಬಂದು, ನಮಿಸಿ ರಾಯ ಕಳುಹಿದ ವೃತ್ತಾಂತವಂ ಪೇಳಲಾಗಿ ; ಆರುಷಿ ಕೇಳಿ ಸಂತೋಷಪಟ್ಟು ಇಂತೆಂದನು:—ಎಲೋ ಬ್ರಾಹ್ಮಣ! ನನಗೂ ವಿಕ್ರಮಾದಿತ್ಯರಾಯನಿಗೂ ಅತಿಸ್ನೇಹ. ಆತನಲ್ಲಿ ನಾನು, ನನ್ನಲ್ಲಿ ಆತ, ಎಲ್ಲಿ ಇದ್ದಾಗ್ಯೂ ಗಂಡಭೇರುಂಡದಂತೆ ಶಿರಸ್ಸೆರಡಾಗಿ ದೇಹ ಏಕವಾಗಿ ಇದ್ದೇವೆ. ನಾನು ಬರುವುದಕ್ಕೇನು? ಬಂದೇನು. ಅಲ್ಲಿ ಯಜ್ಞಪೂರ್ತಿಯಾಗಿದೆ. ನಾನು ಬಂದು ಪ್ರಯೋಜನವಿಲ್ಲ, ನೀನು ಹೋಗು—ಎಂದು ಹೇಳಿ ರಾಯನಿಗೆ ಐದು ರತ್ನವಂ ಕೊಟ್ಟು, ಆರತ್ನಗಳ ಪರೀಕ್ಷೆಯ ಪೇಳಿ, ಕಳುಹಿಸಲು ; ಆಪುರೋಹಿತ ರಾಯನ ಬಳಿಗೆ ಬಂದು, ಆ ರುಷಿಯೆಂದ ಮಾತಿನ ವಿವರ ಹೇಳಿ, ಐದು ರತ್ನವಂ ಮುಂದಿರಿಸಲಾಗಿ ; ಅಷ್ಟಱಲ್ಲಿ ಯಜ್ಞಪೂರ್ತಿಯಾಗಿ ಮಂಗಳಾವಭೃಥಸ್ನಾನವು ತೀರಿ, ಸಕಲರಿಗೆ ದಾನದಕ್ಷಿಣೆಗಳ ಕೊಟ್ಟು, ಬಳಿಕ ರಾಯನೈದು ರತ್ನದ ಪರೀಕ್ಷೆ ಕೇಳಲಾಗಿ ; ಪುರೋಹಿತ ಇಂತೆಂದನು :—ಈ ಪಂಚರತ್ನದಲ್ಲಿ ಈರತ್ನ ಸುವರ್ಣದ್ರವ್ಯ ಕೊಡುವುದು; ಈರತ್ನ ಚತುರಂಗಸೇನೆ ವಾಹನಗಳ ಕೊಡುವುದು ; ಈರತ್ನ ದಿವ್ಯ ದುಕೂಲಾಭರಣಗಳ ಕೊಡುವುದು; ಈರತ್ನ ಸುಂದರಸ್ತ್ರೀಯರಂ ಕೊಡುವುದು ; ಈರತ್ನ ಮೃಷ್ಟಾನ್ನ ಶಾಕವಂ ಕೊಡುವುದು, ಎಂದು ಋಷಿ ಅನುಗ್ರಹಿಸಿ ಕೊಟ್ಟು ಇದ್ದಾರೆ—ಎಂದು ಆಱಿಕೆಯಂ ಮಾಡಲಾಗಿ ; ರಾಯ ಪರಿತೋಷಮಂ ಮಾಡಿಕೊಂಡು—ಎಲೈ ಪುರೋಹಿತನೇ! ಯಜ್ಞದ ದಾನ ದಕ್ಷಿಣೆ ನಿನಗೆ ಕೊಡಲಿಲ್ಲ ; ಈಐದು ರತ್ನದಲ್ಲಿ ನಿನಗೆ ಬೇಕಾದ ಒಂದು ರತ್ನವ ತೆಗೆದುಕೋ ಎನ್ನಲಾಗಿ ; ಅವ, ತನ್ನ ಮನೆಗೆ ಹೋಗಿ ಬಂದು ತೆಗೆದುಕೊಳ್ಳುವೆನೆಂದು ರಾಯನಿಗೆ ಬಿನ್ನೈಸಿ, ತನ್ನ ಮನೆಗೆ ಹೋಗಿ, ನಾಲ್ವರು ಮಕ್ಕಳು ಪತ್ನೀ ಸಹ ಕರೆದು, ಅವರ ಕೂಡೆ ಈವಿವರವ ವಿರಚಿಸಲಾಗಿ; ಪತ್ನಿ—ಎಲೈ ಪುರುಷನೇ! ಬಹುಕಾಲ ಕಷ್ಟಪಟ್ಟಿರುವುದಱಿಂದ ದುಕೂಲಾಭರಣ ಕೊಡುವ ರತ್ನ ತಾರೆಂದುದ, ಹಿರಿಯಮಗ ಕೇಳಿ—ಅದು ಬೇಡ ಸುವರ್ಣದ್ರವ್ಯಕೊಡುವ ರತ್ನ ತಾರೆಂದುದ, ಎರಡನೆಯ ಮಗ ಕೇಳಿ—ಚತುರಂಗಸೇನೆ ವಾಹನ ಕೊಡುವ ರತ್ನ ತಾರೆಂದುದ, ಮೂಱನೆಯ ಮಗ ಕೇಳಿ

—ಮೃಷ್ಟಾನ್ನಕಾಕ ಕೊಡುವ ರತ್ನ ತಾರೆಂದುದ, ನಾಲ್ಕನೆಯ ಮಗ ಕೇಳೆ— ಸುಂದರ ಸ್ತ್ರೀಯಂ ಕೊಡುವ ರತ್ನ ತಾರೆಂದು ಇವರೂ ಮನಬಂದ ರೀತಿಯಲ್ಲಿ ಹೇಳಲಾಗಿ; ಆವಿಪ್ರನು ಬಹುಕಿಂಕೃತಿಯಿಂದ ರಾಯನ ಬಳಿಗೆ ಬಂದು, ತನ್ನ ಮನೆಯ ವಿಚಾರ ಶ್ರುತಪಡಿಸಲಾಗಿ ; ರಾಯ ಕೇಳಿ ಸಂತೋಷಚಿತ್ತನಾಗಿ, ಆತನ ಸತಿಸುತರಂ ಕರೆಸಿ, ಅವರವರು ಕೇಳಿದ ರತ್ನವಂ ಅವರವರಿಗೆ ಕೊಡುವಂತೆ ಹೇಳಿ, ಕೊಟ್ಟು, ಪುರೋಹಿತನಿಗೆ ಬೇಕಾದಷ್ಟು ದ್ರವ್ಯ ಕೊಡಿಸಿ, ಕಳುಹಿಸಿ ಸುಖದಿಂದಿದ್ದನು, ಕಣಾ! ನಮ್ಮ ವಿಕ್ರಮಾದಿತ್ಯನ ಉದಾರಗುಣಗಳುಂಟೆ! ಎಂದು ನಸುನಕ್ಕು ಕೈ ಹೊಯ್ದು ಕೆಲಸಾರೆಂದುದು.

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಇಳೆಯುವತಿ ಪೇಳಿದ ಮೂರನೆಯ ಕಥೆ ಸಂಪೂರ್ಣ.

೪ ನೆಯ ಕಥೆ.

ನಾಲ್ಕನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆಯ ಮಾಡಿಕೊಂಡು, ಷೋಡಶ ಮಹಾದಾನಗಳ ಮಾಡಿ, ಗಂಧಮಾಲ್ಯಾಭರಣಾಲಂಕೃತನಾಗಿ, ಚಿತ್ರಶರ್ಮನ ಕೈಲಾಗಿನಲ್ಲಿ ಓಲಗಸಾಲೆಗೆ ಬಂದು ಸಿಂಹಾಸನದೆಡೆಗೆ ಬಂದು, ತನ್ನ ಬಲದ ಕಾಲಂ ನೀಡುವ ಸಮಯದಲ್ಲಿ, ಆ ಸೋಪಾನದ ಸುರತಪ್ರಿಯೆ ಎಂಬ ಪುತ್ಥಳಿಯು—ಹೋ ಹೋ! ನಿಲ್ಲು ನಿಲ್ಲು, ನಮ್ಮೊಡೆಯನಾದ ವಿಕ್ರಮಾದಿತ್ಯರಾಯನ ಸಾಹಸಾದಿಗುಣಗಳುಳ್ಳೊಡೆ ಸಿಂಹಾಸನವನೇರು, ಇಲ್ಲವಾದರೆ ಕೆಲಸಾರು. ಮೀರಿ ಕುಳಿತೆಯಾದರೆ ನಿನ್ನ ತಲೆ ಸಹಸ್ರಹೋಳಾಗುವುದು ಎಂದು ಧಿಕ್ಕರಿಸಲಾಗಿ ; ಭೋಜರಾಯನು ಖಿನ್ನನಾಗಿ ಬದಲು ಸಿಂಹಾಸನದಲ್ಲಿ ಕುಳಿತುಕೊಂಡು, ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲ್ಲೆ ಪುತ್ಥಳಿಯೇ! ಕೇಳು, ನಮ್ಮ ರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ ಒಂದುದಿನ ಒಬ್ಬ ಲೋಕಯಾತ್ರಿಕನೆಂಬ ಕವೀಶ್ವರನು ಬಂದು, ಆಶೀರ್ವಾದಮಾಡಿ ಕಾಣಿಸಿಕೊಳ್ಳಲು ; ಆತನ ಸತ್ಕರಿಸಿ

ಕುಳ್ಳಿರಿಸಿಕೊಂಡು, ಕುಶಲಪ್ರಶ್ನೆ ಮಾಡಿ,—ಎಲೈ ನೀವೆಲ್ಲಿಂದ ಬಂದಿರಿ? ಎಂದು ರಾಯಂ ಕೇಳಲು ;—ಎಲೈ ಮಹಾರಾಯನೇ! ಕೈಲಾಸವೆಂಬ ರಜತಾದ್ರಿಯಿಂದ ಬಂದೆವು, ಎನಲಾಗಿ ; ಅಲ್ಲಿಗೆ ಒಡೆಯನಾದ ಶಿವನು ಕ್ಷೇಮದಲ್ಲಿದ್ದಾರೆಯೇ? ಎಂದು ಕೇಳಲು ; ಆಮಾತಿಗವನು ಇಂತೆಂದನು :—ಕೇಳೈಯ್ಯಾ ರಾಯ! ಶಿವನು ಮೃತನಾದ, ಕೈಲಾಸದಲ್ಲಿಲ್ಲ—ಎನಲು : ರಾಯ—ಅದು ಹೇಗೆ? ಎಂದರೆ, ಹರಿಗರ್ಧಶರೀರ, ಗಿರಿಜೆಗರ್ಧದೇಹ ಕೊಟ್ಟು ತೀರಿಹೋದುದರಿಂದ ಅವನಲ್ಲಿದ್ದ ಗಂಗೆ ಸಮುದ್ರವ ಹೊಕ್ಕಳು; ಚಂದ್ರ ಖೇಚರದಲ್ಲಿ ಚರಿಸುತ್ತಿದ್ದಾನೆ ; ಶೇಷ ಪಾತಾಳವ ಸೇರಿದ ; ಐಶ್ವರ್ಯ ನಿನಗಾಯ್ತು ; ಆತನ ಭಿಕ್ಷಾಟನ ಎನಗಾಯ್ತು—ಎಂದು ಪೇಳಿದುದಕ್ಕೆ ರಾಯಂ ಮೆಚ್ಚಿ, ಅವನಿಗೆ ಸವಾಲಕ್ಷವರಹವಂ ಕೊಟ್ಟು ಕಳುಹಿಸಿದನು ಕಣಾ! ನಮ್ಮ ರಾಯನೌದಾರ್ಯಗುಣಗಳು ಇನ್ನೆಲ್ಲಾದರುಂಟೆ! ಎಂದು ಹೇಳಿದ ಮಾತಿಗೆ ಸುರತಪ್ರಿಯೆ ಎಂಬ ಪುತ್ತಳಿ ನಗುತ್ತ ಹಾಸ್ಯಂಗೈದು [1]ಪೇಳಿದ ಉಪಕಥೆ:—[1]

ಕೇಳೈ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಸುಖದಿಂದ ರಾಜ್ಯವ ಪಾಲಿಸುತ್ತಿರುವಲ್ಲಿ ಒಂದು ದಿನ ಬೇಡರು ಬಂದು—ಎಲೈ ಮಹಾರಾಯನೇ! ಮುನಿಗಳಾಶ್ರಮಗಳಲ್ಲಿ ನದೀತೀರಗಳಲ್ಲಿ ಕ್ರೂರ ಮೃಗಗಳ ಉಪದ್ರವಾಗಿದೆ, ಅದಂ ಪರಿಹರಿಸಬೇಕೆಂದು ವಿಜ್ಞಾಪಿಸಲಾಗಿ ; ರಾಯನು ಆಕ್ಷಣವೇ ಆಯುಧಂಗಳಂ ತೆಗೆದುಕೊಂಡು ಹೊರಟು, ವನಗಳಲ್ಲಿ ಬೇಂಟೆಯನಾಡುತ ಬರುವಲ್ಲಿ, ಸೇನೆ ಹಿಂಬೆ ಸಿಕ್ಕಿ ರಾಯನು ಓರ್ವನೆ ಕ್ಷುತ್ತಿನಿಂದ ಬಳಲಿ, ಒಂದು ವಟವೃಕ್ಷದ ಕೆಳಗೆ ಕುಳಿತಿರುವಲ್ಲಿ, ಈಪಟ್ಟಣದ ಅಗ್ರಹಾರದಿಂದ ದೇವಶರ್ಮನೆಂಬ ಬ್ರಾಹ್ಮಣ ಅಗ್ನಿಹೋತ್ರವಂ ಮಾಡಿ ಯಾಗಾದಿ ಕೃತ್ಯಗಳಂ ತೀರಿಸಿ ಶುಚಿರ್ಭೂತನಾಗಿದರ್ಭೆಯ ನಿಮಿತ್ತ ವನಕ್ಕೆ ಬಂದು ದರ್ಭೆಯಂ ಕೊಯ್ದು ಪಿಂಡಿಯಂ ಕಟ್ಟಿ ತೆಗೆದುಕೊಂಡು ಬರುವಲ್ಲಿ, ವೃಕ್ಷದಡಿಯಲ್ಲಿ ಕುಳಿತಿರ್ದ ರಾಯನಂ ಕಂಡು, ಸಮೀಪಕ್ಕೆ ಹೋಗಿ—ಎಲೈ ತೇಜಸ್ವಿಯೇ! ಈ ಅರಣ್ಯಕ್ಕೆ ಬಂದ ಕಾರಣವೇನೆಂದು ಕೇಳಲಾಗಿ; ರಾಯನು—ಎಲೈ ಶ್ರೋತ್ರಿಯನೇ, ನಾನು ಮೃಗಯಾರ್ಥವಾಗಿ

ಪಾ—1. ಇಂತೆಂದುದು. ಹೀಗೆ ಎಲ್ಲಾ ಕಥೆಯಲ್ಲಿಯೂ ಇದೆ.

ಬಂದೆ; ಸೇನೆ ಹಿಂದುಳಿದುದು; ಬಳಲಿ, ನಾನು ಕುಳಿತಿದ್ದೇನೆ ಎನ್ನಲಾಗಿ! ಆವಿಪ್ರ ತನ್ನ ಗಿಂಡಿಯ ತೀರ್ಥವನ್ನೆಱೆದು, ಪಾತ್ರೆಯೊಳಿದ್ದ ಅನ್ನವಂ ಬಡಿಸಿ, ಉಪಚರಿಸಲಾಗಿ ; ರಾಯನು ಕರುಣಾಚಿತ್ತದಿಂದ—ಎಲೈ ಬ್ರಾಹ್ಮಣೋತ್ತಮನೇ! ನಿನ್ನ ಉಪಕಾರದಿಂದ ನಾನು ಚೈತನ್ಯನಾದೆ ; ನಿನಗೆ ಬೇಕಾದುದ ಕೇಳಿಕೊ ಕೊಡುವೆ—ಎನ್ನಲಾಗಿ ; ಎಲೈ ರಾಜೇಂದ್ರನೇ! ನನಗೆ ಕೊಡುವುದುಂಟಾದರೆ ನನ್ನ ಆಶ್ರಮದ ಬಳಿಯಲ್ಲಿ ಅಗ್ರಹಾರವಂ ಕಟ್ಟಿಸಿ, ಒಬ್ಬೊಬ್ಬ ಬ್ರಾಹ್ಮಣರಿಗೆ ಕೋಟಿಕೋಟಿ ದ್ರವ್ಯ ಕೊಟ್ಟರೆ ನನ್ನ ಅಭೀಷ್ಟ ಸಲುವುದೆನ್ನಲಾಗಿ ; ರಾಯನು ಒಪ್ಪಿ, ಹಾಗೆಯೇ ಮಾಡುವೆನೆಂದು ಮಾತುಕೊಟ್ಟು, ಅವನ ಕಳುಹಿಸಿ, ಅಲ್ಲಿಂದ ಬಂದು, ಆ ವಿಪ್ರನಾಶ್ರಮದೆಡೆಯಲ್ಲಿ ಅಗ್ರಹಾರವ ಕಟ್ಟಿಸಿ, ಜನವೇರೆ ಕೋಟಿಕೋಟಿ ವರಹ ಕೊಟ್ಟು ಸುಖವಾಗಿ ಇರಿ—ಎಂದು ಹೇಳಿ, ರಾಯನು ಇರುತ್ತಿರಲು ; ಆದೇವಶರ್ಮನೆಂಬ ದ್ವಿಜನು ರಾಯನ ಧೈರ್ಯ ನೋಡಬೇಕೆಂದು ರಾಯನ ಕುಮಾರ ಚಂದ್ರಶೇಖರರಾಯನ ಆರೂ ಕಾಣದಂತೆ ತನ್ನ ಮನೆಗೆ ಕರೆದುಕೊಂಡು ಹೋಗಿ ಇರಿಸಿಕೊಳ್ಳಲು ; ರಾಯನು ಮಗುವಿಲ್ಲವೆಂಬುದ ಕೇಳಿ ವ್ಯಸನಪಡುತ್ತ, ಊರನೆಲ್ಲ ಹುಡುಕಿಸುತಿರಲು : ಆವೇಳೆಯಲ್ಲಿ ದೇವಶರ್ಮ ಆ ಮಗುವಿನಾಭರಣವ ತಂದು ಪೇಟೆಯಲ್ಲಿ ಕ್ರಯಮಾಡುವುದಂ ಕಂಡು, ತಳವಾಱರು ರಾಯನ ಬಳಿಗವನ ಕರತರಲಾಗಿ ; ರಾಯನು—ಎಲೋ ಬ್ರಾಹ್ಮಣಾ! ನಮ್ಮ ಮಗುವಿನ ಭಂಗಾರ ನಿನಗೆಲ್ಲಿ ಬಂದಿತೆಂದು ಕೇಳಲು ; ಎಲೈ ರಾಯನೇ! ಈಒಡವೆಗಾಸೆಪಟ್ಟು ಮಗುವಂ ಕೊಂದೆನೆನ್ನಲಾಗಿ ; ರಾಯನು ವಿಸ್ಮಿತನಾಗಿ—ನಾವು ಇವನ ಮಾಡುವುದೇನು ? ನಮ್ಮ ಕರ್ಮಾನುಗುಣ್ಯದಿಂದ ಇವನಿಗೆ ಈ ದುರ್ಬುದ್ಧಿ ಹುಟ್ಟಿತೆಂದು ಧೈರ್ಯವಿಡಿದು, ಎಲೋ ವಿಪ್ರ! ನೀನು ದ್ರವ್ಯಾಪೇಕ್ಷೆಯಿಂದ ಈ ಕೆಲಸ ಮಾಡಿದವನೇ ಹೋಱಿತು ಮತ್ತೆ ಬೇಱೆ ಇಲ್ಲವೆಂದು, ಆದಾಗ್ಯೂ ಮುಂದೆ ಇಂತಹ ಕಾರ್ಯವಂ ಮಾಡದಿರು ಎಂದು, ಅವನಿಗೆ ಕೋಟಿ ಧನವಂ ಕೊಟ್ಟು ಕಳುಹಿಸಲು ; ತಱುವಾಯ ಅವ ತನ್ನ ಮನೆಗೆ ಬಂದು, ಮಗುವಂ ಕರೆದುಕೊಂಡು ಹೋಗಿ. ರಾಯನಿಗೊಪ್ಪಿಸಿ, ಎಲೈ ಮಹಾರಾಯ! ನಿನ್ನ ಧೈರ್ಯ ಪರೀಕ್ಷೆಗಾಗಿ ನಾನೀಕೆಲಸ ಮಾಡಿದೆ ಎನ್ನಲು ; ರಾಯ ಮೆಚ್ಚಿ ಮತ್ತು ಹತ್ತುಕೋಟಿ

ವರಪವಂ ಕೊಟ್ಟು ಕಳುಹಿಸಿದನು, ಕಣಾ! ನಮ್ಮ ರಾಯನೌದಾರ್ಯ ಧೈರ್ಯಾದಿ ಗುಣಗಳೆಂತಟೆ!

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಸುರತಪ್ರಿಯೆಯೆಂಬ ಪುತ್ತಳಿ ಪೇಳಿದ ನಾಲ್ಕನೆಯ ಕಥೆ.

೫ ನೆಯ ಕಥೆ.

ಐದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು, ಸಿಂಹಾಸನದ ಬಳಿಗೆ ಎಂದಿನಂತೆ ಚಿತ್ರಶರ್ಮನ ಕೈಲಾಗಿನಿಂದ ಬಂದು, ನವರತ್ನಮಯವಾದ ಹಾವುಗೆಯ ಬಲದ ಕಾಲಂ ನೀಡುವ ಸಮಯದಲ್ಲಿ, ಅಸೋಪಮಾನದ ಆನಂದಸಂಜೀವಿನಿ ಯೆಂಬ ಪುತ್ತಳಿಯು—ಹೋ ಹೋ! ನಿಲ್ಲು ನಿಲ್ಲು, ಎಲೈ ಭೋಜರಾಜನೆ! ನಮ್ಮ ಒಡೆಯನಾದ ವಿಕ್ರಮಾದಿತ್ಯರಾಯನ ಸಾಹಸಾದಿ ಗುಣಗಳುಂಟಾದರೆ ಈ ಸಿಂಹಾಸನವನೇಱು, ಅಲ್ಲವೆ ಕೆಲಸಾರು, ವಿಚಾರಿಸಿ ಕುಳಿತರೆ ತಲೆ ಸಹಸ್ರಹೋಳಾಗುವುದು, ಎನ್ನಲಾಗಿ; ರಾಯನು ಖಿನ್ನನಾಗಿ ಬೇಱೆ ಸಿಂ ಹಾಸನದಲ್ಲಿ ಕುಳಿತುಕೊಂಡು, ಚಿತ್ರಶರ್ಮನಿಂದ ಕೇಳಿಸಿದ ಕಥೆ:—

ಎಲೈ ಪುತ್ತಳಿಯೇ! ಕೇಳು. ನಮ್ಮ ರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ ಆಪುರದ ಬಹುದರಿದ್ರನಾದ ವೀರಸೇನನೆಂಬ ವಿಪ್ರನಿಗೆ ಭವಭೂತಿಯೆಂಬ ಮಗನು, ಬಹು ಪುಣ್ಯವಂತನಾದ ಪುಷ್ಪದತ್ತ ನೆಂಬ ದ್ವಿಜನಿಗೆ ಪಿಪ್ಪಲೀಶನೆಂಬ ಮಗನು, ಅವರಿಬ್ಬರೂ ತಮ್ಮತಮ್ಮ ತಂದೆ ಗಳಿಗೆ ಪಂಚಪ್ರಾಣವಾಗಿ ಇದ್ದರು. ಅವರಿಗೆ ಒಂದು ಅಕ್ಷರವೂ ಬಾರದ ನಿಮಿತ್ತ ವಿದ್ಯವಿಲ್ಲದ ಮಕ್ಕಳು ಇದ್ದು ಪ್ರಯೋಜನವಿಲ್ಲವೆಂದು ತಂದೆ ಗಳು ಆಡಿದ ಮಾತ ಕೇಳಿ, ಅವರಿಬ್ಬರೂ ಏಕವಾಗಿ ಹೊಱಟು, ಮಂಡಲ ಮೂರ್ತಿಯೆಂಬ ಪಟ್ಟಣಕ್ಕೆ ಹೋಗಿ, ಕಾಳಶರ್ಮನೆಂಬ ಗುರುವಂ ಕಂಡು, ನಮಿಸಿ—ಎಲೈ ಗುರುವೇ ನಮಗೆ ಸರ್ವವಿದ್ಯವಂ ಹೇಳಿ ರಕ್ಷಿಸಬೇಕೆ ನ್ನಲು; ಆಗುರುವು—ಎಲೈ ಶಿಷ್ಯರುಗಳಿರ! ವಿದ್ಯೆ ಕಲಿಯಬೇಕಾದರೆ

(ಇಲ್ಲ ದ್ರವ್ಯವಂ ಕೊಟ್ಟು ಕಲಿಯಬೇಕು, ಇಲ್ಲ ವಿದ್ಯವಂ ಕೊಟ್ಟು ಕಲಿಯಬೇಕು,) ಇಲ್ಲ ಸೇವೆಯಂ ಮಾಡಿ ಕಲಿಯಬೇಕು, ಇದೊಂದೂ ಇಲ್ಲದವನಿಗೆ ವಿದ್ಯ ಬಾರದೆಂದು ಗುರು ಆಡಿದ ಮಾತ ಕೇಳಿ, ಪಿಪ್ಪಲೀಶ ಬಹಳ ದ್ರವ್ಯವಂ ಕೊಟ್ಟು—ತನಗೆ ವಿದ್ಯ ಹೇಳಿ ಎಂದನು ; ಭವಭೂತಿ, ನಾನು ನಿಮ್ಮ ಪಾದಸೇವೆ ಮಾಡುವೆನು, ಎಂದನು. ಆ ಮಾತಿಗೆ ಗುರು ಒಡಂಬಟ್ಟನು. ಪಿಪ್ಪಲೀಶನಿಗೆ ಸಕಲವಿದ್ಯ ಬರಲಾಗಿ, ಅವನು ಗುರುಪೂಜೆಯನ್ನು ಮಾಡಿ, ಗುರುದಕ್ಷಿಣೆಯಂ ಕೊಟ್ಟು, ಗುರುವಿನ ಅಪ್ಪಣೆ ತೆಗೆದುಕೊಂಡು ಊರಿಗೆ ಹೊರಡಲಾಗಿ ; ಭವಭೂತಿ—ತನಗೇನಪ್ಪಣೆ ಎಂದು ಕೇಳದುದಕ್ಕೆ ನೀನು ಇನ್ನು ಹತ್ತುದಿವಸ ಸೇವೆಮಾಡುತ್ತಿದ್ದು ಬಳಿಕ ಹೋಗು ಎನ್ನಲಾಗಿ ; ಭವಭೂತಿ ನಿಂತನು. ಪಿಪ್ಪಲೀಶ ಹೋದನು. ಆಮೇಲೆ ಗುರುಸೇವೆ ಹತ್ತು ದಿನಮಾಡಿಕೊಂಡಿದ್ದಂಥ ಭವಭೂತಿಯ ಕಂಡು, ಗುರುವಿಗೆ ಕಟಾಕ್ಷ ಬಂದು, ಚಂಡಿಕಾಮಂತ್ರವನ್ನು ಉಪದೇಶವಂ ಮಾಡಿ, ಅನುಗ್ರಹಿಸಿ ಊರ ಮುಂದಿರುವ ಚಂಡಿಕಾಲಯಕ್ಕೆ ಹೋಗಿ, ಈಮಂತ್ರವ ಭಜಿಸೆಂದು ಗುರುವು ನಿರೂಪಿಸಿ ಕಳುಹಲಾಗಿ ; ಭವಭೂತಿ ಆಜ್ಞಾನುಸಾರ ಚಂಡಿಕಾದೇವಿಯ ಗುಡಿಗೆ ಬಂದು, ತದೇಕಧ್ಯಾನದಿಂದ ಮೂರು ದಿನ ಉಪವಾಸದಿಂದ ಭಜಿಸಲಾಗಿ. ಆದೇವಿ ಪ್ರಸನ್ನಳಾಗಿ ವಾಕ್ಸಿದ್ಧಿಯನ್ನು ಸಮಸ್ತವಿದ್ಯ ಬರುವ ವರವನ್ನು ಕೊಟ್ಟು ಮಾಯವಾದಳು. ಅಲ್ಲಿಂದ ಭವಭೂತಿ ಊರಿಗೆ ಬರುವಲ್ಲಿ ದಾರಿಯಲ್ಲಿ ಪಿಪ್ಪಲೀಶನು ಸಿಕ್ಕಿ ಇಬ್ಬರೂ ಜತೆಗೂಡಿ ಬರುತ್ತಿರುವಲ್ಲಿ, ಮಧ್ಯಮಾರ್ಗದ ಘೋರಾರಣ್ಯದಲ್ಲಿ ಪಿಪ್ಪಲೀಶನಿಗೆ ಬಹಳ ದಾಹ ಕಂಡು, ಅಲ್ಲಿ ನೀರು ಇಲ್ಲದುದರಿಂದ ಪಿಪ್ಪಲೀಶನು ಪರ್ಜನ್ಯ ಜಪವಂ ಮಾಡಲಾಗಿ, ಮೋಡಗಟ್ಟಿ ಮಳೆ ಬರುವಂತೆ ಆದುದರಿಂದ, ಭವಭೂತಿ ಕಂಡು ದಿಗ್ಬಂಧನಮಂತ್ರವಂ ಜಪಿಸಲು, ಬರುವ ಮಳೆ ಬಾರದುದರಿಂದ ಭವಭೂತಿಯೊಡನೆ ಈ ಪಿಪ್ಪಲೀಶನು ಇಂತೆಂದನು ;—ಎಲೋ ಭವಭೂತಿ! ಅದಿರಲಿ! ನೀನು ಮಳೆಯ ಬರಿಸು ; ನಾನು ಬಾರದಂತೆ ಮಾಡೇನು ಎನ್ನಲಾಗಿ ; ಭವಭೂತಿ ಹೂಂಕರಿಸಲು ಮಳೆ ಬಹಳ ಹೊಯ್ಯಿತು. ಉದಕ ಸಮೃದ್ಧಿಯಾಗಲು, ಉದಕವಂ ಕೊಂಡು ಪಥಶ್ರಾಂತರಾಗಿ ಮಲಗಲು ; ಪಿಪ್ಪಲೀಶನು ಕಟ್ಟಿದ ದಿಗ್ಬಂಧನೆ ತಪ್ಪಿದಕಾರಣ

—ನಾನು ದ್ರವ್ಯವಂ ಕೊಟ್ಟು ಕಲಿತ ವಿದ್ಯ ಪ್ರಯೋಜನವಿಲ್ಲವಾಯಿತು, ಇವ ನಿಗೆ ಫಲಿಸಿತೆಂದು ಮನದಲ್ಲಿ ಮತ್ಸರ ಹುಟ್ಟಿ ಕೊಲಲುದ್ಯೋಗಿಸಿ ಮಲಗಿದ್ದ ವನ ಮಂಡೆಯಂ ಕಾಲಲ್ಲಿ ಮೆಟ್ಟಿಕೊಂಡು ಇಂತೆಂದನು:—ಕೇಳೈ, ಗೌಳಿಯೂ ಗೊರವನೂ ಕೀರನೂ ಸೂಳೆಯೂ ಕವಿಗಳೂ ವಿದ್ಯಾವಂತರೂ ಇವರು ತಮಗಿಂತ ಅಧಿಕರನ್ನು ಕಂಡರೆ ಸೈರಿಸರು. ವೈರವಿಲ್ಲದೆ ಕಪಿಯೂ ಕಾಗೆಯೂ ನರಿಯೂ ಸ್ವಜಾತಿಯ ಕೂಡಿರುವುವು. ಶ್ವಾನವು, ಸಿಂಹವು, ಆನೆಯು, ಬ್ರಾಹ್ಮಣರು ಸಹ ಸ್ವಜಾತಿಯ ಸೇರರೆಂಬ ನೀತಿಯಿರುವುದ ಱಂದ ನಾನು ನಿನ್ನ ತಲೆಯ ತಱಿಯದೆ ಬಿಡೆನೆಂದು ಭವಭೂತಿಯ ಶಿರೆಯ ಪಿಡಿದು ಕೊರಲ ಹಱಿಯಬರಲು; ಭವಭೂತಿಯು—ವಿದ್ಯಾಪರೀಕ್ಷೆಗಾಗಿ ನಾ ಮಾಡಿದುದು ನನ್ನ ಪ್ರಾಣಕ್ಕೆ ಬಂದಿತು ! ಎಂದು ಖಿನ್ನನಾಗಿ-ಕೇಳೈ ಪಿಪ್ಪ ಲೀಶನೇ ! ಕೊಲುವವನಂತೂ ಕೊಲುವೆ ? ನನಗೂ ನಿನಗೂ ಬಾಲ್ಯದಾರಭ್ಯ ಅತಿಸ್ನೇಹ. ನಾವಿಬ್ಬರೂ ಬಬ್ಬ ತಾಯಿ ಮಕ್ಕಳಂತೆ ಇದ್ದವರು. ಇದ ಲ್ಲದೆ ಬಬ್ಬ ಗುರುವಿನ ಶಿಷ್ಯರು. ನನ್ನ ತಾಯಿತಂದೆ ಮುಪ್ಪಿನವರು. ನಾನಲ್ಲದೆ ಇನ್ನು ಬೇಱೆ ಮಕ್ಕಳಿಲ್ಲ. ಆದರೂ ಅವರಿಗೆ "ಅಪ್ರಶಿಖ" ಎಂಬ ನಾಲ್ಕು ಅಕ್ಷರ ಬರೆದುಕೊಟ್ಟೇನು. ಆ ಚೀಟಿಯನ್ನು ನನ್ನ ತಾಯಿತಂದೆಗಳಿಗೆ ತಪ್ಪದೆ ಕೊಡು ಎಂದು ಬೇಡಿ, ನಂಬುಗೆಯಂ ತೆಗೆದು ಕೊಂಡು, ಚೀಟಿನಲ್ಲಿ ಅಕ್ಷರಗಳ ಬರೆದುಕೊಟ್ಟ ಬಳಿಕ ಪಿಪ್ಪಲೀಶ ಭವಭೂ ತಿಯ ಶಿರೆಯಂ ಹಿಡಿದು, ತನ್ನ ಕಯ್ಯ ಖಡ್ಗದಿಂ ಕೊರಲ ಹರಿದು, ಬಂದು ಗುಡಿಯ ಬಳಿಯಲ್ಲಿ ಇರಿಸಿ, ಆ ಬಳಿಕ ಊರಿಗೆ ಬಂದನು. ಈತ ಬಂದ ಸುದ್ದಿಯ ಕೇಳಿ ಭವಭೂತಿಯ ತಾಯಿತಂದೆಗಳು ಬಂದು,-ನಮ್ಮ ಮಗನೆಲ್ಲಿ ? ಎಂದು ಕೇಳಲಾಗಿ ; ಅದಕ್ಕಾ ಪಿಪ್ಪಲೀಶನು,—ಬರುವ ದಾರಿಯಲ್ಲಿ ಅವನಿಗೆ ಹೊಟ್ಟೆಶೂಲೆಯು ಬಂದು ಸತ್ತನು. ಸಾಯುವಾಗ ಒಂದು ಚೀಟಿ ಬರೆದು ಕೊಟ್ಟಿದ್ದಾನೆ, ಎಂದು ಆಚೀಟಿಯನ್ನು ಕೊಟ್ಟನು. ಅವರು ಅದಂ ನೋಡಿ, ಏನು ಮಾತೂ ಇಲ್ಲದೆ, "ಅಪ್ರಶಿಖ" ಎಂಬ ಅಕ್ಷರ ಬರೆದಿರ ಲಾಗಿ ; ಅದರರ್ಥ ತಿಳಿಯದೆ ಅವರು ರಾಯನ ಬಳಿಗೆ ಬಂದು, ಎಲ್ಲ ವರ್ತ ಮಾನ ಶ್ರುತಪಡಿಸಿ, ಆಚೀಟಿ ಮುಂದಿರಿಸಲಾಗಿ ; ರಾಜನು ಅದ ನೋಡಿದ ಬಳಿಕ, ಅವನು—ಎಲೈ ಮಸಾಹಾಯ್ಕ: ಈ ಅಕ್ಷರಾರ್ಥವ ಹೇಳಿಸಿ ನಮ್ಮ

ದುಃಖ ಪರಿಹರಿಸಿದರೆ ಸರಿ; ಇಲ್ಲದೆ ಇದ್ದರೆ ಊರ ಮುಂದಲ ಮಹಾಕಾಳಿಯೆದುರಾಗಿ ನಮ್ಮ ವಿತ್ತ ಪಾರಯಾವತ್ತೂ ದಾನವಂ ಮಾಡಿ, ದಂಪತಿಸಹ ಅಗ್ನಿಪ್ರವೇಶಮಾಡುತ್ತ ಇದ್ದೇವೆ ಎನ್ನಲಾಗಿ; ರಾಯ ತನ್ನಸದರಿನಲ್ಲಿ ಇರುವ ಲಕ್ಷವೂ ತೊಂಬತಾಱುಸಾವಿರಕವಿಗಳ-ಇದಱರ್ಥ ಹೇಳಿ, ಎಂದು ಆಚೀಟಂ ಕೊಟ್ಟನು. ಯಾವತ್ತು ಕವಿಗಳೂ ಚೀಟ ನೋಡಿ ಸುಮ್ಮನಿದ್ದರು. ಅಷ್ಟಱಲ್ಲೇ ರಾಯ ಎದ್ದು ಹೋದನು. ಹೀಗೆ ಐದಾಱು ದಿನವಾದರೂ ಅದಱರ್ಥ ಹೇಳದಿರಲು; ರಾಯನು ಮಹಾಕೋಪದಿಂದ—"ನಾಳೆ ಈಅಕ್ಷರಾರ್ಥ ಹೇಳಿದರೆ ಸರಿ; ಇಲ್ಲದೆ ಇದ್ದರೆ ನಿಮ್ಮನ್ನೆಲ್ಲಾ ಕಲ್ಲುಗಾಣಕ್ಕೆ ಹಾಕಿಸುವೆ"ನೆಂದು ಕಟ್ಟಳೆಯಂ ಮಾಡಲಾಗಿ; ವರರುಚಿ ಮುಂತಾದ ಕವಿಗಳೆಲ್ಲಾ—ಹರಹರ! ನಮಗೆ ಮರಣಕಾಲ ಬಂತೇ!, ಎಂದು ಯೋಚಿಸುವಲ್ಲಿ ಕಳಿಂಗದೇಶದಿಂದ ಒಬ್ಬ ವಿದ್ವಾಂಸವಿಪ್ರನು ಬಂದು, ಈ ಸಮಾಚಾರವಂ ಕೇಳಿ, ಆ ಕ್ಷಣವೇ ಆ ಮಹಾಕಾಳಿಯ ಗುಡಿಯ ಬಳಿಗೆ ಹೋಗಿ, ಸ್ನಾನವಂ ಮಾಡಿ, ಆ ದೇವಿ ದರ್ಶನವಂ ಮಾಡಿಕೊಂಡು ಬರುವಷ್ಟಱಲ್ಲೇ, ಸಾಯಂಕಾಲವಾಗಲಾಗಿ; ಅವನು ಅಲ್ಲೇ ಇರಲಾಗಿ, ಅರ್ಧರಾತ್ರಿಯಲ್ಲಿ ದೇವಿ ಬೇಂಟೆನಿಮಿತ್ತ ಹೊಱಟುದನ್ನು ಭೂತಗಣವೆಲ್ಲ ಕಂಡು—ಎಲೆ ತಾಯೆ! ನಮಗೆ ಆಹಾರವಿಲ್ಲವೆಂದು ಬಿನ್ನಯಿಸಲಾಗಿ; ದೇವಿಯು—ಸ್ಮೈರಿಸಿ, ನಾಳೆ ಭೋಜರಾಯ ತನ್ನ ಬಳಿಯಲ್ಲಿ ಇರುವ ಕವಿಗಳೆಲ್ಲರನೂ ಕಲ್ಲುಗಾಣಕ್ಕೆ ಹಾಕಿಸುವನು. ಆಗ ನಿಮಗೆ ಆಹಾರಕೊಡಿಸುವೆನು—ಎಂದು ಹೇಳಲಾಗಿ; "ಇದು ನಿಜವೇ? ಆ ರಾಯ ಕವಿಗಳಿಗೆ ಬದುಕುವಂಥವನು; ಕಲ್ಲುಗಾಣಕ್ಕೆ ಹಾಕಿಸುವ ಕಾರಣವೇನು?" ಎಂದು ಕೇಳಲಾಗಿ; "ಈ ಮಾತು ಅಬದ್ಧವಲ್ಲ"—ಎಂದು [1]ಎಲ್ಲ ವಿವರವಂ[1] ಹೇಳಿ, ಆಬಳಿಕ ಅಕ್ಷರಾರ್ಥ ಹೇಳಿದಳು. ಅದೇನೆಂದರೆ:—

"ಅನೇನ ತವ ಪುತ್ರಸ್ಯ ಪ್ರಸುಪ್ತಸ್ಯ ವನಾಂತರೇ।
[2]ಶಿಖಾಮಾತ್ರಮ[2] ಪಾದೇನ ಖಡ್ಗೇನೋಪಹತಂ ಶಿರಃ॥"

ಪಾ—1. ಪಿಪ್ಪಲೀಶನೆಂಬಾತನು ಭವಭೂತಿಯೆಂಬವನ ಕೊರಲಂ ಕೊಯ್ದುದ ತಿಳಿಸೆ "ಅಪ್ರಶಿಖ" ವೆಂಬ ನಾಲ್ಕು ಅಕ್ಷರವಂ ಬರೆದು ಕಳಿಸಿದನು. ಅದಱ ಅರ್ಥವಂ ಹೇಳಲಱಿದವರಿಲ್ಲ. ಆದುದಱಿಂದ ರಾಯನು ಎಲ್ಲರನ್ನು ಕಲ್ಲುಗಾಣಕ್ಕೆ ಇಕ್ಕಿಸುವನೆಂದು ಕಟ್ಟುಮಾಡಿದ್ದಾನೆ ಎಂದು.

2. ಶಿಖಾಯಾಂ ಕ್ರೌಂಚ.

ಎಂದು ಪೂರ್ತಿಮಾಡಿ ಹೇಳಿದುದ, ಅಲ್ಲಿದ್ದ ಬ್ರಾಹ್ಮಣ ಕೇಳಿ, ಬೆಳಗಾಗೆ ರಾಯನ ಆಸ್ಥಾನಕ್ಕೆ ಬಂದು ಕವಿಗಳ ಸಮೀಪದಲ್ಲಿ ಕುಳಿತಿರುವಾಗ, ಕಳಿಂಗ ದೇಶದ ಬ್ರಾಹ್ಮಣ ಎದ್ದು ರಾಯನಿಗೆ ಆಶೀರ್ವಾದಮಾಡಿ ನುಡಿದನು:—ಕೇಳೈ ರಾಯ, ಅಕ್ಷರಾರ್ಥದ ವಿವರವೇನೆಂದರೆ-ಪಿಪ್ಪಲೀಶ ಭವಭೂತಿ ಇವರೀರ್ವರು ವಿದ್ಯಾಭ್ಯಾಸವಂ ಮಾಡಿ ಜತೆಗೂಡಿ ಅರಣ್ಯದಲ್ಲಿ ಬರುವಾಗ ವಿರೋಧಹುಟ್ಟಿ ಪಿಪ್ಪಲೀಶ ಭವಭೂತಿಯ ಶಿರೆಯಂ ಪಿಡಿದು ಅವನ ಕೊರಲಂ ಹಿಱಿದನು, ಎಂದು ಅಕ್ಷರಾರ್ಥ ಹೇಳಿದುದ ರಾಯ ಕೇಳಿ, ದಂಪತಿಗಳಿಗೆ ಹೇಳಲಾಗಿ; ಅವರು ಕೇಳಿ ಪ್ರಲಾಪದಿಂದ ಮಹಾಕಾಳಿಯ ಗುಡಿಯಬಳಿಗೆಹೋಗಿ, ಸ್ನಾನವಂ ಮಾಡಿ ಅಗ್ನಿಕೊಂಡವಂ ತೆಗೆದು ಬೆಂಕಿಯ ಹಾಕಿಸಿ ಹರಿದ್ರಾವಸ್ತ್ರವಂ ಧರಿಸಿ ತಮ್ಮ ಸರ್ವಸ್ವದಾನವಂ ಮಾಡಿ, ಅಗ್ನಿಗೆ ಬೀಳುವ ವೇಳೆಯಲ್ಲಿ ಆ ದೇವಿ ಪ್ರತ್ಯಕ್ಷವಾಗಿ, ಕೈವಿಡಿದು—"ಎಲೈ ದಂಪತಿಗಳಿರಾ! ಏತಕ್ಕೆ ಅಗ್ನಿಗೆ ಬಿದ್ದೀರಿ? "ಎಂದು ಕೇಳಲಾಗಿ, ಅವರಿಂತೆಂದರು:—"ಓದೇವಿ! ನಮಗಿದ್ದ ಒಬ್ಬ ಮಗನ ಈ ಮೇರೆ ನೀನು ಮಾಡಿಸಿದ ಬಳಿಕ ನಮ್ಮ ದೇಹಗಳನ್ನೂ ನಿನಗೊಪ್ಪಿಸಿ ಪುಣ್ಯವಂ ಪಡೆಯಬೇಕೆಂದು ಈಕೆಲಸ ಮಾಡಿದೆವು" ಎನ್ನಲಾಗಿ; ಆದೇವಿಯು ಮೆಚ್ಚಿ ಅಗ್ನಿಗೆ ಏತಕ್ಕೆ ಬಿದ್ದೀರಿ? ನಿಮ್ಮ ಮಗ ಇಂಥ ವನದ ಗವಿಯ ಬಳಿಯಲ್ಲಿ ಮಲಗಿ ಇದ್ದಾನೆ. ಅಲ್ಲಿಗೆ ನೀವು ಹೋಗಿ ನಮ್ಮ ತೀರ್ಥವ ಹಾಕಿ ಕೈಯಲ್ಲಿ ನಮ್ಮ ಪ್ರಸಾದ ಕೊಟ್ಟರೆ ನಿಮ್ಮ ಮಗ ಎದ್ದು ನಿಮ್ಮ ಸಂಗಡ ಬರುವನು" ಎಂದು ಗುಱುತ ಹೇಳಿ ಮಾಯವಾದಳು. ದಂಪತಿಗಳು ದೇವಿ ಹೇಳಿದ ವನದ ಗವಿಯೆಡೆಗೆ ಹೋಗಿ ಮಲಗಿರುವ ಮಗನಂ ಕಂಡು, ಅವನ ಮೇಲೆ ತೀರ್ಥವಂ ಹಾಕಿ, ಕೈಯಲ್ಲಿ ಪ್ರಸಾದ ಕೊಡಲು, ಭವಭೂತಿಗೆ ಜೀವ ಬಂದು, ಎದ್ದು, ತಾಯಿತಂದೆಗೆ ನಮಿಸಿ ನಿಂದಿರುವ ಮಗನ ನೋಡಿ, ಅತಿಸಂತೋಷದಿಂದ ಮಗನ ಕರೆದುಕೊಂಡು ಊರಿಗೆ ಬಂದು, ರಾಯನಿಗೆ ತಮ್ಮ ಮಗನ ತೋಱಿಸಿದುದಱಿಂದ, ರಾಯನು ಆ ಪಿಪ್ಪಲೀಶನ ಕರೆಸಿ,—ಸಂಗಡ ಬಂದವನ ಹೀಗೆ ಕೊಲ್ಲಬಹುದೇ! ಎಂದು, ಅವನಿಗೆ ತಕ್ಕ ಶಿಕ್ಷೆಯಂ ಮಾಡಿಸಿ, ದಂಪತಿ ಮಗನ ಸಹ ಮನ್ನಿಸಿ, ಅಕ್ಷರಾರ್ಥ ಹೇಳಿದ ಬ್ರಾಹ್ಮಣನಿಗೆ ಸವಾಲಕ್ಷ ವರಹವಂ ಕೊಟ್ಟು ಕಳುಹಿಸಿದನು ಎಂದು ಹೇಳಿದುದಕ್ಕೆ ಆನಂದಸಂಜೀವಿನಿ ಎಂಬ ಪುತ್ಥಳಿಯು ನಗುತ್ತ ಹಾಸ್ಯಗೈದು ಹೇಳಿದಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಸುಖದಿಂದ ರಾಜ್ಯಪಾಲಿಸುವಲ್ಲಿ ಒಂದುದಿನ ಒಡ್ಡೋಲಗಕೊಟ್ಟು ಕುಳಿತಿರುವಾಗ ಅಲಂಬಕೀರ್ತಿ ಎಂಬ ಪುರದ ರನ್ನವರದನೆಂಬ ವ್ಯಾಪಾರಿ ಬಂದು, ಐದು ರತ್ನವಂ ಕಾಣಿಕೆಯಿತ್ತು ರಾಯನ ಕಾಣಿಸಿಕೊಳ್ಳಲಾಗಿ ; ರಾಯನು ಅವನ ಕುಳ್ಳಿರಿಸಿಕೊಂಡು, "ಈ ರತ್ನಗಳಿಗೇನು ಕ್ರಯ ಹೇಳು" ಎನಲಾಗಿ, ಅದಕ್ಕವನು—"ಇನ್ನು ಹತ್ತು ರತ್ನ ಊರಲ್ಲಿ ಇದೆ, ಅದನ್ನು ತರಿಸಿದರೆ ಆಬಳಿಕ ಕ್ರಯವಂ ಹೇಳುವೆ" ಎಂದ ಕಾರಣ, ರಾಯನು ಗಾಳಿಯನೆಂಬ ಮಣಿಯಗಾಱ ಬಂಟನಂ ಕರೆದು, "ಅಲಂಬಕೀರ್ತಿಯೆಂಬ ಪುರಕ್ಕೆ ಹೋಗಿ, ಈ ರನ್ನವರದನ ಮನೆಯಲ್ಲಿ ಹತ್ತು ರತ್ನವಿದೆಯಂತೆ. ಅದ ತೆಗೆದುಕೊಂಡು ಮಱುದಿನಕ್ಕೆ ಬಾರೆಂದು" ಕಟ್ಟಳೆಮಾಡಿ ಆವಾಣಿಜನ ಗುಱುತಂ ಕೊಟ್ಟು ಕಳುಹಿಸಲಾಗಿ ; ಅವನಾಪುರಕ್ಕೆ ಹೋಗಿ, ಆ ಸೆಟ್ಟಿಗುಱುತ ಆವನ ಮನೆಯವರಿಗೆ ಕೊಟ್ಟು ಹತ್ತು ರತ್ನ ತೆಗೆದುಕೊಂಡು ಬಹುವೇಗದಿಂದ ಬರುವಾಗ, ಮಾರ್ಗದಲ್ಲಿ ಹುಸುಗಿಯೆಂಬ ಹೊಳೆ ಪೂರ್ಣಪ್ರವಾಹದಿಂದ ಹರಿಯುತ್ತಿರುವುದಂ ಕಂಡು, ರಾಯನ ಕಟ್ಟು ಮೀಱಿದರೆ ಶಿಕ್ಷೆಯಾದೀತೆಂದು ಅಂಜಿ, ಅಂಬಿಗನ ಕರೆದು-ಈ ನದಿ ದಾಟಿಸೆನ್ನಲು, ಅಂಬಿಗನು—"ತುಂಬಿದ ನದಿ ದಾಟಿಸುವುದು, ಮಹಾಪುರುಷರಲ್ಲಿ ವಿರೋಧಿಸುವುದು ಎರಡೂ ಆಗದು ಎಂಬ ನೀತಿಯಿರುವುದರಿಂದ ದಾಟಿಸಕೂಡದು" ಎಂದನು. ಆ ಮಾತಿಗೆ, "ನನ್ನ ಜೀವ ಹೋದರೂ ಹೋಗಲಿ, ಬೇಗ ದಾಟಿಸು" ಎನ್ನಲಾಗಿ ; ಅಂಬಿಗ—"ಸುಮ್ಮನೆ ದಾಟಿಸುವುದಿಲ್ಲ" ಎನ್ನಲಾಗಿ, ಆ ಹತ್ತು ರತ್ನದಲ್ಲಿ ಐದು ರತ್ನವಂ ಕೊಟ್ಟು, ಆನದಿಯಂ ದಾಟಿ, ರಾಯನ ನೇಮಕದ ಮೇರೆ ಬಂದು, ರಾಯನೊಡನೆ, ತಾನು ಹೋಗಿ ಬಂದ ವೃತ್ತಾಂತವಂ ಶ್ರುತಪಡಿಸಿ, ಉಳಿದ ಐದು ರತ್ನವಂ ಮುಂದಿರಿಸಿ, ಭಯದಿಂ ನಿಂದಿರಲು; ಆರಾಯನು ಐದು ರತ್ನವಂ ತೆಗೆದುಕೊಂಡು, "ನೀನು ಕೊಟ್ಟುಬಂದ ಪಂಚರತ್ನದ ಕ್ರಯಕೊಡಿಸುವೆ ಹೆದಱಬೇಡ," ಎಂದನು. ಆದುಕಾರಣ "ರಾಯ ರಾಜ್ಯಭಾರವಂ ಮಾಡಿದುದಕ್ಕೆ ಕಟ್ಟಳೆ ತಪ್ಪದೆ ನಡೆವುದೇ ಫಲ; ತಪಸಿಗೆ ಚರ್ಯ ತಪ್ಪದೆ ನಡೆವುದೇಫಲ ; ವಿದ್ಯೆ ಕಲಿತುದಕ್ಕೆ ಜ್ಞಾನೋದಯವಾಗುವುದೆ ಫಲ ; ಧನಾಢ್ಯನಾದುದಕ್ಕೆ ದಾನ ಕೊಡುವುದೇ ಫಲ" ಎಂಬ

ನೀತಿಯಿಂ ನಮ್ಮ ಆಜ್ಞೆ ತಪ್ಪದಂತೆ ತನ್ನ ಜೀವ ಉಳಿಸಿಕೊಂಡು ಬಂದ ಬಂಟನಿಗೆ ಆವ ತಂದು ಒಪ್ಪಿಸಿದ ಐದು ರತ್ನವಂ ಅವನಿಗೆ ಕೊಟ್ಟು, ವರ್ತಕನಾದ ರನ್ನವರದನಿಗೆ ಹದಿನೈದು ರತ್ನದ ಕ್ರಯವು ಇನಾಮುಗಳು ಸಹ ಕೊಟ್ಟು ಮನ್ನಿಸಿ ಕಳುಹಿಸಿದನು ಕಣಾ!

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಆನಂದಸಂಜೀವಿನಿ ಎಂಬ ಪುತ್ಥಳಿ ಪೇಳಿದ ಐದನೆಯ ಕಥೆ.

೬ನೆಯ ಕಥೆ.

ಆಱನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ಸರ್ವಾಲಂಕಾರಭೂಷಿತನಾಗಿ ಚಿತ್ರಶರ್ಮನ ಕೈಲಾಗಿನಲ್ಲಿ ರತ್ನಖಚಿತವಾದ ಪಾವುಗೆಯಂ ಮೆಟ್ಟಿಕೊಂಡು ಸಿಂಹಾಸನದ ಬಳಿಗೆ ಬಂದು, ಬಲದ ಕಾಲಂ ನೀಡುವ ಸಮಯದಲ್ಲಿ, ಆ ಸೋಪಾನದ ರತಿಪ್ರಿಯೆ ಎಂಬ ಪುತ್ಥಳಿಯು—“ಹೋ ಹೋ! ನಿಲ್ಲುನಿಲ್ಲು ಭೋಜರಾಯನೇ! ನಮ್ಮ ರಾಯನಂತೆ ವೀರವಿತರಣಗಳುಳ್ಳೊಡೆ ಏಱು, ಇಲ್ಲದಿದ್ದರೆ ಕೆಲಸಾರು, ಏಱಿ ಕುಳಿತೆಯಾದರೆ ತಲೆ ಸಹಸ್ರಹೋಳಾಗುವುದು” ಎಂದು ಧಿಕ್ಕರಿಸಲಾಗಿ; ಭೋಜರಾಯನು ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ಥಳಿಯೇ ಕೇಳು, ನಮ್ಮ ರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ ಒಂದುದಿನ ವೈಹಾಳಿಗೆ ಹೋಗಿ, ಶಿವನಸಮುದ್ರ ನೋಡುತ್ತ ಇರಲು, ಒಬ್ಬ ವಿಪ್ರನು ಕಟ್ಟಿಗೆಯ ಹೊಱೆಯಂ ಹೊತ್ತುಕೊಂಡು ಹೊಳೆಯ ಕಷ್ಟದಿಂದ ದಾಂಟಿ ಬರುತ್ತಿರುವುದ ಕಂಡು, ಆತನು ದಾಂಟಿ ಈಚೆಗೆ ಬಂದಬಳಿಕ ರಾಯ ಇಂತೆಂದನು:—“ಎಲಾ ಬ್ರಾಹ್ಮಣ! ಕಟ್ಟಿಗೆಯ ಹೊತ್ತು ಕಷ್ಟಪಡುವುದೇನು?” ಎನ್ನಲಾಗಿ; ಅವ—“ನನ್ನ ಪೂರ್ವಾರ್ಜಿತ”ವೆಂದು ಹೇಳಿದ ಮಾತಿಗೆ, ರಾಯನು ಮಱುಗಿ, ಅವನಿಗೆ ಸವಾಲಕ್ಷವರಹ ಕೊಡಹೇಳಿ ನನಗೆ ಕಟ್ಟುಮಾಡಿಸಿದ. ಆದಿನ ಕೊಡದಿರಲು ಮಱುದಿನ

ಆತ ಬಂದು ರಾಯನ ಕೇಳಲು, ನನ್ನ ಕರೆದು "ಕೊಡಲಿಲ್ಲವೆ?" ಎಂದು ಕೇಳೆ ಅವನಿಗೆ "ಎರಡು ಸವಾಲಕ್ಷ ವರಹ ಕೊಡು" ಎಂಬದಾಗಿ ಹೇಳಿದನು. ಆ ದಿನವೂ ಕೊಡದೆ ಇರಲು, ಬೆಳಗಾಗಿ ಅವ ಬಂದು ಕೇಳಲು, ರಾಯನು "ಮೂರು ಸವಾಲಕ್ಷ ವರಹ ಕೊಡು" ಎಂಬುದಾಗಿ ಹೇಳಿದನು. ಆ ದಿನವು ಕೊಡದೆ ಇರಲು, ಮರುದಿನ ಆತ ಬಂದು ರಾಯನ ಕೇಳಲು, ನಾಲ್ಕು ಸವಾಲಕ್ಷ ವರಹ ತಾನೇ ಕೊಟ್ಟು ಮನ್ನಿಸಿ ಕಳುಹಿದನು. ಹೀಗೆ ಬಂದು ಮಾತಿಗೆ ಇಷ್ಟು ದ್ರವ್ಯ ಕೊಡುವರುಂಟೆ! ಇಂಥ ವಿತರಣವುಳ್ಳವ ನಮ್ಮ ರಾಯನು,—ಎಂದುದಕ್ಕೆ ರತಿಪ್ರಿಯೆ ಎಂಬ ಪುತ್ತಳಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ಒಡೆಯನಾದ ವಿಕ್ರಮಾದಿತ್ಯ ರಾಯನ ಪ್ರತಾಪವ. ಅದೆಂತೆನೆ—ನಮ್ಮ ವಿಕ್ರಮಾದಿತ್ಯರಾಯನು ರತ್ನಸಿಂಹಾಸನಾರೂಢನಾಗಿ ಸುಖದಿಂದ ರಾಜ್ಯಪಾಲಿಸುವಲ್ಲಿ ಒಂದುದಿನ ರಾಯ ಭೂಸಂಚಾರ ನಿಮಿತ್ತವಾಗಿ ಭಟ್ಟಿಯಂ ಕರೆದು, "ನಾನು ಬರುವ ಪರಿಯಂತಕ್ಕೂ ನೀನು ರಾಜ್ಯಭಾರವಂ ಮಾಡಿಕೊಂಡಿರು" ಎಂದು ನೇಮಿಸಿ, ತಾನು ಹೊರಟು ಪರಸಂಸ್ಥಾನಕ್ಕೆ ಹೋಗಿ, ಅಲ್ಲಿ ಅರಸನ ಕಾಣಿಸಿಕೊಳ್ಳಲಾಗಿ, ಅರಸು—ನೀನಾರೆಂದು ಕೇಳಿದುದರಿಂದ ಇಂತೆಂದನು:—"ನಾನು ವಿಕ್ರಮ; ನನಗೆ ಏನಾದರೂ ಊಳಿಗ ನೇಮಕ ಮಾಡಿಸಿದರೆ ಇರುವೆ" ಎನ್ನಲಾಗಿ, ಅರಸು—"ನಿನಗೇನು ಸಂಬಳ?" ಎಂದು ಕೇಳಲಾಗಿ; "ಎಲೈ ಅರಸೇ! ನನ್ನ ಇರಿಸಿಕೊಳ್ಳುವುದುಂಟಾದರೆ ಬಲಗೈಗೆ ಸಾವಿರ ವರಹ; ಎಡಗೈಗೆ ಸಾವಿರ ವರಹ. ಈ ಮೇರೆಗೆ ಎರಡುಸಾವಿರ ವರಹ ಸಂಬಳ ಮಾಡಿಕೊಟ್ಟರೆ ಇರುವೆನು" ಎನಲಾಗಿ; ಆ ಮಾತ ಸಮ್ಮುಖದಲ್ಲಿ ಇದ್ದವರೆಲ್ಲಾ ಕೇಳಿ—"ಇವನಿಗೆ ಏತಕ್ಕೆ ಇಷ್ಟು ಸಂಬಳ?" ಎಂದು ಜರಿಯಲಾಗಿ; ಅರಸು "ಇವನಲ್ಲಿ ಅಂಥ ಪರಾಕ್ರಮವಿಲ್ಲದೆ ಇಷ್ಟು ಸಂಬಳ ಏತಕ್ಕೆ ಕೇಳಾನು?" ಎಂದು ಇರಿಸಿಕೊಂಡು, ಅರಮನೆಯ ಒಳಬಾಗಿಲಲ್ಲಿ ಕಾದಿರುವ ಚಾಕರಿಗೆ ನೇಮಕಮಾಡಿದನು. ಒಂದು ತಿಂಗಳಾದುದರಿಂದ ಸಂಬಳ ಕೇಳುವುದಕ್ಕೆ ಅರಸಿನ ಬಳಿಗೆ ಬರಲಾಗಿ; ಅಷ್ಟರಲ್ಲೇ ಅರಸು ಎದ್ದು ಅರಮನೆಗೆ ಹೋಗಲಾಗಿ, ವಿಕ್ರಮನು ಸಂಬಳ ತೆಗೆದುಕೊಂಡಲ್ಲದೆ ಹೋಗಬಾರದೆಂದು, ಆ

ರಾತ್ರಿ ಅಲ್ಲಿ ಕಾದಿದ್ದನು. ಆದಿನ ಮಳೆ, ಗುಡುಗು, ಮಿಂಚು, ಸಿಡಿಲಿನಾ ರ್ಭಟೆ ಬಹಳವಾದುದಱಿಂದ ಅರಮನೆಯ ಬಾಗಿಲ ಕಾವಲಜನರು ಯಾರೂ ಬಾರದೆ ಅಲ್ಲಿ ಒಬ್ಬನೇ ಕಾದಿರಲು ; ಅರ್ಧರಾತ್ರಿಯಲ್ಲಿ ಅರಸು ಎದ್ದು ಅಂಗಳಕ್ಕೆ ಬರಲಾಗಿ, ಆ ವೇಳೆಯಲ್ಲಿ ಊರ ಹೊಱಗೆ ಸ್ತ್ರೀರೋದನೆಯಂ ಕೇಳಿ, ಈ ಸಮರಾತ್ರಿಯಲ್ಲಿ ಹೆಣ್ಣು ಬಾಲೆ ದುಃಖಪಡ ಕಾರಣವೇನು ? ಆವಳಿಗೇನು ಉಪಾಧಿಯೋ ? ತಿಳಿಯಲಿಲ್ಲವೆಂದು, "ಅರಮನೆಯಬಾಗಿಲಲ್ಲಿ ಯಾರು ಇದ್ದೀರಿ?" ಎಂದು ಅರಸು ಕರೆಯಲಾಗಿ; ವಿಕ್ರಮ—"ನಾನೊಬ್ಬನೇ ಇದ್ದೇನೆ," ಎಂದನು. "ಎಲೋ ವಿಕ್ರಮ ! ಈ ಮಧ್ಯರಾತ್ರಿಯಲ್ಲಿ ಊರಾಚೆ ಯಾರೋ ಸ್ತ್ರೀಯ ಪ್ರಳಾಪವಾಗಿಯಿದೆ, ಅದೇನೆಂದು ತಿಳಿದುಬಾ" ಎಂದು ಅಪ್ಪಣೆಯಾದುದಱಿಂದ, ವಿಕ್ರಮ ಹೊಱಗೆ ಹೊಱಟು ರೋದಿಸುವ ಬಳಿ ವಿಡಿದು ಹೋಗಲಾಗಿ; ಆ ಮಾಯಾಂಗನೆ ನಿಂತುಕೊಂಡು—"ಈ ನಡುರಾತ್ರಿ ಯಲ್ಲಿ ಭೀತಿಯಿಲ್ಲದೆ ನನ್ನ ಬೆಂಬತ್ತಿ ಬಂದವನು, ನೀನು ಯಾರು?" ಎಂದು ಕೇಳಲು ; ಆಮಾತಿಗೆ ವಿಕ್ರಮನು "ನೀನುಯಾರು ? ಪಟ್ಟಣದ ಸಮೀಪಕ್ಕೆ ಬಂದು ರೋದನ ಮಾಡುವುದು ಇದೇನು ?" ಎಂದು ಕೇಳಲು ; "ಎಲೊ ವೀರನೇ ! ಕೇಳು. ನನ್ನ ಗಂಡ ಏಳುಮಂದಿ ಗೆಳೆಯರು ಸಹಿತ ಈ ಪಟ್ಟಣದಲ್ಲಿ ಕಳ್ಳತನ ಮಾಡುತಿರಲು, ಒಂದುದಿನ ಕಳವು ಸಿಕ್ಕಿ, ಎಂಟು ಜನ ರನ್ನು ಹಿಡಿದು, ಸಾಲುಮೇಲೆ ಶೂಲಕ್ಕೆ ಹಾಕಲಾಗಿ, ನನ್ನ ಗಂಡನಿಗೆ ಬಂದಿಷ್ಟು ಅನ್ನ ವಿಕ್ಕಬೇಕೆಂದು ನಾ ಬಂದೆ. ಆ ಶೂಲವು ಕೈಗೆ ಸಿಲು ಕದೆ ಇರುವುದಱಿಂದ ಇದಕ್ಕೂ ನನಗೆ ಪ್ರಾಪ್ತಿಯಿಲ್ಲವೇ ! ಎಂದು ಪ್ರಳಾ ಪಿಸುತಿದ್ದೇನೆ." ಎನ್ನಲಾಗಿ, ವಿಕ್ರಮನು ಮಱುಗಿ, "ಎಲೌ ಸ್ತ್ರೀಯೆ ! ನನ್ನ ಹೆಗಲನೇಱಿ ನಿನ್ನ ಗಂಡನಿಗೆ ಅನ್ನ ವಿಕ್ಕು" ಎಂದನು. "ಹಾಗಾದರೆ ಅನ್ನವನಿಕ್ಕುವೆ"ಎನಲು ಶೂಲದ ಬಳಿಗೆ ಬಂದು,ಅವಳ ಹೆಗಲನೇಱಿಸಿಕೊಳ್ಳ ಲಾಗಿ ; ಅವಳು ಬಲುಭಾರವಾಗಿ ಕಂಡುದಱಿಂದ ವಿಕ್ರಮನು—ಇವಳು ಹೆಂಗಸಲ್ಲ, ಮಾಯಾಂಗನೆ ಎಂದು ತಿಳಿದು, ತನ್ನ ಬಲಗೈಯಲಿದ್ದ ಖಡ್ಗ ದಿಂದ ಅವಳ ಮುಂದಲ ಕಾಲ ಕತ್ತರಿಸಲಾಗಿ, ಅವಳು, ಓೋ ! ಎಂದು ಆರ್ಭಟಿಸುತ್ತ ಖೇಚರಕ್ಕೆ ಹಾಱಿಹೋಗಲಾಗಿ, ಆ ಕಾಲಿನ ತುಂಡಂ ತಂದು ತನ್ನ ಮನೆಯ ಮುಂದೆ ಹಾಕಿ, ಆ ರಾತ್ರಿ ಕಳೆದು, ಬೆಳಗಾಗಿ ಬಂದು,

ಅರಸನ ಕಾಣಿಸಿಕೊಳ್ಳಲಾಗಿ ; "ರಾತ್ರಿಯ ವಿವರವೇನು" ಎಂದು ಅರಸು ಕೇಳಲಾಗಿ; ಆ ವಿಕ್ರಮ—"ಅವಳು ಮಾಯಾಂಗನೆ," ಎಂದು ಅವಳ ವೃತ್ತಾಂತವ ಪೇಳಿ,ಅವಳದೊಂದು ಕಾಲ ಕತ್ತರಿಸಿ ತಂದು ನನ್ನ ಮನೆಯ ಬಳಿಯಲ್ಲಿ ಇರಿಸಿ ಇದ್ದೇನೆ. ತರಿಸಿ ಪರಾಂಬರಿಸ ಬಹುದು" ಎನ್ನಲಾಗಿ; ಅರಸು ನಾಲ್ಕು ಜನ ಕಾವಲುಗಾರರಂ ಕರೆದು, ಆ ಕಾಲ ತುಂಡಂ ತರಹೇಳಿ ಕಳುಹಿಸಲಾಗಿ; ಆ ಜನ ಬಂದು ನೋಡಿ ಚೋದ್ಯಂಬಟ್ಟು, ಅರಸಿನ ಬಳಿಗೆ ಬಂದು, ಆಕಾಲ ತುಂಡ ತರುವುದಕ್ಕೆ ಒಂಬತ್ತು ಬಂಡಿ ನೂರು ಎತ್ತು ನೂರು ಜನವಾದರೆ ತರಬಹುದು" ಎಂದು ಪೇಳಿದುದಕ್ಕೆ, ಅದೇ ಮೇರಿಗೆ ಅರಸಿನ ಅಪ್ಪಣೆಯಾಗಲಾಗಿ; ಆ ಜನ ಎತ್ತು ಬಂಡಿ ಸಹಿತ ತೆಗೆದುಕೊಂಡು ಬಂದು, ಸನ್ನೆಯಿಂದ ಬಂಡಿಯಮೇಲೆ ಹೇರಿ' ಎತ್ತುಗಳ ಕಟ್ಟಿ ಹೊಡೆತರುವಲ್ಲಿ, ಊರ ಬಾಗಿಲು ಹಿಡಿಯದಿರಲಾಗಿ, ಅರಸಿಗೆ ಬಂದು ಬಿನ್ನೈಸಿದರು. ಅರಸು ಊರ ಬಾಗಿಲ ಕೆಡಹಿ ತರಹೇಳಿದುದರಿಂದ ಅದೇಪ್ರಕಾರಕ್ಕೆ ಬಾಗಿಲ ಕೆಡಹಿ ಅರಮನೆಯ ಬಳಿಗೆ ತಂದು ನಿಲ್ಲಿಸಲಾಗಿ, ಆ ಜನ ಯಾವತ್ತೂ ತಲೆಬಾಗಿದವರಾದರು. ಕೋಟಿಸೂರ್ಯಪ್ರಕಾಶಮಾನವಾಗಿ ಆ ಕಾಲಿನಲ್ಲಿ ಇರುವ ಅಂದುಗೆಯನ್ನು ಅರಸು ಕಂಡು, ಕಳತರಿಸಿ ನೋಡಿ, ಅತಿಸಂತೋಷದಿಂದ ತೆಗೆದುಕೊಂಡು ಹೋಗಿ, ತನ್ನ ಪಟ್ಟದ ಸತಿಗೆ ಕೊಡಲಾಗಿ; ಪಟ್ಟದರಸಿ ತನ್ನಕಾಲಿಗಿಟ್ಟು ನೋಡಲಾಗಿ, ಇನ್ನೊಂದು ಕಾಲಿಗೆ ಇಂಥ ಅಂದುಗೆ ಆಗಬೇಕೆಂದು ಅರಸಿನ ಕೂಡೆ ಹೇಳಲಾಗಿ, "ಒಳ್ಳೆಯದು" ಎಂದು ಅರಸು ತನ್ನ ಬೊಕ್ಕಸದಲ್ಲಿದ್ದ ರತ್ನಂಗಳು ಯಾವತ್ತೂ ತೆಗೆಸಿ ಅಕ್ಕಸಾಲಿಗರಂ ಕರೆಸಿ, ಅಂದುಗೆಯ ತರಿಸಿ ಇದರ ಮೇರೆಗೆ ಇನ್ನೊಂದು ಮಾಡ ಹೇಳಲಾಗಿ; ಅಕ್ಕಸಾಲಿಗರು ಈ ಅಂದುಗೆಯಂ ನೋಡಿ ಇಂತೆಂದರು :—"ಎಲೈ ಸ್ವಾಮಿಯೇ ! ಇದರಲ್ಲಿ ಕೆತ್ತಿರುವುದಕ್ಕೆ ಸಮನಾದ ರತ್ನವ ಕೊಟ್ಟರೆ ಕೆತ್ತಿ ಇದರ ಜತೆ ಮಾಡೇವು. ನಿಮ್ಮ ಭಂಡಾರದಲ್ಲಿರುವ ರತ್ನಂಗಳೆಲ್ಲ ಈ ಅಂದುಗೆಯ ತುದಿಗೆ ಕೆತ್ತಿ ಇರುವ ರತ್ನದ ಸಮಾನವಿಲ್ಲ" ಎಂದ ಮಾತಂ ಅರಸಿ ಕೇಳಿ, ಅತಿ ವ್ಯಾಕುಲದಿಂದ ಇಂತೆಂದಳು :—"ಇದರ ಜತೆಗೆ ಇನ್ನೊಂದು ನೀವು ಮಾಡಿಸಿ ಕೊಟ್ಟರೆ ಸರಿ, ಇಲ್ಲದೇ ಇದ್ದರೆ ಪ್ರಾಣಬಿಡುವೆನು" ಎಂದು ನಿಶ್ಚಯದ ಮಾತನಾಡಲಾಗಿ; ಅರಸು ಅನೇಕ ಯೋಚನೆ ಮಾಡಿ ಹರಿಯದೆ, "ಇದಕ್ಕೇನಮಾಡ

ಬೇಕು?" ಎಂದು ತನ್ನ ಪ್ರಧಾನನ ಕೇಳಲಾಗಿ, ಅವನಿಂತೆಂದನು:—"ಈ ಜತೆಗೆ ಇನ್ನೊಂದು ಬೇಕಾದರೆ ವಿಕ್ರಮನಿಗೆ ಹೇಳಿದರೆ ಆದೀತು" ಎಂದ ಮಾತು ಸಹಜವೆಂದು ಆಗ ಅರಸು ಪ್ರಧಾನ ಸಹ ವಿಕ್ರಮನ ಮನೆಗೆ ಬಂದು ಇಂತೆಂದರು.—"ಎಲೋ ವಿಕ್ರಮ! ನೀನು ತಂದ ಕಾಲಿನಲ್ಲಿದ್ದ ಅಂದುಗೆಯನ್ನು ಅರಸಿತಿಗೆ ಕೊಡಲಾಗಿ, ಇದಱ ಜತೆ ಅಂದುಗೆಯ ತರಿಸಿ ಕೊಟ್ಟರೆ ಸಮ; ಇಲ್ಲದೆ ಇದ್ದರೆ ದೇಹವಿರಿಸುವುದಿಲ್ಲವೆಂದು ನಿಶ್ಚಯವಂ ಮಾಡಿ ಹೇಳಿ ಇದ್ದಾಳೆ, ಇದಕ್ಕೇನು ಮಾಡಬೇಕು?" ಎಂದು ಬಹುತರದಿಂದ ಅರಸು ಪ್ರಧಾನನು ಸಹ ಕೇಳಲಾಗಿ; ವಿಕ್ರಮ—"ಎಷ್ಟು ದಿನಕ್ಕೆ ಕೊಡಬೇಕು?" ಎಂದ ಮಾತಿಗೆ ಅರಸು "ಇಪ್ಪತ್ತೊಂದು ದಿನಕ್ಕೆ ತಂದುಕೊಟ್ಟರೆ ಸರಿ, ಇಲ್ಲದೆ ಇದ್ದರೆ ಪುತ್ರಮಿತ್ರಾದಿಗಳೆಲ್ಲಾ ಅಗ್ನಿಪ್ರವೇಶವಂ ಮಾಡುತ್ತೇವೆ" ಎನಲಾಗಿ; ಆ ಮಾತಿಗೆ ವಿಕ್ರಮ ಒಪ್ಪಿ ಅಂದುಗೆಯ ತರುತ್ತೇನೆಂದು ಅರಸನ ಅಪ್ಪಣೆ ತೆಗೆದುಕೊಂಡು, ಅಲ್ಲಿಂದ ಹೊಱಟು, ಆ ದಿನ ಮಧ್ಯಾಹ್ನದ ಹೊತ್ತಿಗೆ ಬಹುದೂರ ಬಂದು, ಬಿಸಿಲಿನಿಂದ ಬಳಲಿ, ಬಂದು ಚೂತವೃಕ್ಷದ ಕೆಳಗೆ ಕುಳಿತುಕೊಂಡು, ಮಾರ್ಗದಲ್ಲಿ ಹೋಗುವವರ ಕರೆದು—"ನೀರು ಎಲ್ಲಿ ಇದೆ?" ಎಂದು ಕೇಳಲಾಗಿ; ಅವರು "ಎದುರಾಗಿರುವ ಬೆಟ್ಟಕ್ಕೆ ಮೂಡಲಾಗಿ ಕಲ್ಲುಕಟ್ಟಿದ ಕೊಳದಲ್ಲಿ ಶೈತ್ಯೋದಕ ಸಮೃದ್ಧಿಯಾಗಿ ಇದೆ" ಎನಲಾಗಿ ; ಆ ಕೊಳದ ಬಳಿಗೆ ಹೋಗಿ, ತೃಷೆಯಿಂಗಿಸಿಕೊಂಡು, ಮೇಲಕ್ಕೆ ಹತ್ತಿ ಬರುವಲ್ಲಿ ಸೋಪಾನದಮೇಲೆ ಶಾಸನ ಬರೆದಿರುವುದಂ ಕಂಡು, ಓದಿ ನೋಡಿದನು. ಅದೇನೆಂದರೆ :—ಈ ಕೊಳದ ಏಱಿಯಮೇಲೊಂದು ಯೋಜನ ಉನ್ನತದ ಮಾವಿನಮರದ ಕೊನೆ ಕೊಳದ ಮೇಲೆ ಬಂದಿರುವುದು. ಅದಕ್ಕೆ ಬಂದು ನೆಲುವು ಕಟ್ಟಿ ಇರುವುದು. ಆ ಕೊಳದೊಳಗೆ ಆನೆಯ ಗಾತ್ರ ಅಗ್ನಿಕುಂಡವಿರುವುದು. ಅದಱ ಆಳ ನಾಗಲೋಕವ ಮುಟ್ಟಿಯಿರುವುದು. ಆವನಾನೊಬ್ಬ ವೀರನಾದವನು ಆಮರವನ್ನೇಱಿ ಆನೆಲುವಿನೊಳಗೆ ಕುಳಿತು, ನೆಲುವಿನ ಕಟ್ಟನ್ನು ತನ್ನ ಕೈಯ ಕತ್ತಿಯಿಂದ ಹಱಿದರೆ, ಆ ನೆಲುವು ಕೊಳದೊಳಗೆ ಬೀಳುವ ಸಮಯದಲ್ಲಿ ಅವನ ವೀರತ್ವಕ್ಕೆ ಮೆಚ್ಚಿ ಪಾರ್ವತೀಪತಿಯಾದ ಪರಶಿವನು ಪ್ರಸನ್ನನಾಗಿ ಎತ್ತಿಕೊಂಡು ಆವೀರನಿಗೆ ವಜ್ರಮುಕುಟರಾಯನ ಮಗಳಾದ ಸುಲಭಾವತಿಯನ್ನು ವಿವಾಹಮಾಡಿಸಿ, ಸಕಲ

ಇಷ್ಟಾರ್ಥವಂ ಪಾಲಿಸುವನೆಂದು ಬರೆದಿರ್ಪ ಶಾಸನವನೋದಿಕೊಂಡು ವಿಕ್ರಮನಿಗಲ್ಲದೆ ಇನ್ನಾರಿಗೆ"—ಎಂದು ನಿಶ್ಚಯದಿಂದ ಅಮರವನ್ನೇಱಿ' ಆ ನೆಲುವಿನಲ್ಲಿ ಕುಳಿತು ತನ್ನ ಕೈಯ ಕತ್ತಿಯಿಂದ ನೆಲುವಂ ಕತ್ತರಿಸಲು ; ಆನೆಲುವು ಟೋ ಎಂದು ಕೂಗುತ್ತ ಕೊಳದೊಳಗೆ ಬೀಳುವ ವೇಳೆಯಲ್ಲಿ ಈಶ್ವರನು ಬಂದು ಹಿಡಿದೆತ್ತಿಕೊಂಡು—"ಎಲೈ! ನಿನ್ನ ಮನೋನಿಶ್ಚಯಕ್ಕೆ ಮೆಚ್ಚಿದೆನು" ಎಂದು, ವಿಕ್ರಮನ ಕರೆದುಕೊಂಡು ಹೋಗಿ, ವಜ್ರಮುಕುಟರಾಯನ ಮಗಳಾದ ಸುಲಭಾವತಿಯನ್ನು ಮದುವೆ ಮಾಡಿಸಿ, ಬೇಕಾದ ಇಷ್ಟಾರ್ಥವಂ ಪಾಲಿಸಿ, ದಂಪತಿ ಸಹ ಕಳುಹಿಸಲಾಗಿ; ಅಲ್ಲಿಂದ ಸತಿಯ ಕರೆದುಕೊಂಡು ಬರುವ ಮಾರ್ಗದಲ್ಲಿ ಶಾಂಭವಿಯೆಂಬ ನದಿಯು ಪೂರ್ಣಪ್ರವಾಹದಿಂದ ಹರಿಯುವುದಂ ಕಂಡು, ಆಬಳಿಯಲ್ಲಿ ಇರುವ ಅಂಬಿಗನಂ ಕರೆದು—ನಮ್ಮಿರ್ವರನ್ನು ದಾಂಟಿಸಿ, ಕೊಡು ಎನಲಾಗಿ ; ಆಮಾತಿಗೆ ಅಂಬಿಗನು ಈಹರಿಗೋಲು ಒಬ್ಬರನಲ್ಲದೆ ಇಬ್ಬರ ಹಿಡಿಯದು ಎಂದ ಮಾತಿಗೆ—ಮುಂಚೆ ನನ್ನ ಸಾಗಿಸಿ ಆಮೇಲೆ ಹೆಂಗಸ ಸಾಗಿಸೆನ್ನಲಾಗಿ ; ಅದೇಪ್ರಕಾರಕ್ಕೆ ಮುಂಚೆ ವಿಕ್ರಮನ ಆಚೆಗೆ ಸಾಗಿಸಿಬಿಟ್ಟು, ಈಚೆಗೆ ಬಂದು, ಹರಿಗೋಲಲ್ಲಿ ಹೆಂಗಸ ಹತ್ತಿಸಿಕೊಂಡು ಬರುತ್ತ ಅವಳ ರೂಪುಲಾವಣ್ಯವ ಕಂಡು, ಸೈರಿಸಲಾಱದೆ, ಅಂಬಿಗನು ಬೇಱೆ ಮಾರ್ಗದಲ್ಲಿ ಕರೆದುಕೊಂಡು ಹೋಗಿ, ಅಲ್ಲೊಂದು ಗಟ್ಟದಲ್ಲಿ ನಿಂತು, ಅವಳ ತನ್ನಲ್ಲಿ ಕ್ರೀಡಿಸುವುದಕ್ಕೆ ಬಹಳ ಬಗೆಯಲ್ಲಿ ಬಡಂಬಡಿಸುತ್ತಿದ್ದನು.

ಇತ್ತಲಾವಿಕ್ರಮ ತನ್ನ ಸತಿಯ ಅಂಬಿಗ ಎತ್ತ ಕಡೆ ಕರೆದುಕೊಂಡು ಹೋದನೋ ತಿಳಿಯಲು ಇಲ್ಲದೆ ವ್ಯಸನಪಡುತ್ತ, ತಾನವರಂ ತಡಕುತ್ತ ಹೋದರೆ ಅನ್ನ ಕೊಟ್ಟಂಥ ಅರಸಿನ ಕೆಲಸ ಕೆಟ್ಟೀತು ಎಂದು ಯೋಚಿಸಿ, ದೃಢವಿಡಿದು ಮುಂದಕ್ಕೆ ನಡೆದು, ಬರುವ ದಾರಿಯಲ್ಲಿ ಒಂದು ಪಟ್ಟಣವಂ ಕಂಡು, ಅಲ್ಲಿಗೆ ಹೋಗಿ ನೋಡಲಾಗಿ; ಜನರೊಬ್ಬರೂ ಇಲ್ಲದಿರುವುದ ಕಂಡು, ಆಶ್ಚರ್ಯಪಟ್ಟು ನೋಡುತ್ತ ಹೋಗುವಲ್ಲಿ—ಒಂದು ಉಪ್ಪರಿಗೆಯ ಕಂಡು, ಅದಱ ಮೇಲೆ ಹತ್ತಿ ಹೋಗಲಾಗಿ, ಅಲ್ಲಿ ಅತಿರೂಪಯೌವನಸಂಪನ್ನೆಯಾದ ಒಬ್ಬ ಸ್ತ್ರೀಯಂ ಕಂಡು, ಅವಳ—ನೀನು ದೇವತೆಯೋ, ದೈವವೋ, ಕಾಮರೂಪಿಯೋ? ನೀನು ಯಾರು? ಎಂದು ಕೇಳಿದುದಕ್ಕೆ—ಅವ

ಳು—ನಾನು ದೇವತೆಯೂ ಅಲ್ಲ, ದೈವವೂ ಅಲ್ಲ, ಕಾಮರೂಪಿಯೂ ಅಲ್ಲ, ಈ ಪಟ್ಟಣದ ರಾಯನ ಕುಮಾರ್ತಿ, ಎನ್ನಲಾಗಿ;—ನೀನು ಒಬ್ಬಳೇ ಇರುವುದಕ್ಕೆ ಕಾರಣವೇನು? ಎಂದು ಕೇಳಲಾಗಿ, ಅವಳು—ಎಲೈ ವೀರನೇ! ಈ ಪುರದ ರಾಯನ ಒಬ್ಬ ಕಾಳರಾಕ್ಷಸನೆಂಬವನು ಬಂದು ಕೊಂದನು. ಅವನು ಈ ಪಟ್ಟಣದ ಪರಿವಾರ ಜನಂಗಳನ್ನು ತನ್ನ ಬಾಯೊಳಗಿರಿಸಿಕೊಂಡು, ದಿನಚರಿಯಲ್ಲೂ ಬೇಂಟೆಗೆ ಹೋಗಿ, ಬೇಂಟೆತೀರಿಸಿಕೊಂಡು ಸಾಯಂಕಾಲದ ವೇಳೆಗೆ ಬಂದು, ತನ್ನ ಬಾಯಿಂದ ಎಲ್ಲರನ್ನು ಉಗುಳಿ, ಅವರವರ ಮನೆಗೆ ಕಳುಹಿಸಿ, ತಾನೀಯುಪ್ಪರಿಗೆಯ ಮೇಲೆ ಬಂದು, ರಾತ್ರಿಯಲ್ಲಿ ನನ್ನ ಕೂಡೆ ಸರಸವಾಡುತ್ತ ಇದ್ದಾನೆ. ಎಂದಿನಂತೆ ಈಗ ಅವನು ಬೇಂಟೆಗೆ ಹೋಗಿ ಇದ್ದಾನೆ. ಈಪ್ರಕಾರ ಅವನಿಗೆ ಸಿಕ್ಕಿರು,ಎಂದು ವಿರಂಚಿ ಎನ್ನಪಣೆಯಲ್ಲಿ ಬರೆಯಬಹುದೇ!—ಎಂದು ಅನೇಕವಾಗಿ ರೋದಿಸುವುದಂ ಕಂಡು ಇಂತೆಂದನು:—ಎಲೆ ಸ್ತ್ರೀಯೇ, ಈ ರಾತ್ರಿ ರಾಕ್ಷಸ ಬರುತ್ತಲೆ ಅವನ ಬಹಳ ಉಪಚರಿಸಿ—ನಿನ್ನ ಪ್ರಾಣ ಎಲ್ಲಿ ಇದೆ ಎಂದು ಕೇಳಿ ತಿಳಿದು ಹೇಳಿದರೆ ಅವನ ಕೊಂದು ನಿನ್ನ ಕರೆದುಕೊಂಡು ಹೋಗುತ್ತೇನೆ—ಎಂದು ಅವಳಿಗೆ ಹೇಳಿದುದಕ್ಕೆ ಅವಳು—ನೀನಾರೆಂದು ಕೇಳಲು; ಅದಕ್ಕೆ ತನ್ನ ವೃತ್ತಾಂತವೆಲ್ಲ ಹೇಳಲಾಗಿ; ಅವಳು ಸಂತೋಷಪಟ್ಟು, ಹೇಳಿದ ಮಾತಿಗೆ ಒಡಂಬಟ್ಟು, ಕೇಳಿ ಹೇಳುವೆನೆಂದು, ಆಬಳಿಕ—ರಾಕ್ಷಸ ಬರುವ ವೇಳೆಯಾಯಿತು, ಇನ್ನು ಇರಬೇಡವೆಂದು ನುಡಿಯಲಾಗಿ; ವಿಕ್ರಮನು ಊರ ಹೊರಗೆ ಬಂದು, ಒಂದು ಗುಡಿಯಲ್ಲಿ ಆ ರಾತ್ರಿ ಇದ್ದನು. ಆದಿನ ಸಾಯಂಕಾಲಕ್ಕೆ ರಾಕ್ಷಸ ಊರಿಗೆ ಬಂದು ಬಾಯಿಂದೆಲ್ಲರನ್ನೂ ಉಗುಳಿ ಬಿಟ್ಟು, ಉಪ್ಪರಿಗೆಯನೇರಿ, ಮಡ್ಡಿ ಮಾಂಸ ಭಕ್ಷಿಸಿ ಬಂದ ಸಂತೋಷದಿಂದಿರುವಲ್ಲಿ—ಆ ಸ್ತ್ರೀಯು ಸಮೀಪಕ್ಕೆ ಬಂದು ಕುಳಿತುಕೊಂಡು, ಕೈಕಾಲುಮೆಯ್ಯನೊತ್ತುತ್ತ ಉಪಚರಿಸುತ್ತ ಖಿನ್ನಳಾಗಿ ಇರುವಳಂ ಕಂಡು ಇಂತೆಂದನು:—ಎಲೌ ಸ್ತ್ರೀಯೇ! ನೀನು ಚಿಂತೆಮಾಡುವುದೇನು? ಎನ್ನಲಾಗಿ; ಅವಳಿಂತೆಂದಳು:—ಎಲೈ ಮಹಾಪುರುಷನೇ! ನಾನು ಎಲ್ಲರನ್ನೂ ಕಳೆದು ನಿನ್ನವಳಾದುದರಿಂದ ಸರ್ವಕಾಲವೂ ನಿನಗೆ ನಾ ನಂಬಿರಬೇಕೆಂದು ಇರುವ ಕಾರಣ ನಿನ್ನ ಆಯುಷ್ಯವೆಷ್ಟಿದೆ, ನಿನ್ನ ಪ್ರಾಣದ ನೆಲೆ ಎಲ್ಲಿ ಎಂಬುದ ಹೇಳಬೇಕು. ಅದೇತಕ್ಕೆ ಎಂದರೆ, ನೀನು ಅರಣ್ಯ

ದಲ್ಲಿ ಸಂಚರಿಸುವವನು. ಆದುದರಿಂದ ಅಲ್ಲಿ ಏನೋ ಎಂದು ಮನಸ್ಸು ದಿಗಿಲಾಗಿ ಚಿಂತಿಸುವೆನು—ಎನ್ನಲು ; ಅದಕ್ಕೆ ಆದೈತ್ಯನು—ಎಲೆ ಸ್ತ್ರೀಯೇ ! ಆ ವ್ಯಸನ ನಿನಗೆ ಬೇಡ, ನನ್ನ ಜಯಿಸುವುದಕ್ಕೆ ಬ್ರಹ್ಮ ವಿಷ್ಣು ಮಹೇಶ್ವರರಿಂದ ಆಗದು. ಬತ್ತೀಸ ಆಯುಧಗಳಿಂದ ಆಗದು. ನನ್ನ ಪ್ರಾಣವಿರುವ ಜಾಗ ಯಾರಿಗೂ ತಿಳಿಯದು. ಆಸ್ಥಳ ಇಲ್ಲಿಗೆ ಮುನ್ನೂರು ಯೋಜನದಲ್ಲಿ ಪಾಟಲಾವತೀಪಟ್ಟಣದ ಮುಂದೆ ಕಾಳಿಕಾದೇವಿಯ ಗುಡಿಗೆ ಎದುರಾಗಿ ಮಹಾಬೆಟ್ಟದ ಗಾತ್ರ ಒಂದು ಕಲ್ಲುಗುಂಡು ಇರುವುದು. ಅದರ ಕೆಳಗೊಂದು ಬಿಲದ್ವಾರವಿದೆ. ಅದರಲ್ಲಿ ಹೋದರೆ ಪಾತಾಳಲೋಕಕ್ಕೆ ಕೊಂಡುಹೋಗುವುದು. ಅಲ್ಲಿ ಚಂಡಿಕಾದೇವಿಯ ಗುಡಿಯ ಬಳಿಯಲ್ಲಿ ಒಂದು ಚೂತವೃಕ್ಷದ ಮೇಲೆ ಪಂಚಗಿಣಿಗಳು ಇರುವುವು. ಆಗಿಣಿಗಳಲ್ಲಿ ನನ್ನ ಜೀವವಿರುವುದು. ಆ ಗಿಣಿಗಳನ್ನು ಹಿಡಿದು ಒಂದೇ ಸಾರಿ ಕೊರಲ ಮುರಿದರೆ ಆಗ ನಾನು ಮೃತನಾಗುವೆ. ಇಲ್ಲದೆ ಇದ್ದರೆ ನನಗೆ ಮೃತಿಯಿಲ್ಲ—ಎನ್ನಲಾಗಿ ; ಅವಳಾಮಾತಿಗೆ ಸಂತೋಷದಿಂದ—ಇನ್ನು ಯೋಚನೆಯಿಲ್ಲದೆ ಇರುವೆನು ಎಂದು ಅವನ ಕೂಡೆ ಹೇಳಿ, ಆರಾತ್ರಿ ಕಳೆದು, ಬೆಳಗಾಗುತಲೆ ಎಂದಿನಂತೆ ರಾಕ್ಷಸ ಬೇಂಟೆಗೆ ಹೋಗಲಾಗಿ, ಆಬಳಿಕ ವಿಕ್ರಮ ಬಂದು—ನಿನ್ನ ಕೂಡೆ ಹೇಳಿದ ಮಾತೇನ ಮಾಡಿದೆ? ಎನ್ನಲಾಗಿ ; ರಾತ್ರಿ ರಾಕ್ಷಸ ಹೇಳಿದುದೆಲ್ಲ ಕೇಳಿ, ವಿಕ್ರಮ ಅವಳಿಗೆ ಭರವಸವಂ ಕೊಟ್ಟು, ವಾಯುವೇಗದಲ್ಲಿ ಪಾಟಲಾವತೀಪಟ್ಟಣಕ್ಕೆ ಹೋಗಿ, ಕಾಳಿಕಾದೇವಿಯ ಗುಡಿಯ ಮುಂದಣ ಕಲ್ಲುಗುಂಡನ್ನು ಕಾಲಿನಲ್ಲಿ ನೂಂಕಿ, ಆದ್ವಾರದಲ್ಲಿ ಪಾತಾಳಲೋಕಕ್ಕೆ ಹೋಗಿ, ಚಂಡಿಕಾದೇವಿಯ ಗುಡಿಯ ಬಳಿ ಚೂತವೃಕ್ಷದ ಮೇಲೆ ಇದ್ದ, ಐದು ಗಿಣಿಯಂ ಹಿಡಿದು ಒಂದೇ ಸಾರಿ ಕೊರಲ ಮುರಿಯಲು, ರಾಕ್ಷಸನ ಪಂಚಪ್ರಾಣವೂ ಹಾರಿಹೋಗಲಾಗಿ; ಕುಂಟು ಜೀವದಿಂದ ಊರ ಬಾಗಿಲಿಗೆ ಬರುವಷ್ಟರಲ್ಲೇ ಹಾರಿಹೋಗಿ ಬಿದ್ದನು. ಆವೇಳೆಗೆ ವಿಕ್ರಮನು ಬಂದು ನೋಡಿ, ಸ್ತ್ರೀಯಂ ಕರೆತಂದು ತೋರಿಸಿ, ಅವನ ಸೀಳಿ, ಪೂರ್ವದ ಅರಸಿನ ಮಗನಿಗೆ ಪಟ್ಟವಂ ಕಟ್ಟಿ, ಯಥಾಪ್ರಕಾರಕ್ಕೆ ಆಪಟ್ಟಣವ ತುಂಬು ಮಾಡಿ, ಆಸ್ತ್ರೀಯ ಕರೆದುಕೊಂಡು ಬರುವ ಮಾರ್ಗದಲ್ಲಿ—ಅವಳಿಗೆ ಬಹಳ ಬಾಯಾರಿಕೆ ಕಂಡು ಹೇಳಲಾಗಿ, ನೀರು ಏನೂ ಇಲ್ಲದೆ ಅರ

ಸುತ್ತ ಬರುವಲ್ಲಿ—ಅಲ್ಲೊಬ್ಬ ಋಷಿಯಂ ಕಂಡು ನಮಿಸಿ,—ಎಲೈ ಋಷಿಯೇ! ಸ್ತ್ರೀಯಳಿಗೆ ಬಲು ದಾಹವಾಗಿದೆ, ಜಲವೆಲ್ಲಿ ಇರುವುದು? ಎನ್ನಲಾಗಿ; ಆಋಷಿಯು—ಪೂರ್ವದಿಕ್ಕಿನಲ್ಲಿ ಒಂದು ಸರೋವರವಿದೆ. ಅದಱಲ್ಲಿ ಸ್ವಾದೂದಕ ಇರುವುದು ಎನ್ನಲಾಗಿ;—ಸತಿ ಇಲ್ಲಿ ಇರಲಿ ಎಂದು, ಇರಿಸಿ, ತಾನು ನೀರು ತರುವುದಕ್ಕೆ ಹೋದನು. ಆಋಷಿಯು ಅವಳ ಸೌಂದರ್ಯವಂ ನೋಡಿ ಅವಳ ಕೈವಿಡಿದು, ಮನೋವೇಗದಿಂದ ತನ್ನ ರನ್ನದ ಹಾವುಗೆಯ ಮೆಟ್ಟಿಕೊಂಡು ಕರೆದುಕೊಂಡು ಹೋಗಲಾಗಿ; ವಿಕ್ರಮನು ನೀರ ತಂದು ತನ್ನ ಸ್ತ್ರೀಯನ್ನು ಋಷಿಯನ್ನು ಕಾಣದೆ ವಿಸ್ಮಿತನಾಗಿ, ಕಳವಳಗೊಂಡು ಅಂಬಿಗನೋಪಾದಿ ಈಋಷಿಯೂ ಮಾಡಿದನೆಂದು ತಿಳಿದು,—ನಾನು ಇವರ ಹುಡುಕುತಿದ್ದರೆ ಅರಸಿನ ಕಾರ್ಯ ತಪ್ಪೀತು ಎಂದು ಅಲ್ಲಿಂದ ಮುಂದಕ್ಕೆ ನೂಱು ಗಾವುದ ಹೋದುದಱಿಂದ ಸಾಯಂಕಾಲವಾಗಲಾಗಿ—

ಅಘೋರಾರಣ್ಯದಲ್ಲಿ ಬಂದು ವಟವೃಕ್ಷದ ಕೆಳಗೆ ಆರಾತ್ರಿ ಇರಲಾಗಿ, ಆಮರದ ಮೇಲೆ ಗಂಡುಹೆಣ್ಣು ಎರಡು ಗಿಣಿಗಳು ನಾಲ್ಕು ಮಱಿಗಳು ಸಹಿತ ಗೂಡ ಕಟ್ಟಿಕೊಂಡಿರಲಾಗಿ, ಆನಾಲ್ಕು ಮಱಿಗಳೂ ತಮ್ಮ ತಂದೆಯಾದ ಗಿಣಿಗಳನ್ನು ಗೂಡಿನಲ್ಲಿ ಇರಿಸಿ ನಾಲ್ಕು ದಿಕ್ಕಿಗೆ ಹೋಗಿ ತಮ್ಮ ಆಹಾರವಂ ಮಾಡಿಕೊಂಡು, ನೀರು ಮುಂತಾಗಿ ಹಣ್ಣು ಹಂಪಲಗಳ ತಂದು ತಂದೆಯಿತಾಯಿಗಳಾದ ಗಿಣಿಗಳಿಗೆ ಕೊಟ್ಟು ದಿನಚರಿಯಲ್ಲೂ ಉಪಚರಿಸುತಿರ್ದ ಗಿಣಿಯ ಮಱಿಗಳಲ್ಲಿ ಆದಿನ ಪೂರ್ವದಿಕ್ಕಿಗೆ ಹೋಗಿ ಇದ್ದ ಮಱಿಯು ಏನೂತಾರದೆ ಬರಲಾಗಿ-ಬಱಿದೆ ಬಂದ ಕಾರಣವೇನೆಂದು ತಂದೆತಾಯಿಗಳಾದ ಗಿಣಿಗಳು ಕೇಳಲಾಗಿ, ಆಮಱಿಯು—ಈದಿನ ನಾನೊಂದತಿಶಯವಂ ಕಂಡೆ, ನೋಡುತ್ತಿದ್ದೆ—ಎನ್ನಲಾಗಿ, ಅದೇನೆಂದರೆ—ವಿಕ್ರಮ ಎಂಬುವನ ಪತ್ನಿಯನ್ನು ಒಬ್ಬ ಅಂಬಿಗ ಕರೆತಂದು ನದಿಯ ಗಟ್ಟದಲ್ಲಿ ಇರಿಸಿಕೊಂಡು, ತನ್ನಲ್ಲಿ ಕೂಟಕ್ಕೆ ಬರಹೇಳಿ ಬಾಧಿಸುತ್ತಿದ್ದನು. ಅವಳು ಅನೇಕ ದುಃಖಪಡುವುದ ನೋಡುತ್ತ ನನಗೆ ಮನಸು ಬೇಡವಾಗಿ ಬಂದೆ ಎನ್ನಲಾಗಿ, ಅಷ್ಟಱಲ್ಲಿ ದಕ್ಷಿಣದಿಕ್ಕಿಗೆ ಹೋಗಿದ್ದ ಮಱಿಯು ಬಱುಗೆಯ್ಯಲ್ಲಿ ಬರಲಾಗಿ, ಆಮಱಿಯು ನೀನು ಬಱಿದೆ ಬಂದುದೇನು? ಎನ್ನಲಾಗಿ; ಒಬ್ಬ ಋಷಿ ವಿಕ್ರಮನ ಪತ್ನಿಯನ್ನು ಕರೆತಂದು ಖೇಚರದಲೊಂದು ಬಳಿಯಲ್ಲಿ ಮಡಗಿ

ಕೊಂಡು ತನ್ನಲ್ಲಿ ಇರುವುದಕ್ಕೆ ಕರೆಯುತ್ತ ನಿರ್ಬಂಧಪಡಿಸುತಿದ್ದನು. ಅವಳು ಅತಿವ್ಯಾಕುಲ ಪಡುವುದಂ ಕಂಡು ಮನಸು ಬಡಂಬಡದೆ ಬಂದೆನು-ಎಂದಿತು. ಅಷ್ಟಱಲ್ಲಿ ಪಶ್ಚಿಮದಿಕ್ಕಿಗೆ ಹೋಗಿ ಇದ್ದ ಮಱಿಯು ರಿಕ್ತಹಸ್ತದಿಂದ ಬರಲಾಗಿ—ನೀನು ಬಱಿದೆ ಬಂದ ನಿಮಿತ್ತವೇನೆಂದು ಕೇಳಲಾಗಿ, ಇಲ್ಲಿಗೆ ಬಲುದೂರದಲ್ಲಿ ಬಂದು ಪಟ್ಟಣದಲ್ಲಿ ಒಬ್ಬ ಅರಸು ಆತನ ಸತಿಸುತರು ನಂಟರಿಷ್ಟರೆಲ್ಲಾ ಯೋಚಿಸುತ್ತ ಇದ್ದರು. ಅದೇನೆಂದರೆ—ವಿಕ್ರಮನೆಂಬವನು ಅರಸಿಗೆ ಮಾತುಕೊಟ್ಟು ಗೊತ್ತುಮಾಡಿ ಹೋಗಿ ಇದ್ದನಂತೆ ; ಆ ಗೊತ್ತಿನ ಒಳಗೆ ಬಂದರೆ ಸಮ ; ಇಲ್ಲದೆ ಇದ್ದರೆ ನಾವೆಲ್ಲ ಅಗ್ನಿಪ್ರವೇಶವಂ ಮಾಡುತ್ತೇವೆ ಎಂದು ಅವರಷ್ಟೂ ಅರಸಿನ ವಸ್ತ್ರವಂ ಧರಿಸಿ ಅಗ್ನಿಗೆ ಬೀಳುವುದಕ್ಕೆ ಯತ್ನೀಕರಿಸಿ ಇರುವುದ ಕಂಡು, ಅವರ ನೋಡುತ್ತ ನನಗೇನೂ ಸೊಗಸದೆ ವೃಥಾ ಬಂದೆ ಎಂದಿತು. ಅಷ್ಟಱಲ್ಲೇ ಉತ್ತರದಿಕ್ಕಿಗೆ ಹೋಗಿದ್ದ ಮಱಿಯು ಬಂದಿಷ್ಟು ಹಣ್ಣು ಹಂಪಲುಗಳ ತರಲಾಗಿ, ಅದ ಭಕ್ಷಿಸಿ, ಆಬಳಿಕ ಕೆಳಗಾರಾದರೂ ಅರದೇಸಿ ಪರದೇಸಿಗಳಿದ್ದರೆ ಕರೆದು ಫಲವನ್ನು ಕೊಡಹೇಳಿ ತಂದೆತಾಯಿಗಳಾದ ಗಿಣಿಗಳು ಹೇಳಿದುದಱಿಂದ ಆ ಮಱಿಗಳು—ಕೆಳಗೆ ಯಾರಿದ್ದೀರಿ? ಉಪವಾಸವಿರಬೇಡಿ. ಹಣ್ಣುಹಂಪಲುಗಳ ಕೊಟ್ಟೇವು, ಎಂದು ಕೂಗಲಾಗಿ ; ಕೆಳಗಿದ್ದ ವಿಕ್ರಮ—ನಾನೊಬ್ಬ ಪರದೇಸಿ ಇದ್ದೇನೆ ಎನ್ನಲು ; ಮಱಿಗಳಾಗ ಫಲವನ್ನು ಕುಡಲಾಗಿ; ಅದ ತೆಗೆದುಕೊಂಡು ಭಕ್ಷಿಸಿ ಆಬಳಿಕ—ಎಲೈ ಗಿಣಿರಾಜನೇ! ನಿನ್ನ ಮಕ್ಕಳಾಡಿದ ಮಾತೆಲ್ಲ ನನ್ನದೆಂದು ಹೇಳಿ, ಆಸ್ತ್ರೀಯಿರುವ ಸ್ಥಳವನ್ನು ನನಗೆ ತೋಱಿಸುವುದಕ್ಕೆ ಬೆಳಗಾಗಿ ನಿಮ್ಮ ಮಱಿಗಳ ಕಳುಹಿಸಿಕೊಟ್ಟರೆ ನಿಮಗೆ ಬಹಳ ಪುಣ್ಯವುಂಟು ಎಂದು ಕೇಳಿಕೊಳ್ಳಲಾಗಿ ;—ಎಲೋ ನೀನಾರು ? ಎಂದು ಗಿಣಿರಾಜ ಕೇಳಿದ ಕಾರಣ, ವಿಕ್ರಮನು ತನ್ನ ವೃತ್ತಾಂತವೆಲ್ಲವನ್ನು ಹೇಳಲಾಗಿ, ಆಗಿಣಿರಾಜನು ಕೇಳಿ ಮನಮಱುಗಿ, ಆಬೆಳಗ್ಗೆ ತನ್ನ ಮಱಿಗಳಿಗೆ ಸತಿಯರು ಇರುವ ಸ್ಥಳ ತೋಱಿಸುವಂತೆ ನೇಮಿಸಿ ಕಳುಹಿಸಲಾಗಿ ; ವಿಕ್ರಮ ಆಮಱಿಗಳ ಕೂಡೆ ವಾಯುವೇಗದಿಂದ ಸ್ತ್ರೀಯಿರುವ ಬಳಿಗೆ ಹೋಗಿ ಅಂಬಿಗನ ಕೊಂದುಬಿಟ್ಟು ತನ್ನ ಸ್ತ್ರೀಯನ್ನು ಕರೆದುಕೊಂಡು, ಋಷಿಯ ಬಳಿಗೆ ಹೋಗಿ ಅವನ ರನ್ನದ ಹಾವುಗೆಯ ತೆಗೆದುಕೊಂಡು ಆಸ್ತ್ರೀಯ

ಕರೆದುಕೊಂಡು, ಗಿಣಿರಾಜನ ಬಳಿಗೆ ಬಂದು,—ನಿನ್ನ ಸುತರಿಂದ ನನ್ನ ಸತಿ ಯರು ಸಿಕ್ಕಿದರು ಎಂದು ತೋಱಿಸಿ, ಅಲ್ಲಿಂದ ಬರುತ್ತಿರುವಲ್ಲಿ ಪೂರ್ವದ ಮಾಯಾಂಗನೆ ಆಕಾಶಕ್ಕೆ ಹದಿನಾಱು ಬಣ್ಣದ ಚಿನ್ನದ ಸರಪಣಿ ಉಯ್ಯಾಲೆ ಹಾಕಿಕೊಂಡು ಉಯ್ಯಾಲೆಮೇಲೆ ಮೊಂಡುಗಾಲ ಮುಚ್ಚಿ ಬಳ್ಳಿಯ ಕಾಲ ನೀಡಿ ಉಯ್ಯಾಲೆಯಾಡುವುದಂ ಕಂಡು, ವಿಕ್ರಮನು ಅವಳು ಕಾಣದಂತೆ ಹಿಂದುಗಡೆಯಲ್ಲಿ ಹೋಗಿ ಆಕಾಲ ಕತ್ತರಿಸಲು, ಅವಳು ಚೋ ಎಂದಾ ರ್ಭಟಿಸುತ್ತ ಖೇಚರಕ್ಕೆ ಹಾಱಿಹೋದಳು. ಆಬಳಿಕ ಆಕಾಲಿನಲ್ಲಿರ್ದ ಅಂದುಗೆಯಂ ಕಳೆದುಕೊಂಡು ತನ್ನ ಸ್ತ್ರೀಯರು ಸಹಿತ ವಾಯುವೇಗ ದಲ್ಲಿ ಅರಸಿನ ಪಟ್ಟಣದ ಬಳಿಗೆ ಬಂದು ಹೇಳಿ ಕಳುಹಿಸಲು; ಅರಸು ಅಗ್ನಿ ಪ್ರವೇಶವಂ ಬಿಟ್ಟು ಮಂತ್ರಿ ಸಾಮಾಜಿಕರು ಸಹಿತವಾಗಿ ಎದುರುಗೊಂಡು ಬಂದು, ಕರೆದುಕೊಂಡು ಹೋಗಲಾಗಿ ; ಆಪಟ್ಟದರಸಿಗೆ ವಿಕ್ರಮ ಅಂದುಗೆ ಯಂ ಕೊಟ್ಟುದಱಿಂದ ಅರಸು ಸಕಲರೂ ಸಹಿತ ಸಂತೋಷಪಟ್ಟು, ಆಗ ಅರಸು ತನ್ನ ಅರಸಿತಿಗೆ ಆಅಂದುಗೆಯಂ ಕೊಟ್ಟು, ವಿಕ್ರಮನಿಗೆ ಬಹುಮಾನ ಮಂ ಮಾಡಿ, ತನ್ನ ಬಳಿಯಲ್ಲಿ ಪ್ರಧಾನನಾಗಿರಬೇಕೆಂದು ಒಡಂಬಡಿಸಲಾಗಿ; ವಿಕ್ರಮನು ತನ್ನ ಊರಿಗೆ ಹೋಗಿ ಬರುವೆನೆಂದು ಹೇಳಿ, ಅಲ್ಲಿಂದ ಸ್ತ್ರೀ ಯರು ಸಹಿತ ಹೊಱಟು ಇಲ್ಲಿಗೆ ಬಂದು ಸುಖವಾಗಿ ಇದ್ದನು, ಕಣಾ!

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ರತಿಪ್ರಿಯೆಯೆಂಬ ಪುತ್ತಳಿ ಹೇಳಿದ ಆಱನೆಯ ಕಥೆ.

ಏಳನೆಯ ಕಥೆ.

ಏಳನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು ತನ್ನ ಪ್ರಧಾನಿಯಾದ ಚಿತ್ರ ಶರ್ಮನ ಕೈಲಾಗಿನಿಂದ ಸಿಂಹಾಸನದ ಬಳಿಗೆ ಬಂದು ಬಲದ ಕಾಲಂ ನೀಡು ವ ಸಮಯದಲ್ಲಿ—ಹೋ! ಹೋ! ನಿಲ್ಲು ನಿಲ್ಲು, ನಮ್ಮ ಒಡೆಯನಾದ ವಿಕ್ರ ಮಾದಿತ್ಯರಾಯನ ವೀರವಿತರಣಗಳುಳ್ಳೊಡೆ ಏಱು, ಇಲ್ಲವಾದರೆ ಕೆಲ ಸಾರು, ವಿಾಱಿ ಕುಳಿತೆಯಾದರೆ ನಿನ್ನ ತಲೆ ಸಹಸ್ರ ಹೋಳಾಗುವುದು,

ಎಂದು ಆಸೋಪಾನದ ನವಮೋಹಿನಿಯೆಂಬ ಪುತ್ಥಳಿಯು ಧಿಕ್ಕರಿಸಲಾಗಿ ; ಭೋಜರಾಯನು ಬದಲು ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ಥಳಿಯೇ ಕೇಳು. ನಮ್ಮ ಒಡೆಯನಾನ ಭೋಜರಾಜನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ ಒಂದುದಿನ ಸುಖದಿಂದ ಎಣ್ಣೆಯಂ ಒತ್ತಿಸಿಕೊಳ್ಳುತ್ತ ಮೂಡ ಮುಖವಾಗಿ ಕುಳಿತಿರುವ ಸಮಯದಲ್ಲಿ ಒಬ್ಬ ಭಿಕ್ಷುಕವಿಯೆಂಬ ಬ್ರಾಹ್ಮಣ ನಾಲ್ಕು ಶ್ಲೋಕ ಬರೆದು ಓಲೆಯಂ ಕೈಯಲ್ಲಿ ಪಿಡಿದು, ಅರಮನೆಯ ಬಾಗಿಲ ಬಳಿಗೆ ಬಂದು, ಕಾವಲಕಾದಿರುವ ಗೊಲ್ಲರ ಸೇರುಗಾಱನಂ ಕರೆದು, ರಾಯನ ಕೂಡೆ—ನಾನು ಬಂದಿರುವ ವರ್ತಮಾನವನ್ನು ಹೋಗಿ ನೀನು ಅಱಿಕೆ ಮಾಡು ನಿನಗೆ ಹನ್ನೆರಡು ಸಾವಿರ ವರಹವ ಕೊಡುವೆ, ಎನ್ನಲಾಗಿ ; ಆಸೇರುಗಾಱ ಬಂದು ಕೈಮುಗಿದು, —ಎಲೈ ಮಹಾರಾಯನೇ! ಭಿಕ್ಷುಕವಿ ನಾಲ್ಕು ಶ್ಲೋಕವಂ ಬರೆದ ಓಲೆಯಂ ಕೈಯಲ್ಲಿ ಪಿಡಿದುಕೊಂಡು ಅರಮನೆಯ ಬಾಗಲಿಗೆ ಬಂದು ನನ್ನ ಕರೆದು ತನ್ನ ಬಂದು ಇದ್ದಾನೆ ಎಂಬ ವರ್ತಮಾನವನ್ನು ಶ್ರುತಪಡಿಸಿದರೆ ನಿನಗೆ ಹನ್ನೆರಡುಸಾವಿರ ವರಹ ಕೊಡುವೆನು ಎಂದು ಹೇಳಿದ ಆಮಾತ, ರಾಯ ಕೇಳಿ, ಆಕವಿಯ ಕರತರಹೇಳಿ ಅಜ್ಞೆಯಂ ಮಾಡಿ ಹೇಳಲಾಗಿ ; ಆಸೇರುಗಾಱ ಬಂದು ಆಕವಿಯಂ ಕರೆದುಕೊಂಡು ಹೋಗಿ, ರಾಯನ ಎದುರಾಗಿ ನಿಲ್ಲಿಸಲು ; ಆಕವಿಯು ರಾಯನ ಮುಖವಂ ನಿರೀಕ್ಷಿಸಿ, ಒಂದನೆಯಶ್ಲೋಕವ ಹೇಳಿದನು. ಅದಂ ರಾಯಂ ಕೇಳಿ ಆದಿಕ್ಕಿನ ರಾಜ್ಯವನ್ನು ತನ್ನ ಮನಸ್ಸಿನಲ್ಲಿ ಧಾರೆಯೆಱೆದುಕೊಟ್ಟು, ತೆಂಕಮುಖವಾಗಿ ಕುಳಿತುಕೊಳ್ಳಲಾಗಿ ; ಆಕವಿಯು ಆದಿಕ್ಕಿನಲ್ಲಿ ಹೋಗಿ ಎದುರಿಗೆ ನಿಂತು ಎರಡನೆಯ ಶ್ಲೋಕವ ಪೇಳಿದನು. ಅದಂ ಕೇಳಿ ರಾಯ ಪಡುವಣದಿಕ್ಕಿಗೆ ತಿರಿಗಿಕೊಳ್ಳಲು, ಆಕವಿಯು ಆದಿಕ್ಕಿನಲ್ಲಿ ಹೋಗಿ ಎದುರಿಗೆ ನಿಂತು ಮೂಱನೆಯ ಶ್ಲೋಕವ ಹೇಳಿದನು. ಅದಂ ಕೇಳಿ ರಾಯ ಬಡಗಣದಿಕ್ಕಿಗೆ ತಿರುಗಿ ಕುಳಿತುಕೊಳ್ಳಲಾಗಿ, ಆ ಕವಿಯು ಆ ದಿಕ್ಕಿನಲ್ಲಿಯೂ ಹೋಗಿ ಎದುರಾಗಿ ನಿಂತು ನಾಲ್ಕನೆಯ ಶ್ಲೋಕವ ಹೇಳಿದನು. ಅದನ್ನು ರಾಯನು ಕೇಳಿ ಚೌದಿಕ್ಕಿನ ರಾಜವಂ ಧಾರೆಯೆಱೆದು ಕೊಟ್ಟು, ಮೇಲುಮುಖವಾಗಿ ಎದ್ದು ನಿಂತು, ಆ

ಕವಿಗೆ ಉತ್ತರಂಗುಡದೆ ಅಭ್ಯಂಗನದ ಮನೆಗೆ ಹೋಗಿ, ಎಱೆದುಕೊಳ್ಳು ತ್ತಿರಲು ; ಇತ್ತ—ರಾಯನು ನನಗೇನೂ ಉತ್ತರಕೊಡದೆ ಸುಮ್ಮಗೆ ಎದ್ದು ಹೋದನೆಂದು ಮಹಾಸಂತಾಪದಿಂದ ಹೋಗುವ ಕವಿಯನ್ನು ಪ್ರಧಾನ ಕಂಡು ರಾಯನೊಡನೆ ಹೇಳಿದುದ ಕೇಳಿದನು. ಆಬಳಿಕ—ಎಲೈ ಕವಿಯೇ! ರಾಯ ನಿನಗೆ ಕೊಟ್ಟ ತ್ಯಾಗ ನನಗೆ ಕೊಡುತ್ತೀಯಾ? ಎಂದು ಕೇಳಲಾಗಿ,—ಅವಶ್ಯ ಕೊಡುವೆ. ನನ್ನ ಗ್ರಾಸೋಪಾಯಕ್ಕೆ ನೀವೇನು ಕೊಡುತ್ತೀರೋ ನೋಡಿ ಎನ್ನಲಾಗಿ ; ಪ್ರಧಾನನು ಆಕವಿಗೆ ನಾಲ್ಕು ಲಕ್ಷ ವರಹವಂ ಕೊಟ್ಟು, ರಾಯನ ತ್ಯಾಗ ನನಗೆ ಸಂದಿತು ಎಂದು ಪ್ರಧಾನ ಪೇಳಿದುದಕ್ಕೆ, ಆಕವಿ ಯು—ಹಾಗೆಯೇ ಸರಿ ಎಂದು ಪೇಳಿ, ಆಪ್ರಧಾನಕೊಟ್ಟ ನಾಲ್ಕುಲಕ್ಷ ದ್ರವ್ಯ ವಂ ತೆಗೆದುಕೊಂಡು ಪೋಗುತಿದ್ದನು. ಅಷ್ಟಱಲ್ಲೇ ರಾಯನು ಮಿಂದು, ದೇವತಾರ್ಚನೆ ಭೋಜನ ತೀರಿಸಿಕೊಂಡು, ಓಲಗಸಾಲೆಗೆ ಬಂದು, ಸಿಂಹಾ ಸನದಲ್ಲಿ ಕುಳಿತುಕೊಂಡು, ಊಳಿಗದವರ ಕರೆದು, ಭಿಕ್ಷುಕವಿಯಂ ಕರೆದು ತರಹೇಳಿ ಎಣ್ಣೆಮಂಡೆಯುಳಿದ್ದಾಗ ಬಂದು ಕಾಣಿಸಿಕೊಂಡು ಶ್ಲೋಕವ ಹೇಳಿದುದಱಿಂದ ಅವನಲ್ಲಿ ಮಾತನಾಡುವುದಕ್ಕೆ ಇಲ್ಲದೆ ಚತುಸ್ಸೀಮೆಯನ್ನು ಮನಸ್ಸಿನಲ್ಲಿ ಧಾರೆಯೆಱೆದು ಕೊಟ್ಟೆ ಎಂದ ಮಾತಿಗೆ ಪ್ರಧಾನನಿಂತೆಂದನು:— ನೀವು ಆಕವಿಗೆ ಕೊಟ್ಟ ರಾಜ್ಯತ್ಯಾಗವನ್ನು ನನಗೆ ನಾಲ್ಕು ಲಕ್ಷ ವರಹ ಕ್ಕೆ ಮಾಱಿದನೆಂದ ಮಾತಿಗೆ, ರಾಯ ಆಕವಿಯಂ ಕರೆಸಿ ಕೇಳಲಾಗಿ ;—ಎಲೈ ರಾಯನೇ! ಚಿನ್ನದ ಮಳೆ ಹೊಯ್ಯುವಾಗ ಅಭಾಗ್ಯದ ಕೊಡೆಯನ್ನು ಹಿಡಿದೆ ಎನ್ನಲಾಗಿ; ಆಕವಿಗೆ ಪುನಃ ಸವಾಲಕ್ಷವರಹವಂ ಕೊಡಿಸಿ, ಕಳುಹಿದನೆಂದು ಪೇಳಲಾಗಿ—ನವಮೋಹಿನಿ ಎಂಬ ಪುತ್ತಳಿ—ಐಸಲೇ ನಿಮ್ಮ ಒಡೆಯನ ವಿತ ರಣವು! ಎಂದು ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವನ್ನು ಸುಖದಿಂದ ಪಾಲಿಸುವಲ್ಲಿ ಒಂದು ದಿನ ಮತ್ಸ್ಯಪುರದ ವರ್ತಕ ಬಂದು, ರಾಯನೊಡನೆ—ನಮ್ಮ ದ್ವೀಪಾಂತರಕ್ಕೆ ಹೋಗಿ ವ್ಯಾಪಾರ ತೆಗೆದು ಕೊಂಡು ಬರುವಲ್ಲಿ ಸಮುದ್ರಮಧ್ಯದಲ್ಲಿ ಹಡಗೊಡೆದು ತಂದ ವ್ಯಾಪಾರ ವೆಲ್ಲಾ ಹೋಗಿ ಬಱಿದೆ ಬಂದೆ, ಎನ್ನಲಾಗಿ ; ರಾಯನು—ಹಡಗೊಡೆದ ಬಗೆ ಹೇಗೆ? ಎಂದು ಕೇಳಲು ; ಅವನು ಪಾತಾಳಲೋಕದಿಂದ ಸಮುದ್ರಮಧ್ಯ

ದಿಂದ ಮೇಲಕ್ಕೆ ಬಂದು ಉಪ್ಪರಿಗೆ ಬಂದುದು. ಅದರಲ್ಲಿ ಬಬ್ಬ ಸೀಮಂತಿನಿಯೆಂಬ ಸ್ತ್ರೀಯು ಇದ್ದಳು. ಅವಳು ಹೇಗಿದ್ದಳೆಂದರೆ—ಮುತ್ತಿನ [1]ಕಂಠಮಾಲೆಯಲ್ಲಿ[1] ರತ್ನವಿದ್ದಂತೆ, ತಾರೆಗಳ ಮಧ್ಯೆ ಚಂದ್ರನಿದ್ದಂತೆ,[2]ನಯನದಲ್ಲಿ ಆಲೆಯಿದ್ದಂತೆ[2], ಮುಗಿಲಲ್ಲಿ ಮಿಂಚು ಹೊಳೆದಂತೆ. ಇಂಥ ಲಾವಣ್ಯವತಿಯಂ ಕಂಡೆ ಎನ್ನಲಾಗಿ; ರಾಯನು ವಿಸ್ಮಿತನಾಗಿ ತೋರು ಎಂದನು. ರಾಯನು ಅವನ ಕರೆದುಕೊಂಡು [3]ಆಕಾಶಮಾರ್ಗದಲ್ಲೇ ಅಂಬುಧಿಗೆ[3] ಹೋಗಿ, ಶಂಖಪಾಲನೆಂಬ ನಾಗೇಂದ್ರನ ಅರಮನೆಯೊಳು ಆಸೀಮಂತಿನಿಯಂ ಕಂಡು, ಅವಳ ಕೂಡೆ ಪಗಡೆಯಾಡಿ, ಅವಳ ಸೋಲಿಸಿದ ಕಾರಣ, ಅವಳು ರಾಯನ ಕೈವಿಡಿದು—ನೀನು ಯಾರು? ನಿನ್ನ ಹೆಸರೇನು? ಎಂದು ಕೇಳಲಾಗಿ; ನನ್ನ ಹೆಸರು ವಿಕ್ರಮಾದಿತ್ಯರಾಯನೆಂದು ಹೇಳಿ, ಆ ಬಳಿಕ—ನೀನಾರು? ನಿನ್ನ ಹೆಸರೇನು? ಎನ್ನಲಾಗಿ; ಶಂಖಪಾಲನಾಗೇಂದ್ರನ ಮಗಳು, ನನ್ನ ಹೆಸರು ಸೀಮಂತಿನಿ, ನನ್ನ ತಂದೆ ನಿನಗೆ ಬೇಕಾದ ಪುರುಷನ ಭೂಲೋಕದಲ್ಲಿ ನೋಡಿಕೋ ಎಂದು ನನಗೆ ಹನ್ನೆರಡು ನೆಲೆಯ ಉಪ್ಪರಿಗೆಯಂ ಕಟ್ಟಿಸಿ ಕೊಟ್ಟಿರುವ ನಿಮಿತ್ತ ದಿನವೊಂದಕ್ಕೆ ಬಂದು ವೇಳೆ ಸಮುದ್ರದ ಮೇಲೆ ಬಂದು ಹೋಗುತ್ತಿದ್ದೆ. ಈಗಿನ ನನ್ನ ಪುಣ್ಯದಿಂದ ನಿನ್ನಂಥ ಪುರುಷರತ್ನ ದೊರಕಿತು, ಎಂದು ರಾಯನ ತನ್ನ ತಂದೆಯ ಬಳಿಗೆ ಬಾರೆಂದು ಕರೆದುಕೊಂಡು ಹೋಗಿ, ಅವಳಿಂತೆಂದಳು:—ಎಲೈ ಪಿತನೇ! ಈ ಪುರುಷರತ್ನ ನಿಮ್ಮಳಿಯನೆಂದು ತೋರಿಸಲಾಗಿ; ಆಶಂಖಪಾಲನಾಗೇಂದ್ರ ರಾಯನ ಲಾವಣ್ಯವಂ ಕಂಡು ಸಂತೋಷಚಿತ್ತನಾಗಿ—ನಿನಗೀತನೊಪ್ಪೆ? ಎಂದು ಮಗಳ ಕೇಳಲಾಗಿ; ಅವಳು—ಈತನೇ ಪತಿ, ನಾನೇ ಸತಿ, ಎಂದ ಮಾತಂ ಕೇಳಿ, ರಾಯನು ಅವಳ ಸುಲಗ್ನದಲ್ಲಿ ಧಾರೆಯೆರೆದು ವಿವಾಹವಂ ಮಾಡಿ, ಮಗಳಿಗೆ ಅಷ್ಟೈಶ್ವರ್ಯವಂ ಕೊಟ್ಟು, ಗರುಡೋದ್ಗಾರಿ ಲೋಕೋಪಕಾರಿ ರತ್ನವಂ ಅಳಿಯನಿಗೆ ಕೊಟ್ಟು, ಆರತ್ನದ ಫಲವಂ ಹೇಳಿದನು. ಅದೇನೆಂದರೆ—ಇದು ರಸರಸಾಯನಪಂಚಶಾಕಪರಮಾನ್ನ ಕೊಡುವುದೆಂದು ಗರುಡ ಮಂತ್ರಸಿದ್ಧಿಯಂ ಹೇಳಿ, ಆನೆಲವಾಡದಲ್ಲಿ ಕುಳ್ಳಿರಿಸಿ, ದಂ

ಪಾ—1. ಖಂಡದಲ್ಲಿ. 2. ಕಣ್ಣಿನೊಳು ಎಲೆ ಇಪ್ಪಂತೆ. 3. ಆಗಿರಿ ಮಾಡದೆ ಬಳಬಂತೆ.

ಪತಿ ಸಹಿತ ಕಳುಹಿಸಲಾಗಿ ; ಆನೆಲವಾಡ ನಾಗಲೋಕದಿಂದ ಶರಧಿಯೊಳಗೆ ಬಂದು, ಭೂಲೋಕಕ್ಕೆ ಪುಟನೆಗೆದು ತಂದು ಬಿಡಲಾಗಿ, ಅಲ್ಲಿಂದ ವರ್ತಕ ಸಮೇತವಾಗಿ ಬರುವ ದಾರಿಯಲ್ಲಿ ಒಬ್ಬ ಸಾಧುಕನ ಹಾವು ಕಚ್ಚಿ ಬಿದ್ದಿರುವನಂ ಕಂಡು, ಗರುಡಮಂತ್ರದಿಂದವನ ಏಳಿಸಿ, ಇಲ್ಲಿ ನೀನು ಬಿದ್ದಿರ ಕಾರಣವೇನೆಂದು ಕೇಳಲಾಗಿ ; ದಾರಿದ್ರ್ಯ ದೋಷದಿಂದ ಈ ಅರಣ್ಯದಲ್ಲಿ ತಪಸ್ಸ ಮಾಡಬೇಕೆಂದು ಬರಲಾಗಿ, ಹಾವು ಕಚ್ಚಿ ಬಿದ್ದೆನು ಎಂದ ಕಾರಣ ; ರಾಯನು ಕರುಣಚಿತ್ತನಾಗಿ, ಅವನಿಗೆ ರಸರಸಾಯನ ಪಂಚಭಕ್ಷ್ಯ ಪರಮಾನ್ನ ಕೊಡುವ ರತ್ನವಂ ಕೊಟ್ಟು, ಇಲ್ಲಿಗೆ ಬಂದು, ಆ ವರ್ತಕನಿಗೆ ಹತ್ತು ಕೋಟಿ ದ್ರವ್ಯ ದಿವ್ಯರತ್ನಂಗಳಂ ಐನೂಱು ಸ್ತ್ರೀಯರಂ ಕೊಟ್ಟು ಉಪಚರಿಸಿ, ಕಳುಹಿಸಿ, ತಾನು ಆಸೀಮಂತಿನಿ ಸಹಿತ ಸುಖದಿಂದ್ದನು ಕಣಾ!

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ನವಮೋಹಿನಿ ಎಂಬ ಪುತ್ಥಳಿ ಪೇಳಿದ ಏಳನೆಯ ಕಥೆ.

ಎಂಟನೆಯ ಕಥೆ.

ಎಂಟನೆಯ ದಿವಸದಲ್ಲಿ ಭೋಜರಾಜನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು ಸರ್ವಾಲಂಕಾರಭೂಷಿತನಾಗಿ ಚಿತ್ರವರ್ಮನ ಕೈಲಾಗಿನಲ್ಲಿ ರತ್ನಖಚಿತವಾದ ಪಾವುಗೆಯಂ ಮೆಟ್ಟಿಕೊಂಡು ಸಿಂಹಾಸನದ ಬಳಿಗೆ ಬಂದು ಹೊಗಳುವ ಭಟರ ಸಂಭ್ರಮದಲ್ಲಿ ಬಲಗಾಲಂ ನೀಡುವ ಸಮಯದಲ್ಲಿ ಆಸೋಪಾನದ ಪದ್ಮಾವತಿಯೆಂಬ ಪುತ್ಥಳಿಯು ಹೋಹೋ! ನಿಲ್ಲುನಿಲ್ಲು ಭೋಜರಾಯನೇ! ನಮ್ಮ ಒಡೆಯನಾದ ವಿಕ್ರಮಾದಿತ್ಯರಾಯನಂತೆ ವೀರವಿತರಣಗುಣಗಳುಳ್ಳೊಡೆ ಈಸಿಂಹಾಸನವ ನೇಱು, ಇಲ್ಲವಾದರೆ ಕೆಲಸಾರು, ಮಿಾಱಿ ಕುಳಿತೆಯಾದರೆ ನಿನ್ನ ತಲೆ ಸಹಸ್ರ ಹೋಳಾಗುವುದು ಎಂದು ಧಿಕ್ಕರಿಸಲಾಗಿ; ಭೋಜರಾಯನು ಜೇಱಿ ಸಿಂಹಾಸನದಲ್ಲಿ ಕುಳಿತು ಚಿತ್ರವರ್ಮನಿಂದ ಕೇಳಿಸಿದ ಕಥೆ:—

ಎಲೆ ಪುತ್ತಳಿಯೇ! ಕೇಳು. ನಮ್ಮ ಭೋಜರಾಯನು ಸುಖದಿಂದ ಧಾರಾಪುರದಲ್ಲಿ ರಾಜ್ಯಂಗೆಯ್ಯುವಲ್ಲಿ ಒಂದು ದಿನ ಸದರಿನಲ್ಲಿರುವ ಮುನ್ನೂಱು ಮುಖ್ಯ ಕವಿಗಳಲ್ಲದೆ ಲಕ್ಷವೂ ತೊಂಬತ್ತಾಱು ಸಾವಿರ ಕವಿಗಳೂ ಕುಳ್ಳಿರುವಲ್ಲಿ! ರಾಯ—ದಾನಂಗಳಲ್ಲಿ ಅಧಿಕವಾದ ದಾನಂಗಳು ಆವುವು? ಎಂದು ಕೇಳಲು; ವರರುಚಿ ಹೇಳಿದನು:—ಅನ್ನೋದಕ ದಾನವೇ ಅಧಿಕವೆಂದು ಹೇಳಿದುದಕ್ಕೆ; ರಾಯನು—ಅದು ಹೇಗೆ? ಎಂದು ಕೇಳಲಾಗಿ; ವರರುಚಿಯೆಂಬೊಬ್ಬ ಇಂತೆಂದನು:—ಕೇಳೈಯಾ ರಾಯನೇ! ಚಿತ್ರಸೇನರಾಯನಿಗೆ ಮೂಱು ತಿಂಗಳ ಕುಮಾರ ಹುಟ್ಟಿರುವನು. ಆ ಮಗುವನ್ನು ಕೇಳಿದರೆ ಅನ್ನೋದಕದಾನದ ಮಹತ್ತನ್ನು ಹೇಳುವುದು ಎನ್ನಲಾಗಿ; ರಾಯನು ವರರುಚಿಸಹಿತ ಚಿತ್ರಸೇನರಾಯನ ಮನೆಗೆ ಹೋಗಲಾಗಿ, ಅವನು ಎದುರುಗೊಂಡು ಕರೆದುಕೊಂಡು ಹೋಗಿ ಬಹುವಿನಯದಿಂದ ಉಪಚರಿಸಿ—ಏನು ಕಾರಣ ದಯೆಮಾಡಿದಿರಿ? ಎನ್ನಲಾಗಿ; ರಾಯನು—ನಿನ್ನ ಮೂಱುತಿಂಗಳ ಮಗನ ಕೂಡೆ ಮಾತನಾಡಬೇಕು? ಎನ್ನಲಾಗಿ; ತೊಟ್ಟಿಲು ಸಹಿತ ಮಗುವ ತಂದು ಮುಂದಿರಿಸಲಾಗಿ; ರಾಯನು-ಎಲೈ ಶಿಶುವೇ! ದಾನದೊಳಧಿಕದಾನವಾವುದು? ಎನ್ನಲಾಗಿ; ಆ ಮಗುವು—ತಂದೆ ತಾಯಿಗೆ ಉನ್ನತವಾದ ದೇವರಿಲ್ಲ; ಅನ್ನೋದಕದಾನಕ್ಕಿಂತ ಮಿಗಿಲಾದ ದಾನವಿಲ್ಲ, ಎನ್ನಲಾಗಿ; ರಾಯನು—ಅದು ಹೇಗೆ? ಎನ್ನಲು; ಕೇಳೈಯಾ ರಾಯನೇ! ಪೂರ್ವದಲ್ಲಿ ಮುನ್ನೊಂದು ಜನ್ಮದಲ್ಲಿ ನಾನು ಪುಳಿಂದನೆಂಬ ರಾಕ್ಷಸನಾಗಿ, ಒಂದು ಘೋರಾರಣ್ಯದಲ್ಲಿ ಗೋಬ್ರಾಹ್ಮಣ ಪಕ್ಷಿ ಮೃಗಗಳನ್ನು ಭಕ್ಷಿಸಿಕೊಂಡು ನಾನು ಒಬ್ಬ ಸ್ತ್ರೀಯೂ ಸಹಿತವಾಗಿ ಒಂದು ಗವಿಯಲ್ಲಿ ಇರುವಲ್ಲಿ ಒಂದುದಿನ ಅಲ್ಲಿಗೆ ಒಬ್ಬ ಬ್ರಾಹ್ಮಣ, ತನಗೆ ಹಣ್ಣು ಹಂಪಲ ಬೇಕಾದುದನ್ನು ಹುಡುಕುತ್ತ ಗವಿಯ ಬಾಗಿಲಿಗೆ ಬರಲಾಗಿ; ಆವೇಳೆಯಲ್ಲಿ ನಾನು ಸಂಚಾರಕ್ಕೆ ಹೋಗಿದ್ದ ಕಾರಣ, ಅವನ ನನ್ನ ಸತಿ ಕಂಡು—"ಎಲೋ ಬ್ರಾಹ್ಮಣ! ಇಲ್ಲಿಗೆ ಏಕೆ ಬಂದೆ? ನನ್ನ ಪತಿ ನಿನ್ನ ಕಂಡರೆ ತಿಂದಾನು," ಎಂದು ಹೇಳಿ ಅವನ ಒಂದು ಕಲ್ಲುಬಂಡೆಯಲ್ಲಿ ಕುಳ್ಳಿರಿಸಿ ಮೇಲೆ ಸೊಪ್ಪುಸೆದೆಯ ಮುಚ್ಚಿ ಮಱೆಯಂ ಮಾಡಿ, ನಾನು ಬಂದ ಬಳಿಕ, ನನ್ನ ಪಾದವಿಡಿದು ನನ್ನೊಡನೆ ತಾನು ಒಂದು ಕಾರ್ಯವ ಮಾಡಿ ಇದ್ದೇನೆ,

ಎನ್ನಲು ;–ಅದೇನೆಂದು ನಾನು ಕೇಳಲಾಗಿ;–ನಾನೊಬ್ಬ ಬ್ರಾಹ್ಮಣನ ಬಚ್ಚಿಟ್ಟು ಇದ್ದೇನೆ, ಅವನ ನೀನು ತಿನ್ನದೆ ರಕ್ಷಿಸಬೇಕೆಂದು ಬಹಳ ಬಗೆ ನನಗೆ ಹೇಳಿ, ಸಂಬುಗೆಯ ತೆಗೆದುಕೊಂಡ ಬಳಿಕ, ಅವನ ಕರೆತಂದು ಮುಂದೆ ನಿಲ್ಲಿಸಲಾಗಿ ; ಅವನು ಕ್ಷುತ್ತಿನಿಂದ ಬಳಲಿ ಇರುವುದಂ ಕಂಡು, ಆಗ ಅವನಿಗೆ ಸಣ್ಣಕ್ಕಿ ಮುಂತಾದ ಬೇಕಾದುದನೆಲ್ಲವ ಕೊಟ್ಟು, ಚೆನ್ನಾಗಿ ಭೋಜನಮಾಡಿ ಬಾರೆಂದು ಕಳುಹಿಸಲಾಗಿ ; ಆತ ಅಡಿಗೆ ಊಟ ತೀರಿಸಿ ಬರುವ ಹೊತ್ತಿಗೆ ಸಂಜೆಯಾದುದರಿಂದ, ಈಬ್ರಾಹ್ಮಣನು ಒಬ್ಬನೇ ಹೋದರೆ ಹುಲಿ ಕರಡಿ ತಿಂದಾವು ಎಂದು ಆರಾತ್ರಿ ಆಗವಿಯಲ್ಲಿ ಇರಿಸಿ ಕೊಂಡು, ಆತನಿಗೆ ಫಲಾಹಾರಕ್ಕೆ ಖರ್ಜೂರ ದ್ರಾಕ್ಷೆ ಬಾಳೆಯಹಣ್ಣು ಎಳ ನೀರು ಮುಂತಾದುದು ಎಲ್ಲವನ್ನೂ ಕೊಟ್ಟು, ಬೆಳಗಾಗುತ್ತಲೆ ಅವನಿಗೆ ಬೇಕಾದುದೆಲ್ಲವನ್ನೂ ಕೊಟ್ಟು ದಾರಿ ತಪ್ಪದಂತೆ ಸಂಗಡ ಹೋಗಿ, ಅವನ ಅವನಾಶ್ರಮಕ್ಕೆ ಕಳುಹಿದ ಕಾರಣ, ಆಬ್ರಾಹ್ಮಣನಿಗೆ ಒಂದು ದಿನ ಅನ್ನ ವಂ ಕೊಡಲಾಗಿ ಆಜನ್ಮದ ಕ್ರೂರಕರ್ಮಗಳೆಲ್ಲ ಹೋಗಿ, ಈಗ ದೊರೆಯ ಮಗನಾಗಿ ಸಕಲ ರಾಜ್ಯಕ್ಕೂ ಅರಸುವಾಗಿ, ಅಷ್ಟಭೋಗಭೋಗ್ಯಂಗಳಿಗೆ ಒಡೆಯನಾಗಿ, ಹುಟ್ಟಿರುವೆನು. ಆದುದರಿಂದ ಅನ್ನದಾನಕ್ಕೆ ಪ್ರತಿಯಿಲ್ಲ ಎಂಬುದನ್ನು ಹೇಳಿ, ಮರಳಿ, ರುದ್ರಕೇತುವೆಂಬ ರಾಯನಿಗೆ ಒಂದು ಹೆಣ್ಣು ಹುಟ್ಟಿ ತಿಂಗಳಾಯಿತು. ಅವ ಕೇಳಿದರೆ ನಿಮ್ಮ ಸಂಶಯ ನಿಸ್ಸಂದೇಹವಾಗಿ ತೀರುವುದೆನ್ನಲಾಗಿ ; ಅಲ್ಲಿಂದ ರಾಯ ವರರುಚಿ ಸಹಿತ ರುದ್ರಕೇತುವಿನ ಮನೆಗೆ ಬರಲಾಗಿ ; ಅವನು ಎದ್ದು ಇದಿರುಗೊಂಡು ಕರೆದುಕೊಂಡು ಹೋ ಗಿ, ಅತಿ ಉಪಚರಿಸಿ ಬಳಿಕ,–ಏನು ಕಾರಣ ಬಂದಿರಿ ? ಎನ್ನಲಾಗಿ ; ರಾ ಯನು–ನಿನ್ನ ತಿಂಗಳ ಮಗುವಿನ ಕೂಡೆ ಮಾತನಾಡಬೇಕೆಂದು ಬಂದೆವು ಎನ್ನಲಾಗಿ; ಆಮಗುವಂ ತಂದು ಇರಿಸಲು; ರಾಯನು–ದಾನದೊಳು ಉನ್ನತ ವಾದ ದಾನ ಯಾವುದು ? ಎನ್ನಲಾಗಿ ; ಆಮಗುವು–ನಾನು ಪೂರ್ವ ಜನ್ಮ ದಲ್ಲಿ ಪುಳಿಂದನೆಂಬ ರಾಕ್ಷಸನ ಸತಿಯಾಗಿದ್ದೆನು. ಆಕಾಲದಲ್ಲಿ ಒಬ್ಬ ಬ್ರಾಹ್ಮಣನು ಹೊಲಬು ತಪ್ಪಿ ಬರಲಾಗಿ, ಆತನಿಗೆ ಅನ್ನ ಕೊಡಿಸಿದುದರಿಂದ ಆನನ್ನಪತಿ ಚಿತ್ರಸೇನನ ಸುತನಾಗಿ ಹುಟ್ಟಿದ. ನಾನು ರುದ್ರಕೇತುರಾಯನ ತನುಜೆಯಾಗಿ ಹುಟ್ಟಿದೆ. ಆವಿವರವನ್ನು ದೊರೆಯಮಗ ನಿಮಗೆ ಹೇಳಿ

ಇದ್ದಾನು. ಅದುಕಾರಣ ಅನ್ನದಾನಕ್ಕೆ ಸಮಾನವಾದ ದಾನವಿಲ್ಲ.
ಇದು ಅಲ್ಲದೆ ಇನ್ನೂ ಒಂದು ಉಂಟು. ಅದೇನೆಂದರೆ—ಉದಕದಾನದಿಂದ
ಅಧಿಕಫಲವುಂಟು ಕೇಳು. ಒಬ್ಬ ವಸುಪಾಲನೆಂಬ ವರ್ತಕನ ಕೈಯಲ್ಲಿ ಜ
ಯಪಾಲನೆಂಬ ವ್ಯಾಪಾರಿ ಹತ್ತು ಸಾವಿರ ವರಹವನ್ನು ಕಡ ತೆಗೆದುಕೊಂಡು
ತನ್ನ ಮನೆಗೆ ಹೋದನು. ಆಜಯಪಾಲನ ಹಟ್ಟಿಯಲ್ಲಿ ಒಂದು ಎತ್ತು
ಇರುವುದು. ಆಯೆತ್ತು ಜಯಪಾಲನ ನೋಡಿ ನಗುವುದು ಅದಂ ಕಂಡು—
ಓ ಎತ್ತೇ! ನನ್ನ ನೋಡಿ ನಗುವುದೇನು? ಎಂದು ಜಯಪಾಲ ಕೇಳಲಾಗಿ;
ಆಯೆತ್ತು—ಪೂರ್ವದಲ್ಲಿ ನಿನ್ನಲ್ಲಿ ನಾನು ತೆಗೆದ ಸಾವಿರ ವರಹ ಸಾಲ
ಏನುಮಾಡಿದರೂ ತೀರದೆ ಈಗ ನಿನ್ನ ಮನೆಯೆತ್ತಾಗಿ ಹುಟ್ಟಿ ಇರುವ
ನಿಮಿತ್ತ ನೀನು ಹತ್ತು ಸಾವಿರ ವರಹದ ಸಾಲ ಯಾವ ಜನ್ಮಾಂತರಕ್ಕೆ ತೀರಿ
ಸುವೆ? ಎಂದು ನಿನ್ನ ನೋಡಿ ನಾನು ನಗುತ್ತೇನೆ—ಎಂದ ಎತ್ತಿನ ಮಾತಂ
ಕೇಳಿ, ಜಯಪಾಲ ವಸುಪಾಲನ ಮನೆಗೆ ಹೋಗಿ—ನನಗೆ ನೀನು ಕೊಟ್ಟ
ಸಾಲದ ಹಣ ತೆಗೆದುಕೋ ಎನ್ನಲಾಗಿ; ವಸುಪಾಲ—ನಿನಗೊಂದು ವರುಷದ
ಗಡುವನ್ನು ಮಾಡಿ ಸಾಲ ಕೊಟ್ಟೆ. ವರುಷವಾದ ಬಳಿಕ ಹಣ ತೆಗೆದುಕೊ
ಳ್ಳುವುದೇ ಹೊರತು ಈಗ ತೆಗೆದುಕೊಳ್ಳುವುದಿಲ್ಲ—ಎನ್ನಲಾಗಿ; ಜಯಪಾ
ಲನು ಚಿಂತಿಸುತ್ತ ತನ್ನ ಮನೆಗೆ ಬಂದು ತನಗಾಪ್ತರ ಕೂಡೆ ಎಲ್ಲ ವಿವರವಂ
ಹೇಳಲಾಗಿ; ಅವರು—ಈಹಣ ಮಿಗಿಸಿಕೊಳ್ಳದೆ ಒಂದು ಕೆಱೆ ಕಟ್ಟಿಸು
ಎನ್ನಲಾಗಿ; ಅದೇ ಮೇರೆಗೆ ಜಯಪಾಲ ಹತ್ತು ಸಾವಿರ ವರಹದಲ್ಲಿ ಒಂದು
ಕಾಸೂ ಇರಿಸಿಕೊಳ್ಳದೆ ಒಂದು ಕೆಱೆಯ ಕಟ್ಟಿಸಿದನು. ಆಬಳಿಕ ವರು
ಷದ ಮೇಲೆ ವಸುಪಾಲ ಬಂದು—ನನ್ನ ಅಸಲು ಚುಂಗಡಿ ಸಹವಾಗಿ ಹಣ
ಕೊಡು ಎನ್ನಲಾಗಿ; ಆಜಯಪಾಲ—ನಾನು ಬಂದು, ನಿನ್ನ ಹಣ ತೆಗೆದು
ಕೋ ಎಂದರೆ, ನೀನು ತೆಗೆದುಕೊಳ್ಳದೆ ಹೋದುದಱಿಂದ ಆಹಣದಲ್ಲಿ ಒಂದು
ಕೆಱೆಯಂ ಕಟ್ಟಿಸಿ ಇದ್ದೇನೆ ಎಂದು, ತಾ ಮಾಡಿದ ಕೆಲಸವ ಕಂಡ ಕಂಡ
ವರ ಬಳಿಗೆ ವಸುಪಾಲನ ಕರೆದುಕೊಂಡು ಹೋಗಿ ಹೇಳಿಸಲಾಗಿ; ಆಜನರು
—ಎಲೈ ವಸುಪಾಲ! ನಿನಗೇನಾಗಬೇಕೆಂದು ಕೇಳಲು; ಅವರ ಮಾತಿಗೆ
—ನನ್ನ ಹಣ ಬಡ್ಡಿ ಸಹ ಕೊಡಿಸಿ, ಇಲ್ಲವೇ ಕೆಱೆಯ ಕಟ್ಟಿದ ಫಲ ಕೊ
ಡಿಸಿ—ಎನ್ನಲಾಗಿ; ಆಜನರು ಈತನ ಹಣಕ್ಕೆ ಎಷ್ಟು ಫಲ ಕೊಡಬೇಕೆಂದು

ಆಲೋಚಿಸಿ, ವೇದಶಾಸ್ತ್ರವಂ ತೆಗೆದು ನೋಡಲಾಗಿ, ಅದರಲ್ಲಿ ಒಂದು ಬಸವ ನೀರಂ ಕುಡಿದರೆ ಹಣ ತೀರೀತು ಎಂದು ಇರುವುದಂ ನೋಡಿ, ಅದೇ ಮೇರೆಗೆ ಗೋವುಗಳ ಆಕೆರೆಯ ಬಳಿಯಲ್ಲಿ ನಿಲ್ಲಿಸಿ ಪರೀಕ್ಷೆ ಮಾಡಲಾಗಿ ; ಯಾವತ್ತು ಗೋವುಗಳೂ ನೀರ ಕುಡಿಯದೆ ಸುಮ್ಮನೆ ಇರಲಾಗಿ ; ಅದರ ಲ್ಲೊಂದು ಗೂಳಿ ತನ್ನ ಬಾಲ ನೆನೆಯದಂತೆ ನೀರಿಗಿಳಿದು ಕಂಠಪೂರ್ತಿಯಾಗಿ ನೀರ ಕುಡಿದುದನ್ನು ಸರ್ವಜನರೂ ಕಂಡು, ವಸುಪಾಲನ ಹಣ ಬಡ್ಡಿ ಸಹ ತೀರಿತೆನ್ನಲಾಗಿ ; ಆ ವಸುಪಾಲ—ಹೇಗೆ ತೀರಿತೆನ್ನಲಾಗಿ ;—ನೀನು ಕೊಟ್ಟ ಹಣ, ಅದರ ಬಡ್ಡಿಗೆ ಒಂದು ಬಸವ ನೀರ ಕುಡಿಯಲಾಗಿ ನಿನ್ನ ಹಣ ಬಡ್ಡಿ ಸಹ ತೀರಿತು. ಆವೊಂದು ಬಸವ ನೀರ ಕುಡಿದ ಫಲ ನಿನ್ನದು. ಕಡವೆಂ ಗೋವು ನೀರು ಕುಡಿದ ಫಲ ಜಯಪಾಲನದು-ಎಂದು ಎಲ್ಲರೂ ಆಡಿದ ಬಳಿಕ, ಉಳಿದ ಗೋವುಗಳಷ್ಟು ನೀರ ಕುಡಿದುದನ್ನು ವಸುಪಾಲನು ಕಂಡು, ತನ್ನ ಬಾಯಿಂದ ಜಯಪಾಲನಿಗೆ-ನಾನು ಕೊಟ್ಟ ಹಣ ಬಡ್ಡಿ ಸಹ ತೀರಿತೆಂದು, ಸಕಲರ ಮುಂದೆ ಹೇಳಿ, ಪತ್ರ ಸೀಳಿ ಹೋದನು. ಅದು ಕಾರಣ ಅನ್ನೋದಕ ದಾನಕ್ಕೆ ಉನ್ನತವಾದ ದಾನವಿಲ್ಲ—ಎಂದು ಆಹೆಣ್ಣುಮಗು ಹೇಳಿದುದ ರಾಯನು ಕೇಳಿ, ಆಶ್ಚರ್ಯದಿಂದ ತನ್ನ ಅರಮನೆಗೆ ಬಂದು, ಬಹಳ ಅನ್ನಸತ್ರವಂ ಹಾಕಿಸಿ ಕೆರೆ ಕಟ್ಟೆ ಮಿತಿಯಿಲ್ಲದೆ ಕಟ್ಟಿಸಿ, ಇದ ಹೇಳಿದ ವರರುಚಿಗೆ ಸವಾಲಕ್ಷ ವರಹ ಕೊಟ್ಟನು, ಎಂದು ಹೇಳಲು; ಪದ್ಮಾವತಿಯೆಂಬ ಪುತ್ತಳಿಯು ನಗುತ್ತ ಹಾಸ್ಯಗೈದು ಹೇಳಿದ ಉಪಕಥೆ :—

ಕೇಳೈಯ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಸುಖದಿಂದ ಪಾಲಿಸುವಲ್ಲಿ ಒಂದು ದಿನ ಕಾಲಕೇತು ಎಂಬ ವಿದೂಷಕ ಸರ್ವಾಂಗಕ್ಕೆ ಭಸಿತವಂ ಧರಿಸಿ, ಮೋಸಕಟ್ಟೆಗೆ ನೆಲಮನೆಯೆಂಬ ಮಾತಿನಿಂದ ಪರಿಹಾಸ್ಯಂಗಳಾಡುತ್ತ ರಾಯನ ಎದುರಿಗೆ ಬರಲಾಗಿ; ರಾಯನು ಮೆಚ್ಚಿ ಕೋಟಿ ದ್ರವ್ಯವಂ ಕೊಟ್ಟು,—ನೀನು ಯಾವ ದೇಶ ? ಎನ್ನಲಾಗಿ; ಅವನು—ನಾನಾದೇಶವಂ ಚರಿಸುವವನಿಗೆ ಒಂದು ಸ್ಥಳವೆ ? ಎನ್ನಲಾಗಿ ; ರಾಯ—ನೀ ಚರಿಸಿದ ದೇಶದಲ್ಲಿ ಅತಿಶಯವೇನು ? ಎಂದು ಕೇಳಲು ; ಅದಕ್ಕೆ ಅವನು—ದ್ರಾವಿಡದೇಶದಲ್ಲಿ ಒಬ್ಬ ವಾಣಿಜನೆಂಬ ಚಾರುದತ್ತನು ಮೂರು ಯೋಜನ ವಿಸ್ತೀರ್ಣವಾದುದೊಂದು ಕೆರೆಯಂ ನಿರ್ಮಿ

ಸಿ, ಪಾತಾಳಪರ್ಯಂತರಕ್ಕೂ ತೋಡಿಸಿದರೂ ನೀರುಬಾರದೆ ಪಾಳಾಗಿ ಇರುವುದು. ಅಲ್ಲಿ ಒಂದು ಭುಜಂಗಿ ಎಂಬ ದುರ್ಗಿಯಿರುವಳು. ಆ ದುರ್ಗಿಗೆ ಆವನಾದರೂ ಮನಸ್ಸು ಚಂಚಲವಿಲ್ಲದೆ ಏಕಚಿತ್ತದಿಂದ ತನ್ನ ಶಿರಸ್ಸಂ ಛೇದಿಸಿ ನರಬಲಿಯಂ ಕೊಟ್ಟರೆ ಆಕೆಱೆಗೆ ನೀರು ಬರುವುದು; ಇಲ್ಲದಿದ್ದರೆ ಹೀಗೆ ಪಾಳಾಗಿ ಇರುವುದು ಎಂದು ಆಚಾರುದತ್ತನ ಸ್ವಪ್ನದಲ್ಲಿ ಆದುರ್ಗಿಯು ಬಂದು ಪೇಳಲಾಗಿ ; ಆವಾಣಿಜ—ನಾನು ಮಾಡಿದ ಕೆಲಸ ಸಾರ್ಥಕವಿಲ್ಲವಾಯಿತೆಂದು ಚಿಂತಿಸುತ್ತಿರುವನು, ಎನ್ನಲಾಗಿ ; ರಾಯನು—ಅದ ನೋಡಬೇಕೆಂದು, ಅಕಾಲಕೇತು ಸಹಿತ ಖೇಚರ ಮಾರ್ಗದಲ್ಲಿ ಆದೇಶಕ್ಕೆ ಹೋಗಿ, ಅಲ್ಲಿರುವ ಚಾರುದತ್ತನಂ ಕಂಡು ಕೇಳಲಾಗಿ; ಅವನು ಮಱುಗುತ್ತ ತನ್ನ ವಿಚಾರ ಪೇಳಲಾಗಿ; ಅವನೊಡನೆ ರಾಯನು ಆಕೆಱೆಯ ಬಳಿಗೆ ಬಂದು ಅಲ್ಲಿರುವ ದುರ್ಗಾದೇವಿಗೆ ನಮಿಸಿ, ತನ್ನ ಶಿರವಂ ಕತ್ತರಿಸಲು ; ಆದೇವಿ ಮೆಚ್ಚಿ ಪ್ರಸನ್ನಳಾಗಿ ಯಥಾಪ್ರಕಾರ ಶಿರವಂ ಕೊಟ್ಟು -ನೀನೇತಕ್ಕೆ ಶಿರವಂ ಕೊಟ್ಟೆ? ನಿನಗೆ ಬೇಕಾದ ವರವಂ ಕೇಳು, ಕೊಡುವೆ ಎನ್ನಲಾಗಿ ; ಆರಾಯನು ಚಾರುದತ್ತನು ಕಟ್ಟಿಸಿರುವ ಕೆಱೆಗೆ ನೀರು ಬರುವುದಕ್ಕೆ ವರಕೊಡು ಎನ್ನಲಾಗಿ; ಆದೇವಿ—ಎಲೈ ರಾಯನೇ ! ನೀನು ಕೆಱೆಯಮೇಲೆ ನಡೆದು ಹೋದರೆ, ಆಕೆಱೆಗೆ ನೀರು ತುಂಬಿ ಕೋಡಿ ಪರಿಯುವುದು ಎಂದು ದೇವಿಯು ಹೇಳಿ ಮಾಯವಾಗಲಾಗಿ ; ಆ ಬಳಿಕ ರಾಯನು ಕೆಱೆಯೆಱೆಯಮೇಲೆ ನಡೆದು ಹೋಗಲಾಗಿ, ಅಕ್ಷಣವೇ ಆ ಕೆಱೆ ನೀರು ತುಂಬಿ ಕೋಡಿ ಹರಿದುದನ್ನು ಚಾರುದತ್ತ ಕಂಡು ವಿಸ್ಮಿತನಾಗಿ, ರಾಯನಿಗೆ ವಂದನೆಯಂ ಮಾಡಿ, ಸಕಲವಸ್ತುಗಳಂ ಕೊಡುವ ರತ್ನವಂ ಕೊಟ್ಟು ಕೈಮುಗಿಯಲಾಗಿ : ರಾಯ ಆರತ್ನವಂ ವಿದೂಷಕನಿಗೆ ಕೊಟ್ಟು ಕಳುಹಿಸಿ, ಅಲ್ಲಿಂದ ಇಲ್ಲಿಗೆ ಬಂದು ಸುಖವಾಗಿ ಇದ್ದನು, ಕಣಾ !

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ಪದ್ಮಾವತಿಯೆಂಬ ಪುತ್ತಳಿ ಪೇಳಿದ ಎಂಟನೆಯ ಕಥೆ.

ಒಂಬತ್ತನೆಯ ಕಥೆ.

ಒಂಬತ್ತನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು ಸಿಂಹಾಸನದ ಬಳಿಗೆ ಎಂದಿನಂತೆ ಬಂದು, ರತ್ನಖಚಿತವಾದ ಬಲದಕಾಲಂ ನೀಡುವ ಸಮಯದಲ್ಲಿ, ಆಸೋಪಾನದ ಪ್ರಭಾವತಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ ; ಭೋಜರಾಯನು ಬೇಱಿ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಉಪಕಥೆ :—

ಎಲೆ ಪುತ್ತಳಿಯೇ ಕೇಳು ! ನಮ್ಮ ರಾಜನು ಸುಖರಾಜ್ಯಂಗೆಯ್ಯುವಲ್ಲಿ ಒಂದು ದಿನ ಧಾರಾಪುರದಲ್ಲಿ ರಾಜಬೀದಿಯಲ್ಲಿ ಸ್ವಾರಿ ಬರುವಾಗ ಒಬ್ಬ ಕವೀಶ್ವರ ಕೌಂಕುಳೊಳಗೆ ದೊಡ್ಡದಾದಂಥ [1]ವಸ್ತ್ರವನ್ನು ಇರುಕಿಕೊಂಡು ಬರುವುದಂ ರಾಯಂ ಕಂಡು—ಕಕ್ಷೇಕಿಂ? ಎಂದು ಕೇಳಲು; ಅವಂ—ಮಮಪುಸ್ತಕಂ ಎನ್ನಲಾಗಿ; ರಾಯ—ಕಿಂ ಪುಸ್ತಕಂ? ಎಂದುದಕ್ಕೆ, ಅವಂ ಕಾವ್ಯಪುಸ್ತಕಂ ಸಾರ (?) ಎಂದುದಕ್ಕೆ ರಾಯನು ಮೆಚ್ಚಿ—ಅವನಿಗೆ ಸವಾಲಕ್ಷವರಹವಂ ಕೊಟ್ಟು ಕಳುಹಿಸಿದನು ಕಣಾ! ಎಂದವನಾತಿಗೆ ಪ್ರಭಾವತಿಯೆಂಬ ಪುತ್ತಳಿಯು ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ :—[1]

ಕೇಳೈಯಾ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬ ವಿಪ್ರನು ಬಂದು ರಾಯನ ಎದುರಿಗೆ ತನ್ನ ವಿದ್ಯೆಯಂ ತೋರಿಸಲಾಗಿ; ರಾಯನು ಮೆಚ್ಚಿ ಅವನಿಗೆ ಕೋಟಿ ವರಹವಂ ಕೊಟ್ಟು, ಆಬಳಿಕ—ಎಲೈ, ನೀನು ಯಾವ ದೇಶದಲ್ಲಿ ಚರಿಸಿದೆ? ಎನ್ನಲಾಗಿ; ಅವನು ಕೇಳೈ ಮಹಾರಾಯನೇ ! ನನಗೊಂದು ಬಳಿ ಸಂಚಾರವೇ ? ಎನ್ನಲಾಗಿ; ರಾಯಂ—ನೀನು ಚರಿಸಿದ ಸ್ಥಳಗಳಲ್ಲಿ ಏನತಿಶಯ? ಎನ್ನಲು; ಅವನು—ದರ್ಪಣಾವತಿ ಎಂಬ ಪಟ್ಟಣದಲ್ಲಿ ಕೃಷ್ಣಶರ್ಮನೆಂಬ ದ್ವಿಜನಿಗೆ ಕೋಪಜಂಘೆಯೆಂಬ ಸ್ತ್ರೀ. ಆಕೆಯು ಮಹಾಕೋಪಿಷ್ಠೆಯಾಗಿ ದುರ್ನಡತೆ ನಡೆಯುತಿದ್ದಳು. ಅದ ನಾನು ತಿಳಿದು, ಅವಳ ಮನೆಗೆ ಹೋಗಿ, ಊಟಕ್ಕೆ ಇಕ್ಕು ಎನ್ನಲಾಗಿ: ಆಕೆಯು

ಪಾ—1. ಮಂಚವನ್ನು ಇರಿಸಿಕೊಂಡು ಬರುತ್ತಿರಲು, ರಾಯ— ಕಿಂಪುಸ್ತಕಂ, ಎನ್ನಲು; ಕಾವ್ಯೇಷು ಸಾಮೋದಕಂ ಎನ್ನಲು;–ಈ ಕಥೆ ಬಹಳಕಷ್ಟೆಂದು ತೋರುತ್ತದೆ; ಅರ್ಥವಾಗುವುದಿಲ್ಲ.

ಊಟಕ್ಕೆ ಇಕ್ಕಲು; ನಾನು ಊಟವಂ ಮಾಡಿ, ಆಕೆಯ ಹಟ್ಟಿ ಜಗಲಿಯ ಮೇಲೆ ಮಲಗಿ ಇರಲಾಗಿ; ಅರ್ಧರಾತ್ರಿಯಲ್ಲಿ ಬಂದು ವೀರಪಿಶಾಚಿ ಬಂದು ಆಕೆಯಂ ಹಿಡಿದು ತೆಗೆದುಕೊಂಡು ಹೋಗುವುದ ಕಂಡು, ನಾನೂ ಹಿಂದೆ ಹೋಗಿ ನೋಡಲಾಗಿ; ಅದು ಆಕೆಯ ಸುಡುಗಾಡಿಗೆ ಕೊಂಡು ಹೋಗಿ ಒಂದು ಮರಕ್ಕೆ ಕಟ್ಟಿ ಚಿಮುಟದಿಂದ ಮೈಯ್ಯನ್ನೆಲ್ಲಾ ಕಿತ್ತು ಗಾಯವಂ ಮಾಡಿ ಪುನಃ ಆಕೆಯ ಮನೆಗೆ ತಂದು ಬಿಟ್ಟು ಹೋಯಿತು. ಈ ಮೇರೆಯಲ್ಲಿ ದಿನಚರಿಯಲ್ಲಿ ಆಹೆಣ್ಣುಮಗಳು ಕಷ್ಟಪಡುತ್ತಾಳೆ—ಎಂದುದ ಕೇಳಿ, ರಾಯನು—ಅದ ನೋಡಬೇಕೆಂದು, ಅವನ ಕರೆದುಕೊಂಡು, ಆಕಾಶ ಮಾರ್ಗದಲ್ಲಿ ಆಪಟ್ಟಣಕ್ಕೆ ಹೋಗಿ, ಅವಳ ಮನೆಗೆ ಈರ್ವರೂ ಹೋಗಿ, —ಊಟಕ್ಕೆ ಇಕ್ಕು ಎನ್ನಲು; ಅವಳು ಊಟಕ್ಕೆ ಇಕ್ಕಲಾಗಿ ; ಇಬ್ಬರೂ ಊಟಮಾಡಿ ಅಲ್ಲಿ ಮಲಗಿರಲಾಗಿ ; ಸಮರಾತ್ರಿಯಲ್ಲಿ ಯಥಾಪ್ರಕಾರಕ್ಕೆ ಆವೀರಪಿಶಾಚಿಯು ಬಂದು ಅವಳ ತೆಗೆದುಕೊಂಡು ಹೋಗಿ, ಮರಕ್ಕೆ ಕಟ್ಟಿ, ಚಿಮುಟದಲ್ಲಿ ಕೀಳುವುದ ರಾಯಂ ಕಂಡು, ಇಬ್ಬರ ನಡುವೆ ಹೊಕ್ಕು, ಅದರ ಕೈಯಲ್ಲಿದ್ದ ಚಿಮುಟವಂ ಕಿತ್ತುಕೊಳ್ಳಲಾಗಿ ; ಆವೀರಪಿಶಾಚಿಯು ಅತಿ ಕೋಪದಿಂದ ಬಂದು, ರಾಯನನ್ನು ಶೂಲದಿಂದ ತಿವಿಯಲು ; ರಾಯನು ಅದನ್ನು ಕಿತ್ತುಕೊಂಡು ಮುರಿದುಹಾಕಿ, ಅದರ ಕೂಡೆ ಸೆಣಸಿ ಅದನ್ನು ಸಂಹರಿಸಲಾಗಿ ; ಅವಳು ಅದ ನೋಡಿ ರಾಯನಿಗೆ ನಮಸ್ಕಾರವಂ ಮಾಡಿ—ಎಲೈ ಮಹಾಪುರುಷನೇ! ಈದಿನ ನಿನ್ನಿಂದ ನನ್ನ ಬಾಧಕ ಬಿಟ್ಟಿತು. ನಾನು ನಿನ್ನ ಹೊಟ್ಟೆಯಲ್ಲಿ ಬಂದವಳು ಎಂದು ನಮಸ್ಕರಿಸಿ ನಿಲ್ಲಲಾಗಿ ; ರಾಯನು—ನಿನಗೀಮೇರೆಯಲ್ಲಿ ಬರ ಕಾರಣವೇನು ? ಎಂದು ಕೇಳಲಾಗಿ; ಅವಳು—ನನ್ನ ಪತಿಕೃಷ್ಣಶರ್ಮನ ಸೇವೆಯ ಮಾಡದೆ ಮೀರಿ ನಡೆದುದರಿಂದ, ಪತಿಯು ಕೋಪಿಸಿ, ಕಿಡಿಕಿಡಿಯಾಗಿ ವೀರಪಿಶಾಚಿಯಂ ಕರೆದು ನನ್ನ ಒಪ್ಪಿಸಲಾಗಿ; ಅದರಿಂದದು ನಿತ್ಯ ಹೀಗೆ ಬಾಧಿಸುತಲಿದ್ದಿತು. "ಪತಿದ್ರೋಹಿಗೆ ಇಹಪರವಿಲ್ಲ" ಎಂದು ಹೇಳಿ, ಅಬಳಿಕ-ಕೇಳೈ. ನಿನ್ನಂಥ ವೀರ ಪುರುಷ ಸ್ವರ್ಗಮರ್ತ್ಯಪಾತಾಳದಲ್ಲಿಯೂ ಇಲ್ಲ ಎಂದು ಕೊಂಡಾಡಿ, —ಒಡೆದ ಕೆರೆಯ ಕಟ್ಟಿದಂತೆ ನನ್ನ ಪತಿಯಲ್ಲಿ ಒಡಗೂಡಿಸಬೇಕು, ಎಂದು ಬಹುಬಗೆಯಲ್ಲಿ ಬೇಡಿಕೊಳ್ಳಲಾಗಿ; ರಾಯನು ಕರುಣಚಿತ್ತನಾಗಿ, ಕೃಷ್ಣ

ಶರ್ಮನ ಬಳಿಗೆ ಹೋಗಿ, ಆತನ ನಾನಾಪ್ರಕಾರದಿಂದ ಬಡಂಬಡಿಸಿ, ಅವನ ಕರೆತಂದು, ರೋಮಜಂಘೆಯಲ್ಲಿ ಕೂಡಿಸಿ,—ಇನ್ನು ನೀನು ನಿನ್ನ ಮನವಂಚನೆಯಿಲ್ಲದೆ ಪತಿಸೇವೆಯಂ ಮಾಡಿಕೊಂಡು ಇರು ಎಂದು ಅವಳಿಗೆ ಬುದ್ಧಿಗಲಿಸಿ,—ಇಂಥ ದುರ್ನಡತೆಯನ್ನು ಮನಸ್ಸಿನಲ್ಲಿ ಇರಿಸಲಾಗದು ಎಂದು ಆತನಿಗೂ ಹೇಳಿ, ಇವರ್ವರನ್ನೂ ಒಂದುಮಾಡಲಾಗಿ; ಆ ಕೃಷ್ಣಶರ್ಮರಾಯ ಇವನಿಗೆ ಹದಿನೆಂಟು ಪೆಟ್ಟಿಗೆಯ ದ್ರವ್ಯವಂ ಕೊಡಲು, ಅದನ್ನು ಸಂಗಡ ಇದ್ದ ಬ್ರಾಹ್ಮಣನಿಗೆ ಕೊಟ್ಟು ಕಳುಹಿಸಿ, ಅಲ್ಲಿಂದ ಇಲ್ಲಿಗೆ ಬಂದು ಸುಖವಾಗಿಇದ್ದನು ಕಣಾ!

ಇಂತು ಕರ್ಣಾಟಭಾಷಾವಿರಚಿತವಾದ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಪ್ರಭಾವತಿಯೆಂಬ ಪುತ್ತಳಿ ಪೇಳಿದ ಒಂಬತ್ತನೆಯ ಕಥೆ.

ಹತ್ತನೆಯ ಕಥೆ.

ಹತ್ತನೆಯ ದಿವಸದಲ್ಲಿ ಭೋಜರಾಜನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲ ತೀರಿಸಿಕೊಂಡು ಎಂದಿನಂತೆ ಚಿತ್ರಶರ್ಮನ ಕೈಲಾಗಿನಲ್ಲಿ ಸಿಂಹಾಸನದ ಬಳಿಗೆ ಬಂದು ಬಲದ ಕಾಲಂ ನೀಡುವ ಸಮಯದಲ್ಲಿ ಆ ಸೋಪಾನದ ವಿಷ್ಣುವಂದಿನಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ, ಭೋಜರಾಜನು ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ.—

ಎಲೆ ಪುತ್ತಳಿಯೇ, ಕೇಳು. ನಮ್ಮ ಭೋಜರಾಯನು ಧಾರಾಪುರದಲ್ಲಿ ಸುಖರಾಜ್ಯಗೆಯ್ಯುವಲ್ಲಿ ಒಂದುದಿನ ಜಲಕ್ರೀಡೆಗಾಗಿ ರಾಯನು ಹೊಱಟು, ತನ್ನ ಸಂಗಡ ಪಟ್ಟದರಸಿಯರು ಬಂಗಾರದ ಸ್ತ್ರೀಯರು ಪರಿಚಾರಕ ವನಿತೆಯರು ಸಹಿತ ಶೃಂಗಾರತೋಟದ ಸರೋವರದಲ್ಲಿ ತರತರದಿಂದ ಜಲಕ್ರೀಡೆಯಾಡಿ, ಮೇಲೆ ಬರುವಲ್ಲಿ; ಅಲ್ಲೊಂದು ತಾವರೆಯ ಮೊಗ್ಗ ಕಂಡು, ಇದಕ್ಕೊಂದು ಶ್ಲೋಕ ಹೇಳಿಸಬೇಕೆಂದು ಮನಸ್ಸಿನಲ್ಲಿ ಯೋಚಿಸಿ ಅರಮನೆಗೆ ಬಂದು, ಆ ಮಱುನೆಯ ದಿವಸ ವರರುಚಿ ಮುಂತಾದ ಕವಿಗಳು ಮಂತ್ರಿಗಳು ಸಹಿತವಾಗಿ ಓಲಗಶಾಲೆಯಲ್ಲಿ ಕುಳಿತಿರುವಲ್ಲಿ—ರಾಯನು ಇಂತೆಂದನು:—

"ಕುಸುಮೇ ಕುಸುಮೋತ್ಪತ್ತಿಃ ಶ್ರೂಯತೇ ನ ಚ ದೃಶ್ಯತೇ"

ಎಂದು ಬಂದು ಪದ್ಯದ ಅರ್ಧ ಹೇಳಿ,—ಈ ಸಮಸ್ಯೆ ಪೂರ್ತಿಮಾಡಿ ಎನ್ನಲಾಗಿ; ಪೂರ್ತಿಮಾಡಿ ಯಾರೂ ಹೇಳದೇ ಇರುವುದ ಸಮ್ಮುಖದ ಶೃಂಗಾರವಿಳಾಸಿನಿಯೆಂಬ ಸೂಳೆಯು ಕಂಡು, ರಾಯನಿಗೆ ಕೈಮುಗಿದು, —ಇದ ನಾನು ಪೂರ್ತಿಮಾಡುವೆನೆಂದು ಆಚರಣವನ್ನು ಬಂದು ಹಲಗೆಯ ಮೇಲೆ ಬರೆದು ತಂದು, ತಾನು ಮಲಗುವ ಮನೆಯ ಮಂಚದ ಬಳಿಯಲ್ಲಿ ಇರಿಸಿರಲು; ಅಷ್ಟರಲ್ಲೇ ಕಾಳಿದಾಸ ಬರಲಾಗಿ, ಆತನ ಪಾದವ ತೊಳೆದು, ಕರೆದುಕೊಂಡು ಹೋಗಿ, ಮಂಚದ ಮೇಲೆ ಕುಳ್ಳಿರಿಸಿ, ಆಗ ಅವನಿಗೆ ಸುಗಂಧವಂ ಲೇಪಿಸಿ, ಪುಷ್ಪವಂ ಮುಡಿಸಿ, ತಾಂಬೂಲವನಿತ್ತು ಸಂತೋಷಪಡಿಸಿ, ಅವಳು ಈಚೆಗೆ ಬರಲಾಗಿ; ಕಾಳಿದಾಸನು ಅಲ್ಲಿ ಇರಿಸಿರುವ ಹಲಗೆಯಂ ತೆಗೆದುಕೊಂಡು, ಅದರಲ್ಲಿ ಬರೆದಿರುವ ಶ್ಲೋಕಾರ್ಧವನೋದಿ ನೋಡಿ ಬದಲು ಚರಣವಂ ಬರೆದನು. ಅದೇನೆಂದರೆ:—

* "ಕುಸುಮೇ ಕುಸುಮೋತ್ಪತ್ತಿಃ ಶ್ರೂಯತೇ ನ ಚ ದೃಶ್ಯತೇ ‖

ಎಂದು ಬರೆದಿದ್ದ ಪೂರ್ವಾರ್ಧಕ್ಕೆ

"ಬಾಲೇ ತವ ಮುಖಾಂಭೋಜೇ ದೃಷ್ಟಮಿಂದೀವರದ್ವಯಂ ‖

ಎಂದು ಉತ್ತರಾರ್ಧವಂ ಬರೆದು, ಸಮಸ್ಯೆಯ ಪೂರ್ತಿಮಾಡಿ ಇರಿಸಲಾಗಿ; ಆವೇಶಿಯು ಬಂದು, ಹಲಗೆಯ ಓದಿ ನೋಡಿ, ತಿಳಿದುಕೊಂಡು —ಇದು ಪುರುಷ ಸ್ತ್ರೀಗೆ ಹೇಳಿದಂತಿದೆ. ಇದ ಹೀಗೆ ಕೊಂಡುಹೋಗಿ ರಾಯನಿಗೆ ತೋರಿಸಿದರೆ ಕಾಳಿದಾಸ ಹೇಳಿದುದು ಎಂದು ತಿಳಿವನು—ಎನುತ್ತ ಯೋಚಿಸಿ, ಕಾಳಿದಾಸ ಮರೆತು ಮಲಗಿ ನಿದ್ರೆಗೆಯ್ಯುವಾಗ, ಅವಳಿಗೆ ಕಾಳಿದಾಸನ ಮೇಲೆ ದ್ವೇಷಹುಟ್ಟಿ, ದೊಡ್ಡದೊಂದು ಕಲ್ಲ ತಂದು ತಲೆಯ

---

* ಟೀಕು—ಕುಸುಮೇ = ಪುಷ್ಪದಲ್ಲಿ, ಕುಸುಮೋತ್ಪತ್ತಿಃ = ಪುಷ್ಪದ ಹುಟ್ಟೋಣವು, ಉಂಟೆಂದು, ಶ್ರೂಯತೇ = ಕಿವಿಯಿಂದ ಕೇಳಲ್ಪಡುತ್ತದೆ; ನಚದೃಶ್ಯತೇ = ಕಣ್ಣಿನಿಂದ ನೋಡಲ್ಪಡುವುದಿಲ್ಲ; ಅದೇನು? ಎಂದು ಸಮಸ್ಯೆ. ಅದಕ್ಕೆ ಉತ್ತರ —"ಎಲೆ ಬಾಲೆಯೇ, ತವ ಮುಖಾಂಭೋಜೇ = ನಿನ್ನ ಮುಖವೆಂಬ ತಾವರೆಯ ಪುಷ್ಪದಲ್ಲಿ, ಇಂದೀವರದ್ವಯಂದೃಷ್ಟಂ = ಕಣ್ಣುಗಳೆಂಬ ಎರಡು ಕನ್ನೈದಿಲೆ ಪುಷ್ಪಗಳು ನೋಡಲ್ಪಟ್ಟುವು—ಎಂದು ಕೇಳಿದುದಲ್ಲದೆ ನೋಡುತ್ತಲೂ ಇದ್ದೇವೆ ಎಂದು ಅಭಿಪ್ರಾಯ.

ಮೇಲೆ ಎತ್ತಿಹಾಕಿ, ಜೀವ ಕೊಂದು, ತನ್ನ ಹಿತ್ತಿಲ ಬಳಿಯಲ್ಲಿ, ಆಹೆಣವನ್ನು ತಿಪ್ಪೆಯಲ್ಲಿ ಸುತ್ತಿರಿಸಿ, ಆಬಳಿಕ ಹಲಗೆಯಲ್ಲಿ ಬರೆದಿದ್ದ "ಬಾಲೇ" ಎಂಬ ಅಕ್ಷರವನ್ನು ತೆಗೆದು "ರಾಜ್ಞ" ಎನ್ನುವ ಅಕ್ಷರ ಬರೆದುಕೊಂಡು ಇರಿಸಿದಳು. ಅದುಕಾರಣ ಸೂಳೆಯರು, ಮುಂದೆ ಮೋಹದಿಂದ ಬೆರಸುವವರ ಮನಸ್ಸಿಗೆ ತಕ್ಕಹಾಗೆ ಇರುವರು; ಕೊನೆಗೆ ಕೊರಲ ಹರಿವರು—ಎಂಬ ನೀತಿಲಕ್ಷಣವು ವೇಶಿಯರಿಗುಂಟಾದುದಱಿಂದ ಕಾಳಿದಾಸನ ಕೊಂದು, ಹಲಗೆಯಂ ತಂದು, ರಾಯನಿಗೆ ಕೊಡಲಾಗಿ ; ರಾಯನು ಅದಂ ಓದಿನೋಡಿಕೊಂಡು,-"ಸ್ತ್ರೀ ಪುರುಷನಿಗೆ ಹೇಳಿದಂತಿದೆ. ಹಲಗೆ ಹೊಲಸು ಹೊಡೆಯುತಿದೆ. ಕಾಳಿದಾಸ ಹೇಳಿ ಬರೆದುದ ತಿದ್ದಿ ಬರೆದು ತಂದೆಯೋ ? ಕಾಳಿದಾಸನ ಕೊಂದೆಯೋ ? ಜೀವದಲ್ಲಿದ್ದಾನೆಯೋ ? ನಿಜವಾಗಿ ಹೇಳು," ಎಂದು ರಾಯನು ಗರ್ಜಿಸಿ ಕೇಳಲಾಗಿ ; ಅವಳಿಗೆ ಕಂಪನ ಹುಟ್ಟಿ ಅಡ್ಡಬಿದ್ದು,—ನನ್ನ ಅಪರಾಧ ಪಾಲಿಸಬೇಕೆಂದು ಕೇಳಿಕೊಂಡು—ಕೊಂದೆನು ಎನ್ನಲಾಗಿ ; ರಾಯನು ಕೇಳಿ—ಶಿವಶಿವಾ ! ನಿನ್ನಂಥ ಬ್ರಹ್ಮಹತ್ಯವ ಮಾಡಬಹುದೇ ! ಕಾಳಿದಾಸನು ಹೋದನೇ ! ನನ್ನ ದೇಹ ಏತಕ್ಕೆ ? ಆತನು ಸತ್ತಬಳಿಕ ಈದೊರೆತನವೇಕೆ?—ಎಂದು ಆಕ್ಷಣವೇ ಅಗ್ನಿಕೊಂಡವಂ ತೆಗೆಸಿ, ಅದಱಲ್ಲಿ ಬೆಂಕಿ ಹಾಕಿಸಿ, ರಾಯನು ಶುಚಿರ್ಭೂತನಾಗಿ ಅಗ್ನಿಪ್ರವೇಶಕ್ಕೆ ಹೊಱಡುವುದನ್ನು ಪ್ರಧಾನರು ಮುಂತಾಗಿ ಎಲ್ಲರೂ ಕಂಡು—ಎಲೈ ರಾಯನೇ ! ಒಬ್ಬ ಕವಿಗೋಸ್ಕರ ನೀನು ಅಗ್ನಿಗೆ ಬೀಳುವುದುಂಟೇ! ಎಂದು ನಾನಾತೆಱದಲ್ಲಿ ಬಡಂಬಡಿಸಿ, ತಿಳಿಯ ಹೇಳಿದರೂ ಕೇಳದೆ, ರಾಯನು ಅನೇಕ ದಾನ ಧರ್ಮಗಳನ್ನು ಮಾಡಿ, ಅಗ್ನಿಕೊಂಡವನ್ನು ಪ್ರದಕ್ಷಿಣ ಬಂದು, ಸಾಕ್ಷಿಯ ಕಲ್ಲ ಮೇಲೆ ನಿಂತು,—ಜನ್ಮಜನ್ಮಾಂತರಕ್ಕೂ ಕಾಳಿದಾಸನ ಸ್ನೇಹವ ಕೊಡು ಪರಶಿವನೇ! ಎಂದು ನುಡಿದು, ಬೀಳುವ ವೇಳೆಯಲ್ಲಿ—ಪರಮೇಶ್ವರನು ಪ್ರಸನ್ನನಾಗಿ—ಎಲೈ ರಾಯನೇ ! ನಿನ್ನ ಮನೋನಿಶ್ಚಯಕ್ಕೆ ಮೆಚ್ಚಿದೆನು. ನಿನಗೆ ಬೇಕಾದ ವರವನ್ನು ಬೇಡಿಕೋ ಎನ್ನಲಾಗಿ; ರಾಯನು-ಎಲೈ ಸ್ವಾಮಿಯೆ ! ನನಗೆ ಕಾಳಿದಾಸನ ಜೀವವ ಪಾಲಿಸು ಎನ್ನಲಾಗಿ ; ಪರಮೇಶ್ವರನು ಕಾಳಿದಾಸನ ಜೀವವ ಕೊಟ್ಟು ಮಾಯವಾದನು. ಆಬಳಿಕ ಕಾಳಿದಾಸ ಎದ್ದು ರಾಯನ ಬಳಿಗೆ ಬರಲಾಗಿ, ರಾಯನು ಕಂಡು ಆಲಿಂಗನವ ಮಾಡಿಕೊಂಡು,

ಅತಿ ಸಂತೋಷದಿಂದ ಭೂರಿದಾನವನ್ನು ಕೊಟ್ಟು, ಆವೇಶಿಯನ್ನು ಕರೆದು— ಸವಾಲಕ್ಷ ಹೊನ್ನಿಗಾಗಿ ಕಾಳಿದಾಸನ ಕೊಂದೆ. ಅವನಿಗಾಗಿ ನಿನ್ನನ್ನು ಮನ್ನಿಸಿರುವೆನು. ಮುಂದೆ ಇಂಥ ದುರ್ಬುದ್ಧಿ ಮಾಡಿದರೆ ತಕ್ಕ ಶಿಕ್ಷೆ ಮಾಡಿ ಸುವೆ—ಎಂದು ಹೇಳಿ ಅವಳಿಗೆ ಸವಾಲಕ್ಷವರಹವ ಕೊಟ್ಟು ಕಳುಹಿಸಿದನು, ಕಣಾ ! ಎಂದ ಮಾತಿಗೆ ವಿಷ್ಣುವಂದಿನಿಯೆಂಬ ಪುತ್ಥಳಿಯು ನಗುತ್ತ ಹಾಸ್ಯಂ ಗೈದು ಹೇಳಿದ ಉಪಕಥೆ:—

ಕೇಳೆಯ್ಯಾ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯ ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದುದಿನ ಒಬ್ಬ ಸಿದ್ಧನು ವಿಭೂತಿಯಂ ಪೂಸಿ, ರುದ್ರಾಕ್ಷಿಸರವಂ ಧರಿಸಿ, ಕೌಂಕುಳಲ್ಲಿ ಜೋಗವಟ್ಟಿಗೆಯನಿರುಕಿ, ಗೆಜ್ಜೆಕಪನಿಯಂ ಪೊದೆದು, ಕೈಯಲ್ಲಿ ಪುಸ್ತಕ ದಂಡಕೋಲ ಪಿಡಿದು, ರಾಯನೆದುರಿಗೆ ಬಂದು ಇಂತೆಂದನು:—ಎಲೈ ಮಹಾರಾಯನೇ ! [1]ಉದಾರ ಕೀರ್ತಿ ಪರಪುರುಷಾರ್ಥ ಮೊಂತಾದ ನಿನ್ನ ಸಕಲ ಸದ್ಗುಣವಂ ಕೇಳಿ,[1] ನಿನಗೆ ಅತಿಶಯವಾದುದೊಂದು ವಸ್ತುವಂ ಕೊಡಬೇಕೆಂದು ಬಂದೆನು ಎನ್ನಲಾಗಿ ; ರಾಯನು—ಅದೆಂಥ ವಸ್ತು ? ಕೊಡು, ಎಂದುದಱಿಂದ. ಅವನಿಂತೆಂದನು:— "ನಾನು ಜಂಬೂದ್ವೀಪಕ್ಕೆ ಹೋಗಿ, ಪುಷ್ಕರ, ನರ್ಮದೆ, ಯಮುನೆ, ಗೋದಾ ವರಿ, ಗೋಮುಖಿ, ತುಂಗಭದ್ರೆ, ದ್ವಾರಾವತಿ, ಗಯ, ಪ್ರಯಾಗ, ಬದರಿ, ಕಾಶಿ, ಕನ್ಯಾಕುಮಾರಿ, ಸೇತುಬಂಧ, ರಾಮೇಶ್ವರ, ಸಿಂಧು, ಸರಸ್ವತಿ ಮೊಂ ತಾದ ಅನೇಕ ತೀರ್ಥಗಳಲ್ಲಿ ಸ್ನಾನಮಾಡಿ, ಸಕಲದೇವರ ದರ್ಶನಂಗೆಯ್ದು ಬರುತ್ತ ಇರಲಾಗಿ; ಒಂದು ಘೋರವಾದ ಸ್ಥಳದಲ್ಲಿ ಭಾಳಲೋಚನ ನೆಂಬ ಸಿದ್ಧನಂ ಕಂಡು ಆತನಲ್ಲಿ ಅಮರತ್ವ ಪಡೆವ ಮಂತ್ರಮಂ ಕಲಿತಿರು ವುದ ನಿನಗುಪದೇಶವಂ ಮಾಡುವೆನು. ಅದಱಿಂದ ನೀನು ಅಮರತ್ವವ ಪಡೆ" ಎನ್ನಲಾಗಿ ಆಮಾತಿಗೆ ರಾಯ ಊರ ಹೊಱಗಿರುವ ಕಾಳಿಕಾದೇವಿ ಯೆದುರಾಗಿ ಬಂದು ಮಾಸ ಹೋಮವಂ ಮಾಡಲಾಗಿ, ಆಹೋಮಕೊಂ ಡದಲ್ಲಿ ಒಂದು ಮಾವಿನ ಹಣ್ಣು ಹುಟ್ಟಿದುದಱಿಂದ ಆಹಣ್ಣಂ ತೆಗೆದುಕೊಂಡು

ಪಾ—1. ಸಮಸ್ತ ಗುಣಗಳಲ್ಲಿ ಕೀರ್ತಿಯಲ್ಲಿ ಉದಾರತ್ವದಲ್ಲಿ ಪುರುಷಾರ್ಥಕ್ಕೆ ಮೊದಲಾಗಿ ಸಕಲ ಕಲೆಗಳಲ್ಲಿ ಪರಿಪೂರ್ಣನೆಂಬುದನ್ನು ಎಲ್ಲರ ಕೈಯಲ್ಲಿ ಕೇಳಿ.

ರಾಯನೂ ಸಿದ್ಧನೂ ರಾಜಬೀದಿಯಲ್ಲಿ ಬರುವಾಗ ಒಬ್ಬ ಕುಷ್ಠರೋಗಿ ರಾಯನಂ ಕಂಡು—ಎಲೈ ಮಹಾರಾಯನೇ! ನಾನು ಗರುಡನ ಧ್ವನಿಗೆ ಶೇಷನು ಬಳಲಿದಂತೆ ಈರೋಗದಿಂದ ಕಷ್ಟಪಡುತ್ತ ಇದ್ದೇನೆ. ಈ ದಿನ ನನ್ನ ಶ್ರಮ ನಿನ್ನ ಸಂದರ್ಶನದಿಂದ ರಸ ಮುಟ್ಟಿದ ಲೋಹದಂತೆ ಇರಬೇಕು, ಎನ್ನಲಾಗಿ; ಅವನ ಮಾತಿಗೆ ರಾಯನು ಹೋಮಕೊಂಡದಲ್ಲಿ ಹುಟ್ಟಿದ ಮಾವಿನ ಹಣ್ಣಂ ಕೊಡಲು; ಆಗ ಅವನ ರೋಗವು ಹೋಗಿ ಶರೀರ ಸುವರ್ಣವಾಗಲಾಗಿ; ಆಬಳಿಕ ಅರಮನೆಗೆ ಬಂದು ಆ ಸಿದ್ಧನಿಗೆ ಹತ್ತು ಸಾವಿರ ವರಹನಂ ಕೊಟ್ಟು ಕಳುಹಿಸಿ, ತಾನು ಸುಖವಾಗಿ ಇದ್ದನು, ಕಣಾ! ಇಂಥ ವೀರ ವಿತರಣವುಳ್ಳೊಡೆ ಸಿಂಹಾಸನವನೇರು, ಇಲ್ಲವೆ ಕೆಲಸಾರು.

ಇಂತು ಕರ್ಣಾಟಭಾಷಾವಿರಚಿತವಾದ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ವಿಷ್ಣುವಂದಿನಿಯೆಂಬ ಪುತ್ಥಳಿ ಪೇಳಿದ ಹತ್ತನೆಯ ಕಥೆ.

ಹನ್ನೊಂದನೆಯ ಕಥೆ.

ಹನ್ನೊಂದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವನ್ನು ತೀರಿಸಿಕೊಂಡು ಎಂದಿನಂತೆ ಸಿಂಹಾಸನದ ಬಳಿಗೆ ಬಂದು ಬಲಗಾಲಂ ನೀಡುವ ಸಮಯದಲ್ಲಿ, ಆ ಸೋಪಾನದ ಅನಂಗಜೆಯೆಂಬ ಪುತ್ಥಳಿಯು ಧಿಕ್ಕರಿಸಲಾಗಿ, ಭೋಜರಾಯನು ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಹೇಳಿಸಿದ ಕಥೆ :—

[1] ಎಲೆ ಪುತ್ಥಳಿಯೇ, ಕೇಳು. ನಮ್ಮ ಭೋಜರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುವಲ್ಲಿ ಒಂದು ದಿನ ಒಬ್ಬ ಮುನೀಶ್ವರನು ಪುಲಿಯ ತೊವಲಂ ಪೊದೆದು, ಹಾವುಗೆಯಂ ಮೆಟ್ಟಿ, ಜಡೆಗಳಂ ಬಿಟ್ಟು, ದಂಡಕೋಲು ಕಮಂಡಲುವಂ ಪಿಡಿದು, ರಾಯನ ಎದುರಿಗೆ ಬಂದು, ಆಶೀರ್ವಾದವಂ ಮಾಡ

ಪಾ—1. ಎಲೆ ಪುತ್ಥಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ದೊರೆತನವಂ ಮಾಡುತ್ತ ಒಂದುದಿನ ಒಡ್ಡೋಲಗಂಗೊಟ್ಟು ಕುಳಿತಿರುವ ಸಮಯದಲ್ಲಿ ಕಾಳಿದಾಸ ವರರುಚಿ ಮೊದಲಾದ ವಿದ್ವಾಂಸರು ಕುಳಿತಿರಲು; ರಾಯ ಕವೀಶ್ವರರೊಳು "ಕಿಂಭುಕ್ತಮಭುಕ್ತಂ" ಎಂಬ ಎರಡು ಸಮಸ್ಯೆ ಪೇಳಿ, ಇದಕ್ಕೆ

ಲಾಗಿ ; ರಾಯ ಆ ಮುನಿಯ ಸಕಲ ಉಪಚಾರದಿಂದ ಉಪಚರಿಸಿ—ಏನು ದಯೆಮಾಡಿದಿರಿ? ಎಂದು ಕೇಳಲಾಗಿ ; ಆ ಮುನಿ—ಎಲೈ ರಾಯನೇ! ನಿನ್ನ ಸಾಧ್ವಿ ಈ ಲೋಕದಲ್ಲಿ ರವಿಯೋಪಾದಿ ವ್ಯಾಪಿಸಿ ಇರುವುದರಿಂದ ನಿನ್ನ ಕಾಣಬೇಕೆಂದು ಬಂದೆನು, ಎಂದ ಮಾತಂ ಕೇಳಿ, ರಾಯನು ಮೆಚ್ಚಿ, ಆ ಮುನಿಗೆ ಸವಾಲಕ್ಷದ್ರವ್ಯವಂ ಕೊಟ್ಟು ನಮಸ್ಕಾರವಂ ಮಾಡಿ ಕಳುಹಿದನು ಕಣಾ!—ಎಂದ ಮಾತಿಗೆ[1] ಅನಂಗಜೆಯೆಂಬ ಪುತ್ತಳಿಯು ತಲೆದೂಗಿ ನಗುತ್ತ, ಹಾಸ್ಯಂಗೈದು ಪೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುತ್ತ ಇರುವಲ್ಲಿ, ಒಂದು ದಿನ ಕಿರಾತನು ಗಜದಕೊಂಬು, ಕೃಷ್ಣಾಜಿನ, ಆಣಿಮುತ್ತು, ಚಾವರಿಸಹ ತಂದು, ರಾಯನಿಗೆ ಕಾಣಿಕೆಯನ್ನಿರಿಸಿ, ಕೈಮುಗಿದು ಇಂತೆಂದನು:—ಎಲೈ ಮಹಾರಾಯನೇ! ವನಾಂತರದಲ್ಲಿ ಕ್ರೂರಮೃಗಗಳ ಬಾಧಕವಾಗಿದೆ. ಅದ ತಪ್ಪಿಸಬೇಕೆಂದು ಬಿನ್ನೈಸಲಾಗಿ ; ರಾಯನು ಕೇಳಿ ಆಕ್ಷಣವೇ ಬಲೆಗಳು, ಕಣ್ಣಿಗಳು, ನಾಯಿಗಳು ಮೊದಲಾದುವನ್ನು ಸನ್ನಾಹಮಾಡಿಸಿಕೊಟ್ಟು, ಸಿಂಹ ಶಾರ್ದೂಲ ಮೊದ

ಅರ್ಥವ ಪೇಳಿ ಎಂದು ಬೆಸಗೊಳ್ಳಲು ; ವರರುಚಿ ಇಂತೆಂದನು—ಎಲೈ ರಾಯನೇ! ನಾನು ದೇಶಾಂತರಕ್ಕೆ ಪೋದಲ್ಲಿ, ಪುಂಡರೀಕವೆಂಬ ಪಟ್ಟಣದಲ್ಲಿ ಸಿಂಹಸೇನನೆಂಬ ಅರಸು ರಾಜ್ಯಂಗೆಯ್ಯುತ್ತಿದ್ದನು. ಆತಂ ಲೋಭಿಗಳಲ್ಲಿ ಹೆಚ್ಚಾದವನು. ಯಾರಿಗೂ ಏನನ್ನೂ ಕೊಟ್ಟಂಥವನಲ್ಲ. ಆತನು ತನ್ನ ಹೆಂಡತಿಗೆ ಅನ್ನವನು, ತನ್ನ ಓಲೈಸಿದವರಿಗೆ ಸಂಬಳವನು ಸಹ ಕೊಡನು. ಯಾವುದಕ್ಕೂ ಹೇಸನು. ಹುಸಿಗೆ ಪಿಸುಣಕ್ಕೆ ಭಂಡಾರವಾಗಿರ್ಪನು. ದುರ್ಮಾರ್ಗ. ಒಬ್ಬನೆ ಊಟಮಾಡುವನು. ಭೂತಬಲಿಗಳ ಕೊಡನು. ಎಂಜಲ ಕೈಯಿಂದ ಕಾಗೆಯ ಹೊಡೆಯನು. ತ್ಯಾಗ ಕೊಡನು. ನೀರು ಮಜ್ಜಿಗೆಯನ್ನೂ ಸಹ ಯಾರಿಗೂ ಇಕ್ಕದೆ, ನಾಯಂತೆ ಬಗುಳುತ್ತ ಮನೆಯ ಹೊಗುವ ಯಾಚಕರ ಗದರಿಸುತ್ತ, ತಾನೆ ಉಂಬನು. ಇಂಥವನ ಭೋಜನ "ಅಭುಕ್ತ" ಎನಿಸುವುದು. ಮತ್ತೀ ಆತನ ಜನ್ಮ ವ್ಯರ್ಥವು. ಇನ್ನು "ಭುಕ್ತ" ಎಂಬುದು ಏನು? ಎಂದರೆ—ದಾನಧರ್ಮ ಪರೋಪಕಾರವಾಗಿ ಮಕ್ಕಳು ನಂಟರು ಸ್ನೇಹಿತರು ಹೆಂಡತಿ ಒಡಹುಟ್ಟಿದರು ಪರದೇಶಿಗಳು ಎಲ್ಲರಿಗೂ ಅನ್ನವಂ ಕೊಡಿಸಿ ಉಂಬುವನ ಊಟವೀಗ "ಭುಕ್ತ" ಎನಿಸುವುದು—ಎಂದು ವರರುಚಿ ಪೇಳಲು ; ರಾಯಂ ಕೇಳಿ ಮೆಚ್ಚಿ ಸವಾಲಕ್ಷವರಹವಂ ಕೊಟ್ಟನು ಕಣಾ!—ಎಂದು ಒಂದು ಪ್ರತಿಯಲ್ಲಿ ಬದಲಾಗಿ ಇದೆ.

ಲಾದ ಮೃಗಯಾತ್ರೆ ಮಾಡುತಿರುವಲ್ಲಿ—ಸ್ಥಿರಂಜೀವಿ ಎಂಬ ಗಿಣಿಯು ತನ್ನ ಸಮೂಹಸಮೇತವಾಗಿ ಗಗನದಲ್ಲಿ ಬರುತ್ತ ಇಂತೆಂದುದು :—ಎಲೈ ಮಹಾರಾಯನೇ ! ಕಳಿಂಗ ದೇಶದಲ್ಲಿ ಚಂಪಕಾಪುರವೆಂಬ ಅಗ್ರಹಾರದಲ್ಲಿರುವ ಮಹಾಜನಂಗಳ ಒಬ್ಬ ರಾಕ್ಷಸ ಬಕನಂತೆ ದಿನಂಪ್ರತಿ ಒಬ್ಬರೊಬ್ಬರ ತಿನ್ನುವುದ ನಾನು ಕಂಡು ಇರುವೆ—ಎಂದ ಗಿಣಿಯ ಮಾತ ಕೇಳಿ, ರಾಯನು ವಿಸ್ಮಿತನಾಗಿ, ಅದನ್ನು ನೋಡಬೇಕೆಂದು ಆಕಾಶಮಾರ್ಗದಲ್ಲಿ ಅಲ್ಲಿ ಹೋಗಿ, ನೋಡುವಲ್ಲಿ—ಆ ರಾಕ್ಷಸನು ಆಹಾರನಿಮಿತ್ತ ಒಬ್ಬ ಬ್ರಾಹ್ಮಣ ಹೋಗುವುದ ಕಂಡು, ಅವನ ಸಂಗಡ ತಾನು ಹೋಗುತ್ತ,—ಎಲೈ ಬ್ರಾಹ್ಮಣ ! ಎಲ್ಲಿ ಹೋಗುತ್ತೀಯೆ ? ಎನ್ನಲಾಗಿ; ಅವನು ರಾಕ್ಷಸನ ವೃತ್ತಾಂತವಂ ತಿಳಿಸಲಾಗಿ; ರಾಯ ಆವನ ಹೆದಱದಿರೆಂದು ಹಿಂದೆ ನಿಲ್ಲಿಸಿ, ಮುಂದಕ್ಕೆ ತಾನು ಹೋಗುತ್ತ ಇರುವಲ್ಲಿ—ಆರಾಕ್ಷಸನು ಅರ್ಭಟಿಸಿ ಕುಣಿಯುತ್ತ ಮೀಸೆಯಂ ತೀಡುತ್ತ ಬರುವುದ ಕಂಡು, ತೊಲಗದಿರುವ ರಾಯನಂ ಕಂಡು, ಆ ರಾಕ್ಷಸ ಆಶ್ಚರ್ಯಪಡುತ್ತ—ಇವನು ವೀರನೆಂದು ಸಮೀಪಕ್ಕೆ ಬಂದು, ಗರ್ಜಿಸಿ, ರಾಯನ ಹೊಡೆಯಲಾಗಿ; ರಾಯನು ಅವನ ಹೊಡೆದು, ಇಬ್ಬರೂ ಯುದ್ಧವಂ ಮಾಡುವುದ ನೋಡಿ, ಆಬ್ರಾಹ್ಮಣನು ಓಡಿ ಹೋಗಿ, ಆಅಗ್ರಹಾರದ ಮಹಾಜನದ ಕೂಡೆ ಹೇಳಲಾಗಿ; ಆಜನರೆಲ್ಲರೂ ಬಂದು ಇರ್ವರ ಯುದ್ಧವಂ ನೋಡುತಿರಲಾಗಿ; ರಾಯನು ರಾಕ್ಷಸನ ಕಾಲಂ ಹಿಡಿದು ನೆಲಕ್ಕೆ ಅಪ್ಪಳಿಸಲಾಗಿ ; ರಾಕ್ಷಸನು ಮೃತವಾದುದನ್ನು ಯಾವತ್ತು ಜನವೂ ಕಂಡು,—ನೀನು ಯಾರು ? ಎಂದು ಕೇಳಲಾಗಿ ;—ನಾನು ವಿಕ್ರಮಾದಿತ್ಯರಾಯನೆಂದು ಹೇಳದುದಱಿಂದ—ಎಲೈ ಮಹಾರಾಯನೇ ! ನಿನ್ನಿಂದ ಈ ಅಗ್ರಹಾರ ಜೀರ್ಣೋದ್ಧಾರವಾಯಿತೆಂದು ಸ್ತುತಿಯಂ ಮಾಡಿ, ಕೇಳಿದುದ ಕೊಡುವಂಥ ರತ್ನವಂ ಕೊಡಲಾಗಿ; ರಾಯನು ತೆಗೆದುಕೊಂಡು ಅಲ್ಲಿಂದ ಬರುವ ಮಾರ್ಗದಲ್ಲಿ ಒಬ್ಬ ಬ್ರಾಹ್ಮಣ ದರಿದ್ರದಿಂದ ಕಷ್ಟಪಡಲಾರದೆ ತನ್ನ ಸತಿ ಸಹಿತ ಗಂಗೆಯೊಳಗೆ ಬೀಳಬೇಕೆಂದು ಬರುವನಂ ಕಂಡು—ಎಲೋ ಬ್ರಾಹ್ಮಣ ! ಎಲ್ಲಿಗೆ ಹೋಗುವೆ ? ಎನ್ನಲಾಗಿ ; ಅವನು ತನ್ನ ವೃತ್ತಾಂತವಂ ಹೇಳದುದಱಿಂದ ರಾಯ ಕೇಳಿ ಮಱುಗಿ ಆಮಹಾಜನಂಗಳು ತನಗೆ ಕೊಟ್ಟ ಚಿಂತಾಮಣಿಯೆಬ ರತ್ನವಂ ಅವನಿಗೆ ಕೊಟ್ಟು—ಈರತ್ನ

ನೀನು ಕೇಳಿದುದ ಕೊಡುವುದು. ನೀನು ಇನ್ನು ಸುಖವಾಗಿರು, ಎಂದು ಕಳುಹಿಸಿ, ಅಲ್ಲಿಂದ ಇಲ್ಲಿ ಬಂದು ತಾನು ಸುಖದಿಂದ ಇದ್ದನು, ಕಣಾ !

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಅನಂಗಜೆಯೆಂಬ ಪುತ್ತಳಿಯು ಪೇಳಿದ ಹನ್ನೊಂದನೆಯ ಕಥೆ.

೧೨ ನೆಯ ಕಥೆ.

ಹನ್ನೆರಡನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿ, ಎಂದಿನಂತೆ ಸಿಂಹಾಸನದ ಬಳಿಗೆ ಬಂದು, ಬಲದ ಕಾಲಂ ನೀಡುವ ಸಮಯದಲ್ಲಿ, ಆ ಸೋಪಾನದ ಇಂದ್ರಾವತಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ, ಭೋಜರಾಯನು ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ತಳಿಯೇ, ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖದಿಂದ ರಾಜ್ಯಂಗೆಯ್ಯುವಲ್ಲಿ ಒಂದು ದಿನ ಸದರಿನಲ್ಲಿ ಕುಳಿತಿರುವ ವೇಳೆಯಲ್ಲಿ ವರರುಚಿ ಮೊದಲಾದ ಕವಿಗಳ ಮುಖವಂ ನೋಡಿ ಒಂದು ಬೆರಲಂ ತೋಱಲಾಗಿ ; ಅದಕ್ಕೆ ಯಾರೂ ಉತ್ತರವಂ ಕೊಡದೆ ಇರುವುದ ಕಂಡು, ಅಲ್ಲಿಂದ ವರರುಚಿ ಎದ್ದು ಹೋಗಿ ಒಂದು ಊರಲ್ಲಿ ಒಬ್ಬ ಕುಱುಬ ರೂಪಸ್ಥನಾಗಿ ಇರುವುದಂ ಕಂಡು, ಅವನ ಕರೆದು—ನಿನಗೊಂದು ಕಾರ್ಯವಂ ಮಾಡಿಕೊಟ್ಟೇನು. ನನ್ನ ಸಂಗಡ ಬಾರೆಂದು—ಅವನ ತನ್ನ ಮನೆಗೆ ಕರೆದುಕೊಂಡು ಹೋಗಿ—ಎಲೋ ಕುಱುಬ ! ನಿನ್ನ ರಾಯನ ಮನೆಗೆ ಕರೆದುಕೊಂಡು ಹೋಗುತ್ತೇನೆ. ನೀನು ರಾಯನ ಸಂಗಡ ಮಾತನಾಡಬೇಡ. ರಾಯನು ಹೇಳಿದುದಕ್ಕೆ ನೀನು ಸಂಜ್ಞೆಮಾಡಿ ಉತ್ತರಕೊಡು ಎಂದು ಹೇಳಲಾಗಿ; ಆ ಕುಱುಬನು—ಒಳ್ಳೇದು ಎಂದು ಎನ್ನಲಾಗಿ; ಅವನ ರಾಯನ ಬಳಿಗೆ ಕರೆತಂದು ತೋಱಲಾಗಿ ; ರಾಯನು—ಇವನಾರೆಂದು ಕೇಳಲಾಗಿ ; ವರರುಚಿಯು—ನಮ್ಮ ಗುರುಪುತ್ರನೆಂದು ಪೇಳಿದುದಕ್ಕೆ, ರಾಯನು ಮರ್ಯಾದೆಯ

ಮಾಡಿ ಕುಳ್ಳಿರಿಸಿಕೊಂಡು, ರಾಯನು ಒಂದು ಬೆರಲಂ ತೋಱಲು ; ಆ ಕುಱುಬ—ಎರಡು ಬೆರಲ ತೋಱಿದನು. ಮತ್ತೆ ಭೋಜರಾಜನು ಮೂಱು ಬೆರಲಂ ತೋಱಲಾಗಿ; ಕುಱುಬನು ಒಂದೇ ಬೆರಲಂ ತೋಱಲು ; ರಾಯನು ಮೆಚ್ಚಿ ಅವನಿಗೆ ಸವಾಲಕ್ಷ ವರಹವಂ ಕೊಟ್ಟು ಕಳುಹಿಸಿದ, ಬಳಿಕ ರಾಯನ ಬಳಿಗೆ ವರರುಚಿ ಬಂದು—ನಮ್ಮ ಗುರುಪುತ್ರ ಏನು ಪ್ರಸಂಗ ಮಾಡಿದನು? ಎನ್ನಲು, ಲೋಕಕ್ಕೆ ಪರಬ್ರಹ್ಮನೊಬ್ಬನೇ ಎಂದು ನಾನೊಂದು ಬೆರಲಂ ತೋಱಲು ; ಅದಕ್ಕವನು ಜೀವಾತ್ಮ ಪರಮಾತ್ಮನೆಂದು ಎರಡು ಬೆರಲಂ ತೋಱಿದನು. ಆಬಳಿಕ ನಾನು ಬ್ರಹ್ಮ ವಿಷ್ಣು ಮಹೇಶ್ವರರೆಂದು ಮೂಱು ಬೆರಲಂ ತೋಱಿದುದಕ್ಕೆ ಅವನು—ಸಂಹಾರಕಾಲಕ್ಕೆ ಪರಾತ್ಮ ಒಬ್ಬನೇ ಎಂದು ಒಂದು ಬೆರಲಂ ತೋಱಿದನು. ಆದಕ್ಕೆ ಮೆಚ್ಚಿ ಅವನಿಗೆ ಸವಾಲಕ್ಷ ವರಹವಂ ಕೊಟ್ಟು ಕಳುಹಿಸಿದೆನೆನ್ನಲಾಗಿ ; ರಾಯನ ಬಳಿಯಿಂದ ವರರುಚಿ ಕುಱುಬನ ಬಳಿಗೆ ಬಂದು ರಾಯನ ಸಂಗಡ ಏನು ಮಾಡುತ್ತಿದ್ದೆ? ಎನ್ನಲಾಗಿ ; ಆ ಕುಱುಬ—ರಾಯನು ಒಂದು ಬೆರಲಂ ತೋಱಿ ಒಂದು ಕುಱಿಯಂ ಕೇಳಿದ, ನಾನು ಎರಡು ಬೆರಲ ತೋಱಿ ಎರಡು ಕುಱಿಗಳ ಕೊಟ್ಟೇನು ಎಂದು ಸನ್ನೆಯಂ ಮಾಡಿದೆ. ಅವ ಮೂಱು ಬೆರಲ ತೋಱಿ ಮೂಱು ಕುಱಿ ಕೇಳಿದ. ನಾನು ಕೊಡುವುದೇ ಒಂದು ಎಂದು ಸನ್ನೆಮಾಡಿ ತೋಱಲಾಗಿ;—ನನಗೆ ರಾಯನು ಸವಾಲಕ್ಷ ವರಹವನ್ನು ಕೊಟ್ಟು ಕಳುಹಿಸಿದ—ಎಂದ ಮಾತಿಗೆ, ವರರುಚಿಯು ನಗುತ್ತ ಅವನ ಕಳುಹಿಸಿದನು ಕಣಾ! ಎಂದುದಕ್ಕೆ, ಇಂದ್ರಾವತಿಯೆಂಬ ಪುತ್ತಳಿಯು ಗಹಗಹಿಸಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ:—

ಕೇಳಯ್ಯ ಚಿತ್ರಶರ್ಮನೆ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವಂ ಪಾಲಿಸುವ ವೇಳೆಯಲ್ಲಿ ಒಂದು ದಿನ ಆ ಪುರದ ಮಂದಚಿತ್ತನೆಂಬ ವರ್ತಕನು ಬಹು ದ್ರವ್ಯ ಸಂಪಾದಿಸಿ ಮೃತನಾದನು. ಅವನ ಕುಮಾರ ಪುರಂದರರಾಯ ಯಾವತ್ತು ಹಣ ದಾನಧರ್ಮಮಾಡುವುದ ಬಂಧುಗಳು ಕಂಡು—ಆದಾಯವಿಲ್ಲದೆ ವೆಚ್ಚಮಾಡಬಾರದೆಂದು ಹೇಳಿದುದಕ್ಕೆ ಆ ಪುರಂದರ ನಿಂತೆಂದನು:-"ಭಾಗ್ಯವಂತನಿಗೆ ಕೊನೆಗೆ ದರಿದ್ರ ತಪ್ಪದು" ಎನ್ನಲಾಗಿ, ಬಂಧುಗಳಿಂತೆಂದರು:-"ಅದಕ್ಕೋಸ್ಕರ ಆಪತ್ಕಾಲಕ್ಕೆ ಧನವಂ ಇರಿಸಿಕೊ

ಳ್ಳಬೇಕು" ಎನ್ನಲಾಗಿ; "ಪುಣ್ಯವಂತನಿಗೆ ಆಪತ್ಕಾಲವೇ ಇಲ್ಲ. ಭಾಗ್ಯ ಹೋಗುವ ಕಾಲಕ್ಕೆ ಬಚ್ಚಿಟ್ಟ ಒಡವೆ ತನಗೆ ತಾನೇ ಹೋಗುವುದು" ಎಂದು ದಾನಧರ್ಮವಂ ಮಾಡಿ, ತೀರ್ಥಯಾತ್ರೆಯಂ ಮಾಡಿ, ನಾನಾ ದೇಶವಂ ಸಂಚರಿಸಿ, ಈ ಪಟ್ಟಣಕ್ಕೆ ಬಂದು, ನನ್ನ ರಾಯನ ಕೂಡೆ ತನ್ನ ವೃತ್ತಾಂತವಂ ಬಿನ್ನೈಸಲಾಗಿ; ರಾಯ—ನೀಚರಿಸಿದ ರಾಜ್ಯದಲ್ಲಿ ಏನು ಅತಿಶಯವೆನ್ನಲಾಗಿ; "ಶಶಿಕಾಂತವೆಂಬ ಪಟ್ಟಣದಲ್ಲಿ ಚಂದ್ರಬಾಹುಕನೆಂಬ ಅರಸಿನ ಮಗಳು ದಮಯಂತಿಯನ್ನು ಒಂದು ಮೋಹಿನಿ ಹಿಡಿದಿರುವುದು. ಅದು ಅವಳ ಯಾರಾದರೂ ಮದುವೆ ಮಾಡಿಕೊಂಡರೆ ಅವರ ಕೊಲ್ಲದೆ ಬಿಡೆನೆಂದು ಪ್ರತಿಜ್ಞೆಯಂ ಮಾಡಿ ಇರುವುದರಿಂದ, ಅವಳ ಯಾರೂ ಮದುವೆಯಾಗದೆ ಹಾಗೇ ಇರುವಳು" ಎನ್ನಲಾಗಿ; ರಾಯ ಪುರಂದರನ ಕರೆದುಕೊಂಡು ಖೇಚರಮಾರ್ಗದಲ್ಲಿ ಆಪಟ್ಟಣಕ್ಕೆ ಹೋಗಿ, ಚಂದ್ರಬಾಹುಕನಂ ಕಾಣಲಾಗಿ; ಆಅರಸು ರಾಯನ ಮನ್ನಣೆಯಂ ಮಾಡಿ, ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡು—"ಏನು ಕಾರಣ ಬಂದುದು?" ಎನ್ನಲಾಗಿ, ಆಮಾತಿಗೆ ರಾಯನು—ದಮಯಂತಿಯ ವಿವಾಹವಾಗಬೇಕೆಂದು ಬಂದೆನು ಎನ್ನಲಾಗಿ; ಅರಸು ಸಂತೋಷಭರಿತನಾಗಿ ತನ್ನ ಮಗಳ ಮದುವೆಯಂ ಮಾಡಿ, ದಂಪತಿಗಳ ಬೇರಿ ಮನೆಗೆ ಕಳುಹಿದಕಾರಣ, ಮಲಗುವ ಮನೆಯಲ್ಲಿ ಇರ್ವರೂ ಇರುವಲ್ಲಿ, ಮೋಹಿನಿ ಎಂಬ ರಾಕ್ಷಸಿಯು ರಾಯನ ಕೊಲ್ಲುವುದಕ್ಕೆ ಬರಲಾಗಿ, ರಾಯನು ರಾಕ್ಷಸಿಯ ಸಂಗಡ ಯುದ್ಧಮಾಡುವುದ ದಮಯಂತಿಯು ಕಂಡು, ಆಶ್ಚರ್ಯಪಡುತ್ತ ನೋಡುತ್ತಿರುವಲ್ಲಿ—ರಾಯನಾರಾಕ್ಷಸಿಯಂ ನಾಲ್ಕು ಸೀಳಂ ಮಾಡಿ, ನಾಲ್ಕು ದಿಕ್ಕಿಗೆ ನಾಲ್ಕು ಸೀಳಂ ಬಿಸುಟು, ಕಡೆಮೆ ನಾಲ್ಕು ಸೀಳ ಆ ಪಟ್ಟಣದಲ್ಲಿ ಜಯಸ್ತಂಭ ಮಾಡಲಾಗಿ; ಆ ರಾಕ್ಷಸಿ ರಾಕ್ಷಸರೂಪಳಿದು ಗಂಧರ್ವರೂಪದಿಂದ ಬಂದು ನಿಂತು—"ಎಲೈ ಮಹಾರಾಯನೆ! ನಿನ್ನಿಂದ ನನ್ನ ಶಾಪ ವಿಮೋಚನವಾಯಿತು" ಎನ್ನಲಾಗಿ; ಆಮಾತಿಗೆ ರಾಯ-ನೀನಾರೆಂದು ಕೇಳಲು; "ನಾನು ಪೂರ್ವದಲ್ಲಿ ವಿದ್ಯಾಧರಕನ್ನಿಕೆ. ಕೈಲಾಸಕ್ಕೆ ಹೋಗುತ್ತಿರುವಲ್ಲಿ ದಾರಿಯಲ್ಲೊಬ್ಬ ಭೂತಲೋಭನೆಂಬ ಮಹರ್ಷಿ ಒಂದು ಬಳಿಯಲ್ಲಿ ತನ್ನ ಪತ್ನಿಸಹಿತ ಇರುವುದಂ ಕಂಡು,—ಋಷಿಯು ಮುದುಕ, ಹೆಂಡತಿ ಹುಡುಗಿ; ನರೆಕೂದಲಮುಂಡೆ ಸೊಕ್ಕಿದಗಲ್ಲ, ಬಡಿದಾಡುವ

ಹಲ್ಲು—ನೋಡಿ ನಾನು ಹಾಸ್ಯಮಾಡಲಾಗಿ ; ಆ ಋಷಿಯು ಕೋಪಿಸಿ, ರಾಕ್ಷಸಿಯಾಗೆಂದು ಶಪಿಸಲಾಗಿ ; ಆ ಬಳಿಕ—ಈ ಶಾಪವಿಮೋಚನ ಯಾವಾಗ? ಎಂದು ಋಷಿಯಂ ಕೇಳಿಕೊಳ್ಳಲಾಗಿ ; ಆ ಋಷಿಯು—ನಿನ್ನ ದೇಹ ಎಂಟು ಸೀಳಂ ಮಾಡಿ, ನಾಲ್ಕು ಸೀಳಂ ನಾಲ್ಕುದಿಕ್ಕಿಗೆ ಇಟ್ಟು, ನಿಂತ ನಾಲ್ಕು ಸೀಳಂ ಜಯಸ್ತಂಭ ಮಾಡಿದಾಗ, ಈ ಶಾಪ ತೀರುವುದು ಎನ್ನಲಾಗಿ ; ಆಗ ಆಋಷಿಯನ್ನು-ನನ್ನ ಆಹಾರಕ್ಕೇನು ? ಎಂದು ಕೇಳಲಾಗಿ; ದಮಯಂತಿಗೆ ಪತಿಯಾಗಿ ಬಂದವರ ಭಕ್ಷಿಸಿಕೊಂಡು ಇರು-ಎಂದು ನೇಮಿಸಿ, ಇದ್ದುದರಿಂದ ನಾನು ಇಲ್ಲಿ ಹೀಗೆ ಇದ್ದೆ—ಎಂದ ಮಾತ ರಾಯ ಕೇಳಿ, ಸಂತೋಷಪಡಲಾಗಿ; ಬಳಿಕ ಆ ಸ್ತ್ರೀಯನ್ನು ರಾಯನಿಗೆ ಒಂಭತ್ತುಕೋಟಿ ಹೊನ್ನು ಬೇಕಾದುದನ್ನು ಕೊಡುವ ರತ್ನವನ್ನು ಕೊಟ್ಟು, ಕೈಲಾಸಕ್ಕೆ ಹೋದ ಬಳಿಕ, ರಾಯನು ಆರತ್ನವನ್ನೂ ಹೊನ್ನನ್ನೂ ಪುರಂದರನಿಗೆ ಕೊಟ್ಟು, ಇರ್ವರೂ ಇಲ್ಲಿಗೆ ಬಂದು ಸುಖವಾಗಿ ಇದ್ದರು ಕಣಾ !

ಇಂತು ಕರ್ಣಾಟಕ ಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಇಂದ್ರಾವತಿಯೆಂಬ ಪುತ್ಥಳಿಯು ಪೇಳಿದ ಹನ್ನೆರಡನೆಯಕಥೆ.

೧೩ ನೆಯ ಕಥೆ.

ಹದಿಮೂರನೆಯ ದಿವಸದಲ್ಲಿ ಎಂದಿನಂತೆ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು ಮೂವತ್ತೆರಡು ಪುತ್ಥಳಿಗಳಿಂದ ಕೂಡಿದ ಸಿಂಹಾಸನದೆಡೆಗೆ ಬಂದು ಬಲಗಾಲಂ ನೀಡುವ ವೇಳೆಯಲ್ಲಿ, ಆಸೋಪಾನದ ಕುರಂಗಸೇನೆಯೆಂಬ ಪುತ್ಥಳಿಯು—ಹೋಹೋ ! ನಿಲ್ಲುನಿಲ್ಲು ! ಎಂದು ಧಿಕ್ಕರಿಸಲಾಗಿ ; ಭೋಜರಾಯನು ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ಥಳಿಯೇ ! ಕೇಳು. ನಮ್ಮ ಭೋಜರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುತ್ತಿರುವಲ್ಲಿ ಒಂದು ದಿನ ವರರುಚಿಯು ಸಂ

ಗಡ—ನೀವು ಸಕಲ ವಿದ್ಯವ ಬಲ್ಲಿರಷ್ಟೆ: ಚೋರವಿದ್ಯ ಬರುವುದೆ? ಎನ್ನಲಾಗಿ;—ಇನ್ನುಮೇಲೆ ಅಭ್ಯಾಸ ಮಾಡುವೆನೆಂದು ರಾಯನೊಡನೆ ಹೇಳಿ ಅಪ್ಪಣೆ ತೆಗೆದುಕೊಂಡುಹೋಗಿ, ಬಹು ಚೋರನಾದಂಥ ಸಹುದಾತನೆಂಬ ಮಾದಿಗನ ಮನೆಗೆ ನೀರಂ ತರುವುದು, ಹುಲ್ಲುಹೊಱೆಯಂ ತಂದು ಹಾಕುವುದು-ಈಪ್ರಕಾರ ಮಾಡುತ್ತಿರುವಲ್ಲಿ; ಒಂದು ದಿನ ಆಮಾದಿಗ ಕಂಡು-ಎಲೈ ಮಹಾಪುರುಷನೇ! ನನ್ನ ಮನೆಯ ಒಳ ಸಂಚಾರ ಯೋಗ್ಯವಲ್ಲೆಂದು ನೀವು ತಿಳಿದು ಹುಲ್ಲುಹೊಱೆಯಂ ತಂದು ಹಾಕುವ ಕಾರಣವೇನೆಂದು ಕೇಳಲಾಗಿ; ವರರುಚಿ—ನಿನ್ನ ಚೋರವಿದ್ಯೆಯಂ ಕಲಿಯುವುದಕ್ಕಾಗಿ ಬಂದೆನು ಎನ್ನಲಾಗಿ; ಆ ಮಾತಿಗವನು—ನನ್ನ ಚೋರವಿದ್ಯ ಕಲಿಯುವುದಕ್ಕೆ ತಕ್ಕ ತಾಳಿ ಜಾಲಗಳರಬೇಕು. ನೀವು ವಿಪ್ರರು. ನಿಮಗಿದು ಬರಲಱಿಯದು ಎನ್ನಲಾಗಿ; ನೀ ಹೇಳಿದಂತೆ ನಡೆಯುತ್ತೇನೆ ಎಂದು ಹೇಳಿ,—ನಿನ್ನ ವಿದ್ಯೆಯ ಕಲಿಸು ಎನ್ನಲಾಗಿ; ಅವನು ತನ್ನ ಚೋರವಿದ್ಯೆಯನ್ನೆಲ್ಲಾ ಕಲಿಸಲಾಗಿ; ಅದನ್ನು ಕಲಿತು ರಾಯನ ಬಳಿಗೆ ಬಂದು ಕುಳ್ಳಿರಲಾಗಿ; ರಾಯ ನವರತ್ನಖಚಿತವಾದ ತಟ್ಟೆಯಲ್ಲಿ ಕರ್ಪೂರವೀಳೆಯವ ತರಿಸಿಕೊಡಲಾಗಿ; ವರರುಚಿ ಆತಟ್ಟೆಯನ್ನು ಯಾರೂ ಕಾಣದೆ ಅಪಹರಿಸಿಕೊಂಡು ಇರುವುದನ್ನು ಆ ಹಡಪಿಗಂ ಕಂಡು ರಾಯನಿಗೆ ಹೇಳದೆ ಸುಮ್ಮನಿರಲಾಗಿ; ರಾಯ ಓಲಗ ತೀರಿದಮೇಲೆ ಅರಮನೆಗೆ ಎದ್ದು ಹೋದನು. ಆ ಬಳಿಕ ವರರುಚಿ ತನ್ನ ಮನೆಗೆ ಹೋಗಿ ಇದ್ದನು. ಮಱುದಿನ ರಾಯನು ಸದರಿನಲ್ಲಿ ಕುಳಿತಿರಲಾಗಿ ವೀಳೆಯ ತರಹೇಳಲು; ವೀಳೆಯದ ತಟ್ಟೆಯಿಲ್ಲವೆಂದು ಗುಲ್ಲು ಹೇಳಲಾಗಿ, ಆ ಸುದ್ದಿಯ ರಾಯ ಕೇಳಿ ಹಡಪಿಗನ ಕರೆಸಿ—ತಟ್ಟೆ ಎಲ್ಲಿ? ಎನ್ನಲಾಗಿ; ಹಡಪಿಗ ವರರುಚಿ ತೆಗೆದುಕೊಂಡು ಹೋದರೆಂದು ಹೇಳುತ್ತಿರುವಲ್ಲಿ—ವರರುಚಿ ವೀರಾವೇಶವಂ ತಾಳಿ—ನಾ ಕಳ್ಳನೇ! ಎಂದು ಹಡಪಿಗನ ಕೂಡ ಕೂಗಾಡುವುದಂ ಕಂಡು, ರಾಯನು— ನೀವೇಕೆ ಕೂಗಾಡುತ್ತೀರಿ? ಎನ್ನಲಾಗಿ; ತಟ್ಟೆಯ—ನಾನು ತೆಗೆದುಕೊಂಡೆನೆಂದು ನಿಮಗೆ ಅಱಿಕೆ ಮಾಡಿದುದಱಿಂದ ಕೂಗಾಡುವೆ ಎಂದು ಹೇಳಿದ ಮಾತಿಗೆ, ರಾಯ—ವರರುಚಿ ಕಳ್ಳರೇ? ಎಂದು ಹಡಪಿಗನ ಮೇಲೆ ಕೋಪಿಸಲಾಗಿ;—ಇವರ ಮೇಲೆ ನಾನು ಕಳವನುಂಟು ಮಾಡದೆ ಇದ್ದರೆ, ಆಗ ನಾನೇ ಕೊಡುವೆನು, ಎಂದ

ಮಾತಿಗೆ, ನೀವಿಬ್ಬರೂ ಚಂಡಿಕಾದೇವಿಯ ಗುಡಿಗೆ ಹೋಗಿ, ಉಂಟು ಇಲ್ಲ ಮಾಡಿಕೊಂಡು ಬರಹೇಳೆ ರಾಯನ ಅಪ್ಪಣೆಯಾದುದಱಿಂದ, ಅದೇ ಮೇರೆಗೆ ಇರ್ವರೂ ಚಂಡಿಕಾಲಯಕ್ಕೆ ಹೋಗಿ--ಓ ದೇವಿಯೇ! ಇವರು ತಟ್ಟೆಯ ತೆಗೆದುಕೊಂಡು ಹೋಗಿರುವುದು ನಿಜವಾದರೆ ನಿಮ್ಮಾಜ್ಞೆಯುಂಟಾಗಲಿ. ಇಲ್ಲದಿದ್ದರೆ ಯಥಾಪ್ರಕಾರಕಿರಲೆಂದು ಹಡಪಿಗ ವರರುಚಿಯ ಗುಡಿಯೊಳಕ್ಕೆ ಕೂಡಿ, ಬಾಗಿಲಿಗೆ ಬೀಗವಂ ಹಾಕಿ, ಹಡಪಿಗ ಈಚೆ ಕಾದಿರಲಾಗಿ ; ಚಂಡಿಕಾದೇವಿಯು ಸಮರಾತ್ರಿಯಲ್ಲಿ ಚಂದ್ರಾಯುಧವ ತೆಗೆದುಕೊಂಡು ವರರುಚಿಯ ತಲೆಯೊಡೆಯುವುದಕ್ಕೆ ಬರಲಾಗಿ; ಆಗ ಆ ವರರುಚಿ ಅನೇಕ ವಿಧದಿಂದ ದೇವಿಯಂ ಸ್ತುತಿಮಾಡಿ ಇಂತೆಂದನು :—ನೀವು ಸಕಲವಂ ತಿಳಿದಂಥ ಜಗನ್ಮಾತೆಯಾದುದಱಿಂದ ನನ್ನಲ್ಲಿ ಕಳವಿಲ್ಲ, ಚೆನ್ನಾಗಿ ಪರಾಂಬರಿಸಿ ಆಜ್ಞೆಮಾಡೆಂದು ನುಡಿಯಲಾಗಿ ; ದೇವಿ ದಿವ್ಯದೃಷ್ಟಿಯಿಂದಱಿದು ನೋಡಿ,—ನೀನು ಕಳ್ಳತನಕ್ಕಾಗಿ ಹೋದವನಲ್ಲ, ಪರೀಕ್ಷೆಯ ನಿಮಿತ್ತ ಆ ತಟ್ಟೆ ತೆಗೆದಿರುವುದು ತಿಳಿಯಿತು. ಆದರೂ ಆ ಒಡವೆ ನಿನ್ನಲ್ಲಿ ಇದೆಯಷ್ಟೆ. ಆದುದಱಿಂದ ಕಳ್ಳತನವುಂಟಾಯಿತು. ನಿನ್ನ ಕೊಲ್ಲುವುದೇ ಸರಿ—ಎನ್ನಲಾಗಿ ; "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು" ಎಂಬ ನೀತಿ ಲೋಕದಲ್ಲಿ ನಿದರ್ಶನದಲ್ಲಿರುವ ಕಾರಣ, ನಿದಾನಿಸಿ ನಿದರ್ಶನ ಮಾಡಬೇಕೆಂದು ಪ್ರಸನ್ನ ಮಾಡುವಷ್ಟಱಲ್ಲಿ, ಉದಯವಾದುದಱಿಂದ ಆ ದೇವಿಯು ಮಾಯವಾದಳು. ಆ ಬಳಿಕ ವರರುಚಿ ಹಡಪಿಗನ—ಬಾಗಿಲ ತೆಗೆ ಎಂದುದಕ್ಕೆ ಆವನು ಆಶ್ಚರ್ಯಪಟ್ಟು ಬಾಗಿಲ ತೆಗೆದು ಬಿಡಲಾಗಿ ; ಅಲ್ಲಿಂದ ಇಬ್ಬರೂ ರಾಯನ ಬಳಿಗೆ ಬರಲಾಗಿ ; ರಾಯ—ನಮ್ಮ ಗುರುವಿನ ಮೇಲೆ ಇಲ್ಲದ ಕಳ್ಳತನ ಹೇಗೆ ಹೇಳಿದೆ? ಎಂದು ಕೋಪಿಸಿ, ಹಡಪಿಗನ ಕಳುಹಿಸಿದ ಬಳಿಕ,ವರರುಚಿ ತಟ್ಟೆಯ ತಂದು ರಾಯನ ಮುಂದಿರಿಸಿ,—ಚೋರವಿದ್ಯೆ ಬರುವುದೇ? ಎಂದು ಕೇಳಿದುದಱಿಂದ, ಈ ವಿದ್ಯವಂ ಕಲಿತು ನಿಮಗೆ ಪರೀಕ್ಷೆ ಕೊಡುವುದಕ್ಕಾಗಿ ಇದ ತೆಗೆದೆ ಎಂದುದಕ್ಕೆ, ರಾಯನು ಮೆಚ್ಚಿ ವರರುಚಿಗೆ ಸವಾಲಕ್ಷದ್ರವ್ಯವಂ ಕೊಟ್ಟು, ಆ ಹಡಪಿಗನ ಕರೆಯಿಸಿ ಆವನಿಗೆ ಬಹುಮಾನವಂ ಮಾಡಿ ಮನ್ನಿಸಿದನು ಕಣಾ! ಎಂದು ಹೇಳಿದ ಚಿತ್ರಶರ್ಮನ ಮಾತಿಗೆ ಕುರಂಗಸೇನೆಯೆಂಬ ಪುತ್ಥಳಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ:—

ಕೇಳ್ಳೆಯು ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಸುಖವಾಗಿ ರಾಜ್ಯವಂ ಪಾಲಿಸುವ ವೇಳೆಯಲ್ಲಿ ಒಂದು ದಿನ ಶಿಕಾರಿಗಾಗಿ ಅರಣ್ಯಕ್ಕೆ ಹೋಗಿ ನಾನಾಮೃಗವಂ ಸಂಹರಿಸಿ ಬರುವಲ್ಲಿ—ಒಬ್ಬ ದ್ವಿಜನು ತನ್ನ ಕುಟುಂಬ ಸಹಿತ ಹೊಳೆಯ ದಾಟುವಾಗ, ಅವನ ಹೆಂಡತಿ ಮೇಲು ನೀರು ಬಂದು ನೀರಿನಲ್ಲಿ ಮುಳುಗಿ ತೇಲಿ ಹೋಗಲಾಗಿ, ಆತನು ಅನೇಕ ದುಃಖಪಡುವುದಂ ಕಂಡು, ರಾಯನು ತಾನು ನೀರಿನಲ್ಲಿ ಹೊಕ್ಕು ಆ ಸ್ತ್ರೀಯನ್ನು ಕಂಟೆಗೆ ಎಳೆತಂದು, ಆತನಿಗೆ ಅವಳನ್ನು ಕೋಟಿದ್ರವ್ಯವನ್ನು ಸಹ ಕೊಟ್ಟು, ಸುಖವಾಗಿ ಹೋಗಿ ಎನ್ನಲಾಗಿ; ಆ ವಿಪ್ರನು—ಎಲೈ ಮಹಾರಾಯನೇ! ನೀನು ಮಾಡಿದ ಪ್ರಾಣೋಪಕಾರಕ್ಕೆ ನಿನಗೆ ಶೀಘ್ರದಿಂದ ಮೋಕ್ಷವಾಗುವುದೊಂದು ಮಂತ್ರವಂ ಉಪದೇಶ ಮಾಡಿಕೊಡುತ್ತೇನೆ ಎನ್ನಲಾಗಿ; ರಾಯ—ಹಾಗಾಗಲಿ ಎಂದುದಕ್ಕೆ; ಆ ರಾಯನಿಗೆ ಮಂತ್ರೋಪದೇಶವಂ ಮಾಡಿ, ರಾಯನ ಅಪ್ಪಣೆ ತೆಗೆದುಕೊಂಡು ಹೋದ, ಬಳಿಕ, ಅಲ್ಲಿಂದ ರಾಯ ಬರುವ ದಾರಿಯಲ್ಲಿ ಒಂದು ಪರ್ವತದರುಗಿನಲ್ಲಿ ಒಬ್ಬ ಋಷಿ ಮಹಾತಪಸ್ಸು ಮಾಡಿದರೂ ಮೋಕ್ಷವಾಗದಿರುವುದಂ ಕಂಡು, ಆ ಋಷಿಗೆ ಮೋಕ್ಷವಾಗುವ ಮಂತ್ರವಂ ಹೇಳಲಾಗಿ; ರಾಯನಿಗಾ ಋಷಿ ಪುರುಷಲಿಂಗವಂ ಕೊಟ್ಟು ಕಳುಹಿಸಲಾಗಿ; ರಾಯ ಈ ಪಟ್ಟಣದ ರಾಯಬೀದಿಯಲ್ಲಿ ಬರುವಲ್ಲಿ ಒಬ್ಬ ದರಿದ್ರನಂ ಕಂಡು ಆ ಪುರುಷಲಿಂಗವಂ ಕೊಟ್ಟು ತನ್ನ ಅರಮನೆಗೆ ಬಂದು ಸುಖವಾಗಿ ಇದ್ದನು ಕಣಾ! ಇಂತಪ್ಪ ವಿತರಣ ಭುಜಬಲ ಮತ್ತೆಲ್ಲಿಯಾದರೂ ಉಂಟೇ?

ಇಂತು ಕರ್ಣಾಟಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಕುರಂಗಸೇನೆ ಎಂಬ ಪುತ್ತಳಿ ಪೇಳಿದ ಹದಿಮೂರನೆಯ ಕಥೆ.

೧೪ ನೆಯ ಕಥೆ.

ಹದಿನಾಲ್ಕನೆಯ ದಿವಸದಲ್ಲಿ ಭೋಜರಾಯನು ಎಂದಿನಂತೆ ಸ್ನಾನ ದೇವತಾರ್ಚನೆ ಭೋಜನವಂ ತೀರಿಸಿ, ಸಿಂಹಾಸನದ ಬಳಿಗೆ ಬಂದು, ತನ್ನ

ಬಲದ ಕಾಲಂ ನೀಡುವ ಸಮಯದಲ್ಲಿ, ಲಾವಣ್ಯವತಿಯೆಂಬ ಪುತ್ತಳಿಯು ಹೋಹೋ! ನಿಲ್ಲು ನಿಲ್ಲು! ಎಂದು ಧಿಕ್ಕರಿಸಲಾಗಿ, ಭೋಜರಾಯ ಖಿನ್ನನಾಗಿ ಬವಲು ಸಿಂಹಾಸನವಂ ತರಿಸಿ ಕುಳಿತುಕೊಂಡು. ಚಿತ್ರಶರ್ಮದಿಂದ ಪೇಳಿಸಿದ ಕಥೆ—

ಎಲೆ ಪುತ್ತಳಿಯೇ! ಕೇಳು, ಧಾರಾಪುರದಲ್ಲಿ ನಮ್ಮ ಭೋಜರಾಜನು ಸುಖರಾಜ್ಯಂಗೆಯ್ಯುವಲ್ಲಿ ಒಂದುದಿನ ರಾಯನೋಲಗಕ್ಕೆ ಒಬ್ಬ ಬ್ರಾಹ್ಮಣ ಮುದುಕಿ ಬಂದು, ರಾಯನ ಕೂಡೆ—ನಾನು ಒಂದು ವಿದ್ಯವ ಬಲ್ಲೆನು ಎಂದು ಹೇಳಲು;—ಅದು ಎಂಥ ವಿದ್ಯೆ? ಎಂದು ಕೇಳಲಾಗಿ; ಅದಕ್ಕೆ—ಅಳುವುದೊಂದೆ ವಿದ್ಯೆ ಬಲ್ಲೆನು ಎಂದ ಮಾತಿಗೆ, ರಾಯ ಮೆಚ್ಚಿ, ಅನ್ನವಸ್ತ್ರವಕೊಟ್ಟು—ಊಟಮಾಡಿಕೊಂಡು ಇಲ್ಲೇ ಇರು ಎಂದು ಕಟ್ಟಳೆಮಾಡಿ ಇರಿಸಲಾಗಿ; ಕೆಲವುದಿನ ಹೋದಬಳಿಕ ರಾಯನು ಒಂದುದಿನ ಮುಸುಕನಿಟ್ಟು ಮಲಗಿಕೊಂಡು,—ಭೋಜರಾಜ ಸತ್ತನೆಂದು ಅಳು ಎನ್ನಲಾಗಿ; ಆ ಮಾತಿಗೆ ಮುದುಕಿ— ಭೋಜರಾಜನು ಸತ್ತನು, ಭೂಮಿಗೆ ಆಧಾರವಿಲ್ಲದೆ ಹೋಯಿತು. ಸರಸ್ವತೀ ಸಂಬಂಧದ ವಿದ್ಯೆಯೆಲ್ಲಾ ವ್ಯರ್ಥವಾಯಿತು, ವಿದ್ವಾಂಸರೆಲ್ಲರೂ ಕೆಟ್ಟುಹೋದರು—ಎಂದು ಅಳಲು; ರಾಯ ಮೆಚ್ಚಿ, ಎದ್ದು, ಮುದುಕಿಗೆ ಸವಾಲಕ್ಷ ಹೊನ್ನ ಕೊಟ್ಟನು ಕಣಾ! ಎಂದ ಚಿತ್ರಶರ್ಮನ ಮಾತಿಗೆ ಲಾವಣ್ಯವತಿ ನಗುತ್ತ ಹಾಸ್ಯಂಗೆಯ್ದು ಹೇಳಿದ ಉಪಕಥೆ:—

ಕೇಳೈಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ಚಂದ್ರಗುಪ್ತರಾಯನ ಕುಮಾರ ಚಿತ್ತಕಾಂತರಾಯ ತನ್ನ ಬಲಸಹಿತ ಬಂದು ರಾಯನ ಕಾಣಲಾಗಿ; ರಾಯನು ಆ ರಾಯನಿಗೆ ಮರ್ಯಾದೆಯಂ ಮಾಡಿ ಸಿಂಹಪೀಠದಲ್ಲಿ ಕುಳ್ಳಿರಿಸಿಕೊಂಡು—ಏನು ಕಾರಣ ಬಲಸಹಿತ ಬಂದುದು? ಎಂದು ಕೇಳಲಾಗಿ; ಆ ರಾಯನು ಇಂತೆಂದನು:—ವಂಶಾಂಜನಿಯೆಂಬ ಪಟ್ಟಣದಲ್ಲಿ ಒಬ್ಬ ತಪಸ್ವಿ ಕಾಮಕೇಳಿಯಲ್ಲಿರುವುದಂ ಕೇಳಿ, ತಪಸ್ವಿ ಕಾಮಕೇಳಿಯಲ್ಲಿರಬಾರದೆಂದು ಕೋಪವಂ ತಾಳ್ದು, ಬಲಸಹಿತ ಹೋಗಿ, ಆಪಟ್ಟಣವಂ ಮುತ್ತಿಗೆಯಂ ಮಾಡಿ, ಆ ತಪಸ್ವಿಗೆ ಬುದ್ಧಿಗಲಿಸಿ, ಬಂದೆ—ಎನ್ನಲಾಗಿ; ರಾಯ—ಬರುವ ದಾರಿಯಲ್ಲಿ ಏನು ಅತಿಶಯವೆಂದು ಕೇಳಲಾಗಿ ;—ಒಂದು ನಂದನವನದಲ್ಲಿ

ನೀಲಲೋಹಿತವೆಂಬ ಗವಿಯಲ್ಲಿ ಮರೀಚಿಯೆಂಬ ಋಷಿ ಆಱು ಮಂದಿ ಮಕ್ಕಳು ಸಹ ಇರುವನು. ಅವರ ತಿನ್ನಬೇಕೆಂದು ಬಂದು ಚಿತ್ರಕಾಯನೆಂಬ ಹುಲಿಯು ಕಾದಿರುವುದು ಎಂದ ಮಾತ ಕೇಳಿ, ಆ ಚಿತ್ತ್ರಕಾಂತರಾಯನಿಗೆ ಅನೇಕ ಬಹುಮಾನವಂ ಮಾಡಿ ಕಳುಹಿಸಿ, ಆಬಳಿಕ ರಾಯ ಖೇಚರಮಾರ್ಗದಲ್ಲಿ ಆನಂದನವನದ ಬಳಿಗೆ ಹೋಗಲಾಗಿ ; ಆ ಸಮಾಚಾರವನ್ನು ಆ ಋಷಿಯು ಕೇಳಿ, ತನ್ನ ಜ್ಯೇಷ್ಠಪುತ್ರನ ರಾಯನ ಬಳಿಗೆ ಕಳುಹಿಸಿ ತಮ್ಮ ಉಪಾಧಿಯಾವತ್ತೂ ವಿವರಿಸಲಾಗಿ ; ರಾಯ ಕೇಳಿ, ಆ ಗವಿಯೆಡೆಗೆ ಹೋಗಿ, ಅಲ್ಲಿ ಕಾದಿರುವ ಚಿತ್ರಕಾಯನೆಂಬ ಹುಲಿಯಂ ಕೊಂದು, ಆ ಋಷಿಮಕ್ಕಳ ಭೀತಿ ಬಿಡಿಸಿ, ಕಾಪಾಡಿದುದಱಿಂದ ಆ ಋಷಿ—ಎಲೈ ಮಹಾರಾಯನೇ ! ನಿನ್ನಿಂದ ನಮ್ಮೆಲ್ಲರ ಜೀವ ಉಳಿಯಿತೆಂದು ಕೊಂಡಾಡಿ, ರಾಯನಿಗೆ ದಕ್ಷಿಣಾವರ್ತಶಂಖವಂ, ಏಕಮುಖದ ರುದ್ರಾಕ್ಷಿಯಂ, ದಧಿವಾಮನಮೂರ್ತಿ, ಲಕ್ಷ್ಮೀನಾರಾಯಣಮೂರ್ತಿ-ಎಂಬ ಸಾಲಗ್ರಾಮಂಗಳ ಸಹ ಕೊಡಲಾಗಿ ; ರಾಯ ತೆಗೆದುಕೊಂಡು, ಅಲ್ಲಿಂದ ಬರುವಲ್ಲಿ, ಒಬ್ಬ ಬುಧನು ಕಳ್ಳರಿಗೆ ಸಿಕ್ಕಿ ದೇವತಾರ್ಚನೆ ದೇವರೊಡವೆಯೆಲ್ಲವನು ಕಳಕೊಂಡು ಹೆಂಡತಿ ಮಕ್ಕಳು ಸಹ ಬರುತ್ತಿರಲು ; ರಾಯಂ ಕಂಡು—ಎಲೈ ಬ್ರಾಹ್ಮಣೋತ್ತಮನೇ—ನೀನಾರು ? ಎಲ್ಲಿಂದ ಬಂದೆ ? ಎಲ್ಲಿಗೆ ಹೋಗುವೆ ? ಎನ್ನಲಾಗಿ ; ಆತನು ತನ್ನ ವೃತ್ತಾಂತವೆಲ್ಲವಂ ಪೇಳಿದುದಱಿಂದ ರಾಯನಿಗೆ ದಯೆಬಂದು ಆ ವಿಪ್ರನಿಗೆ ಆ ಬಲಮುರಿಶಂಖ ಸಾಲಗ್ರಾಮಗಳ ಲಕ್ಷದ್ರವ್ಯ ಸಹ ಕೊಟ್ಟು ಕಳುಹಿಸಿ †ತಾನಿಲ್ಲಿಗೆ ಬಂದು ಸುಖವಾಗಿದ್ದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಲಾವಣ್ಯವತಿಯೆಂಬ ಪುತ್ತಳಿ ಪೇಳಿದ ಹದಿನಾಲ್ಕನೆಯ ಕಥೆ.

೧೫ ನೆಯ ಕಥೆ.

ಹದಿನೈದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿ, ಸಿಂಹಾಸನದ ಬಳಿಗೆ ಬಂದು, ಬಲಗಾ

ಪಾ—†ಕಳುಹಿಸಲಾಬ್ರಾಹ್ಮಣಂ ರಾಯನಂ ಹರಸಿ ಕೊಂಡಾಡಿ ಆತನೊಳ್ ಬೀಳ್ಕೊಂಡು ಹೋದನು ಕಣಾ!

ಲಂ ನೀಡುವ ಸಮಯದಲ್ಲಿ, ಆ ಸೋಪಾನದ ಮೋಹಿನಿಯೆಂಬ ಪುತ್ತಳಿ ಧಿಕ್ಕರಿಸಲಾಗಿ; ಭೋಜರಾಯು ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲೆ ಪುತ್ತಳಿಯೇ! ಕೇಳು—ಧಾರಾಪುರದಲ್ಲಿ ನಮ್ಮ ರಾಯ ಸುಖರಾಜ್ಯವಂಗೆಯ್ಯುವಲ್ಲಿ ಒಂದು ದಿನ ಆ ಪುರದಲ್ಲೊಬ್ಬ ಸರ್ವಾಧಿಕನೆಂಬ ಬ್ರಾಹ್ಮಣ ಬಂದು ರಾಯನ ಸಂಗಡ ಇಂತೆಂದನು :—ಕೇಳೈ ಮಹಾರಾಯನೇ! ನನ್ನ ಮನೆಯಲ್ಲಿ ನನಗೂ ನನ್ನ ತಾಯಿಗೂ ಆಗದು; ನನ್ನ ಹೆಂಡತಿಗೂ ನನಗೂ ಆಗದು; ಅತ್ತೆ ಸೊಸೆಯರಿಗೂ ಆಗದು; ಹೀಗೆ ಒಬ್ಬರಿಗೊಬ್ಬರು ಬಡಿದಾಡುತ್ತ ಇದ್ದೇವೆ. ಈ ನನ್ನ ಕರ್ಮವ ಬಿಡಿಸಬೇಕು ಎನ್ನಲಾಗಿ; ರಾಯ ಕೇಳಿ,—ಈ ದೋಷ ನನ್ನದೆನ್ನಲಾಗಿ; ಆ ಮಾತಿಗೆ ಮಂತ್ರಿಗಳು—ಆವನ ಅನುಭವಕ್ಕೆ ನಿಮಗೆ ಕಾರಣವೇನು? ಎಂದುದಕ್ಕೆ, ರಾಯ—ಕೇಳಿರೈ, ಆ ವಿಪ್ರನಿಗೆ ವೃತ್ತಿ ಕ್ಷೇತ್ರ ಉಚಿತಂಗಳ ನಾವು ಕೊಟ್ಟಿದ್ದರೆ ಅವನ ಮನೆಯಲ್ಲಿ ಜಗಳ ಬಾರದು. ಇದಱಿಂದ ಕಲಹವುಂಟಾಯಿತು. ಅದು ಕಾರಣ ಈ ದೋಷ ನಮ್ಮದೇ ಸರಿ—ಎಂದು ರಾಯನಾಡಿದ ಮಾತಿಗೆ ಸಕಲರೂ ಸಂತೋಷಪಡಲಾಗಿ; ಆ ಬಳಿಕ ಆ ದ್ವಿಜನಿಗೆ ಉಂಬಳಿ ಸ್ವಾಸ್ಥ್ಯವಂ ಸವಾಲಕ್ಷದ್ರವ್ಯ ಸಹ ಕೊಟ್ಟು ಕಳುಹಿಸಿದನು ಕಣಾ! ಎಂದ ಮಾತಿಗೆ ಮೋಹಿನಿಯೆಂಬ ಪುತ್ತಳಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ :—

ಕೇಳೈಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯ ರಾಜ್ಯವ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬ ಬ್ರಾಹ್ಮಣೋತ್ತಮ ರಾಯನ ಎದುರಿಗೆ ಬಂದು ನಿಂತು—ಎಲೈ ಮಹಾರಾಯನೇ! ನಾನು ದಾರಿದ್ರ್ಯದೋಷದಿಂದ [1]ದೇಶದೇಶದಲ್ಲಿರುವ ದೇವರ ಪೂಜಿಸಿದಾಗ್ಯೂ ದಾರಿದ್ರ್ಯ ಬಿಡದೆ ಇರಲಾಗಿ[1] ನೀನು ನೆರೆ ದಾತನೆಂದು ನಾನು ಕೇಳಿ ಬಂದೆ. ನನ್ನ ದಾರಿದ್ರ್ಯ

ಪಾ—1. ನಾನಾ ದೇಶಂಗಳಂ ತಿರುಗಿ ಆಯಾ ದೇಶಂಗಳಲ್ಲಿದ್ದ ದೇವತೆಗಳಂ ಪೂಜೆಯಂ ಮಾಡಿ, ನಾನಾ ದೇಶಂಗಳಲ್ಲಿರುವ ಬೆಟ್ಟಗಳನ್ನೇಱಿ ಬೀಳುವೆನೆಂದರೆ ನನ್ನ ದಾರಿದ್ರ್ಯ ಪೋಗದು.

ನಿನ್ನಿಂದ ತೀರಬೇಕೆನ್ನಲಾಗಿ ; ಅವನ ಆ ಮಾತಿಗೆ ರಾಯ ಮೆಚ್ಚಿ ಕೋಟ್ಲಿ ದ್ರವ್ಯವಂ ಕೊಟ್ಟು, ಮನ್ನಿಸಿ, ಆ ಬಳಿಕ—[1]ನೀನು ಚರಿಸಿದ ದೇಶದಲ್ಲಿ ಏನು ಅತಿಶಯವುಂಟು ?[1] ಎನ್ನಲಾಗಿ ; ಅವನಿಂತೆಂದನು :—ಭಾರತವರ್ಷವಂ ದಾಂಟಿ ಹರಿವರ್ಷಕ್ಕೆ ಬರುವ ದಾರಿಯಲ್ಲಿ ಒಂದು ಬೆಟ್ಟದ ಬಳಿಯಲಿ: ಶೃಂಗಾರವನದ ಮಧ್ಯದಲ್ಲಿ ಭಾಸ್ಕರ ಕ್ಷೇತ್ರದಲ್ಲಿ ದೇವೇಂದ್ರನಿಂದ ಪ್ರತಿಷ್ಠೆ ಮಾಡಲ್ಪಟ್ಟ [2]ಪುರಂದರೇಶ್ವರನೆಂಬ ಶಿವಲಿಂಗವಿರುವುದು. ಅದಱ ಸನ್ನಿಧಿಯಲ್ಲಿ ಒಬ್ಬ ದಿವ್ಯ ಪುರುಷ ನಿರಂತರವೂ ಹೆಣನ ಭಕ್ಷಿಸುವುದ ಕಂಡು ಇರುವೆನೆನ್ನಲಾಗಿ ;[2] ರಾಯ ಚೋದ್ಯಂಬಟ್ಟು ಅದ ನೋಡಬೇಕೆಂದು, ಆ ವಿಪ್ರನನ್ನು ಕರೆದುಕೊಂಡು ಖೇಚರಮಾರ್ಗದಲ್ಲಿ ಹರಿವರ್ಷದ ಮಕರಾದ್ರಿಯೆಂಬ ಬೆಟ್ಟದ ಬಳಿಯಲ್ಲಿ ಹೋಗಿ ಇರಲಾಗಿ ; ಎಂದಿನಂತೆ ದಿವ್ಯಪುರುಷ ಬಂದು ಹೆಣ ತಿನ್ನುವುದ ರಾಯ ಕಂಡು—ಎಲೈ ಮಹಾನುಭಾವನೇ ! ನೀನು ಹೆಣವಂ ಭಕ್ಷಿಸುವ ಕಾರಣವೇನೆಂದು ಕೇಳಿ, ಕೈಗಳಂ ಪಿಡಿಯಲಾಗಿ ; ಅವನು ತನ್ನ ಆಹಾರಕ್ಕೆ ಇವನಾರೋ ಅಡ್ಡಬಂದನೆಂದು ರಾಯನ ಹೊಡೆಯಲಾಗಿ ; ರಾಯ ಖತಿಗೊಂಡು ಅವನ ಹೊಡೆದುದಱಿಂದ ಅವನು ಆಯುಧ ತೆಗೆದುಕೊಳ್ಳಲಾಗಿ ; ರಾಯ ಶ್ರೀತಾಳಪತ್ರವಂ ಕೈಕೊಂಡು ಹಸಾಹಣಿ ಕೇಶಾಕೇಶಿ ಮೋಡಾಮೋಡಿ ಯುದ್ಧವಂ ಮಾಡುತ್ತ, ಗಂಧರ್ವನ ಶಿಖೆಯಂ ಪಿಡಿದು ನೆಲಕ್ಕೆ ಮೆಟ್ಟ ನಿಲ್ಲಲಾಗಿ ; ಅವನು—ನೀನಾರು ? ದೇವನೋ ?

ಪಾ—1. ನೀನು ನಾನಾ ದೇಶಂಗಳಂ ತೊಳಲಿ ಬಂದೆಯಲ್ಲ, ಆಯಾ ದೇಶಂಗಳಲ್ಲಿ ಏನೇನು ಚೋದ್ಯವ ಕಂಡುದುಂಟು ?

2. ಪುರಂದರೇಶ್ವರನ ಸಮೀಪದಲ್ಲಿ ಒಬ್ಬ ದಿವ್ಯ ಪುರುಷನು ನಿತ್ಯ ಪೆಣನಂ ತಿನ್ನುತಿರ್ಪನು. ಅದಂ ಕಂಡೆನೆಂತೆನೆ—ಸುವರ್ಣಮಯವಾದ ರಥವನ್ನೇಱಿ ಒಳ್ಳಿತಾದ ದಿವ್ಯಾಭರಣಂಗಳಂ ಧರಿಸಿಕೊಂಡು ಗಂಧರ್ವಪುರುಷನಂತೆ ಖೇಚರಮಾರ್ಗದಿಂದ ಬಂದು ಆ ಬೆಟ್ಟದ ಬಳಿಯಲ್ಲಿ ಒಂದು ಗವಿಯೊಳು ತನ್ನ ಒಡವೆ ವಸ್ತುಗಳಂ ಇರಿಸಿ, ಆ ರಥವಂ ಅಲ್ಲಿ ನಿಲ್ಲಿಸಿ, ಆ ಬಳಿಯಲ್ಲಿರುವ ಸ್ಮಶಾನವಂ ಹೊಕ್ಕು, ಅಲ್ಲಿರ್ದ ಬೂದಿಯಂ ಮೈಗೆ ಲೇಪನವಂ ಮಾಡಿಕೊಂಡು, ಅಱುವೆಗಳಂ ಕೈಕಾಲಿಗೆ ಕಟ್ಟಿಕೊಂಡು, ಆ ಶವದ ಬಸಿಱಂ ಸೀಳಿ, ಅಲ್ಲಿದ್ದ ಅನ್ನವಂ ಭಕ್ಷಿಸಿ, ಅನಂತರ ಮುನ್ನಿನಂತೆ ಒಡವೆ ವಸ್ತುಗಳಂ ತೊಟ್ಟುಕೊಂಡು, ಆ ರಥದಮೇಲೆ ಕುಳಿತುಕೊಂಡು ಖೇಚರ ಮಾರ್ಗದಿಂದ ಸ್ವರ್ಗಕ್ಕೆ ಪೋಪುದೊಂದಾಶ್ಚರ‍್ಯಮಂ ಕಂಡೆಯೆಂದು ಪೇಳಲು

ಕಿನ್ನರನೋ ? ಯಕ್ಷನೋ ? ಯಾರು ? ಎನ್ನಲಾಗಿ ;—ತಾನು ವಿಕ್ರಮಾದಿತ್ಯರಾಯನೆಂದುದಱಿಂದ, ಆ ಪುರುಷ ಕರಗಳ ಮುಗಿದು ವಂದಿಸಲಾಗಿ ; ಆಗವನ ಮುಂದಲೆಯಂ ಬಿಟ್ಟು, ಕುಳ್ಳಿರಿಸಿ—ನೀನು ಸ್ವರ್ಗಾದಿ ಭೋಗವನ್ನು ಅನುಭವಿಸುತ್ತಿದ್ದರೂ ಹೆಣ ತಿನ್ನುವುದೇನೆಂದು ಕೇಳಿದುದಕ್ಕೆ, ಆ ಪುರುಷ—ಎಲೈ ಮಹಾರಾಯನೇ ! ನಾನು ಪೂರ್ವಜನ್ಮದಲ್ಲಿ ಸುರಭಿಪಟ್ಟಣದಲ್ಲಿ ವೀರಸೇನನೆಂಬರಸಾಗಿ ರಾಜ್ಯವಾಳುವಲ್ಲಿ ಗೋದಾನ, ಭೂದಾನ, ಕನ್ಯಾದಾನ, ಹಿರಣ್ಯದಾನ, ವಸ್ತ್ರದಾನ, ಮುಂತಾದ ದಾನವಂ ಮಾಡಿ, ಅನ್ನೋದಕದಾನವಂ ಮಾಡದ ಕಾರಣ—ಸ್ವರ್ಗಭೋಗವಾದರೂ, ಅನ್ನೋದಕವಿಲ್ಲವಾದುದಱಿಂದ ನನ್ನ ಹೆಣದ ರಕ್ತ ಮಾಂಸವಂ ತಿನ್ನುವುದಾಗಿ ಅಮೃತಸೇವನೆ ತಪ್ಪಿತು. "ಲೋಕದಲ್ಲಿ ಆಹುತಿಸಮಾನವಾದ ಹೋಮ, ಗಾಯತ್ರೀಸಮಾನವಾದ ಜಪ, ಅನ್ನೋದಕಸಮಾನವಾದ ದಾನವಿಲ್ಲ" ಎಂಬ ನೀತಿ ಅಱಿಯದೆ, ಅನ್ನೋದಕದಾನ ಮಾಡದ ನಿಮಿತ್ತ, ಈ ಪ್ರಾಪ್ತಿ ಯೆನಗಾಯಿತೆಂದು ಪೇಳಲಾಗಿ ; ಅದ ರಾಯ ಕೇಳಿ, ಈ ದಿವ್ಯಪುರುಷನಂ ರಕ್ಷಿಸಬೇಕೆಂದು ಚಿಂತಿಸಿ, ತಾಯ ಗರ್ಭದಿಂದ ತಾನು ಪುಟ್ಟಿದಾರಭ್ಯ ಅಂದಿನವರೆಗೆ ಮಾಡಿದ ಅನ್ನೋದಕ ದಾನದ ಫಲವನ್ನು ಆತನಿಗೆ ಧಾರೆಯೆಱೆದು ಕೊಡಲಾಗಿ ; ದೇವದುಂದುಭಿ ಮೊಳಗಿದುವು ; ದೇವತೆಗಳು ಪೂಮಳೆಗಱೆದರು. ಆ ಫಲದಿಂದ ಹೆಣ ಮಱೆಯಾಗಲು, ಆ ಪುರುಷನಿಗೆ ಹೆಣ ತಿನ್ನುವುದು ತಪ್ಪಿ ಅಮೃತಸೇವನೆಯುಂಟಾಗಿ, ದೇವತೆಗಳು ವಿಮಾನವ ತೆಗೆದುಕೊಂಡು ಬಂದು ದಿವ್ಯಪುರುಷನ ದೇವಲೋಕಕ್ಕೆ ಕರೆದುಕೊಂಡು ಹೋಗುವಲ್ಲಿ—ರಾಯನ ಉದಾರಸಾತ್ವಿಕಗುಣಕ್ಕೆ ಮೆಚ್ಚಿ ಆಪುರುಷ ಕೇಳಿದುದ ಕೊಡುವುದೊಂದು ರತ್ನವಂ ರಾಯನಿಗೆ ಕೊಟ್ಟು, ಸುರಲೋಕಕ್ಕೆ ಹೋದನು. ಆ ಬಳಿಕ ಅಲ್ಲಿಂದ ರಾಯ ಬರುವ ದಾರಿಯಲ್ಲಿ ಒಬ್ಬ ಬ್ರಾಹ್ಮಣ ಅನ್ನವಿಲ್ಲದೆ ಕ್ಷುತ್ತಿನಿಂದಿರುವನಂ ಕಂಡು, ಅವನಿಗಾರತ್ನವಂ ಕೊಟ್ಟು, ಇಲ್ಲಿಗೆ ಬಂದು ಸುಖವಾಗಿದ್ದನು, ಕಣಾ !

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಮೋಹಿನಿಯೆಂಬ ಪುತ್ತಳಿಯು ಪೇಳಿದ ಹದಿನೈದನೆಯ ಕಥೆ.

೧೬ ನೆಯ ಕಥೆ.

ಹದಿನಾಱನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿ, ಷೋಡಶ ಮಹಾದಾನಂಗಳಂ ಮಾಡಿ, ಗಂಧಮಾಲ್ಯಾಭರಣಾಲಂಕೃತನಾಗಿ, ರತ್ನಖಚಿತವಾದ ಪಾವುಗೆಗಳ ಮೆಟ್ಟಿಕೊಂಡು, ಎಂದಿನಂತೆ ಚಿತ್ರಶರ್ಮನ ಕೈಲಾಗಿನಲ್ಲಿ ಓಲಗಸಾಲೆಗೆ ಬಂದು, ಸಿಂಹಾಸನವೆಡೆಗೆ ನಡೆತಂದು, ಬಲದ ಕಾಲಂ ನೀಡುವ ಸಮಯದಲ್ಲಿ ಆ ಸೋಪಾನದ ಕುರಂಗಲೋಚನೆಯೆಂಬ ಪುತ್ಥಳಿಯು—ಹೋಹೋ! ನಿಲ್ಲು ನಿಲ್ಲು! ಈ ಸಿಂಹಾಸನವನ್ನೇಱದಿರು ಭೋಜರಾಯನೇ! ನಮ್ಮೊಡೆಯನಾದ ವಿಕ್ರಮಾದಿತ್ಯರಾಯನಂತೆ ವೀರವಿತರಣಂಗಳುಳ್ಳೊಡೆ ಈ ಸಿಂಹಾಸನವನ್ನೇಱು, ಇಲ್ಲವಾದರೆ ಕೆಲಸಾರು. ಮೀಱಿ ಕುಳಿತೆಯಾದರೆ ನಿನ್ನ ತಲೆ ಸಹಸ್ರ ಹೋಳಾಗುವುದು! ಎಂದು ಧಿಕ್ಕರಿಸಲಾಗಿ; ಭೋಜರಾಯನು ಖಿನ್ನನಾಗಿ ಬೇಱಿಕೊಂಡು ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ:—

ಎಲೆ ಪುತ್ಥಳಿಯೆ! ಕೇಳು, ಧಾರಾಪುರದಲ್ಲಿ ನಮ್ಮೀ ಭೋಜರಾಯನು ಸುಖರಾಜ್ಯಂಗೆಯ್ಯುವಲ್ಲಿ ಒಂದು ದಿನ ಒಬ್ಬ ಬೇಡನ ಸತಿ ಲುಬ್ಧಿಕೆಯೆಂಬವಳು ಒಂದು ಹುಲ್ಲೆಯಂ ತಂದು [1] ಕೈಗಾಣಿಕೆಯೊಪ್ಪಿಸಲಾಗಿ; (ರಾಯ ಜಿಂಕೆಯಂ ನೋಡಿ—ಇದು ಇಷ್ಟು ಕಂಗೆಟ್ಟಿರುವ ಕಾರಣವೇನೆಂದು ಕೇಳಲಾಗಿ; ಅವಳಾ ಮಾತಿಗೆ—ಎಲೈ ರಾಯನೇ! ನಿನ್ನ ಕೀರ್ತಿಪ್ರತಾಪವನ್ನು ದೇವಕನ್ಯೆಯರು ಹಾಡುತ್ತಿರಲದನ್ನು ಕೇಳುತ್ತ ಮನಸೋತು ಈ ಹುಲ್ಲೆ ಹುಲ್ಲು ಮೆಯ್ಯುವುದನ್ನೂ ಮೆಲುಕು ಹಾಕುವುದನ್ನೂ ಸಹ ಮಱೆತು ಹೀಗೆ ಬಡವಾಯಿತೆಂದು ಹೇಳಲಾಗಿ;) [1] ರಾಯನು ಮೆಚ್ಚಿ ಅವಳಿಗೆ ಸವಾಲಕ್ಷ ದ್ರವ್ಯವನ್ನು ಕೊಟ್ಟು ಕಳುಹಿಸಿದನು ಕಣಾ!—ಎಂದ ಮಾತಿಗೆ ಕುರಂಗಲೋಚನೆಯೆಂಬ ಪುತ್ಥಳಿಯು ನಗುತ್ತ ಹಾಸ್ಯಂಗೆಯ್ದು ಪೇಳ್ದ ಉಪಕಥೆ:-

ಕೇಳೈಯ ಚಿತ್ರಶರ್ಮನೆ! ನಮ್ಮ ಒಡೆಯನಾದ ವಿಕ್ರಮಾದಿತ್ಯರಾ

ಪಾ—1. ಕೈಕಾಣಿಕೆಯೊಪ್ಪಿಸಿ, ಎರಲೆಯು ಮಱಿಯುಮುಖದಿಂದ ನಿಮ್ಮಡಿಯಂ ಕಾಣಬೇಕೆಂದು ಬಂದೆನೆಂದು ಪೇಳಲು; ಅದಂಕೇಳಿ.

ಯು ಈ ಉಜ್ಜಿನಿ ರಾಜ್ಯ ಪಾಲಿಸುವಲ್ಲಿ ಒಂದು ದಿನ ಈ ಪುರದೊಳೊಬ್ಬ ಧನದತ್ತನೆಂಬ ವರ್ತಕ ಬಹು ದ್ರವ್ಯಸಂಪಾದಿಸಿ ತನ್ನಲ್ಲಿತಾನೇ ಯೋಚಿಸಿ—[1] "ಭೋಜನಕ್ಕಿಲದ ಹಣ ತಾನಿರಲೇಕೆ? ಕೂಟಕ್ಕಿಲ್ಲದ ಸ್ತ್ರೀಯಿರಲೇಕೆ? ಧರ್ಮಕ್ಕಿಲ್ಲದ ಧನವಿರಲೇಕೆ? ಪರೋಪಕಾರ ಗೆಯ್ಯುವನೊಬ್ಬ ಧರ್ಮಾತ್ಮನಿಗಲ್ಲದೆ ಮಿಕ್ಕಾದವರಿಗೆ ಭಕ್ತಿ ದೊರೆವುದೆ?" ಎಂಬ ನೀತಿಯಂ ತಿಳಿದು, ಭಾಗ್ಯವಿದ್ದನಿಮಿತ್ತ[1] ಗೋದಾನ ಭೂದಾನ ಕನ್ಯಾದಾನ ಹಿರಣ್ಯದಾನ ಅನ್ನೋದಕದಾನ ವಸ್ತ್ರದಾನ ಮುಂತಾದ ದಾನಗಳಂ ಮಾಡಿ, ತೀರ್ಥಯಾತ್ರೆಗೆ ಹೋಗಿ, ಪುಣ್ಯನದಿಗಳಲ್ಲಿ ಸ್ನಾನವಂ ಮಾಡಿ, ಆ ಬಳಿಗಳಲ್ಲಿರುವ ದೇವರುಗಳ ಪೂಜೆಯುಂ ಮಾಡಿ, ಮರಳಿ ಪಟ್ಟಣಕ್ಕೆ ಬಂದು ಸುಖದಲ್ಲಿ ಇರುತ್ತ, ಒಂದುದಿನ ವಿಕ್ರಮಾದಿತ್ಯರಾಯನ ಓಲಗಕ್ಕೆ ಬರಲು ; ರಾಯ ಆ ವರ್ತಕನಿಗೆ ಬಹುಮಾನಮಾಡಿಸಿ—ನೀನು ಯಾತ್ರೆಗಳ ಮಾಡಿರುವ ವಿಚಾರವಂ ಕೇಳಿ ಇದ್ದೇವೆಯಾದರೂ ಆಸ್ಥಳಗಳಲ್ಲಿ ನಡೆದ ಅತಿಶಯವನ್ನು ನಿನ್ನಿಂದಲೇ ಕೇಳಬೇಕು ಎಂದು ಹೇಳಲಾಗಿ ; ಆ ವರ್ತಕನು—ಹಿಮವತ್ಪರ್ವತದ ಬಳಿಯಲ್ಲಿರುವ ಮಣಿಮಂಡಲವೆಂಬ ಪಟ್ಟಣದ ಶ್ರುತಸೇನನೆಂಬ ರಾಯ ಬಹುಕಾಲ ರಾಜ್ಯವಾಳುತ್ತಿರುವಲ್ಲಿ ಸಂಸ್ಕಾರಫಲದಿಂದ ಒಬ್ಬ ಮಗಳ ಹಡೆದು ಗಂಡುಮಕ್ಕಳಿಲ್ಲದೆ ಇರಲು,—ಮುಂದೆ ಪಟ್ಟಣಕ್ಕೆಯಾರೂ ಇಲ್ಲ. ಒಬ್ಬ ಮಗಳಿದ್ದಾಳೆ. ಇದಕ್ಕೆ ಹೇಗೆ ಮಾಡಬೇಕೆಂದು ಮಂತ್ರಿಗಳೊಡನೆ ಆಲೋಚಿಸಿ, ಇರುವ ಮಗಳಿಗೆ ಪಟ್ಟ ಕಟ್ಟಬೇಕೆಂದು ಅವರು ಹೇಳೆ, ಆ ಮಗಳಿಗೆ ಪಟ್ಟಾಭಿಷೇಕವಂ ಮಾಡಿ, ರಾಜ್ಯಭಾರವಂ ಮಾಡಿಸುತ್ತಿರಲಾಗಿ ; ಆ ರಾಯ ತನ್ನ ಮಗಳು ಯೌವನಸ್ಥೆಯಾದಳೆಂದು ತಿಳಿದು, ಇನ್ನು ವಿವಾಹವಿಲ್ಲದೆ ಇರಬಾರದೆಂದು ಅವಳಿಗೆ ತಕ್ಕ ಪುರುಷನ ವಿಚಾರಿಸುತ್ತಿರುವಲ್ಲಿ,—ಆ ಪಟ್ಟಣದಲ್ಲೊಬ್ಬ ರಾಕ್ಷಸನಿರುವನು. ಅವನು ಹೊಸಜನರ ಕಂಡಕ್ಷಣವೇ ತಿನ್ನುವನು (ಎಂದು ಕೇಳಿ) ಅದು ಕಾರಣ ಅಲ್ಲಿಗೆ ಯಾರೂ ಹೋಗದೆ ಇರು

ಪಾ—2. ಭೋಜನೋಚಿತವಾದ ಸಕಲ ಪದಾರ್ಥಗಳಿಂದ ಭುಂಜಿಸುವ ಭಕ್ತಿಯೆಂಬುದು ಬಹು ಪುಣ್ಯಾತ್ಮನಿಗಲ್ಲದೆ ದೊರಕದೆಂದು, ತನಗೆ ಭಾಗ್ಯವುಂಟಾದ ಕಾರಣ.

ವುದರಿಂದ, ಅವಳಿಗೆ ಮದುವೆಯಿಲ್ಲದೆ ರಾಜ್ಯವಾಳುವಳು ಎನ್ನಲು; ರಾಯ ಕೇಳಿ, ಅವನ ಕರೆದುಕೊಂಡು ಆಕಾಶಮಾರ್ಗದಲ್ಲಿ ಆ ಪಟ್ಟಣಕ್ಕೆ ಹೋಗಿ, ಬೀದಿಗಳಲ್ಲಿ ಚರಿಸುತ್ತ ಆ ಚಂದ್ರಲೇಖೆಯ ಉಪ್ಪರಿಗೆಯ ಬಳಿಗೆ ಹೋಗುವುದ ಆರಾಕ್ಷಸ ಕಂಡು,—ಯಾವನೋ ಹೊಸಬ, ತಿನ್ನಬೇಕೆಂದು ತೊಡೆ ಭುಜವಂ ತಟ್ಟಿ ಮೀಸೆಯಂ ತಿರುಹುತ್ತ ಬಂದು, ರಾಯನ ಹೊಡೆಯಲಾಗಿ; ರಾಯ ಆ ಏಟ ತಪ್ಪಿಸಿಕೊಂಡು, ಆ ರಾಕ್ಷಸನ ಹೊಡೆದು ಮುಂದಲೆವಿಡಿದು ನೆಲಕ್ಕೆ ಬಡಿದು ಅಪ್ಪಳಿಸಲಾಗಿ ; ಆ ರಾಕ್ಷಸನು ಮೃತವಾದುದ ಎಲ್ಲರೂ ಕಂಡು ಆಶ್ಚರ್ಯಪಟ್ಟು, ಅರಸಾದ ಚಂದ್ರಲೇಖೆಗೆ ಬಂದು ಹೇಳಲಾಗಿ ; ಅವಳು ರಾಯನ ವರ್ತಕನ ಸಹ ಕರೆಯಬಿಟ್ಟು ಸಿಂಹಪೀಠದಲ್ಲಿ ಕುಳ್ಳರಿಸಿ ಸತ್ಕರಿಸಿ, ರಾಯನ ನೋಡಿ—ನೀನು ನರನೋ ? ಹರಿಯೋ? ಸುರಪತಿಯೋ? ಮನಸಿಜನೋ? ಯಾರೆಂದು ಕೇಳಲಾಗಿ ;—ನಾನು ವಿಕ್ರಮಾದಿತ್ಯರಾಯ ಎಂದುದಂ ಕೇಳಿ, ರಾಯನ ಪಾದಕ್ಕೆರಗಿ,—ಶಶಿರವಿಗಳಂತೆ ಕಾಂತಿಯುಳ್ಳ ನಿನ್ನ ಸಂದರ್ಶನ ಮಾತ್ರದಿಂದ ಇಂದಿಗೆ ನಾನು ಧನ್ಯಳಾದೆನು, ಎಂದುದಕ್ಕೆ, ರಾಯನಿಂತೆಂದನು :—ಎಲೆ ಅರಸಿಯೇ ! ಈ ರಾಕ್ಷಸನು ಇಲ್ಲಿ ಇದ್ದ ಕಾರಣ ವೇನೆಂದು ಕೇಳಲಾಗಿ ; "ಮುನ್ನೊಬ್ಬ ಯಾಚಕಬ್ರಾಹ್ಮಣ ಬಂದು ತನ್ನ ವಿದ್ಯಾಕುಶಲತೆಯ ತೋರಿ ತನ್ನ ದಾರಿದ್ರ್ಯ ತೀರಬೇಕೆಂದು ಕೇಳಲಾಗಿ, ಅವನಿಗೆ ಕೋಟಿ ಧನವಂ ಕೊಟ್ಟು ಕಳಿಹಿಸುವಲ್ಲಿ ; ನಮ್ಮ ಪುರೋಹಿತ ಅವನ ತಿರಸ್ಕರಿಸಿ ನುಡಿಯಲಾಗಿ ; ಆತ ಕೋಪಿಸಿ—ನೀನು ರಾಕ್ಷಸನಾಗು. ಇಲ್ಲಿ ಇದ್ದುಕೊಂಡು ಹೊಸಜನ ಬಂದರೆ ತಿನ್ನು ಎಂದು ಶಾಪವಿತ್ತನು. ಅದ ಕಂಡು ಆಗ ಇವನಿಗೆ ಈ ಶಾಪ ವಿಮೋಚನೆ ಎಂದಿಗೆ? ಎಂದು ನಾನು ಕೇಳಿಕೊಳ್ಳಲಾಗಿ ; ವಿಕ್ರಮಾದಿತ್ಯರಾಯನು ಇಲ್ಲಿಗೆ ಬಂದಾಗ ಆತನಿಂದ ತೀರುವುದೆಂದು ಹೇಳಿ ಹೋದುದರಿಂದ, ಇಂದಿಗಾತನ ಶಾಪ ತೀರಿತು" ಎನ್ನಲಾಗಿ ; ಆ ರಾಕ್ಷಸರೂಪಳಿದು ಬ್ರಾಹ್ಮಣೋತ್ತಮರೂಪಾಗಿ ಆ ಪುರೋಹಿತ ಬಂದು ಎದುರಾಗಿ ನಿಂತುಕೊಂಡ ಬಳಿಕ, ರಾಯ ಧನದತ್ತನಿಗೆ ತನ್ನ ವೀರ ವಿತರಣ ಸಾಹಸ ಪರಾಕ್ರಮ ಮುಂತಾದುದೆಲ್ಲವ ಉಪದೇಶವಂ ಮಾಡಿ ಕೊಟ್ಟು, ಆ ಧನದತ್ತನಿಗೆ ಆ ಚಂದ್ರಲೇಖೆಯನ್ನು ವಿವಾಹ ಮಾಡಿಸಿ, ಆ ಪಟ್ಟಣದ ಪಟ್ಟಾಭಿಷೇಕವಂ ಮಾಡಿಸಿ,—ಸುಖವಾಗಿದ್ದುಕೊಂಡಿರಿ, ಎಂದು ಹೇಳಿ,

ಅಲ್ಲಿಂದ ಆಕಾಶಮಾರ್ಗದಲ್ಲಿ ಇಲ್ಲಿಗೆ ಬಂದು, ಈ ರಾಜ್ಯವನ್ನು ಪರಿಪಾಲಿಸಿ ಪೊರೆಯುತ್ತ, ಈಸಿಂಹಾಸನಾರೂಢನಾಗಿ ತಾನು ಸುಖದಲ್ಲಿದ್ದನುಕಣಾ!

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಕುರಂಗಲೋಚನೆಯೆಂಬ ಪುತ್ತಳಿ ಪೇಳಿದ ಹದಿನಾಱನೆಯ ಕಥೆ.

೧೭ ನೆಯ ಕಥೆ.

ಹದಿನೇಳನೆಯ ದಿವಸದಲ್ಲಿ ಭೋಜರಾಯನು ಸ್ನಾನದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿ ಸಿಂಹಾಸನದ ಬಳಿಗೆ ಬಂದು ಬಲಗಾಲಂ ನೀಡುವ ಸಮಯದಲ್ಲಿ, ಆ ಸೋಪಾನದ ಕಾಮಕೇಳಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ, ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:—

[1] ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಂಗೆಯ್ಯುವಲ್ಲಿ ಒಂದುದಿನ ನಾಟಕಶಾಲೆಯಲ್ಲಿ ಕುಳಿತು ಚಿತ್ರಲೇಖೆಯೆಂಬ ವೇಶಿಯ ನಾಟ್ಯವಂ ನೋಡುವಲ್ಲಿ ರಾಯಂಗೆ ದಾಹ ಕಂಡುದ ಹಡಪಿಗ ತಿಳಿದು ಪನ್ನೀರಗಿಂಡಿಯಂ ಕುಡಲಾಗಿ ; ರಾಯ ದಾಹಶಮನ ಮಾಡಿಕೊಂಡು ಹಡಪಿಗನ ಮೆಚ್ಚಿ ಆ ಸವಾಲಕ್ಷದ ಗಿಂಡಿಯನ್ನು ಅವನಿಗೆ ಕೊಟ್ಟು ಆ ವೇಶಿಯ ನಾಟ್ಯದ ಕುಶಲತೆಗೆ ಅವಳಿಗೆ ಸವಾಲಕ್ಷದ್ರವ್ಯವನಿತ್ತು ಕಳುಹಿಸಿದನು, ಎಂದ ಮಾತಿಗೆ ಕಾಮಕೇಳಿಯೆಂಬ ಪುತ್ತಳಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ[1]:—

ಪಾ—1. ಎಲೆ ಪುತ್ತಳಿಯೆ! ಕೇಳು. ನಮ್ಮೊಡೆಯ ಭೋಜರಾಯನು ಧಾರಾಪುರದಲ್ಲಿ ಸುಖರಾಜ್ಯಂಗೆಯ್ಯುತ್ತಿಪ್ಪ ಸಮಯದಲ್ಲಿ, ಒಂದಾನೊಂದು ದಿನ ತನ್ನ ನಾಟಕಶಾಲೆಯೊಳು ನಾನಾವಿಧದ ನಾಟ್ಯವನಾಡುತ್ತ ಇರಲಾಗಿ, ರಾಯಂಗೆ ದಾಹವಾಗಲು, ಗಿಂಡಿಯು ಪನ್ನೀರನ್ನೆಱೆಯುವ ಸಮದಲ್ಲಿ ನಾಟ್ಯವಿದ್ಯೆಯ ಕುಶಲತೆಗೆ ಮೆಚ್ಚಿ ರಾಯಂ ತಲೆದೂಗುತ್ತಿರಲು, ಗಿಂಡಿಯು ಪನ್ನೀಱನ್ನೆರೆಯುತ್ತಿರಲು;

ಕೇಳ್ಳಯ್ಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪರಿಪಾಲಿಸುವಲ್ಲಿ ಒಂದುದಿನ ತನ್ನ ಸೇವಕಜನದಲ್ಲಿ ಒಬ್ಬನ ಕರೆದು ಅವನ ಪ್ರೌಢತ್ವವ ನೋಡಬೇಕೆಂದು—ಈಶಾರಿನಲ್ಲಿ ಹೇಸಿಗೆಯಾದ ಗೀಜವಾಯನ ನೋಡಿ ಕರೆದುಕೊಂಡು ಬಾ, ಎಂದು ಕಟ್ಟಳೆ ಮಾಡಿ ಕಳುಹಲಾಗಿ; ಆ ಸೇವಕ ಪಟ್ಟಣದ ಬೀದಿಗಳಲ್ಲಿ ಹುಡುಕುತ್ತ ಬರುವಲ್ಲಿ—ಒಬ್ಬನು ಬಾಯೊಳಗೆ ಅಡಕೆಯ ಹಾಕಿಕೊಂಡು, ಕೈಯಲ್ಲಿ ಎಲೆಯ ಹಿಡಿದು, ಹಾಗೆಯೇ ಹೊಟ್ಟೆಯುಬ್ಬರಿಸಿ ಬಹಿಶ್ಯಂಕೆಗೆ ಹೋಗಿ ಬಿಡುಗಚ್ಚೆ ಸಹಿತ ಕಂಡ ಕಂಡವರಿಗೆಲ್ಲ ಸುಣ್ಣಕ್ಕೆ ಹಲ್ಲುಕಿರಿಯುತ್ತಿರುವುದ ಕಂಡು, ಇವನೇ ಗೀಜವಾಯನೆಂದು, ಅವನ ರಾಯನ ಬಳಿಗೆ ಕರೆತಂದು ನಿಲ್ಲಿಸಿ, ಅವನ ವಿಚಾರವೆಲ್ಲವ ರಾಯನಿಗೆ ಅರಿಕೆಯಂ ಮಾಡಲಾಗಿ; ರಾಯ ಸೇವಕನ ಚಾತುರ್ಯಕ್ಕೆ ಮೆಚ್ಚಿ, ಆ ಸೇವಕನಿಗೆ ಬಹುಮಾನವಂ ಮಾಡಿ ಕಳುಹಿಸಿ, ಬಳಿಕ ಆ ಗೀಜವಾಯನ—ನೀನು ಆವ ದೇಶ? ನಿನ್ನ ಕುಲವಾವುದು? ಹೀಗೆ ಎಲ್ಲ

ಮತ್ತೆ ತಲೆದೂಗುತ್ತಿರಲು, ನೀರನೆಱೆದುದಕ್ಕೆ ಮಾಣ್ಬುದಕ್ಕೆ ರಾಯಂ ಮೆಚ್ಚೆ, ಹಡಪಿಗಂಗೆ ಮತ್ತೂ ಕೈನೀಡಲು ಆ ಸವಾಲಕ್ಷ ಹೊನ್ನಿನ ಗಿಂಡಿಯಂ ಕೊಡಲದ ಪಾತ್ರವಾಡುವ ವೇಶಿಗೆ ಕೊಟ್ಟು, ಮತ್ತೂ ಕೈ ನೀಡಲು, ಐವತ್ತುಸಾವಿರ ಹೊನ್ನಿನ ಗಿಂಡಿಯ ನೀಯಲದಂ ನಾಟಕಗಿತ್ತ ಹಡಪಿಗಂ ಮತ್ತೂ ಕೈ ನೀಡಲು, ಹನ್ನೆರಡು ಸಾವಿರ ಹೊನ್ನ ಗಿಂಡಿಯನೀಯಲು, ಅದಂ ಹಡಪಿಗನ ಕೈಗೆ ಕೊಡಲು; ಸಮೀಪದಲ್ಲಿ ಕುಳಿತಿರುವ ಸಾಮಾಜಿಕರು ಕಂಡು—ಇಂತಪ್ಪ ತ್ಯಾಗವೇನು? ಎಂದು ಕೇಳಲಾ ರಾಯನಿಂತೆಂದನು:—ನಾನು ನೀರ ಕುಡಿಯುತ್ತಿರವಾಗ ತಲೆದೂಗಲದಂ ಹಡಪಿಗಂ ಕಂಡು, ಪಾತ್ರಕೆ ಮೆಚ್ಚಿ ತಲೆದೂಗಿದನೆಂದಱಿತು ಮತ್ತೂ ನೀರನೆಱೆಯುತ್ತಿರಲು, ಮತ್ತೆ ತಲೆದೂಗುತ್ತಿರಲು, ನಾಟಕಂಗೆ ಉಚಿತವಂ ಕೊಡುವುದಕ್ಕೆ ಈ ಗಿಂಡಿಯಂ ಕೊಡು ಎಂದು ತಲೆದೂಗಿದನೆಂದು ಗಿಂಡಿಯಂ ಕೊಡಲು, ಅದಂ ನಾಟಕಂಗಿತ್ತು, ಮತ್ತು ತಲೆದೂಗಲು ಕಂಡು ಐವತ್ತುಸಾವಿರ ಹೊನ್ನಿನ ಗಿಂಡಿಯಂ ಕೊಡಹೇಳಿದನೆಂದಱಿತು ಅದಂ ಕೊಟ್ಟನು. ಆ ಗಿಂಡಿಯಂ ನಾಟಕಂಗೆ ಕೊಟ್ಟು ಮತ್ತೂ ತಲೆದೂಗಲು, ತನಗೆ ಉಚಿತವಂ ಕೊಡುವುದಕ್ಕೆ ತಲೆದೂಗಿದನೆಂದು ಹನ್ನೆರಡು ಸಾವಿರ ಹೊನ್ನಿನ ಗಿಂಡಿಯಂ ಕೊಡಲದಂ ಹಡಪಿಗನ ಕೈಯಲ್ಲಿ ಕೊಟ್ಟನೆಂದು ಪೇಳ್ದ ರಾಯನ ನುಡಿಯಂ ಕೇಳ್ದು ಸಭೆಯೆಲ್ಲವೂ ಮೆಚ್ಚಿ ಕೊಂಡಾಡಿದರು. ಇಂತಪ್ಪ ತ್ಯಾಗಿ ಕಣಾ! ನಮ್ಮ ಭೋಜರಾಜನೆಂದು ನುಡಿದ ಚಿತ್ರಶರ್ಮನ ವಾಕ್ಯಮಂ ಕೇಳಿ ಪುತ್ಥಳಿಯು ಹೇಳಿದ ಉಪಕಥೆ.—ಎಂದು ಬೇರೊಂದು ಪ್ರತಿಯಲ್ಲಿದೆ.

ರಿಗೂ ಹಲ್ಲ ಕಿರಿಯುವುದೇನು? ಎಂದು ಕೇಳಲಾಗಿ ; ಅವನು—ನಾನು ಕಿರಾತ ದೇಶದ ಬ್ರಾಹ್ಮಣ. ಸದ್ವಂಶದಲ್ಲಿ ಹುಟ್ಟಿದ್ದರೂ ಕುಟುಂಬ ರಕ್ಷಣೆ ಗೋಸ್ಕರ ಸೇವಕಾವೃತ್ತಿಯಲ್ಲಿದ್ದು ಈ ರೀತಿಯಾದೆನು. ನಾನಿದ್ದುದು ಕುಗ್ರಾಮವಾಗಿ, ದೇಶಾಂತರವ ಬಂದೆನು. ದರಿದ್ರದೋಷದಿಂದ ಕುಲಾ ಚಾರವ ಬಿಟ್ಟು ಹೀಗೆ ತಿರುಗುತ್ತಿರುವೆನು. ದರಿದ್ರದೋಷದಿಂ ಪಾಪ ಮಾಡು ವನು, ಪಾಪದಿಂದ ನರಕಕ್ಕೆ ಪೋಪನು, ಮತ್ತು ದರಿದ್ರನಾಗಿ ಪುಟ್ಟುವನು ಮತ್ತೂ ಪಾಪನಹನು" ಎಂಬ ನೀತಿಯುಂಟಾಗಿ, ದರಿದ್ರನಾದುದರಿಂದ ಎಲ್ಲ ರಿಗೂ ಈ ರೀತಿ ಹಲ್ಲ ಕಿರಿಯುವೆನು, ಎನ್ನಲು ; ಆ ಮಾತಿಗೆ ರಾಯನು ಮುಳುಗಿ, ಹೆದರಬೇಡವೆಂದು ಅವನಿಗೆ ಧೈರ್ಯವಂ ಹೇಳಿ,—ನಿಮ್ಮ ಕಿರಾತ ದೇಶದಲ್ಲಿ ಏನಾದರೂ ಚೋದ್ಯದ ವರ್ತಮಾನವುಂಟೆ? ಎನ್ನಲಾಗಿ; ಆಹಳ್ಳಿ ಗನಿಂತೆಂದನು:—ನಮ್ಮ ಕಿರಾತದೇಶದಲ್ಲಿ ತುಂಗಪಟ್ಟಣವೆಂಬ ಪಟ್ಟಣವುಂಟು. ಅದರ ಸಮೀಪದಲ್ಲಿ ಒಂದು ಬೆಟ್ಟವುಂಟು. ಆಬೆಟ್ಟದಲ್ಲಿ ಒಂದು ಗುಹೆ ಯುಂಟು. ಅದರಲ್ಲಿ ಒಬ್ಬ ತಪಸ್ವಿ ವಾಸವಾಗಿಹನು, ಅವನು ವಾಮನ ರೂಪಿಯಾಗಿ, ಯತಿಯಾಗಿ, ಪಾವಾಗಿ, ಹುಲಿಯಾಗಿ, ಸಿಂಹವಾಗಿ, ಪಿಶಾಚಿ ಯಾಗಿ, ರಾಕ್ಷಸನಾಗಿ, ಆಬೆಟ್ಟವನ್ನೆಲ್ಲಾ ತಿರುಗುತ್ತಿಹನು. ಆತಂಗೆ ರಾ ಜ್ಯದ ಬೇಡರು ಪ್ರತಿದಿನವೂ ಅನ್ನವಂ ಕೊಡುತ್ತಿಹರು. ಒಂದುದಿನ ತಪ್ಪಿ ದರೆ ಊರ ಜನರ ತಿಂದು ತೇಗುವನು-ಎಂದ ಮಾತಿಗೆ ರಾಯ ವಿಸ್ಮಿತನಾಗಿ ಆಹಳ್ಳಿಗನ ಸಹಿತ ಆಕಾಶಮಾರ್ಗದಲ್ಲಿ ಪೋಗಿ, ಆ ಮಾಯಾಪುರುಷನಂ ಕಂಡು, ಹಿಡಿಯಲು; ಆಪುರುಷ ತಪ್ಪಿಸಿಕೊಂಡು ಮಾಯವಾಗಿ, ಕೆಂಜಡೆ ಕಿಂಕಿಣಿರವ ಕಾಲಿನಲ್ಲಿ ಹಾವುಗೆ ಬೆನ್ನಿನಲ್ಲಿ ಹೊತ್ತ ಹುಲಿಚರ್ಮ ಕೈಯ ಲ್ಲಿ ರುದ್ರಾಕ್ಷಿಜಪಮಾಲೆ ಇಂದ್ರಜಾಲ ಮಹೇಂದ್ರಜಾಲ ಹೇಳುತ್ತ ಒಬ್ಬ ಕಪಟಯತಿಯಂತೆ ಬರಲು ; ರಾಯ ಹಿಡಿಯ ಹೋಗಲು ; ಪಾವಾ ಗಿಯೂ ಪಕ್ಷಿಯಾಗಿಯೂ ಪಿಶಾಚಿಯಾಗಿಯೂ ಕಾಣಿಸಲು ; ಪುನಃ ಹಿಡಿ ಯಪೋಗಲು, ಮಾಯವಾಗಿ ಪೋಗುವನು, ಗಿರಿಶಿಖರದಲ್ಲಿ ಕಾಣುವನು, ಮತ್ತೊಂದು ಬಳಿಗೆ ಪೋಗುವನು, ಅಟ್ಟಿದರೆ ಓಡುವನು. ಈ ರೀತಿ ರಾಯನ ಕಾಡುತ್ತಿರಲಾಗಿ—ರಾಯ ಕೋಪಾಟೋಪನಾಗಿ ತನ್ನ ಶಕ್ತಿಯಿಂದ ಅವನ ಮಾಯೆಯ ಗೆದ್ದು, ಅಟ್ಟಿಹೋಗಿ ಹಿಡಿತಂದು, ಹೆಡಗಟ್ಟು ಕಟ್ಟಿ; ಕಿಚ್ಚಿ

ನೊಳು ಹಾಕುವಷ್ಟರಲ್ಲಿ ಅವನು—ಎಲೈ ರಾಯ! ನಿಲ್ಲು ನಿಲ್ಲು, ನಾನು ಪೋರ್ವ,ಎನ್ನ ರಕ್ಷಿಸು ರಕ್ಷಿಸು!ಎಂದು ದೀನನಾಗಿ ಬೇಡಿಕೊಳ್ಳಲು; ಅದಕ್ಕೆ-ನೀನು ಯಾರು? ಎಂದು ಕೇಳಲು; ಕೇಳೈ ಮಹಾರಾಯನೇ! ನಾನು ಮುನ್ನಿನ ಜನ್ಮದಲ್ಲಿ ಕಾಶ್ಯಪಗೋತ್ರದ ಕಾಮಪಾಲನ ಮಗ, ಅತಿದ್ರವ್ಯವ ಸಂಪಾದಿಸಿ, ದಾನಧರ್ಮಪರೋಪಕಾರವ ಮಾಡದೆ, ಆ ಹಣವನ್ನು ಈ ಬೆಟ್ಟದ ಗುಹೆಯಲ್ಲಿ ನಿಕ್ಷೇಪವಂ ಮಾಡಿ, ಮೃತನಾದೆನು. ಆಹಣದಾಸೆ ಯಿಂದ ಈಗ ಪಿಶಾಚಿಯಾಗಿ ಕಾದಿರುವೆನು. ನಾನು ಮನುಷ್ಯನಲ್ಲ. ಇಂದಿನ ದಿನ ಸುದಿನ. ಜನ್ಮಾಂತರದಲ್ಲಿ ಮಾಡಿದ ಪುಣ್ಯದಿಂದ ನಿನ್ನಂಥ ಪುಣ್ಯಪುರುಷನ ದರ್ಶನವಾಯಿತು. ನನಗೆ ಪಿಶಾಚತ್ವ ಬಿಡುವಹಾಗೆ ದಯೆಮಾಡಬೇಕು. ಎಂದು ರಾಯನ ಪಾದಕ್ಕೆರಗಲಾಗಿ; ರಾಯನಿಗೆ ಕರುಣವುಂಟಾಗಿ, ತಾನು ಮಾಡಿದ ದಾನಧರ್ಮಗಳಲ್ಲಿ ಒಂದು ದಿನದ ಧರ್ಮದ ಫಲವಂ ಧಾರೆಯೆರೆದು ಕೊಡಲು; ಆಗ ಅವನಿಗೆ ಪಿಶಾಚತ್ವ ಹೋಗಿ ದಿವ್ಯಪುರುಷನಾದನು. ಆಗ ದೇವತೆಗಳು ದೇವದುಂದುಭಿಗಳ ಧ್ವನಿಗೆಯ್ದು ಪೂಮಳೆ ಗರೆದು, ದಿವ್ಯ ವಿಮಾನವಂ ಕಳುಹಿಸಲಾಗಿ; ಆಪುರುಷ ರಾಯ ಮಾಡಿದ ಉಪಕಾರಕ್ಕೆ ಪೂರ್ವದಲ್ಲಿ ತಾ ನಿಕ್ಷೇಪ ಮಾಡಿದ್ದ ಹತ್ತು ಕೋಟಿದ್ರವ್ಯವಂ ಕಿತ್ತು ಕೊಟ್ಟು, ಆವಿಮಾನದಲ್ಲಿ ಕುಳಿತು, ಸುರಲೋಕಕ್ಕೆ ಹೋಗಲಾಗಿ; ರಾಯನು ಆ ಹಣವನ್ನು ಸಂಗಡ ಬಂದ ಗೀಜವಾಯನಿಗೆ ಕೊಟ್ಟು, ಕಳುಹಿಸಿ, ತಾನು ಇಲ್ಲಿಗೆ ಬಂದು ಸುಖವಾಗಿದ್ದನು ಕಣಾ!

ಇಂತು ಕರ್ಣಾಟಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಕಾಮಕೇಳಿಯೆಂಬ ಪುತ್ತಳಿಯು ಪೇಳಿದ ಹದಿನೇಳನೆಯ-ಕಥೆ.

೧೮ ನೆಯ ಕಥೆ.

ಹದಿನೆಂಟನೆಯ ದಿವಸ ಭೋಜರಾಜನು ಸ್ನಾನ ದೇವತಾರ್ಚನೆ-ತಾಂಬೂಲವಂ ತೀರಿಸಿಕೊಂಡು, ಸರ್ವಾಭರಣಾಲಂಕೃತನಾಗಿ, ಎಂದಿನಂತೆ

ಚಿತ್ರಶರ್ಮನ ಕೈಲಾಗಿನಿಂದ ಮೂವತ್ತೆರಡು ಪುತ್ಥಳಿಯುಕ್ತವಾದ ಸಿಂಹಾಸನದ ಬಳಿಗೆ ಬಂದು ಬಲದ ಕಾಲಂ ನೀಡುವ ಸಮಯದಲ್ಲಿ—ಆ ಹದಿನೆಂಟನೆಯ ಸೋಪಾನದ ರತ್ನಚಂಡಿಕೆಯೆಂಬ ಪುತ್ಥಳಿಯು—ಹೋ ಹೋ! ನಿಲ್ಲು ನಿಲ್ಲು! ಎಂದು ಧಿಕ್ಕರಿಸಲಾಗಿ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ಥಳಿಯೇ, ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಂಗೆಯ್ಯುತಿರುವಲ್ಲಿ—ಕಾಶ್ಮೀರ ದೇಶದ ಸರ್ವತೋಭದ್ರವೆಂಬ ಪಟ್ಟಣದರಸು ತಲೋತ್ತುಂಗನಿಗೆ ಸೀಮಂತಿನಿಯೆಂಬ ಮಗಳು, ಬುದ್ಧಿಶಾಲಿಯೆಂಬ ಆತನ ಪ್ರಧಾನನಿಗೆ ಸುಮುಖನೆಂಬ ಮಗನು ಇದ್ದರು. ಆ ಅರಸಿನ ತನುಜೆ ಪ್ರಧಾನಿಯ ತನುಜ ಸಹ ವಿದ್ಯಾಪಾಲನೆಂಬ ಬ್ರಾಹ್ಮಣೋತ್ತಮನ ಬಳಿಯಲ್ಲಿ ವಿದ್ಯಾಭ್ಯಾಸವಂ ಮಾಡುತ್ತಿರುವಲ್ಲಿ—ಆ ಸೀಮಂತಿನಿ ಸುಮುಖನಮೇಲೆ ಮೋಹಿಸಿ ಇರುವಳು, ಆ ಸುಮುಖನು ಅವಳ ಮೇಲೆ ಕಾಮಿಸಿ ಇರುವನು. ಇಷ್ಟಱಲ್ಲಿ ಅರಸಾದ ಅವಳ ತಂದೆ ಸಿಂಗಳದ್ವೀಪದ ಅರಸಿನ ಮಗನಿಗೆ ತನ್ನ ಮಗಳ ಕೊಡಬೇಕೆಂದು ನಿಶ್ಚಯಿಸಲು, ಆದ ಮಗಳಾದ ಸೀಮಂತಿನಿ ತಿಳಿದು,(ಅದು ತನಗೆ ಇಷ್ಟವಿಲ್ಲದಿರಲು, ಒಂದು ದಿನ) ರಾತ್ರಿಯಲ್ಲಿ ಬೇಕಾದಷ್ಟು ದ್ರವ್ಯವಂ ಒಡನೆ ಸಹ ತೆಗೆದುಕೊಂಡು, ಪ್ರಧಾನನ ಮಗ ಸುಮುಖನ ಬಳಿಗೆ ಬಂದು, ತನ್ನ ತಂದೆ ಮಾಡಿರುವ ಆಲೋಚನೆಯಂ ಹೇಳಿ, ತನ್ನ ವಿವರವಂ ತಿಳಿಸಿ, ಆಸುಮುಖನ ಕರೆದುಕೊಂಡು [1]ಉತ್ತರದಿಕ್ಕಿನಲ್ಲಿ[1] ಪೋಗಿ, ಪಯಣಗತಿಯಿಂ ಬಂದು ಘೋರಾರಣ್ಯದಲ್ಲಿ ಬರುತಿಪ್ಪ ಸಮಯದಲ್ಲಿ [2]ಬಾಯಾಱಿ,[2] ನೀರಂ ಕಾಣದೆ, ಬಂದು ಚೂತವೃಕ್ಷದ ನೆಳಲಲ್ಲಿ ಕುಳಿತುಕೊಳ್ಳಲಾಗಿ; [3]ಆಕುಮಾರನು ಈಕೆಯ ಬಳಲಿಕೆಯಂ ನೋಡಿ ಕನಿಕರಪಟ್ಟು, ಆಬಳಲಿಕೆಯಂ ತೀರಿಸಬೇಕೆಂದು ಆಮಾವಿನ ಮರದಲ್ಲಿ ರುಚಿಕರವಾದ ಒಂದು ಹಣ್ಣನ್ನು ಕೊಯ್ದು ಕೊಡಲು; ಅವಳು ಆ ಹಣ್ಣ ಮೆದ್ದರೂ ದಾಹ ತೀರದೆ ಇರಲು ನೋಡಿ, ಅವಳ[3] ದಾಹ ತೀರಿಸಬೇಕೆಂದು—ನಾನು ನೀರು ತರುವ

ಪಾ—1. ಉತ್ತರದೇಶಕ್ಕಂ. 2. ದಾಹ ಕಂಡು.
3. ಸುಸ್ತಿನಿಂದ ಬಳಲಿರುವವಳ.

ಪರ್ಯಂತ ನೀನು ಈಮರದ ನೆರಳಲ್ಲಿ ಕುಳಿತಿರು, ಎಂದು ಹೇಳಿ, ತಾನು ನೀರ ಹುಡುಕುತ್ತ ಹೋಗಲು; ಇತ್ತಲಾ ನಮ್ಮ ರಾಯ ಬೇಂಟೆಯಾಡಿ ದುಷ್ಟಮೃಗಗಳ ಸಂಹರಿಸುತ್ತ, ಬಂದು ವ್ಯಾಘ್ರನ ಕಂಡು ಬೆನ್ನಟ್ಟಿ ಆಅರಣ್ಯ ದೊಳಗೆ ಹೋಗುತ್ತ, ದಾರಿತಪ್ಪಿ,ಬಳಲಿ, ಈಮಾವಿನಮರದ ನೆಳಲಿಗೆ ಬಂದು, ಅಲ್ಲಿ ಕುಳಿತಿರುವ ಆರಾಜಕುಮಾರಿಯ ಕಂಡು,—ಇವಳಾರು ? ದೇವತೆ ಯೋ? ಕಿನ್ನರಿಯೋ? ರಾಕ್ಷಸಿಯೋ? ಮನುಷ್ಯೆಯೋ? ಎಂದು (ಊಹಿಸಿ ಅವಳ ರೂಪಿಗೆ ಬೆಱಗಾಗಿ. ಅವಳ ಬಳಿಗೆಯ್ದಿ)—ನೀನಾರೆಂದು ಕೇಳಲಾಗಿ, ಅವಳು ತನ್ನ ವೃತ್ತಾಂತವ ಹೇಳಲು; ಅದ ಕೇಳಿ, ರಾಯ [1]ತನ್ನ ಪೂಜಾ ಫಲದಿಂದ ಈ ಸ್ತ್ರೀರತ್ನ ದೊರಕಿತೆಂದು ಸಂತುಷ್ಟನಾಗಿ,ತನ್ನ ಅಂದಳದಲ್ಲಿ ಅವಳ ಕುಳ್ಳಿರಿಸಿಕೊಂಡು, ತನ್ನ ಅರಮನೆಗೆ ಕರೆತಂದು, ರಾಣೀವಾಸದಲ್ಲಿ ಇರಿಸಿ, ಅವಳ ತಾನೇ ಮದುವೆಯಾಗಬೇಕೆಂದಿರಲಾಗಿ[1] ; ಅತ್ತಲಾಸುಮು ಖನು ನೀರ ತಂದು ಸತಿಯಂ ಕಾಣದೆ, ಹುಡುಕಿ ನೋಡಿ,ಅನೇಕವಾಗಿ ವ್ಯಸ ನಪಡುತ್ತ—ಇಲ್ಲಿ ನರಪ್ರಾಣಿ ಸಂಚಾರವಿಲ್ಲ. ಇದು ಮಹಾರಣ್ಯ. ಎಲ್ಲಿ ಹೋ ದಳೊ? ನೀರ ತರುವುದು ತಡವಾಯಿತೆಂದು ಕೋಪಿಸಿ ಇದ್ದಾಳೊ ? ಎಂದು ಕೂಗುತ್ತ ಇಂತೆಂದನು:—ಓ ಕಾಂತೇ ! ನಾನು ನಿನ್ನ ರೂಪರೇಖಾಲಾವಣ್ಯಾ ತಿಶಯಕ್ಕೆ ಮೆಚ್ಚಿ, ಬಾಲ್ಯದಾರಭ್ಯ ನಿನ್ನ ನೆರೆನಂಬಿ ತಾಯಿತಂದೆಯಂ ಬಿಟ್ಟು, ನಿನ್ನ ಕೂಡೆ ನಾಬಂದುದಕ್ಕೆ ನೀನು ಮುನಿದು ಈಮೋರೆ ಮಱೆಯಾಗಿರುವರೆ? ಎನ್ನುತ್ತ ಎಷ್ಟು ಹಲುಬಿದರೂ ಸದ್ದಿಲ್ಲದೆ ಇರುವುದ ಕಂಡು—ಮೃಗಂ ಗಳು ತಿಂದುವೊ? ರಾಕ್ಷಸರು ಉಯ್ದರೊ ? ಮಾನವರು ಪಿಡಿದುಕೊಂಡು

ಪಾ—1. ನಾನು ಮಾಡಿದ ಪೂಜಾಫಲದಿಂದ ಈ ಸ್ತ್ರೀರತ್ನವು ದೊರಕಿತೆಂ ದು ಸಂತೋಷವ ಮಾಡಿಕೊಂಡು, ಆ ಕುಮಾರತಿಯು ತನ್ನ ಪಲ್ಲಕ್ಕಿಯಲ್ಲಿರಿಸಿಕೊಂ ಡು, ಧಾರಾಪುರಕ್ಕೆ ಬರುವ ಮಾರ್ಗದಲ್ಲಿ ಏಕಾಂತದಲ್ಲಿ—ನೀನು ಆರು? ಆರ ಮಗಳು? ಆವ ದೇಶ? ಆರ ಸ್ತ್ರೀ? ಎಂದು ಕೇಳಲಾಗಿ; ಅವಳು—ನಾನು ಕಾಶ್ಮೀರ ದೇಶದ ರಾಯನ ಮಗಳು. ನಾನು ನಮ್ಮ ಪ್ರಧಾನನ ಕುಮಾರ ಸುಮುಖನಸಂಗಡ ಬಂದೆನೆಂದು ಪೇಳಲಾಗಿ; ರಾಯ—ಇನ್ನೂ ಇವಳ ಆರೂ ಮದುವೆಯಾಗಿಲ್ಲ. ಈ ಕನ್ಯಾರತ್ನವನ್ನು ನಾನು ಮದುವೆಯಾಗುವೆನೆಂದು ನಿಶ್ಚಯಿಸಿ ಅರಮನೆಗೆ ಕರೆತಂ ದು, ತನ್ನ ರಾಣಿವಾಸದ ಬಳಿಯಲ್ಲಿರಿಸಿ, ಅವಳಂ ನೋಡಿ ಆರೈಕೆ ಮಾಡಿ ಎಂದು ನೇಮಿಸಲು.

ಹೋದರೊ? ಏನೋ ಕಾಣೆನು, ಎಂದು ಬಲುಬಗೆ ಯೋಚಿಸಿ, ಆ ವನವನೆಲ್ಲವ ಅಱಸಿ ಕಾಣದೆ, ವ್ಯಾಕುಲಪಡುತ್ತ, ಧಾರಾಪುರಕ್ಕೆ ಬಂದು, ವಿಚಾರಿಸಲಾಗಿ; ರಾಯ ಬೇಟೆಗೆ ಹೋಗಿ ಅರಣ್ಯದಲ್ಲಿ ಒಬ್ಬ ಕನ್ಯೆ ಸಿಕ್ಕಲು ಅವಳ ತಾನೇ ಮದುವೆಯಾಗಬೇಕೆಂದು ಸಿದ್ಧಮಾಡಿದ್ದಾನೆ ಎಂದು ಹೇಳುತ್ತಿದ್ದ ಪುರಜನರ ಮಾತ ಕೇಳಿ, ಮತ್ತೆ ಬೀದಿಗಳಲ್ಲಿ ಸಂಚರಿಸುತ್ತ ಇರಲಾಗಿ; ರಾಯನ ದೂತ ಒಬ್ಬನು- ರಾಯ ತಾನು ಕಟ್ಟಿಸಿರುವ ನೂತನವಾದ ಸೌಧಾಗ್ರದಲ್ಲಿ ಪ್ರತಿಮೆಗಳನ್ನು ತಿದ್ದುವುದಕ್ಕೆ ಗಾರೆಯಕೆಲಸದಲ್ಲಿ ಬುದ್ಧಿವಂತನಾಗಿರುವನ ಕರೆತರಹೇಳಿ ಕಟ್ಟುಮಾಡಿಸಿದುದಱಿಂದ ಈಕೆಲಸದಲ್ಲಿ ಜಾಣರಾಗಿರುವವನ ಹುಡುಕುವೆನೆಂದು ಬರುತ್ತಿರಲು; ಅವನ ಕಂಡು, ಆಸುಮುಖ—ನಾನು ಗಾರೆಯಕೆಲಸವ ಬಹುವಿಚಿತ್ರವಾಗಿ ಮಾಡಬಲ್ಲೆನು ಎನ್ನಲಾಗಿ; ಊಳಿಗದವನು ಅವನ ಕರೆದುಕೊಂಡು ಬಂದು, ರಾಯನ ಎದುರಾಗಿ ನಿಲ್ಲಿಸಿ,—ಇವನಂತೆ ಈ ಪುರದಲ್ಲಿ ಗಾರೆಕೆಲಸ ಮಾಡುವರಿಲ್ಲವಂತೆ, ಇವನು ಬಲು ನಿಪುಣನು—ಎಂದುದಕ್ಕೆ ರಾಯ ಕೇಳಿ, ಅವನಿಗೆ ಆ ಕೆಲಸ ನೇಮನಮಾಡಲಾಗಿ; ಆಸುಮುಖನು ತರತರದಿಂದ ಪ್ರತಿಮೆಗಳ ಮಾಡುತ್ತಿರುವಲ್ಲಿ—ಆವುಪ್ಪರಿಕೆಯ ಮೇಲೆ ರಾಯ ಆರಾಜಕುಮಾರಿಯ ಸಂಗಡ ಪಗಡೆಯಾಡುತ್ತಿರುವುದ ಸುಮುಖನು ತಿಳಿದು-ಇವಳೇ ತನ್ನ ಸ್ತ್ರೀಯೆಂದಱಿದು, ತಾ ಮಾಡುವ ಗಾರೆಯಕೆಲಸದಲ್ಲಿ ಒಂದು ಏಕಾಂತವಾದ ವನವ ಕಲ್ಪಿಸಿ, ಅದಱಲ್ಲಿ ಒಬ್ಬಳು ಸ್ತ್ರೀಯು ಇರುವಂತೆ [1]ಸಿದ್ಧಮಾಡಿ[1] ಸುಣ್ಣದ ಮಡಕೆಯ ಹೊಯ್ದು ಬಳಿಕ ಒಡೆದ ಮರ್ಯಾದೆಯಲ್ಲಿ ಕೈಯಾಳನ್ನು ಕುಱಿತು—ಒಬ್ಬ ರಾಜಕುಮಾರಿ ನನ್ನ ಕರೆತಂದು, ಬಂದು ಅರಣ್ಯದಲ್ಲಿ ದಾಹವಾಗಿ, ಮಾವಿನ ಮರದ ನೆಳಲಲ್ಲಿ ಕುಳಿತು, ನನ್ನ ನೀರ ತರಹೇಳಿ, ಕಳುಹಿಸಿ, ನಾನು ನೀರ ತೆಗೆದುಕೊಂಡು ಬರುವಷ್ಟಱಲ್ಲಿ ಅಲ್ಲಿರದೆ ವಂಚಿಸಿ ಆರ ಸಂಗಡಲೋ ಹೋದಳು. ಅವಳಂತೆ ನೀನೂ ವಂಚನೆ

ಪಾ—1. ತೀಡಿ. 2. ಮನದ ನಿಶ್ಚಯಮಾಡಿ ಪಗಡೆಯಾಡುವ ನೆವದಲ್ಲಿ ರಾಯನಕೂಡೆ ಇಂತೆಂದಳು:—ನಾನು ಪಗಡೆಯಾಡುವುದಱಲ್ಲಿ ನಾಲ್ಕೈದು ತೆಱದಿಂದ ಆಡಬಲ್ಲೆ. ಡಾಳವ ಕೇಳುವ ನೆವದಿಂದ ಸೂಚಿಸುವ ಮಾತ ಕೇಳಿ ಆ ಗಾರೆ ಕೆಲಸದವ ನಿನಗೇನಾಗಬೇಕೆಂದು.

ಮಾಡದೆ ಸುಣ್ಣದ ಮಡಕೆಯ ತಾ—ಎಂದು ಹೇಳಿದ ಮಾತಿಗೆ, ರಾಯನ ಕೂಡೆ ಪಗಡೆಯಾಡುತ್ತಿದ್ದ ರಾಜಕುಮಾರಿ ಕೇಳಿ, ಕತ್ತೆತ್ತಿ, ಅವನ ನೋಡಿ, "ಇವನು ಸುಮುಖನೇ ಸರಿ ಎಂದು ತಿಳಿದು, ತನ್ನ ರೂಪ ಮಱಸಿಕೊಂಡು, ಮತ್ತೊಂದು ರೂಪಿನಲ್ಲಿ ಬಂದಿದ್ದಾನೆ-ಎಂದು ಮನ ನಿಶ್ಚಯ ಮಾಡಿ, ರಾಯನ ಕೂಡೆ ಪಗಡೆಯಾಡುವ ನೆವದಲ್ಲಿ ಇಂತೆಂದಳು :—ನಾನು ಆಡುವ ನೆತ್ತದ ಸಾಲೆ ಅತಿಕ್ರಮಿಸಿಹೋದುದು. ನೆತ್ತ ಮನೆಯ ಬಿಟ್ಟು ಈ ಮನೆಯಲ್ಲಿಯೇ ನಿಂತು ಇದೆ. ನಾಲ್ಕೈದು ನೆತ್ತವ ಬರಹೇಳುವೆ. ದಾಳವ ತಾ-ಎಂದು ದಾಳವ ಕೇಳುವ ನೆವದಿಂದ (ತನ್ನ ವಿವರವ) ಸೂಚಿಸಲಾಮಾತ ಸುಮುಖ ಕೇಳಿ,—ತಾನು ಹೋಗಿ ಬಹಳ ಹೊತ್ತಾಗಲಾಗಿ ಸತ್ತನೆಂದು ನಿಶ್ಚಯಿಸಿ ಪರರ ಮನೆಗೆ ಬಂದು ವಶವಲ್ಲದೆ ಇದ್ದೇನೆಂದು ನುಡಿದಳೆಂದು ನಿಶ್ಚಯಿಸಲು; ರಾಯ ಗಾರೆಕೆಲಸದವನು ಆಡಿದ ಮಾತಿಗೆ ತನ್ನ ಬಳಿಯಲ್ಲಿದ್ದ ಸ್ತ್ರೀಯು ಆಡಿದ ಮಾತ ಕೇಳಿ, ತಾನು ನಿಪುಣನಾದುದಱಿಂದ—ಈ ಗಾರೆಯಕೆಲಸದವನು ಚೋರಭಾವದಲ್ಲಿ ಬಂದು ಇದ್ದಾನೆ. ಈ ಸ್ತ್ರೀಯು ಇವನ ಹೆಂಡತಿಯೇ ಆಗಿರುವಳು. ಇವರಿರ್ವರ ಮಾತು ಅಱಿಯಬಂದಿತು. ನಾನು ಪರನಾರಿಸಹೋದರನು—ಎಂದು ತನ್ನ ಮನದಲ್ಲಿಯೇ ತಿಳಿದು,—ಎಲೆ ಬಾಲೇ! ನೀನು ಆ ಗಾರೆಯವನ ಕೂಡೆ ವಕ್ರೋಕ್ತಿಯಲ್ಲಿ ನುಡಿದೆ. ಅವನು ವಕ್ರೋಕ್ತಿಯಲ್ಲಿ ನುಡಿದನು. ನಿಮ್ಮಿಬ್ಬರ ಮಾತು ಬಂದಾಗಿದೆ. ನಿನಗೆ ಅವ ಏನಾಗಬೇಕು ? ಎಂದು ಕೇಳಲಾಗಿ; ಅವಳು ಲಜ್ಜೆಯಿಂದ ತಲೆವಾಗಿ, ತನ್ನ ಪತಿಯೆನ್ನಲಾಗಿ; ರಾಯ ಕೇಳಿ, ಸಂತೋಷಪಟ್ಟು—ನೀನು ನಮಗೆ ಒಡಹುಟ್ಟಿನ ಸಮಾನವೆಂದು, ಅನೇಕ ವೈಭವದಿಂದ ಅವರಿರ್ವರಿಗೂ ವಿವಾಹವ ಮಾಡಿಸಿ, ಉರು ಉಂಬಳಿ ಸವಾಲಕ್ಷದ್ರವ್ಯ ಸಮೇತವಾಗಿ ಕೊಟ್ಟು, [1]ಇರಿಸಿ[1]ಕೊಂಡನು ಇಂಥ ವೀರವಿತರಣ ಉದಾರಗುಣಗಳನುಳ್ಳವನು ನಮ್ಮ ರಾಯನು ಕಣಾ! ಎಂದ ಮಾತಿಗೆ ರತ್ನಚಂಡಿಕೆಯೆಂಬ ಪುತ್ತಳಿ ನಗುತ್ತ ಹಾಸ್ಯಂಗೆಯ್ದು ಪೇಳಿದ ಉಪಕಥೆ :—

ಕೇಳ್ಳೆಯ, ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯ ಈ ರಾ

ಪಾ—1. ಕಳುಹಿದನು.

ಜ್ಯವ ಪಾಲಿಸುವ ವೇಳೆಯಲ್ಲಿ ಒಂದುದಿನ ಸೌರಾಷ್ಟ್ರದೇಶದ ರುದ್ರಕೀರ್ತಿಯೆಂಬ ಅರಸಿನ ಬಳಿಯಿಂದ ಒಬ್ಬ ಚಂದ್ರಭಟ್ಟನೆಂಬವನು ಬಂದು ರಾಯನ ಕಾಣಿಸಿಕೊಂಡನು. ಅವನು ಕಾವ್ಯಲಕ್ಷಣಗಳ ಬಲ್ಲವನು ; ಕವಿತ್ವ ಹೇಳುವಲ್ಲಿ ಶಬ್ದಶುದ್ಧಿಯಾದವನು ; ವಿನೋದಪರಿಹಾಸಕನು ; ಸತ್ಯಸಂಧನು ; ಧರ್ಮವಂಶದವನು ; ಅವರವರ ಮನಸ್ಸಿಗೆ ತಕ್ಕಹಾಗೆ ನಡೆದುಕೊಂಬನು. ಇಂಥ ಭಟ್ಟನು ಬರಲಾಗಿ; ರಾಯ ಮನ್ನಣೆಯಿಂದ ಅವನ ಕುಳ್ಳಿರಿಸಿದ ಬಳಿಕ, ಅವನಿಂತೆಂದನು:—ಎಲೈ ಮಹಾರಾಯನೇ ! ನಿನ್ನ ರಾಜ್ಯದಲ್ಲಿ ದರಿದ್ರರಿಲ್ಲ, ಪಿಸುಣರು ಮೊದಲೇ ಇಲ್ಲ, ಸಕಲರೂ ಸೌಭಾಗ್ಯಸ್ಥರು. ನೀನು ತ್ಯಾಗದಲ್ಲಿ ಕರ್ಣ, ಭೋಗದಲ್ಲಿ ಇಂದ್ರ, ನಡತೆಯಲ್ಲಿ ಧರ್ಮರಾಯ, ಸತ್ಯದಲ್ಲಿ ಹರಿಶ್ಚಂದ್ರ. ನಿನ್ನ ಶರೀರವು ಪರೋಪಕಾರಕ್ಕೆ ಎತ್ತಿದ ಶರೀರವು. ನಿನಗೆ ಸರಿಯಾದ ಪ್ರಭುಗಳು ಚಪ್ಪನ್ನ ದೇಶದಲ್ಲೂ ಇಲ್ಲ-ಎಂದು ಸುತಿಸಿ ನುಡಿಯಲಾಗಿ; ರಾಯ ಮೆಚ್ಚಿ ಕೋಟಿ ದ್ರವ್ಯ ಕೊಟ್ಟು,—ನಿಮ್ಮರಸಾದ ರುದ್ರಕೀರ್ತಿಗೆ ಸಪ್ತಾಂಗಸನ್ನಾಹಗಳೇನುಂಟು? ನಡೆವಳಿಯಲ್ಲಿ ವಿಶೇಷವೇನು ? ಎಂದು ಕೇಳಲಾಗಿ; ಆಭಟ್ಟನಿಂತೆಂದನು :—ಎಲೈ ಮಹಾರಾಯನೇ ! ಕೇಳು. ನಮ್ಮರಸು ದಾನಿ, ವಿವೇಕಜ್ಞಾನವನುಳ್ಳವನು, ಲೋಕಕ್ಕೆ ಹಿತವಾದಂಥವನು, ಧೈರ್ಯಕ್ಕೆ ನಿಧಾನವಾದವನು. ಆಪಟ್ಟಣದ ಉದ್ಯಾನದಲ್ಲಿ ಒಂದು ಚಂಡಿಕಾದೇವಿಯ ಗುಡಿಯುಂಟು. ಆಚಂಡಿಕಾದೇವಿಯನ್ನು ನಿರಂತರದಲ್ಲೂ ಪೂಜೆಯಮಾಡುತ್ತಿರುವನು. ಹೀಗೆ ಪೂಜಿಸುತ್ತಿರುವಲ್ಲಿ ಒಂದುದಿನ ಒಬ್ಬ ಬ್ರಾಹ್ಮಣ ಅಲ್ಲಿಗೆ ಬರಲಾಗಿ, ನಮ್ಮರಸು ನೀನು ಎಲ್ಲಿಂದ ಬಂದೆ? ಎಂದು ಕೇಳಿದುದರಿಂದ, ಅವನು—ನಾನು ಉಜ್ಜನೀ ಪಟ್ಟಣದಿಂದ ಬಂದೆ ಎನ್ನಲಾಗಿ;ನಿಮ್ಮ ವಿಕ್ರಮಾದಿತ್ಯರಾಯನ ಚರಿತ್ರವೇನು? ಎಂದು ಕೇಳಿದುದರಿಂದ, ಆವಿಪ್ರ ಇಂತೆಂದನು :—“ ನಮ್ಮ ರಾಯನು ಯಾರು ಬಂದು ಬೇಡಿದರೂ ಬೇಡಿದುದ ಕೊಟ್ಟು ಮನ್ನಿಸಿ, ಪ್ರೀತಿಯಾಗಿ ದ್ರವ್ಯ ಕೊಡುವನು. ಅಲ್ಲಿ ಯಾವತ್ತು ಜನರೂ ಭಾಗ್ಯವಂತರಾಗಿ ದರಿದ್ರವಿಲ್ಲದಿರುವರು. ರಾಯ ಲೋಕವಿಖ್ಯಾತನಾಗಿ ಇರುವನು, ಎಂದು ಹೇಳುವುದಂ ಕೇಳಿ, ಆ ಅರಸು-ನಿನ್ನಂತೆ ತಾನು ದಾತನಾಗಬೇಕೆಂದು ಆ ಚಂಡಿಕಾದೇವಿಯ ಷೋಡಶೋಪಚಾರದಿಂದ ಪೂಜಿಸಿ,ತನ್ನ ಶಿರವಂ ಸಮರ್ಪಿ

ಸಲಾಗಿ; ಅದಕ್ಕೆ ಆದೇವಿಯು ಮೆಚ್ಚಿ ಯಥಾಪ್ರಕಾರ ಶಿರವನಿತ್ತು ಪ್ರಸನ್ನಳಾಗಿ--ನಿನಗೆ ಬೇಕಾದ ವರವಂ ಬೇಡಿಕೊ ಕೊಡುತ್ತೇನೆ ಎನ್ನಲಾಗಿ; ಅರಸು—ವಿಕ್ರಮಾದಿತ್ಯರಾಯನಂತೆ ದಾತನಾಗಬೇಕು. ನನಗೆ ಧನಧಾನ್ಯಂಗಳಾದಿಯಾಗಿ ನನ್ನ ಭಂಡಾರದಲ್ಲಿ ತುಂಬಿರಬೇಕು, ಎಂದು ಕೇಳಲಾಗಿ; ಆ ಮಾತಿಗಾದೇವಿ—ಎಲೈ ಅರಸೇ! ನೀನು ಕೇಳುವುದು ಬೇಕಾದರೆ ದಿನಚರಿ ನಿನ್ನ ಶಿರಸ್ಸ ಪೂಜೆಯಂ ಮಾಡಿ ಸಮರ್ಪಿಸಿದರೆ ನಿನ್ನ ಭಂಡಾರದಲ್ಲಿಲ್ಲ ತುಂಬಿರುವುದು. ಇಲ್ಲದಿದ್ದರೆ ಇಲ್ಲವು—ಎಂದ ವಾಕ್ಯವಂ ಕೇಳಿ, ಅರಸು—ನಿನ್ನ ಅಪ್ಪಣೆಯಮೇರೆ ನಡೆಯುವೆನೆಂದು ಹೇಳುವುದಕ್ಕೆ, ಆದೇವಿಯು ವರವನ್ನಿತ್ತು ಮಾಯುವಾದಳು. ಬಳಿಕ ಆರಸು ದಿನಚರಿ ತನ್ನ ಶಿರವ ಪೂಜೆಗೆಯ್ಯುವುದಕ್ಕೆ ಭಂಡಾರದಲ್ಲಿ ದ್ರವ್ಯ ಆದಿಯಾಗಿ ಸಕಲವನ್ನೂ ದಾನವ ಮಾಡಿ ಮಧ್ಯಾಹ್ನ ದರಿದ್ರನಾಗಿರುವನು" ಎಂದು ಆಭಟ್ಟ ಹೇಳಲಾಗಿ; ರಾಯ ಕೇಳಿ ವಿಸ್ಮಿತನಾಗಿ, ಅದ ನೋಡಬೇಕೆಂದು, ಆಭಟ್ಟನ ಕರೆದುಕೊಂಡು, ಆಕಾಶಮಾರ್ಗದಲ್ಲಿ ಆಚಂಡಿಕಾದೇವಿಯು ಗುಡಿಯ ಬಳಿಗೆ ಹೋಗಿ, ಕಾದಿರಲಾಗಿ; ಎಂದಿನಂತೆ ರುದ್ರಕೀರ್ತಿ ಬಂದು ಆದೇವಿಗೆ ಶಿರಸ್ಸ ಪೂಜೆಯಂ ಮಾಡಿದುದಱಿಂದ ಆಕ್ಷಣವೇ ದೇವಿಯು ಕಟಾಕ್ಷದಿಂದ ಯಥಾಪ್ರಕಾರಕ್ಕೆ ಶಿರಸ್ಸು ಉಂಟಾಗಿ, ಅರಸು ಎದ್ದು ಅರಮನೆಗೆ ಹೋಗಲಾಗಿ; ಭಂಡಾರದಲ್ಲಿರುವುದನ್ನೆಲ್ಲಾ ದಾನವಂ ಮಾಡಿ, ಸತ್ಕಥಾಶ್ರವಣದಿಂದಿರುತ್ತಿರಲು ; ಇತ್ತಲಾಬಳಿಕ ನಮ್ಮ ರಾಯ ಆದೇವಿಯನ್ನು ರುದ್ರಕೀರ್ತಿಯೋಪಾದಿ ಪೂಜಿಸಿ ತನ್ನ ಶಿರವಂ ಛೇದಿಸಿ ಸಮರ್ಪಿಸಲಾಗಿ ; ಆದೇವಿಯು ನೋಡಿ ಮೆಚ್ಚಿ ರಾಯನಿಗೆ ಮುನ್ನಿನಂತೆ ಶಿರವಂ ಕೊಟ್ಟು,—ನಿನಗೆ ಬೇಕಾದ ವರವ ಬೇಡೆನ್ನಲಾಗಿ ; ರಾಯನಿಂತೆಂದನು:—ರುದ್ರಕೀರ್ತಿ ನಿರಂತರ ಶಿರವ ಕೊಡುವ ಪೂಜೆಗೆ ಅವನ ಭಂಡಾರದಲ್ಲಿ ಎಲ್ಲ ತುಂಬಿರುವಂತೆ ನೀ ವರವನಿತ್ತೆಯಷ್ಟೆ. ನಾನು ಬೇಡುವುದೇನೆಂದರೆ—ರುದ್ರಕೀರ್ತಿ ನಿತ್ಯ ನಿನಗೆ ಶಿರಸ್ಸ ಪೂಜೆ ಮಾಡದಿದ್ದರೂ ಅವನ ಭಂಡಾರದಲ್ಲಿಯೆ ಅಷ್ಟು ತುಂಬಿರುವಂತೆ ನನಗೆ ವರವ ಪಾಲಿಸೆನ್ನಲಾಗಿ ; ಆದೇವಿಯು—ಹಾಗೇ ಆಗಲೆಂದು ವರವ ಕೊಟ್ಟು ಕಳುಹಿಸುವಲ್ಲಿ, ರಾಯುಂಗೆ ಕೇಳುವುದ ಕೊಡುವ ಒಂದು ರತ್ನವ ಕೊಡಲಾಗಿ ; ರಾಯ ಅದಂ ತೆಗೆದುಕೊಂಡು, ಭಟ್ಟನ ಕರೆದುಕೊಂಡು, ಇಲ್ಲಿಗೆ ಬಂದು, ಆ

ಭಟ್ಟನಿಗೆ ಆರತ್ನವಂ ಕೊಟ್ಟು ಕಳುಹಿಸಿ, ತಾನು ಸುಖವಾಗಿರುವಲ್ಲಿ ; ಅತ್ತ ಲಾವುಱುದಿನ ರುದ್ರಕೀರ್ತಿ ಎಂದಿನಂತೆ ಹೋಗಿ ಆದೇವಿಯಂ ಪೂಜಿಸಿ ಶಿರ ವನರಿವ ಸಮಯದಲ್ಲಿ ದೇವಿಪ್ರಸನ್ನಳಾಗಿ ಇಂತೆಂದಳು :—ಎಲೈ ರುದ್ರಕೀರ್ತಿಯೇ ! ನಿನ್ನೆಯ ದಿವಸ ವಿಕ್ರಮಾದಿತ್ಯರಾಯ ಬಂದು ನಿನ್ನಂತೆ ಎನ್ನ ಪೂಜಿಸಿ, ವರವ ಬೇಡಿದುದೇನೆಂದರೆ—ನಿತ್ಯ ನೀನು ನಿನ್ನ ಶಿರಸ್ಸ ಪೂಜೆಯಂ ಮಾಡದಿದ್ದರೂ ನಿನ್ನ ಭಂಡಾರದಲ್ಲಿ ಎಲ್ಲ ತುಂಬಿರುವಂತೆ ವರವ ಪಡೆದು ಹೋದನು; ಇನ್ನುಮೇಲೆ ಎನ್ನ ಪೂಜಿಸಬೇಡ, ನಿನ್ನ ಭಂಡಾರದಲ್ಲಿ ಅಷ್ಟ ತುಂಬಿದೆ, ಹೋಗೆಂದು ಹೇಳಿ ಮಾಯವಾದಳು. ಆದೇವಿಯ ಮಾತ ಕೇಳಿ ರುದ್ರಕೀರ್ತಿಯು ವಿಸ್ಮಿತನಾಗಿ, ದಾನ ಧರ್ಮ ಪರೋಪಕಾರದಲ್ಲಿ ವಿಕ್ರಮಾದಿತ್ಯರಾಯನಿಗೆ ಮಿಗಿಲೆನಿಸಿಕೊಳ್ಳಬೇಕೆಂದು ಮಾಡಿದ ಆಲೋಚನೆ ಕಾರ್ಯ ಕೆಟ್ಟಿತೆಂದು ತಿಳಿದು, [1](ಬಳಿಕ ತಾನೇ ತನ್ನಲ್ಲಿ ಯೋಚನೆ ಮಾಡಿ)[1] ಮನದಲ್ಲಿ ವೈರವಿಲ್ಲದೆ, ತಾ ಮಾಡುವ ಧರ್ಮಕ್ಕೆ ವಿಕ್ರಮ ಸಹಾಯವಾದನೆಂದು ರುದ್ರಕೀರ್ತಿಯು ನಮ್ಮ ವಿಕ್ರಮಾದಿತ್ಯರಾಯನ ಸ್ತುತಿಸಿ ರಾಜ್ಯಭಾರವ ಮಾಡುತಿರ್ದನು. [2]ಎಂದು ಹದಿನೆಂಟನೆಯ ಸೋಪಾನದ ಪುತ್ತಳಿಯು ನುಡಿಯಲಾ ಭೋಜರಾಯ ಖಿನ್ನನಾಗಿ ತನ್ನ ಅರಮನೆಗೆ ಹೋದನು.[2]

ಇಂತು ಕರ್ಣಾಟಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ರತ್ನಚಂಡಿಕೆಯೆಂಬ ಪುತ್ತಳಿಯು ಪೇಳಿದ ಹದಿನೆಂಟನೆಯ ಕಥೆ.

೧೯ ನೆಯ ಕಥೆ.

ಹತ್ತೊಂಬತ್ತನೆಯ ದಿವಸ ಭೋಜರಾಜನು ಸ್ನಾನದೇವತಾರ್ಚನೆ ತಾಂಬೂಲವ ತೀರಿಸಿಕೊಂಡು, ಶುಚಿರ್ಭೂತನಾಗಿ, ನಾನಾದಾನಂಗಳ ಮಾಡಿ ಸರ್ವಾಭರಣಾಲಂಕೃತನಾಗಿ, ಎಂದಿನಂತೆ ಚಿತ್ರಶರ್ಮನ ಕೈಲಾಗಿನಿಂದ ಸಿಂಹಾ

ಪಾ—1. ನನ್ನ ಯೋಚನೆ ಕೇಳಿ. 2. ಈರೀತಿಯಲ್ಲಿ ಬಂದು ಪ್ರತಿಯಲ್ಲಿ ಕೆಲಕೆಲವು ಕಥೆಗಳ ಕೊನೆಯಲ್ಲಿ ಮಾತ್ರ ಇದೆ.

ಸನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ, ಆಹತ್ತೊಂಬತ್ತನೆಯ ಸೋಪಾನದ ವಿದ್ಯಾಧರಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ :—

ಎಲೆ ಪುತ್ತಳಿಯೇ ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯಂಗೆಯ್ಯುವಲ್ಲಿ ಒಂದು ದಿನ ಆಪುರದ ಸೋಮಶರ್ಮನೆಂಬ ಬ್ರಾಹ್ಮಣೋತ್ತಮನಿಗೆ ಒಬ್ಬ ಪುತ್ರ ಜನಿಸಿದುದಱಿಂದ, ಲಗ್ನಗ್ರಹಗತಿಯ ನೋಡಿ, ಈಕುಮಾರ ಚೋರನಾಗುವನೆಂದಱಿತು, ಆಸೋಮಶರ್ಮ ಚಿಂತಾಕ್ರಾಂತನಾಗಿ, ಸುತನಾದ ಯಜ್ಞಶರ್ಮನಿಗೆ ವೇದ ಶಾಸ್ತ್ರ ಪುರಾಣ ಕಾವ್ಯ ನಾಟಕಾಲಂಕಾರ ಮೀಮಾಂಸೆ ತರ್ಕವೆಂಬ ಅನೇಕ ವಿದ್ಯೆಗಳ ಕಲಿಸಿ, ಚೋರವಿದ್ಯದಿಂದ ಮಹಾಪಾಪವೆಂದು ಮಗನಿಗೆ ತಿಳಿಯಹೇಳಿ, ಆವ ಪ್ರೌಢನಾದ ಬಳಿಕ, ತನ್ನ ಮನೆವಾರ್ತೆಯೆಲ್ಲ ಮಗನಿಗೊಪ್ಪಿಸಿ, ತಾನು ತಪೋವನಕ್ಕೆ ಹೋದನು. ಆಬಳಿಕ ಯಜ್ಞಶರ್ಮ ಕುಟುಂಬಸಂರಕ್ಷಣೆ ಮಾಡಿಕೊಂಡಿದ್ದು ಕೆಲವು ದಿವಸವಾದ ತಱುವಾಯ ಗ್ರಾಸೋಪಾಯಕ್ಕೆ ಇಲ್ಲದೆ, ಕಷ್ಟವಾದ ಕಾರಣ, ಆತನ ಸತಿಯಾದ ಸುಶೀಲೆಯಿಂತೆಂದಳು :—ಎಲೈ ಪತಿಯೇ ! ಗ್ರಾಸೋಪಾಯಕ್ಕಿಲ್ಲದೆ ಇರುವ ಕಾರಣ, ನಂಟರು ಇಷ್ಟರು ಸರ್ವರೂ ಅವಮರ್ಯಾದೆಯಾಗಿ ಕಾಣುತ್ತಲಿದ್ದಾರೆ. ಇನ್ನುಮೇಲಾದರೂ ಭೋಜರಾಜನ ಬಳಿ ವಿದ್ಯಾಪ್ರಸಂಗವನ್ನು ಮಾಡಿದರೆ ನಮ್ಮ ಕಷ್ಟ ಬಿಡುವಂತೆ ಮಾಡುವನು ಎಂದು ಹೇಳಲಾಗಿ ; ಆವನಿಂತೆಂದನು :— ಎಲೌ ಸ್ತ್ರೀಯೆ ! ಕೇಳು. ಕಷ್ಟಕಾಲಕ್ಕೆ ಒಡಹುಟ್ಟಿದವರು ಮುಂತಾಗಿ ಯಾರಿದ್ದರೂ ಇಲ್ಲ ; ಆದುಕಾರಣ ರಾಯನ ಸಭೆಯ ಸಾಮಾಜಿಕರನನುಸರಿಸಿ ರಾಯನ ಕಂಡರೆ ನಮ್ಮ ಕಷ್ಟ ತೀರಿಸುವನೋ ಅವಮನ್ನಣೆಮಾಡುವನೋ ಕಾಣಕೂಡದೆಂದು ಅನುಮಾನಚಿತ್ತನಾಗಿ, ರಾಜಪರಿಗ್ರಹವಾಗ ಬಾರದೆನ್ನುತ್ತ ಯೋಚಿಸಿ ತನಗಿಹಪರಸಾಧನೆಯ ಕೊಡುವಂಥ ಪರಶಿವನ ಬೇಡುವೆನೆಂದು, ತನ್ನ ಪತ್ನಿಯ ಸಂತೈಸಿ, ಹೇಳಿ, ಸಿದ್ಧಾಶ್ರಮಕ್ಕೆ ಹೋಗಿ, ಶಿವನ ಕುಱಿತು ಸದಾ ಷೋಡಶೋಪಚಾರದಿಂ ಪೂಜಿಸಿ ವಂದಿಸುತ್ತಿರಲಾಗಿ; ಆಪರಶಿವ ಪ್ರತ್ಯಕ್ಷವಾಗಿ—ಎಲೈ ವಿಪ್ರನೇ! ನಿನ್ನ ದೃಢಭಕ್ತಿಗೆ ಮೆಚ್ಚಿದೆ.

ಇಷ್ಟಾರ್ಥವಂ ಬೇಡು ಕೊಡುವೆನೆನ್ನಲಾಗಿ; ಆ ಯಜ್ಞಶರ್ಮನು—[1]ಎಲೈ ದೇವನೇ! ನನ್ನ ಶ್ರಮ ಬಿಡಿಸಿ ಸೌಭಾಗ್ಯ ಪಾಲಿಸಬೇಕೆಂದು ಬೇಡಲಾಗಿ'; ಆಪರಶಿವನು—ನಿನಗೆ ಪೂರ್ವಾರ್ಜಿತದ ಚೋರತನದಿಂದ ಭಾಗ್ಯ ಬರುವುದೆಂದು ಹೇಳಿ, ಮಾಯವಾಗಲಾಗಿ; ಅಲ್ಲಿಂದ ತನ್ನ ಮನೆಗೆ ಬಂದು. ಯೋಚಿಸಿ, ನಿಶ್ಚೈಸಿ, "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬ ನೀತಿಯಂ ತಿಳಿದು, ಅಕೃತ್ಯವ ಮಾಡಿದರೂ ಕುಟುಂಬ ಸಂರಕ್ಷಣೆಯ ಮಾಡಬೇಕೆಂದು ಶ್ರುತಿಸಮ್ಮತವಿರುವ ಕಾರಣ, ಶಿವನ ವಾಕ್ಕಿನ ಪ್ರಕಾರ ಆದಿನ ಅರ್ಧರಾತ್ರಿಯಲ್ಲಿ ಚೋರತನಕ್ಕೆ ಹೊರಟು, ರಾಯನ ಅರಮನೆಗೆ ಕನ್ನವಿಕ್ಕಿ, ಒಳಗೆ ಹೋಗಿ, ನಿಂತು ನೋಡುತ್ತ, —ದ್ರವ್ಯಾಭರಣ ಕಳಬೇಕು ಕಳಬಾರದು ಎನುತ್ತ. ಪಾಪಕ್ಕಂಜಿ, ಯೋಚಿಸುತ್ತ ನಿಂತಿರುವಲ್ಲಿ—ರಾಯನ ತೂಗುಮಂಚದ ಮೇಗಣ ಸರಪಣಿಯಿಂದ ಒಂದು ಹಾವು ಇಳಿದು ಬರುವುದ ಕಂಡು, ದುಷ್ಟನಿಗ್ರಹ ಮಾಡಿದರೆ ದೋಷವಿಲ್ಲವೆಂದು ಆಹಾವ ಕೊಂದು, ಮಂಚದ ಕೆಳಗೆ ಎಳೆದು ಹಾಕುವಾಗ, ಅದರ ವಿಷ ಹಾರಿ ರಾಯನ ರಾಣಿಯ ಗಲ್ಲದ ಮೇಲೆ ಬಿದ್ದುದ ಕಂಡು, ರಾಯ ಚುಂಬನ ಮಾಡಿದರೆ ವಿಷ ತಗಲೀತೆಂದು ತನ್ನ ಉಗುರಿನಿಂದ ವಿಷವ ತೆಗೆಯುವಲ್ಲಿ—ಅರಸಿತಿಗೆ ಎಚ್ಚರವಾಗಿ, ನಿಂತಿರುವ ನನ್ನ ಕಂಡು, ಲಜ್ಜೆಯಿಂದ ರಾಯನ ಏಳಿಸಿ—ಇವನಾರೋ ಬಂದು ನಾವು ನಿದ್ರೆಯಿಂದ ಮಲಗಿರುವುದ ಕಂಡು ನನ್ನ ಗಲ್ಲದ ಮೇಲೆ ಉಗುರನಿಟ್ಟನು? ಎಂದು ಹೇಳಲಾಗಿ; ರಾಯನಾರಾಣಿಯೆಂದ ಮಾತಿಗೆ ಚಂದ್ರಾಯುಧವ ತೆಗೆದುಕೊಂಡು, ಕೈಯಲ್ಲಿ ಹಿಡಿದು—ನೀನಾರು? ಎಂದು ಕೇಳಲಾಗಿ;—ನಾನು ಸೋಮಶರ್ಮನ ಕುಮಾರ, ಯಜ್ಞಶರ್ಮ. ನಾನು ಕಷ್ಟದೆಸೆಯಿಂದ ನಿನ್ನ ಅರಮನೆಗೆ ಕನ್ನವಿಕ್ಕಿ ಹೊಕ್ಕು ನಿಂತು ನೋಡುವಲ್ಲಿ, ತಾವು ದಂಪತಿ ಸಹಿತ ಸೊಕ್ಕಿ ಮಲಗಿ ನಿದ್ದೆ ಮಾಡುತ್ತಾ ಇರುವಲ್ಲಿ, ತಮಗೆ ಹಾವಿನಿಂದುಪಾಧಿ ಬರುವುದ ಕಂಡು, ಅದ ಕೊಂದ ಕಾರಣ ಅದರ ವಿಷ ಅಮ್ಮನವರ ಗಲ್ಲದ ಮೇಲೆ ಹಾರಿ ಬಿದ್ದುದ ಕಂಡು, ಪರಸ್ತ್ರೀಯರ ಮುಟ್ಟಲಾಗದೆಂದು ಶ್ರುತಿಯಿರುವ

ಪಾ—1. ಎಲೈ ಸ್ವಾಮಿಯೇ! ನಾನು ದರಿದ್ರನು. ಈ ದರಿದ್ರ ಹೋಗುವ ಹಾಗೆ ಮಾಡಿ ಭಾಗ್ಯವಂತನಾಗುವ ಹಾಗೆ ಮಾಡಬೇಕೆಂದು ಕೇಳಲು.

ಕಾರಣ ಅಂಜಿ, ಬಳಿಕ ತನಗಾವಿಷ ತಗಲೀತು ಎಂದು, "ಅರಸಿನ ರಾಣಿ, ಅಣ್ಣನ ರಾಣಿ, ಹೆಣ್ಣುಕೊಟ್ಟಂಥವನ ರಾಣಿ, ಗುರುವಿನ ರಾಣಿ, ತನ್ನ ಹೆತ್ತ ತಾಯಿಗಿಂತ ಮಿಗಿಲು" ಎಂಬ ನೀತಿಯ ತಿಳಿದು ನೋಡಿಕೊಂಡು, ಉಗುರಿನಿಂದ ವಿಷವ ತೆಗೆಯುವಲ್ಲಿ—ಅಮ್ಮನವರಿಗೆ ಎಚ್ಚಱವಾಯಿತೆಂದು ಪೇಳಿ, ತಾ ಕೊಂದ ಹಾವ ತೋಱಲಾಗಿ ; ಅವಾಗ ರಾಯನು—ಎಲೈ ಬ್ರಾಹ್ಮಣೋತ್ತಮನೇ! ನೀನು ಸತ್ಪುರುಷನ ಗರ್ಭಸಂಭವನಾದ ನಿಮಿತ್ತ, ಈ ಕಂಟಕವ ಪರಿಹರಿಸಿ ಕೊಟ್ಟೆಯೆಂದು, ಅವನಿಗೆ ಸವಾಲಕ್ಷ ದ್ರವ್ಯವಂ ಕೊಟ್ಟು, ಮನ್ನಿಸಿ ಕಳುಹಿಸಿಕೊಟ್ಟನು ಕಣಾ! ಎಂದ ಮಾತಿಗೆ ವಿದ್ಯಾಧರಿಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :—

ಕೇಳೈಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುತ್ತಿರುವಲ್ಲಿ ಒಂದುದಿನ ಬಹುಪ್ರಕಾಶಮಾನವಾದ ಚಂದ್ರೋದಯದಲ್ಲಿ ಓಲಗಸಾಲೆಯಲ್ಲಿ ಕುಳಿತು ತನ್ನ ಮಂತ್ರಿಯಾದ ಭಟ್ಟಿ ಸಹಿತ [1]ಭದ್ರನೇತ್ರ, ಕೂಚಮಾರ[1] ವಿಟ ವಿದೂಷಕ ನಾಗರಿಕ ಪೀಠಮರ್ದನರ ಕೂಡೆ ಪ್ರಸಂಗಿಸುತ್ತಿರುವಾಗ—ಒಬ್ಬ ಧನಪಾಲನೆಂಬ ವರ್ತಕ ಬಂದು ರಾಯನ ಕೂಡ ತಾನು [2]ವ್ಯಾಪಾರನಿಮಿತ್ತ ಹೋಗುವಲ್ಲಿ ಒಂದು ಅತಿಶಯವ ಕಂಡೆನೆಂದು ಹೇಳಲಾಗಿ[2]; ರಾಯನು—ಅದೇನತಿಶಯವೆನ್ನಲಾಗಿ ; ಅವನಿಂತೆಂದನು :—ಗಂಧಮಾದನ ಬೆಟ್ಟದ ಬಳಿಯಲ್ಲಿ [3]ಒಂದು ಕೊಳದ[3] ಮಧ್ಯದಲ್ಲಿ ಒಂದು ತಾವರೆಕುಸುಮವಿರುವುದು ಆಕುಸುಮ ಸೂರ್ಯನು ಮಧ್ಯಾಹ್ನಕ್ಕೆ ಬರುವ ವೇಳೆಗೆ ಆಕಾಶವ ತನಕ ಬೆಳೆದು ಸೂರ್ಯನ ಮುಟ್ಟಿ ಅಲ್ಲಿಂದ ಸಂಧ್ಯಾಕಾಲಕ್ಕೆ ಇಳಿದಿಳಿದು ಪುನಃ ಆ ಕೊಳದ ನೀರಿನೊಳಗೆಬಂದು ಮುಳುಗುವುದು. ಈ ಪ್ರಕಾರ ದಿನಂಪ್ರತಿಯೂ ಬೆಳೆಬೆಳೆದು ಸೂರ್ಯನ ಬಳಿಗೆ ಹೋಗಿ ಪುನಃ ಇಳಿದು ಬರುವುದು. ಅಲ್ಲೊಬ್ಬ ಕೆದಱಿದ ಮಂಡೆಯನುಳ್ಳ ಮುನಿಯು ಬಹುಕಾಲದಿಂದ [4]ತಪಸ್ಸು ಮಾಡಿದರೂ ಸೂರ್ಯನ

ಪಾ—1. ನಾದ್ರಚೇತ, ಕುಚಕುಹೂರ. 2. ವ್ಯಾಪಾರಕ್ಕೆ ಪೋದ ವೃತ್ತಾಂತಮಂ ಪೇಳುತ್ತಿರುವಲ್ಲಿ ತನ್ನ ಹೆಂಡರೊಳು ಒಂದು ಚೋದ್ಯದ ಮಾತ ಕಂಡೆನಪೆಂತೆನೆ. 3. ಭಾಸ್ಕರಕ್ಷೇತ್ರದಲ್ಲಿ ಅಘೇಂದ್ರೇಶ್ವರನ ಗುಡಿಯ ಬಳಿಯಲ್ಲಿ ಒಂದು ಕೊಳವುಂಟು ಆ ಕೊಳದಲ್ಲಿ. 4. ತಪಸ್ಸ ಮಾಡಿಕೊಂಡು ಇರುವನು. ಅವನು ಉಬ್ಬಿ ಬರುವ ತಾವರೆಯಮೇಲೆ ಏಱಿ ಅನೇಕ ದೂರ ಹೋಗಿ, ಸೂರ್ಯನ

ದರ್ಶನವಿಲ್ಲದೆ ಇರುವನು ಎಂದ ಮಾತ[1] ಕೇಳಿ, ರಾಯ ಅದ ನೋಡಬೇಕೆಂದು ಪರದನ ಕರೆದುಕೊಂಡು, ಖೇಚರ ಮಾರ್ಗದಲ್ಲಿ ಆಗಂಧಮಾದನ ಬೆಟ್ಟದ ಬಳಿಗೆ ಹೋಗಿ, ಅಲ್ಲಿರುವ ಅಘೋರೇಶ್ವರನ ಪೂಜಿಸಿ, ಆ ಮುನಿಗೆ ವಂದಿಸಿ ಇಂತೆಂದನು :— ಎಲೈ ಮಹಾಮುನಿಯೇ! ಇಲ್ಲಿ ನೀವು ತಪಸ್ಸ ಮಾಡುತ್ತ ಇರುವ ಕಾರಣವೇನೆಂದು ರಾಯ ಕೇಳಲಾಗಿ ; ಆ ಮುನಿಯಿಂತೆಂದನು :—ಈ ಕೊಳದಲ್ಲಿ ಹುಟ್ಟಿಯಿರುವ ಕಮಲದಲ್ಲಿ ಕುಳಿತು ಸೂರ್ಯನ ಬಳಿಗೆ ಹೋಗಿ ಸೂರ್ಯನ ಕಂಡು [1]ಮುಕ್ತಿಯು[1] ಪಡೆಯಬೇಕೆಂಬ ಬಯಕೆಯಿಂದ ತಪಸ್ಸ ಮಾಡಿಕೊಂಡು ಇರುವೆನು. ಆದಾಗ್ಯೂ ಈ ತಾವರೆಯಲ್ಲಿ ಕುಳಿತು ಸೂರ್ಯನ ಬಳಿಗೆ ಹೋಗುವೆನೆಂದರೆ ಸೂರ್ಯಕಿರಣಜ್ವಾಲೆಯಿಂದ ದೇಹ ಬೆಂದು ಕಪ್ಪಾದೀತೆಂದು ಭೀತಿವಟ್ಟಿದ್ದೇನೆ ಎನ್ನಲಾಗಿ ; ಆಮುನಿಯ ಮಾತ ರಾಯ ಕೇಳಿ, ಇಂತೆಂದನು :—ಲೋಕದಲ್ಲಿ ಆದಿತ್ಯಮಂಡಲಕ್ಕೆ ಹೋಗುವರು ಯಾರೆಂದರೆ—ಸಕಲವನ್ನೂ ತ್ಯಜಿಸಿದ ಸನ್ಯಾಸಿಯೊಬ್ಬ, ರಣರಂಗದಲ್ಲಿ ಎದುರುನುಗ್ಗಿ ಹೋಗುವನೊಬ್ಬ; ಇವರಿಬ್ಬರಲ್ಲದೆ ಇನ್ನು ಬೇಱೆಯಿಲ್ಲವೆಂದು ರಾಯ ಆಮುನಿಗೆ ಹೇಳಿ, ಆರಾತ್ರಿ ಕಳೆದು, ಬೆಳಗಾಗುವುದು ಆಕೊಳದಲ್ಲಿ ಕಮಲಯೇಳುವುದ ಕಂಡು, ರಾಯ ಜಲಸ್ತಂಭ ತಾ ಬಲ್ಲುದಱಿಂದ ಆಕೊಳದ ನೀರಂ ಹೊಕ್ಕು, ಆಕಮಲದಲ್ಲಿ ಕುಳಿತುಕೊಳ್ಳಲು ; ಆ ಕಮಲ ಅಂತರಿಕ್ಷಕ್ಕೆ ಬೆಳೆದು, ಸೂರ್ಯನ ಬಳಿಗೆ ಹೋಗುವಲ್ಲಿ, ಆಸೂರ್ಯನ ಕಿರಣದಿಂದ ರಾಯನ ದೇಹ ಬೆಂದು ಬೆಂಡಾಗಿ, ಮೂರ್ಛೆ ಪೋದುದಱಿಂದ, ಅದಕ್ಕೆ ಅಂಜದೆ, ಚೇತರಿಸಿಕೊಂಡು, ಧೈರ್ಯವಿಡಿದು, ಆಸೂರ್ಯನ ಧ್ಯಾನಿಸುತ್ತಿರಲಾಗಿ ; ರಾಯನ ದೃಢಕ್ಕೆ ಮೆಚ್ಚಿ ಆಸೂರ್ಯ ಕೃಪಾದೃಷ್ಟಿಯಿಂದ ನೋಡಲಾಗಿ ; ರಾಯನ ಶರೀರ ತಂಪಾದುದಱಿಂದ ಮತ್ತು ಸ್ತುತಿಸುತ್ತ, ಆಸೂರ್ಯನ ಕಂಡು ನಮಿಸಲಾಗಿ ; ಆ ಸೂರ್ಯ—ಎಲೈ ರಾಯನೇ! ಎಲ್ಲಿಗೆ ಬಂದೆ ? ಎನ್ನಲಾಗಿ ; ಆಮಾತಿಗೆ

ಕಾಣುವೆನೆಂದು ಯೋಚಿಸಿ, ನೀರ ಪೊಕ್ಕು ತಾವರೆಯ ನೇಱಲು, ಆ ತಾವರೆಯು ಸೂರ್ಯನ ಬಳಿಗೆ ಕೊಂಡು ಪೋಗುವುದೆಂದು ತನ್ನ ಹೆಂಡತಿ ಹೇಳಿದಳೆಂದು ಧನಪಾಲನೆಂಬ ಪರದ ಹೇಳಲಾಗಿ; ಆ ಮಾತಂಕೇಳಿ.

ಪಾ—1. ಅನೇಕ ಶುದ್ಧಕ್ರಿಯೆಗಳ.

ರಾಯ—ನಿಮ್ಮ ಪಾದದರ್ಶನವಾಗಬೇಕೆಂದು ಬಂದೆನೆನ್ನಲಾಗಿ ; ಆಸೂರ್‍ಯ ರಾಯನಿಗೆ ತನ್ನ ನಿಜಸ್ವರೂಪವ ತೋಱಿ ಇಪ್ಪತ್ತು ರತ್ನವಂ ಕೊಟ್ಟು† ಕಳುಹಿಸಲಾಗಿ ; ರಾಯ ಆತಾವರೆಕಮಲದಲ್ಲಿ ಕುಳಿತುಕೊಂಡು, ಸಾಯಂ ಕಾಲದ ವೇಳೆಗೆ ಆಕಮಲ ಆಕೊಳದ ನೀರಿನಲ್ಲಿ ಬಂದು ಮುಳುಗ ಲಾಗಿ, ರಾಯ ನೀರಿನಿಂದ ಮೇಲಕ್ಕೆ ಎದ್ದು ಬಂದು, ಆಮುನಿಯೊಡನೆ ತಾನು ಸೂರ್‍ಯನ ಕಂಡ ವಿವರವ ಹೇಳಿ, ಆಯಿಪ್ಪತ್ತು ರತ್ನವ ಆಮುನಿಗೆ ಕೊಟ್ಟು, ಅಲ್ಲಿಂದ ವರ್ತಕ ಸಹ ಇಲ್ಲಿಗೆ ಬಂದು, ಆವರ್ತಕನಿಗೆ ಕೋಟಿ ದ್ರವ್ಯವ ಕೊಟ್ಟು ಕಳುಹಿಸಿ, ತಾನು ಸುಖವಾಗಿದ್ದನು ಕಣಾ !

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ವಿದ್ಯಾಧರಿಯೆಂಬ ಪುತ್ತಳಿ ಪೇಳಿದ ಹತ್ತೊಂಬತ್ತನೆಯ ಕಥೆ.

೨೦ನೆಯ ಕಥೆ.

ಇಪ್ಪತ್ತನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವಂ ತೀರಿಸಿಕೊಂಡು, ಶುಚಿರ್ಭೂತನಾಗಿ, ನಾನಾ ದಾನಂಗಳ ಮಾಡಿ, ಸಕಲಾಭರಣವಸ್ತ್ರಾಲಂಕೃತನಾಗಿ, ಎಂದಿನಂತೆ ಚಿತ್ರಶರ್ಮನ ಕೈಲಾಗಿನಿಂದ ನವರತ್ನ ಖಚಿತವಾದ ಪಾವುಗೆಗಳ ಮೆಟ್ಟಿ ಸಿಂಹಾಸನದ ಬಳಿಗೆ ಬಂದು, ಬಲಗಾಲ ನೀಡುವ ಸಮಯದಲ್ಲಿ ಆಸೋಪಾನದ ರತ್ನಾವತಿಯೆಂಬ ಪುತ್ತಳಿಯು, ಹೋ ಹೋ ! ನಿಲ್ಲು ನಿಲ್ಲೆಂದು, ಧಿಕ್ಕರಿಸಲಾಗಿ ; ಭೋಜರಾಯ ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲೆ ಪುತ್ತಳಿಯೇ ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಂಗೆಯ್ಯುವಲ್ಲಿ ಮೂಱುವರುಷ ಮಳೆಬೆಳೆಯಿಲ್ಲದೆ ಆ ರಾಜ್ಯಕ್ಕೆ ಅತಿಕ್ಷಾಮವಾದುದಱಿಂದ, ಆದ ರಾಯ ಕೇಳಿ ಯೋಚಿಸುತ್ತಿರು

† ನಿನಗೆ ಮೊದಲು ವಿಕ್ರಮನೆಂಬ ಪೆಸರು ನಡೆವುದು. ಇಲ್ಲಿಂದ ನನ್ನ ದರ್ಶನವಾದ ಕಾರಣ ವಿಕ್ರಮಾದಿತ್ಯರಾಯನೆಂದು ಪೆಸರಾಗಲಿ ಎಂದು ವರವಂ ಕೊಟ್ಟು—ಎಂದು ಅಧಿಕಪಾಠವಿದೆ.

ವಲ್ಲಿ, ಆಕಾಶವಾಣಿ—ಎಲೈ ರಾಯ! ನಿನ್ನ ಬಳಿಯಲ್ಲಿರುವ ವರರುಚಿ ಅಟ್ಟಹಾಸದಿಂ ನಕ್ಕರೆ ಮಳೆ ಬರುವುದು ಎನ್ನಲಾಗಿ; ರಾಯನಾಮಾತ ಕೇಳಿ, ಆಗ ವರರುಚಿಯ ಕರೆಸಿ,—ನೀನು ಅಟ್ಟಹಾಸದಿಂ ನಕ್ಕರೆ ನಮ್ಮ ಸೀಮೆಗೆ ಮಳೆಯಾಗಿ ಬೆಳಸು ಬೆಳೆದು ಬಾಳಿ ಬಿಡುವುದು, ನಗು ಎನ್ನಲಾಗಿ; ಆ ಮಾತಿಗೆ ರಾಯನ ಮುಖವ ನೋಡಿ—[1] ಎಲೈ ರಾಯನೇ! ಸುಮ್ಮನೆ ನಗು ಎಂದರೆ ನಗು ಬರುವುದೇ? ಅಕಾರಣವಾದ ನಗು ಹಿರಿಯರಿಗೆ ಸಲ್ಲದು ಎಂದು ವರರುಚಿ ನುಡಿಯಲಾಗಿ; ರಾಯನಿಂತೆಂದನು:—“ಲೋಕದಲ್ಲಿ ಗುರುಗಳೂ ಹಾಸ್ಯದ ಮಾತನಾಡಬಹುದು, ಕ್ಲಿಷ್ಟ ಮಾಡಲಾಗದು” ಎಂಬ ನೀತಿಯಿರುವ ಕಾರಣ ನಮ್ಮ ರಾಷ್ಟ್ರದಲ್ಲಿ ಸರ್ವರೂ ಸಂತೋಷಭರಿತರಾಗಿರಬೇಕೆಂದು ನೀವು ನವರಸಭರಿತವಾದ ಹಾಸ್ಯವಾಡಬೇಕು. “ಸಂತೋಷವಿಲ್ಲದ ವಿಪ್ರ, ಲಜ್ಜೆಯಿಂದಿರುವ ವೇಶಿ ಕೆಡುವರು” ಎಂಬುದ ನೀವು ತಿಳಿದಿಲ್ಲವೇ?[1] ನಿಮಗೈಶ್ವರ್ಯವಿದ್ದರೂ ಸಂತೋಷದ ಹಾಸ್ಯವಿಲ್ಲದೆ ಇರುವ ಕಾರಣ ನೀವು ನಿರ್ಭಾಗ್ಯರ ಸಮಾನರಾದವರು. ನಮ್ಮ ದೇಶದಲ್ಲಿರಬೇಡಿ ಹೊರಟುಹೋಗಿ ಎನ್ನಲಾಗಿ;—“ಹಿರಿಯರಿಗೆ ವಧೆಯಾವುದೆಂದರೆ—ಅರಸಿನ ಬಳಿ ಅವಮನ್ನಣೆಯೇ ವಧೆ; ಸ್ತ್ರೀಯಳಿಗೆ ಗಂಡನ ಮಗ್ಗಲುಬಿಟ್ಟು ಮಲಗುವುದೇ ವಧೆ” ಎಂದು ತಿಳಿದು, ರಾಯನ ಅಪ್ಪಣೆಯ ಪ್ರಕಾರಕ್ಕೆ ವರರುಚಿ ಊರಬಿಟ್ಟು ಹೊರಟುಹೋಗುವಾಗ, ರಾಯ ಆತನ ಸಂಗಡ ಒಬ್ಬ

ಪಾ—1. ಲೋಕದೊಳು ಸಂಸಾರಸುಖವಿಲ್ಲ, ವ್ರತವ್ರ ಮೊದಲೇ ಇಲ್ಲ. ಆದ ಕಾರಣವಾಗಿ ಅಳುವುದೇ ಹೊಲಿತು ನಗೆ ಬಾರದು-ಎಂದು ವರರುಚಿ ನುಡಿಯಲು; ಆಮಾತಿಗೆ ರಾಯನಿಂತೆಂದನು:—ಲೋಕದೊಳು ಮನುಜರು ಕಾಲವಾಗುವ ಪರ್ಯಂತಕ್ಕೂ ಹಾಸ್ಯವೇ ಇರಬೇಕು. ಹಾಸ್ಯವಿಲ್ಲದ ಮನುಜನು ವ್ಯರ್ಥವೆನಿಸುವನು. ಗುರುಗಳಲ್ಲಿಯೂ ಹಾಸ್ಯದ ಮಾತು ನುಡಿಯಬಹುದು. ಕುಟಿಲವ ಮಾಡಬಾರದು—ಇಂತೆಂಬ ನೀತಿಯುಂಟಾಗಿ ಇದುಕಾರಣ ನೀವು ನಮಗೆ ಗುರುಸ್ಥಾನವಾದುದರಿಂದ ನಮ್ಮ ಸಭೆಯಲ್ಲಿ ನವರಸಭರಿತವಾದ ಪ್ರಸಂಗಕ್ಕೆ ಯೋಗ್ಯರೇ ಇರಬೇಕು. ಮತ್ತು ನಾನಾಳುವ ರಾಜ್ಯದಲ್ಲಿ ಹದಿನೆಂಟು ಜಾತಿಯಲ್ಲಿಯೂ ಸಂತೋಷವಲ್ಲದೆ ಚಿಂತೆ ಹೊದ್ದಬಾರದ ಹಾಗೆ ಇರಬೇಕು. ನನ್ನ ಸಭೆಗೆ ಬಂದರೆ ಎಂಥ ಮೂಢನಿಗಾದರೂ ಸವಾಲಕ್ಷ ಹೊನ್ನ ಕೊಡುವೆನು. ನಿಮಗೆ ಕೊಟ್ಟ ವಸ್ತುಗಳಿಗೆ ಮಿತಿ ಮೇರೆಯಿಲ್ಲ. ಎಷ್ಟು ಭಾಗ್ಯವಿದ್ದರೂ ಸಂತೋಷವಿಲ್ಲದ ವಿಪ್ರ ಕೆಡುವನು.

ಚಾರನ ಗೋಪ್ಯದಿಂದ ಕಳುಹಿಸಿ, ಆತನಿಗೆ—ನೀನು ಸಂಗಡಲೇ ಹೋಗಿ; ಆತನಱಿಯದಂತಿದ್ದು, ಎಲ್ಲಿ ಹಾಸ್ಯವ ಮಾಡಿ ನಗುವನೋ ಅಲ್ಲಿಂದ ಕರೆದುಕೊಂಡು ಬಾ ಎಂದು ಕಟ್ಟುಮಾಡಲಾಗಿ; ವರರುಚಿಯು ಬಹುದೂರ ನಡೆದು, ದಣಿದು ಸಾಯಂಕಾಲವಾಗಲು ಬಂದು ಪಾಳುಗುಡಿಯ ಕಂಡು ಅದಱಲ್ಲಿ ಬಂದು ಮೂಲೆಯಲ್ಲಿ ಪವಡಿಸಲು ; ಮತ್ತೊರ್ವ ಗೃಹಸ್ಥನು ಪತ್ನೀಸಮೇತ ದೂರದೇಶದಿಂದ ಬಂದು ಅವನೂ ಒಂದು ಮೂಲೆಯಲ್ಲಿ ಮಲಗಲು ; ಮತ್ತೊರ್ವ ಅಗಸ ತಪ್ಪಿಸಿಕೊಂಡ ತನ್ನ ಕತ್ತೆಯನ್ನು ರಾತ್ರಿಯವರೆಗೂ ಅಱಸಿ ಕಾಣದೆ ಬಳಲಿ ಬಂದು, ಅವನೂ ಒಂದು ಮೂಲೆಯಲ್ಲಿ ಮಲಗಲು; ಮತ್ತೊಬ್ಬ ಕಬ್ಬಿನ ವ್ಯಾಪಾರಿ ವಿಕ್ರಯಮಾಡುವೆನೆನುತ ತಂದ ಕಬ್ಬಿನ ಹೊಱೆಯ ಇಳುಹಿ ಬಂದು ಮೂಲೆಯಲ್ಲಿ ಮಲಗಲು—ಅಲ್ಲಿ ಕತ್ತಲೆಯಾದಕಾರಣ ಒಬ್ಬರಿರುವುದ ಒಬ್ಬರು ಕಾಣದೆ ಇರಲು—(ಹೀಗಿರುವಾಗ) ದೂರದೇಶದಿಂದ ಬಂದ ಮಾರ್ಗಸ್ಥನು ಪತ್ನಿ ಪಕ್ಕದಲ್ಲಿದ್ದಕಾರಣ ಕಾಮೋದ್ರೇಕದಿಂದ ಆಕೆಯ ಕೂಡೆ ನಾನಾಬಗೆಯ (ವಿನೋದ)ಗಳಲ್ಲಿದ್ದು, ಸುಖಸಮುದ್ರದಲ್ಲಿ ಮುಳುಗಿ,—ಎಲೆ ಪ್ರಿಯೆ! ಇಂದಿನವರೆಗೆ ಕಾಣದುದನ್ನೆಲ್ಲಾ ಈಗ ಕಂಡೆನು. ಇಂತು ಎಂದೂ ನೆರೆಯಲಿಲ್ಲವೆನಲು-ಆ ಮಾತ ಕೇಳಿ ಅಗಸನು--ಎಲೈ ಮಹಾಪುರುಷನೇ ! ನೀವು ಕಾಣದುದೆಲ್ಲಾ ಕಂಡ ಬಳಿಕ ನನ್ನ ಕತ್ತೆಯ ಕಂಡಿರಾ? ಎನ್ನಲಾಗಿ; ಆ ಮಾತ ಕೇಳಿ—ಇಲ್ಲಿ ಯಾರೋ ಬಂದು ಮಲಗಿದ್ದಾನೆಯೆಂದು ಬಾಗಿಲ ಸದ್ದಾಗದಂತೆ ತೆಗೆಯೆಂದ ಆ ಹೆಂಗಸಿನ ಮಾತ ಕಬ್ಬಿನ ಪಿಂಡಿಯ ತಂದವ ಕೇಳಿ—ಎಲೈ ನಾನು ಎಚ್ಚಱವಾಗಿದ್ದೇನೆ. ಸದ್ದಾಗದಂತೆ ಕಬ್ಬ ತೆಗೆದರೆ ತಿಳಿಯಬಂದೀತು ಎನ್ನಲಾಗಿ; ಅವರವರ ಮಾತ ಕೇಳಿ ವರರುಚಿ ಅಟ್ಟಹಾಸದಿಂ ನಕ್ಕನು. ಆಗ ಮೇಲೆ ಮೋಡಗಟ್ಟಿ ಮಳೆ ಹುಯ್ದು ಕೆರೆ ಕಟ್ಟೆ ತೊಱೆ ಹಳ್ಳ ಕೊಳ್ಳಗಳೆಲ್ಲ ತುಂಬಿ ಕೋಡಿ ಹರಿದುವು. ಅಂದು ಗೋಪ್ಯದಿಂದ ರಾಯ ಹಿಂದೆ ಕಳುಹಿಸಿದ್ದ ಬುದ್ಧಿವಂತ ವರರುಚಿಯ ಅನೇಕ ತೆಱದಿಂದೊಡಂಬಡಿಸಿ, ರಾಯನ ಬಳಿಗೆ ಕರೆತರಲಾಗಿ ; ರಾಯ ಕಂಡು ಬಹುಮಾನವ ಮಾಡಿ ಕುಳ್ಳಿರಿಸಿಕೊಂಡು,—ಎಲ್ಲಿಯತನಕ ಹೋಗಿದ್ದಿರಿ? ಅಲ್ಲೇನತಿಶಯವ ಕಂಡಿರಿ? ಎಂದು ಕೇಳಲಾಗಿ; ತಾನು ಪಾಳುಗುಡಿಯಲ್ಲಿ ಮಲ

ಗಿದ್ದಾಗ ನಡೆದ ವೃತ್ತಾಂತವ ಪೇಳಿ, ಅದುಕಾರಣ ಅಟ್ಟಹಾಸದಿಂವ ನಕ್ಕೆನು ಎಂದು ಹೇಳಲಾಗಿ; ರಾಯ ಮೆಚ್ಚಿ ವರರುಚಿಗೆ ಸವಾಲಕ್ಷ ದ್ರವ್ಯವ ಕೊಟ್ಟು, ಮನ್ನಿಸಿದನು ಕಣಾ! ಎಂದ ಮಾತಿಗೆ ರತ್ನವತಿಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :--

ಕೇಳೈಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುವಲ್ಲಿ ಒಂದು ದಿನ ಒಬ್ಬ ಬೇಟೆಗಾರ ಜಿಂಕೆಯ ಚರ್ಮ, ಪುಲಿಯ ಚರ್ಮ, ಪುಣುಗುಚಟ್ಟು, ಕಸ್ತೂರಿ ಸಹ ತಂದು, ಕೈಗಾಣಿಕೆ ಯೊಪ್ಪಿಸಿ—ಎಲೈ ಮಹಾರಾಯನೇ! ಮೃಗಗಳು ಅರಣ್ಯದ ವನಗಳಲ್ಲಿ ಹೇರಳವಿವೆ. ಈಗ ಬೇಂಟೆಗೆ ಸಮಯವಾಗಿದೆ ಎಂದು ಅರಿಕೆ ಮಾಡಲಾಗಿ; ರಾಯನು ಕೇಳಿ, ಆಕ್ಷಣವೇ ಹೊರಟು ನಾನಾಮೃಗಗಳ ಪಿಡಿಯಬೇಕೆಂದು ಬಲೆಗಳ ಬೀಸಿ, ಗಿಡವನೆಲ್ಲಾ ಶೋಧಿಸುತ್ತ, ಬೇಟೆಯನಾಡುತ್ತ ಬರುವಲ್ಲಿ, ಒಂದು ಕಾಡ ಹಂದಿಯು ಕಂಡು ಬೆನ್ನಟ್ಟಿ ಹೋಗಲಾಗಿ, ಅದು ಕೈಗೆ ಸಿಕ್ಕದೆ ಒಂದು ಗವಿಯ ಹೊಕ್ಕಿತು. ರಾಯನು ಆ ಗವಿಯ ಪೊಕ್ಕು, ಹುಡುಕಿ ನೋಡಲಾಗಿ; ಅಲ್ಲಿ ಮತ್ತೊಂದು ಬಿಲದ್ವಾರ ಕಂಡು, ಅದರಲ್ಲಿ ಹೋಗಲಾಗಿ; ಒಂದು ಕೋಟೆ ಸುವರ್ಣಮಯವಾಗಿ ಕಾಣಿಸಲು; ಆಕೋಟೆಯೊಳಗೆ ಹೋಗಿ ನೋಡಲಾಗಿ, ನವರತ್ನಖಚಿತವಾದ ನಿಲಗನ್ನಡಿ ಬಾಗಿಲುಗಳನುಳ್ಳ ಮನೆಗಳಿಂದೊಪ್ಪುವ ನಾನಾತೆರದಿಂದ ಪ್ರಕಾಶಮಾನವಾದ ಪಟ್ಟಣವಿರಲು, ಅದರ ಬಳಿಯ ಉದ್ಯಾನವನಕ್ಕೆ ರಾಯನು ಹೋಗಲಾಗಿ; ಅಲ್ಲಿ ಆ ಪಟ್ಟಣದ ಕಾವಲುಗಾರರ ಕಂಡು—ಈ ಪಟ್ಟಣವು ಯಾರದು? ಇದನಾಳುವ ಅರಸು ಯಾರು? ಎಂದು ಕೇಳಲಾಗಿ; ಅವರು—ಇದು ಶೋಣಿತವೆಂಬ ಪಟ್ಟಣ. ಇದನಾಳುವನು ಬಲೀಚಕ್ರವರ್ತಿಯೆಂದು ಪೇಳಿ, ಆ ಬಳಿಕ--ನೀವಾರೆಂದು ಕಾವಲುಗಾರರು ಕೇಳಲಾಗಿ; ರಾಯ ತನ್ನ ವೃತ್ತಾಂತವ ಅವರೊಡನೆ ಪೇಳಲಾಗಿ; ಆ ಜನವು ಕೇಳಿ ತಮ್ಮೊಡೆಯನಾದ ಬಲೀಂದ್ರಚಕ್ರವರ್ತಿಯ ಬಳಿಗೆ ಹೋಗಿ, ಕೈಮುಗಿದು—ಎಲೈ ಚಕ್ರವರ್ತಿಯೇ! ನಿಮ್ಮ ಉದ್ಯಾನವನಕ್ಕೆ ವಿಕ್ರಮಾದಿತ್ಯರಾಯ ಬಂದಿದ್ದಾರೆ ಎನ್ನಲಾಗಿ ; ಆತ ಆಶ್ಚರ್ಯಪಟ್ಟು ತನ್ನ ಮಂತ್ರಿಗಳ ಕಳುಹಿಸಿ, ತಾನು ಎದುರಾಗಿ ಹೋಗಿ, ರಾಯನ ತನ್ನ ಅರಮನೆಗೆ ಕರೆದು

ಕೊಂಡು ಬಂದು, ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ,--ನೀವಿಲ್ಲಿಗೆ ಬಂದ ಕಾರಣವೇನೆಂದು ಕೇಳಲಾಗಿ; ರಾಯ ತಾ ಬಂದ ವರ್ತಮಾನವ ಪೇಳದುದ ಕೇಳಿ, ಅತಿ ಸಂತೋಷಂಬಟ್ಟು, ರಾಯನಿಗೆ ಮಜ್ಜನ ಭೋಜನ ಮಾಡಿಸಿ, ಪುಷ್ಪ ಸುಗಂಧ ತಾಂಬೂಲವ ಕೊಡಿಸಿ, ಆ ಬಳಿಕ ನವರತ್ನಾಭರಣ ಪೀತಾಂಬರವ ಕೊಟ್ಟು, ಕಳುಹಿಸುವಲ್ಲಿ (ಎರಡು ರತ್ನವ ಕೊಟ್ಟು, ಇದು ಕೇಳಿದುದ ಕೊಡುವುದು. ಇದು ನೆನೆದಲ್ಲಿಗೆ ಮನೋವೇಗದಲ್ಲಿ ಕರೆದು ಕೊಂಡು ಹೋಗುವುದು ಎಂದು ಹೇಳಲಾಗಿ;) ಅದ ತೆಗೆದುಕೊಂಡು ಅಲ್ಲಿಂದ ಪುನಃ ಆ ದ್ವಾರದಲ್ಲಿ ಹೊಕ್ಕು ಈಚೆಗೆ ಬಂದು, ಇಲ್ಲಿಗೆ ಬರುವ ದಾರಿಯಲ್ಲಿ, ಒಬ್ಬ ಬ್ರಾಹ್ಮಣ ತನ್ನ ಮಗ ಸಹಿತ ಬರುವನ ಕಂಡು, ರಾಯನು—ನೀವೆಲ್ಲಿಗೆ ಹೋಗುತ್ತೀರಿ? ಎನ್ನಲಾಗಿ; ಆ ಬ್ರಾಹ್ಮಣ ತನ್ನ ದರಿದ್ರದುಃಖವ ಪೇಳದುದ ಕೇಳಿ, ಆ ರಾಯನಿಗೆ ಮನಸ್ಸು ಮರುಗಿ ಆ ರತ್ನವ ಕೊಟ್ಟು, ಇದು ಕೇಳಿದುದ ಕೊಡುವುದೆಂದು ಪರೀಕ್ಷೆ ಪೇಳದ ಬಳಿಕ, ರಾಯನ ಕೈಯಲ್ಲಿ ಮತ್ತೊಂದು ರತ್ನವಿರುವುದ ಕಂಡು, ಆ ಬ್ರಾಹ್ಮಣನ ಮಗ ಇದರ ವಿವರವೇನೆಂದು ಕೇಳಲಾಗಿ, ರಾಯ—ಇದು ನೆನೆದ ಬಳಿಗೆ ಮನೋವೇಗದಿಂದ ಕೊಂಡುಹೋಗುವುದೆಂದ ಮಾತಿಗೆ ಆ ವಿಪ್ರನ ಮಗ ತನಗಾರತ್ನವ ಕೊಡಬೇಕೆಂದು ಕೇಳದುದರಿಂದ (ಅದ ಅವನಿಗೆ ಕೊಟ್ಟು, ಈ ರೀತಿಯಲ್ಲಿ) ತಂದೆ ಮಕ್ಕಳಿಗೆ ಆಯೆರಡು ರತ್ನಗಳ ಕೊಟ್ಟು ಕಳುಹಿಸಿ ತಾನಿಲ್ಲಿಗೆ ಬಂದು ಸುಖವಾಗಿದ್ದನು, ಎಂದು ರತ್ನವತಿ ಯೆಂಬ ಪುತ್ತಳಿ ನುಡಿಯಲಾಗಿ; ಭೋಜರಾಜನು ಲಜ್ಜಿತನಾಗಿ, ತನ್ನ ಅರಮನೆಗೆ ಪೋದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ರತ್ನವತಿಯೆಂಬ ಪುತ್ತಳಿ ಪೇಳಿದ ಇಪ್ಪತ್ತನೆಯ ಕಥೆ.

---

೨೧ ನೆಯ ಕಥೆ.

ಇಪ್ಪತ್ತೊಂದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿ, ವಸ್ತ್ರಾಭರಣಾಲಂಕೃತನಾಗಿ, ಚಿತ್ರಕರ್ನನ ಕೈಲಾಗಿನಿಂದ ಆಸ್ಥಾನಮಂಟಪಕ್ಕೆ ಬಂದು ತನ್ನ ಬಲಗಾಲ

ನೀಡುವ ಸಮಯದಲ್ಲಿ, ಆ ಸೋಪಾನದ ಮದನಮೋಹಿನಿಯೆಂಬ ಪುತ್ಥಳಿ
ಯು ಹೋ ಹೋ ಎಂದು ಧಿಕ್ಕರಿಸಲಾಗಿ; ಭೋಜರಾಜನು ಖಿನ್ನನಾಗಿ
ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲೆ ಪುತ್ಥಳಿಯೇ ! ಕೇಳು. ಧಾರಾಪುರದಲ್ಲಿ ನಮ್ಮ ರಾಯ ಸುಖ
ರಾಜ್ಯಗೆಯ್ಯುವಲ್ಲಿ ಒಂದುದಿನ [1]ನೀರಿನಲ್ಲಿ[1] ಬೇಟೆ ನೋಡಬೇಕೆಂದು
ಹೊಱಟು, ಗಂಗಾನದಿಯಲ್ಲಿ ಬಲೆಗಳ ಬಿಡಿಸಿ, ಹೇರಳ ಮೀನುಗಳ
ಹಿಡಿಸಿ ನೋಡುತ್ತಿರುವಲ್ಲಿ—ಅವಱಲ್ಲಿ ಬಾಳೆಮೀನು, ಜಿನುಗುಮೀನು,
ಸಸಿಲೆಮೀನು, ಹಾವುಮೀನಾದಿಯಾಗಿ ಇರುವುದ ನೋಡುತ್ತ, ಮತ್ತು
ಬೇಟೆ ಮಾಡಿಸುವಲ್ಲಿ ಒಂದು ಮೀಂಗುಲಿಗನೆಂಬ ಹಕ್ಕಿಯು ಗಗನದೊಳಾ
ಡುತ್ತ ಇದ್ದು ನೀರಿನಲ್ಲಿ ಹೊಳೆವ ಮೀನ ಕಂಡು ಗ್ರಾಸಕ್ಕಾಗಿ ಸಸಿನೆ
ಅಲ್ಲಿಂದಿಳಿದು, ಆ ಮೀನ ಕಚ್ಚಿ, ಮೇಲಱಕ್ಕೆ ಹಾಱಿಹೋಗುವಾಗ ಬಾಯಿ
ಯಲ್ಲಿ ಕಚ್ಚಿಯಿದ್ದ ಮೀನು ಜಾಱಿ ನೀರಿನಲ್ಲಿ ಬೀಳುವುದಕ್ಕೆ ಮುಂಚೆ
ಮತ್ತೆ ಎಱಗಿ ಆ ಮೀನ ಕಚ್ಚಿಕೊಂಡು ಹೋಗುವ ಮೀಂಗುಲಿಗಪಕ್ಷಿಯ
ಚಮತ್ಕಾರವ ಕಂಡು ರಾಯನು ಮೆಚ್ಚಿ, ತನ್ನ ಕೊರಳ ಪದಕವ ತಗೆದು
ಆ ಪಕ್ಷಿಗೆ ಹಾಕಿದುದಱಿಂದ ಅದು ನೀರಿಗೆ ಬೀಳಲಾಗಿ, ಮಂತ್ರಿಗಳು ಕಂಡು
ಅಮೋಘವಾದ ಪದಕವನ್ನು ನೀರಿಗೆಚೆ ಕಾರಣವೇನೆಂದು ಕೈಮುಗಿದು
ಕೇಳಲಾಗಿ, ರಾಯನಿಂತೆಂದನು :— ಕೇಳ್ಳಿ, ಈ ಲೋಕದಲ್ಲಿ ಇಬ್ಬರು
ಪಾಪಾತ್ಮರು. ಅವಾರೆಂದರೆ—[2]ಉಚಿತವ ತಿಳಿಯದವನೊಬ್ಬ, ಆಸ್ಥಾನ
ದಲ್ಲಿ ವಚನಹೀನನೊಬ್ಬ : ಇವರು ಕರ್ಮಿಗಳೆಂಬ ನೀತಿಯಿಂದ ಮೀಂಗು
ಲಿಗಪಕ್ಷಿ ಮೀನ ನುಂಗಬಾರದೆಂದು ಪದಕವ ನೀರಿಗೆಚ್ಚಿಯೆಂದುದಕ್ಕೆ
ಸರ್ವರೂ ರಾಯನ ಹೊಗಳಿದರು—ಎಂಬ ಮಾತಿಗೆ ಮದನಮೋಹಿನಿಯೆಂ
ಬ ಪುತ್ಥಳಿಯು ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :—

ಕೇಳಯ್ಯ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯನು ಈ
ರಾಜ್ಯಪಾಲನೆ ಮಾಡುವವೇಳೆಯಲ್ಲಿ ಒಂದು ದಿನ ಅನ್ನಸತ್ರದಲ್ಲಿ ಬ್ರಾ

ಪಾ—1 ಮೀನ.

2. ಉಚಿತಾರ್ಥವಱಿಯದವ, ರಾಜಾಸ್ಥಾನದಲ್ಲಿ ಮೆಚ್ಚಿ ನುಂಗುವನು; ವಚ
ನದರಿದ್ರನು— ಇವರುಗಳು ಕಣಾ! ಲೋಕದಲ್ಲಿ ಪಾಪಿಗಳು ಎಂಬನೀತಿ
ಯುಂಟಾಗಿ.

ಹ್ಮಣ ಸಮೂಹವ ನೋಡಬೇಕೆಂದು ಹೊಱಟುಹೋಗಿ ನೋಡುತ್ತಿರುವಲ್ಲಿ, ಬಹುಸ್ಥೂಲಕಾಯನಾದ ಒಬ್ಬ ಬ್ರಾಹ್ಮಣ ಬರಲಾಗಿ; ಅವನ ಕಂಡು-ಎಲೈ ಬ್ರಾಹ್ಮಣೋತ್ತಮನೇ! ನೀನು ಯಾವ ದೇಶದವ? ಎಂದು ಕೇಳಲಾಗಿ; ಆ ಬ್ರಾಹ್ಮಣನು-ಎಲೈ ರಾಯನೇ! ಕಾಶ್ಮೀರದೇಶದಲ್ಲಿ ಧರ್ಮಾರಣ್ಯವೆಂಬ ಒಂದು ಅಗ್ರಹಾರವಿರುವುದು. ನಾನು ಆ ಅಗ್ರಹಾರದವನು. ನಾನು ಬಡತನದ ಬೇಗೆಯಿಂದ ಬೆಂದು, ನಿಮ್ಮ ದಿಗಂತಪ್ರಖ್ಯಾತವಾದ ಅನ್ನೋದಕದಾನ ಖ್ಯಾತಿಯ ಕೇಳಿ ಇಲ್ಲಿಗೆ ಬಂದೆನು ಎನ್ನಲಾಗಿ; ರಾಯನು ಅಲ್ಲಿ ಏನತಿಶಯವೆಂದು ಕೇಳಿದುದಕ್ಕೆ—ಅವನು (ಆದೇಶದಲ್ಲಿ) [1]ಪಂಚವದ[1] ಗಿರಿಯ ಬಳಿಯಲ್ಲಿರುವ ದಧೀಚಿ ಮುನಿಯಾಶ್ರಮದಲ್ಲಿ ದಿನಚಂದ್ರನೆಂಬ ಮುನಿ ಬಹುಕಾಲ ಈಶನ ಕುಱಿತು ತಪಸ್ಸ ಮಾಡಲಾಗಿ, ಈಶ ಪ್ರತ್ಯಕ್ಷವಾಗಿ—ನಿನಗೆ ಬೇಕಾದ ವರವ ಕೇಳು ಎನ್ನಲಾಗಿ; ಆ ಮುನಿ ತನ್ನ ಭಜಿಸಿದವರಿಗೆ ಕೇಳಿದುವ ಕೊಡುವಂಥ ವರವ ಪಾಲಿಸಬೇಕೆಂದು ಕೇಳಲಾಗಿ; ಅದೇಮೇರೆಗೆ ಈಶ ವರವನ್ನಿತ್ತು ಆ ಮುನಿಯ [2]ಪಾತಾಳಲೋಕದಲ್ಲಿರಿಸಿ,[2] ಅವನ ಸುತ್ತ ಏಳುಸುತ್ತಿನ ಕೋಟೆಯ ನಿರ್ಮಿಸಿ, ಅದಕ್ಕೆ ಸೂಚೀದ್ವಾರದ ಬಾಗಿಲುಗಳು ಮಾಡಿ, ಒಂದನೆಯ ಸುತ್ತು ಬಾಗಿಲಲ್ಲಿ ವಜ್ರದುಂಬಿಯನಿರಿಸಿ, ಎರಡನೆಯ ಸುತ್ತು ಬಾಗಿಲಲ್ಲಿ [3]ವಿಷವ[3]ನ್ನಿರಿಸಿ, ಮೂಱನೆಯ ಸುತ್ತು ಬಾಗಿಲಲ್ಲಿ ಕಾಲರಾಕ್ಷಸನನಿರಿಸಿ, ನಾಲ್ಕನೆಯ ಸುತ್ತಿನ ಬಾಗಿಲಲ್ಲಿ ಬಡಬಾಗ್ನಿಯನಿರಿಸಿ, ಐದನೆಯ ಸುತ್ತಿನ ಬಾಗಿಲಲ್ಲಿ ಪುಲಿ ಸಿಂಹವನಿರಿಸಿ, ಆಱನೆಯ ಸುತ್ತಿನ ಬಾಗಿಲಲ್ಲಿ ಭೇತಾಳನನಿರಿಸಿ, ಏಳನೆಯ ಸುತ್ತಿನಲ್ಲಿ [4]ಜಲಪ್ರಳಯವ[4] ಪುಟ್ಟಿಸಿ, ಅಲ್ಲಿಗಾರೂ ಪೋಗದಂತೆ ಮಾಡಿ, ಈಶ ಪೋದನು. ಆ ಬಳಿಕ ಇಂಥ ದುಸ್ತರವಾದುದಱಲ್ಲಿ ಆದಿನಚಂದ್ರಮುನಿ ಇರುತ್ತಿದ್ದಾನೆಂದು ಪೇಳಿದುದ ರಾಯ ಕೇಳಿ, ಆಕ್ಷಣವೇ ಅದ ನೋಡಬೇಕೆಂದು, ಆ ವಿಪ್ರನ ಕರೆದುಕೊಂಡು ಖೇಚರಮಾರ್ಗದಲ್ಲಿ ಹೋಗಿ, ಭೇತಾಳನ ವರವುಂಟಾದುದಱಿಂದ ಆ ಸೂಚೀದ್ವಾರದ ಬಾಗಿಲಲ್ಲಿ ಹೊಕ್ಕು, ಕೋಟೆ ಯೇಳುಸುತ್ತನ್ನೂ ದಾಂಟಿ, ಆ ಮುನಿಯ ಬಳಿಗೆ

---

1. ಚಂಪವಾ.
2. ಪಾತಾಳಲೋಕದಲ್ಲಿರು ಎಂದು ಹೇಳಿ ಸೂಚೀದ್ವಾರದಷ್ಟು ಬಿಲದ್ವಾರವಂ ಮಾಡಿ, ಮಾರ್ಗವಂ ಆದಕ್ಕೆ. 3, ವಿಷಗಾಳಿ. 4. ಜಲದಾಳಿಯು

ಹೋಗಿ ವಂದಿಸಲಾಗಿ; ಆ ಮುನಿಯು ರಾಯನ ಕಂಡು ವಿಸ್ಮಿತನಾಗಿ— ಇಂಥ ಅಸಾಧ್ಯಸ್ಥಳಕ್ಕೆ ಹೇಗೆ ಬಂದೆ? ನಿನ್ನ ಹೆಸರೇನು? ಎಂದು ಕೇಳ ಲಾಗಿ; ತಾನು ವಿಕ್ರಮಾದಿತ್ಯರಾಯನೆಂದು ಪೇಳಲಾಗಿ; ಆ ಮುನಿಯು ಸಂತೋಷಪಟ್ಟು ಸಮೀಪದಲ್ಲಿ ಕುಳ್ಳಿರಿಸಿಕೊಂಡು ಇಂತೆಂದನು :—ಕೇಳೈ ರಾಯನೇ! ನನ್ನಲ್ಲಿಯಾರು ಬಂದು ಬೇಕಾದುದ ಕೇಳಿದರೆ ಕೊಡುವಂತೆ ಶಿವನ ವರವ ಪಡೆದಿರುವೆ. ಈವರೆಗಿಲ್ಲಿಗಾರೂ ಬರಲಿಲ್ಲ ಎಂದು ಚಿಂತಿಸು ತಿದ್ದೆನು. ನೀನು ಮಹಾಪುರುಷನಾದಕಾರಣ ಇಲ್ಲಿಗೆ ಬಂದೆ. ನಿನಗೆ ಬೇ ಕಾದರ್ಥವ ಬೇಡು ಎನ್ನಲಾಗಿ; ಸ್ವಾಮಿ, ನನಗೆ ನಿಮ್ಮ ಕಟಾಕ್ಷದಿಂದ ಸಕ ಲೈಶ್ವರ್ಯ ಭೋಗಭಾಗ್ಯ, ಮಂದಿ, ಮಾರ್ಬಲ ಯಾವತ್ತೂ ಸಂಪೂರ್ಣವಾಗಿ ಇರುವುದು. ನಾನು ಇನ್ನೇನ ಬೇಡುವೆನು ಎನ್ನಲು; ಆ ಮಾತಿಗೆ ಆ ಮುನಿ ನೀನು ಬಹುಪ್ರಯಾಸಪಟ್ಟು ನಮ್ಮಲ್ಲಿ ಬಂದು ಸುಮ್ಮನೆ ಹೋಗ ಬಾರದೆಂದು ಚತುರಂಗಸೇನೆ ಕೊಡುವುದೊಂದು ರತ್ನ, ಬೇಕಾದಷ್ಟು ದ್ರವ್ಯ ಕೊಡುವುದೊಂದು ರತ್ನ; ಮೃಷ್ಟಾನ್ನ ಕೊಡುವುದೊಂದು ರತ್ನ, ಈ ಮೂರು ರತ್ನದ ಪರೀಕ್ಷೆ ಪೇಳಿ ಕೊಟ್ಟು ಕಳುಹಿಸಲಾಗಿ; ರಾಯ ರತ್ನಂಗಳ ತೆಗೆದುಕೊಂಡು, ಅಲ್ಲಿಂದ ಆ ಸೂಕ್ಷ್ಮದ್ವಾರದ ಬಾಗಿಲಲ್ಲಿ ಹೊಕ್ಕು ಇಲ್ಲಿಗೆ ಹೊರಟುಬರುವ ದಾರಿಯಲ್ಲಿ ಒಬ್ಬ ಅರಸು ದಾಯಾದಿ ಗಳಿಂದ ರಾಜ್ಯಭ್ರಷ್ಟನಾಗಿ ಗ್ರಾಸಕ್ಕಿಲ್ಲದೆ ಸತಿ ಸುತರು ಸಮೇತ ಅರಣ್ಯ ದಲ್ಲಿ ಅಗ್ನಿಪ್ರವೇಶಕ್ಕೆ ನಿಶ್ಚಯವಾಗಿ ಅಗ್ನಿಕುಂಡಕ್ಕೆ ಅಗ್ನಿಯ ಹಾಕಿ ಇರುವುದ ಕಂಡು, ಕನಿಕರಪಟ್ಟು ರಾಯ—ನೀವು ಅಗ್ನಿಪ್ರವೇಶವ ಮಾಡ ಕಾರಣವೇನೆಂದು ಕೇಳಲಾಗಿ; ಆ ಅರಸು ಇಂತೆಂದನು :—ನಾನು ಅಂಗದೇ ಶದ ಅರಸು; ದಾಯಾದಿಗಳು ಹೆಚ್ಚಿ ರಾಜ್ಯಕೊಳ್ಳಲಾಗಿ, ನಿರ್ವಾಹವಿಲ್ಲದೆ ಅಲ್ಲಿಂದ ಈ ಅರಣ್ಯಕ್ಕೆ ಬಂದು ಅಗ್ನಿಪ್ರವೇಶಕ್ಕೆ ನಿಶ್ಚೈಸಿ ಇದ್ದೇನೆ. ಹೀಗಿರುವ ಬ್ರಹ್ಮಲಿಖಿತವ ಮೀರಬಲ್ಲಳವೇ? ಎಂದು ವ್ಯಾಕುಲಪಡುತ್ತ ಪೇಳಿದ ಆ ಅರಸಿನ ಮಾತ ಕೇಳಿ, ರಾಯನು ಕರುಣಚಿತ್ತನಾಗಿ-ಅಂಜ ಬೇಡವೆಂದು ಅಭಯವಿತ್ತು, ದಿನಚಂದ್ರಮುನಿ ತನಗೆ ಕೊಟ್ಟ ಮೂರು ರತ್ನವ ಕೊಟ್ಟು, ರತ್ನ ಪರೀಕ್ಷೆ ಪೇಳಿ, ಸಂತೈಸಿ ಕಳುಹಿಸಿ, ಇಲ್ಲಿಗೆ ಬಂದು, ಇದ ಪೇಳಿದ ಬ್ರಾಹ್ಮಣನಿಗೆ ಕೋಟಿ ದ್ರವ್ಯ ಕೊಟ್ಟು ಕಳುಹಿಸಿ,

ತಾನು ಸುಖವಾಗಿದ್ದನು—ಎಂದು ಮದನಮೋಹಿನಿಯು ನುಡಿಯಲಾಗಿ; ಭೋಜರಾಜನು ಆಶ್ಚರ್ಯಚಿತ್ತನಾಗಿ, ತನ್ನ ಅರಮನೆಯ ಪೊಕ್ಕನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತೆಯಲ್ಲಿ ಮದನಮೋಹಿನಿಯೆಂಬ ಪುತ್ತಳಿ ಪೇಳಿದ ಇಪ್ಪತ್ತೊಂದನೆಯ ಕಥೆ,

೨೨ ನೆಯ ಕಥೆ.

ಇಪ್ಪತ್ತೆರಡನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಮಾಡಿ ಭೋಜನ ತಾಂಬೂಲವ ತೀರಿಸಿಕೊಂಡು, ನವರತ್ನಾಭರಣಾಲಂಕೃತನಾಗಿ, ಎಂದಿನಂತೆ ಚಿತ್ರಶರ್ಮನ ಕೈಲಾಗಿನಿಂದ ಆ ಸಿಂಹಾಸನದ ಬಳಗೆ ಬಂದು, ಬಲಗಾಲ ನೀಡುವ ಸಮಯದಲ್ಲಿ ಇಪ್ಪತ್ತೆರಡನೆಯ ಸೋಪಾನದ ಪದ್ಮನಯನೆಯೆಂಬ ಪುತ್ತಳಿಯು—ಹೋಹೋ! ನಿಲ್ಲುನಿಲ್ಲು, ನಮ್ಮೊಡೆಯ ವಿಕ್ರಮಾದಿತ್ಯರಾಯನಂತೆ ಸಾಹಸೌದಾರ್ಯ ಗುಣಗಳುಳ್ಳೊಡೆ ಈ ಸಿಂಹಾಸನವನೇರು, ಇಲ್ಲವಾದರೆ ಕೆಲಸಾರು ಎಂದು ಧಿಕ್ಕರಿಸಲಾಗಿ; ಭೋಜರಾಜನು ಖಿನ್ನನಾಗಿ ಬೇರೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯ ಸುಖರಾಜ್ಯವ ಗೆಯ್ಯುವಲ್ಲಿ ಒಂದು ದಿನ ಚತುರಂಗಬಲ ಸಹಿತ ರಾಜಬೀದಿಯಲ್ಲಿ ಸ್ವಾರಿಯು ಹೊರಟು ಬರುವಲ್ಲಿ, ಗೊಲ್ಲಗೇರಿಯಿಂದ ಗೊಲ್ಲತಿಯರು ಹಾಲು ಮೊಸರಿನ ಹರವಿಗಳಂ ಹೊತ್ತು ಬರಲಾಗಿ, ಅವರ ಕಂಡು, [1]ಎಣ್ಣೆಯ ಹರವಿಗಳೆಂದು[1] ಬೈಗಾವಲ ಜನರು ಅವರ ಬಡಿಯ ಹೋಗಲಾಗಿ, ಅವರು ಅಂಜಿಕೊಂಡು ಬೇಗ ಓಡಿಹೋಗುವಾಗ, ಒಬ್ಬೊಬ್ಬರು ತೊಡರಿಕೊಂಡು ಹೊತ್ತಿದ್ದ ಹರವಿಗಳ ಎತ್ತಿಹಾಕಿ, ಮೊಸರು ಎಲ್ಲ ಚೆಲ್ಲಿಹೋದಕಾರಣ ಅವರೆಲ್ಲಾ ದುಃಖಪಡುತ್ತಿರುವಲ್ಲಿ— ಅವರಲ್ಲೊಬ್ಬಳು ಸ್ತ್ರೀ ನಗುತ್ತಿರುವುದ ಕಂಡು, ಅವಳ ಕರೆಸಿ--ಎಲ್ಲಾ ಸ್ತ್ರೀಯರೂ ಶೋಧಿಸುವುದೇನು? ನೀನೊಬ್ಬಳು ನಗುವುದೇನೆಂದು ರಾಯನು ಕೇಳ

ಪಾ—1. ಎಣ್ಣೆಯಹರವಿಯು ಕಾಣಬಾರದು. ಅಪಶಕುನವೆಂಬ ನೀತಿಯುಂಟಾಗಿ.

ಲಾಗಿ; ಅವಳಿಂತೆಂದಳು :--ಕೇಳೈ ರಾಯನೇ! ಮೊದಲು ಕಷ್ಟಪಟ್ಟುದಕ್ಕೆ ದುಃಖಪಡಲಿಲ್ಲ; ಈ ಹಾಲು ಮೊಸರು ಚೆಲ್ಲಿಹೋದರೆ ಇದಕ್ಕೆ ರೋದನೆ ಪಡುವೆನೇ? ಎನ್ನಲಾಗಿ; ರಾಯ—ನೀಮುನ್ನ [1]ಕಷ್ಟಪಟ್ಟುದೇ[1]ನೆಂದು ಕೇಳಿದುದಕ್ಕೆ ಅವಳಿಂತೆಂದಳು :--ಕೇಳೈಯಾ ರಾಯನೇ! ಹೇಮಾವತಿಯೆಂಬ ಪಟ್ಟಣದ ಅರಸು ಸಿಂಹಸೇನನ ಬಳಿಯಲ್ಲಿ ವರ್ತಕನಾಗಿ ಇದ್ದ ರತ್ನದತ್ತನ ಹೆಂಡತಿಯಾಗಿ ಮೊದಲು ನಾನು ಇದ್ದೆ; ನನ್ನ ಹೆಸರು ಚಂದ್ರಲೇಖೆ. ನನಗೆ ಮಕ್ಕಳಿರಲಿಲ್ಲವಾಗಿ ಆ ಪಟ್ಟಣದ ಕಾಳಿಕಾದೇವಿಗೆ ಹರಕೆಮಾಡಿಕೊಂಡ ಕಾರಣ ಬಳಿಕ ಪುತ್ರನ ಪಡೆದು ಬಂದುದಿನ ದೇವಿಯ ಹರಕೆಯನ್ನೊಪ್ಪಿಸಿ ರಾಜಬೀದಿಯಲ್ಲಿ ಬರುವಲ್ಲಿ, ಆ ಸಿಂಹಸೇನನೆಂಬ ಅರಸು ನನ್ನ ಕಂಡು ನನ್ನ ರೂಪಲಾವಣ್ಯಕ್ಕೆ ಮನಸೋತು, ತನ್ನ ದೂತಿಯರ ಕಳುಹಿಸಿ, ನನ್ನ ಒಡಂಬಡಿಸಲು ಕರೆಯಬಿಡಲಾಗಿ—ನಾನು ಅಲ್ಲಿಗೆ ಹೋದರೆ ಪಾತಿವ್ರತ್ಯ ಭಂಗವಾದೀತೆಂದು ಹೋಗದಿರಲಾಗಿ; ಆ ಅರಸು ಕಾಮೋದ್ರೇಕದಿಂದ ದುರಾಲೋಚನೆಯ ಮಾಡಿ, ನನ್ನ ಪತಿಯಾದ ರತ್ನದತ್ತನ ಕರೆಸಿಕೊಂಡು,—ನೀನು ದ್ವೀಪಾಂತರಕ್ಕೆ ಹೋಗಿ ರತ್ನಗಳ ತೆಗೆದುಕೊಂಡು ಬಾಯೆಂದು, ಅನೇಕ ದ್ರವ್ಯವ ಕೊಟ್ಟು ಪಯಣವ ಮಾಡಿ ಕಳುಹಿದ ಬಳಿಕ; ಪುನಃ ತನ್ನ ದೂತಿಯರ ನನ್ನ ಹತ್ತಿರಕ್ಕೆ ಕಳುಹಿಸಿ—ಸುಮ್ಮನೆ ಬಂದರೆ ಸರಿ. ಇಲ್ಲದಿದ್ದರೆ ಬಲಾತ್ಕಾರದಿಂದ ಹಿಡಿದುಕೊಂಡು ಬರಹೇಳಲಾಗಿ; [2]ಬಂದ ದೂತಿಯರು ಹೇಳಿದ ಮಾತ ಕೇಳಿ, ಹೋಗದಿದ್ದರೆ ಮಾನಕ್ಷತಿಯಾದೀತೆಂದು[2] ತಿಳಿದು ಇಂತೆಂದೆನು—ಎಲೆ ದೂತಿಯರಾ! ಅದಾಗ್ಗೂ ಅರಸನ ಬಂಡಾರದ ಬೀಡಿಗೆ ಬಂದಿರ ಹೇಳಿ, ನಾನಾರೂ ಕಾಣದಂತೆ ಬರುವೆನೆಂದು ಪೇಳಿ, ಆ ದೂತಿಯರ ಕಳುಹಿಸಿ, ಆದಿನ ರಾತ್ರೆ ನನ್ನ ಮನೆಯಿಂದ ಹೊರಟು ರಾಜಬೀದಿಯಲ್ಲಿ ಹೋಗುತ್ತಿರುವಲ್ಲಿ ಒಬ್ಬ ಪುರುಷನ

ಪಾ—1. ಪಟ್ಟಭಂಗವೇ. 2. ದೂತಿಯರು ಬಂದು ಈ ವೃತ್ತಾಂತವ ಪೇಳಲು ತಾನು ಒಪ್ಪದೆ ಇರಲು, ಮತ್ತು ಬಲಾತ್ಕಾರದಿಂದ ಹಿಡಿತನ್ನಿರಿ ಎಂದು ದೂತರ ಕಳುಹಲು, ಪತಿವ್ರತಾಭಂಗವಹುದೆಂದು ತಿಳಿದು, ಪತಿವ್ರತಾಭಂಗವಾದಮೇಲೆ ಸ್ವೇಚ್ಛೆಯ ತರಬೇಕಲ್ಲದೆ ಈ ಪ್ರಾಪ್ತಿ ತಪ್ಪದು. ಕಳೆವೇತಕ್ಕೆಂದು ನನ್ನಲ್ಲಿ ನಾನೇ ಯೋಚಿಸಿಕೊಂಡು.

ಕಂಡು, (ಅವನಿಗೆ ಮನಸೋತು) ಅವನ ಕರೆದು—ಎಲೈ ಪುರುಷನೇ! ನನ್ನ ಮನೆಯಲ್ಲಿ ಬಹಳ ದ್ರವ್ಯವಿದೆ. ಅದ ತೆಗೆದುಕೊಂಡು ಬರುತ್ತೇನೆ. ನೀನೂ ನಾನೂ ಗಂಡಹೆಂಡರಾಗಿ ದೂರದೇಶದಲ್ಲಿರುವ—ಎಂದು ಹೇಳಿದ ಮಾತಿಗೆ ಒಡಂಬಟ್ಟದರಿಂದ ನಾನು ಬರುವ ತನಕ ನೀನು ಊರಮುಂದೆ ಇರುವ ಕಾಳಿಕಾದೇವಿಯ ಗುಡಿಯಲ್ಲಿರು, ಎಂದು ಹೇಳಿ, ಅವನ ಕಳು ಹಿಸಿ, ಅರಮನೆಗೆ ಹೋಗಿ, ಅರಸಿನ ಸಂಗಡ ಮೋಸಗಾರಿಕೆಯಲ್ಲಿದ್ದು, ಅರಸು ಮರಿತು ಮಲಗಿರುವ ವೇಳೆ ನೋಡಿ, ದೊಡ್ಡ ಕಲ್ಲ ಶಿರದ ಮೇಲೆ ಎತ್ತಿಹಾಕಿ, ಅರಸನ ಕೊಂದು, ಬಂಡಾರದಲ್ಲಿ ಇದ್ದ ಒಡವೆ ಹಣ ಮೊದ ಲಾಗಿ ಬೇಕಾದಷ್ಟು ತೆಗೆದುಕೊಂಡು, ಊರ ಮುಂದಣ ಕಾಳಿಕಾದೇವಿಯ ಗುಡಿಗೆ ಬಂದು, ಆ ಪುರುಷನ ನೋಡಲಾಗಿ—ಅವನು ಹಾವು ಮುಟ್ಟಿ ಮೃತ ನಾಗಿರುವುದ ಕಂಡು—ನಾನು ಊರೊಳಗೆ ಹೋಗಿ ಮನೆಯಲ್ಲಿ ಇದ್ದರೆ ಅರಸನ ಕೊಂದವಳಿವಳೆಂದು ದೂತಿಯರು ದೂರುಮಾಡಿಯಾರು ಎಂದು ಆ ಪಟ್ಟಣವ ಬಿಟ್ಟು, ರತ್ನಾವತಿಯೆಂಬ ಪಟ್ಟಣವ ಸೇರಿ, ಅಲ್ಲಿ ವೇಸಿ ಯಾಗಿರಲಾಗಿ ; ಅತ್ತಲಾಬಳಿಕ ಅರಸು ಸತ್ತ ಸುದ್ದಿಯ ದೂರದಲ್ಲೇ ಕೇಳಿ, ನನ್ನ ಗಂಡನಾದ ರತ್ನದತ್ತ ಆಪಟ್ಟಣಕ್ಕೆ ಬಂದು, ಮನೆಯಲ್ಲಿ ನನ್ನ ಕಾಣದೆ, ವಿಚಾರಿಸಿ, ಬಳಿಕ ಮತ್ತೊಬ್ಬಳ ಮದುವೆಯಾಗಿ, ನನ್ನ ಮಗ ಸಹಿತ ಇರುತಿದ್ದನು. ಕೆಲವು ದಿನದ ಮೇಲೆ ಆ ಮಗ ದೊಡ್ಡವ ನಾಗಿ ಬಲು ಜಾಣನಾಗಿ ಅನೇಕ ದ್ರವ್ಯ ಸಂಪಾದಿಸಿ ಅಲ್ಲಿಂದ ವ್ಯಾಪಾರ ನಿಮಿತ್ತ ರತ್ನವತಿಗೆ ಬಂದು, ನನ್ನ ಕಂಡು, ನನ್ನ ಮನೆಗೆ ಬಂದು, ಬಹಳ ದ್ರವ್ಯವ ಕೊಟ್ಟು, ಮಂಚದ ಮೇಲೆ ಕುಳಿತುಕೊಳ್ಳಲಾಗಿ; ನಾನು ಸಮೀ ಪದಲ್ಲಿ ಕುಳಿತುಕೊಂಡು ವೀಳ್ಯ ಮಡಿಸಿಕೊಟ್ಟು, ಮುದ್ದುಗೈದು, ಆಲಿಂಗನ ಮಾಡಿದಲ್ಲಿ—ನನ್ನ ಸ್ತನಗಳಿಗೆ ಹಾಲುದುಂಬಲಾಗಿ—ಮಕ್ಕಳ ಮೇಲಣ ಮೋ ಹದಂತೆ ಇದೇನಾಶ್ಚರ್ಯವೆಂದು, ಕಡೆಗೆ ಸೇರಿ, ಕುಳಿತು, ಇಂತೆಂದು ಕೇಳಿದೆನು:—ನೀನು ಯಾವ ದೇಶ? ಯಾರ ಮಗ? ಇಲ್ಲಿಗೆ ಏನು ಕಾರಣ ಬಂದೆ? ಎನ್ನಲಾಗಿ ; ಅವನು—ನಾನು ಹೇಮಾವತಿಯೆಂಬ ಪಟ್ಟ ಣದ ವರ್ತಕನಾದ ರತ್ನದತ್ತನ ಮೊದಲನೆಯ ಹೆಂಡತಿಯ ಮಗ. ವ್ಯಾಪಾ ರನಿಮಿತ್ತವಾಗಿ ಇಲ್ಲಿಗೆ ಬಂದೆ—ಎಂದ ಮಾತ ಕೇಳಿ, ಅವ ನನ್ನ ಮಗನೆಂದು

ತಿಳಿದು, ಅವ ಕೊಟ್ಟ ಹಣಿನ ಹಿಂದಕ್ಕೆ ಕೊಟ್ಟು, ಕಳುಹಿಸಿ ಬಿಟ್ಟು, ಆ ಬೆಳಗಾಗಿ ಹಿರಿಯರಾದ ಭೂಸುರೋತ್ತಮರ ಬಳಿಗೆ ಹೋಗಿ, ಕೇಳಲಾಗಿ— ಈ ಪಾಪಕ್ಕೆ ಮರಣ ಪ್ರಾಯಶ್ಚಿತ್ತವೆಂದು ಅವರು ಹೇಳಿದುದ ಕೇಳಿ, ಬಂದು, ನನ್ನಲ್ಲಿದ್ದ ಸರ್ವಸ್ವವನ್ನೂ ಬ್ರಾಹ್ಮಣರಿಗೆ ದಾನವ ಕೊಟ್ಟು, ಆ ಬಳಿಕ ಅರಣ್ಯದಲ್ಲಿ ಒಂದು ಹುಣಿಸೆಯ ಮರದ ಪೋಟೆಗೆ ಕಾಡ ಬೆರಣಿ ತುಂಬಿಸಿ, ಅದರ ಮಧ್ಯದಲ್ಲಿ ಕುಳಿತುಕೊಂಡು, ಬೆಂಕಿಯ ಹಾಕಿಸಲಾಗಿ ; ಮೈಯ್ಯು ಬೆಯುತ್ತ ಬರುವಲ್ಲಿ ; ದೊಡ್ಡ ಮಳೆಯು ಬಂದು, ಬೆಂಕಿಯೂ ಆರಿಹೋಗಿ ದೇಹದ ಕೆಲಭಾಗವು ಬೆಂದು ಕೆಲವು ಬೇಯದೆ ಆ ನೋವಿನಲ್ಲಿ ಇರುವಲ್ಲಿ; ಒಬ್ಬ ಗೊಲ್ಲನಾಯಕ ಅಲ್ಲಿಗೆ ಬಂದು, ಕಂಡು, ನನ್ನ ಕರೆದುಕೊಂಡು ಹೋಗಿ, ಆರೈಕೆ ಮಾಡಿದ ಕಾರಣ, ಅವನ ಸತಿಯಾದೆ. ಕೇಳ್ಳೆ ರಾಯನೆ! ಪಾತಿವ್ರತ್ಯ ಭಂಗವಾದುದಕ್ಕೆ ಅಳಲೋ? ಹಾದಿ ಪುರುಷನ ಗುಡಿಯಲ್ಲಿ ಹಾವು ಕಚ್ಚಿದುದಕ್ಕಳಲೋ? ಅರಸನ ಕೊಂದುದಕ್ಕಳಲೋ? ಘುಗನ ಕೂಡೆ ವಿಟಗಾರಿಕೆ ಮಾಡಿ ಒಡವೆ ವಸ್ತು ವೆಚ್ಚವಾದುದಕ್ಕಳಲೊ? ಹುಣಿಸೆಯ ಮರದ ಪೋಟೆಯಲ್ಲಿ ದೇಹ ಬೆಂದು ಬೇಯದುದಕ್ಕಳಲೋ? ಗೊಲ್ಲನ ಪತ್ನಿಯಾದುದಕ್ಕಳಲೋ? ಇಷ್ಟರಲ್ಲಿ ಒಂದಕ್ಕೂ ಅಳಲಿಲ್ಲ. ಈ ಹಾಲುಮೊಸರು ಚೆಲ್ಲಿಹೋದರೆ ಇದಕ್ಕೆ ಅಳುವೆನೆ? ಎಂದು ನಕ್ಕನು—ಎಂಥ ಮಾತ ಕೇಳಿ, ರಾಯನು ಮೆಚ್ಚಿ, ಅವಳಿಗೆ ಸವಾ ಲಕ್ಷ ದ್ರವ್ಯವ ಕೊಟ್ಟು, ಕಡಮೆ ಸ್ತ್ರೀಯರಿಗೆಲ್ಲ ಹಾಲು ಮೊಸರ ಕ್ರಯವ ಕೊಡಿಸಿ, ಕಳುಹಿಸಿದನೆಂದುದಕ್ಕೆ ಪದ್ಮನಯನೆ ಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ:—

ಕೇಳ್ಳಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿಸ ಹಿಮವತ್ಪರ್ವತದ ಬಳಿಯಲ್ಲಿರುವ ಜಯವತಿಯೆಂಬ ಪಟ್ಟಣದ ಅರಸಾದ ಸೋಮದತ್ತನ ದಾಯಾದಿಗಳು ಆರಾಜ್ಯವಾಕ್ರಮಿಸಿಕೊಂಡ ಕಾರಣ ಆ ಸೋಮದತ್ತನು ರಾಯನ ಬಳಿಗೆ ಬರಲಾಗಿ, ಆತನಿಗೆ ಅರ್ಧಸಿಂಹಾಸನವನ್ನಿತ್ತು ಕುಳ್ಳಿರಿಸಿಕೊಂಡು, ಬಂದ ಕಾರ್ಯವೇನೆಂದು ಕೇಳಲಾಗಿ, ಅರಸು ತನ್ನ ದಾಯಾದಿಗಳಿಂದ ಆದ ವರ್ತಮಾನವ ಹೇಳಲಾಗಿ; ಆಗ ಆತನಿಗೆ ಬಿಡದಿಯ ಬಿಡಿಸಿಕೊಟ್ಟು ಇರಿ

ಸಿಕೊಂಡು ಆಬಳಿಕ ರಾಯ ತನ್ನ ಮಂತ್ರಿಯೊಡನೆ ಇಂತೆಂದನು:—ಶರಣಾ
ಗತರಾಗಿ ಬಂದವರ ಮನ್ನಿಸಿ ರಕ್ಷಿಸದಿದ್ದರೆ ಅನೇಕ ಪಾಪವೆಂಬ ನೀತಿಯಿ
ರುವ ಕಾರಣ ಈಯರಸನ ಪಾಲಿಸಬೇಕೆಂದು ಹೇಳಲಾಗಿ; ಆಮಾತಿಗೆ
ಸಕಲರೂ ಸಮ್ಮತಿ ಪಟ್ಟು ಹಾಗೆ ಮಾಡಬಹುದು ಎಂದ ಬಳಿಕ ಆಸೋ
ಮದತ್ತನ ಕರೆಸಿಕೊಂಡು—ರಾಯ ನಿಮ್ಮ ದೇಶದಲ್ಲಿ ಅತಿಶಯವೇನೆಂದು
ಕೇಳಲಾಗಿ; ಆ ಅರಸಿಂತೆಂದನು-ಹಿಮವತ್ಪರ್ವತಕ್ಕೆ ಮೂಡಲಾಗಿ ಹಸ್ತಗಿರಿ
ಯೆರುಗಿನಲ್ಲಿರುವ ಭೈರವನ ಗುಡಿಗೆ ಕೊಂಬಿನ ಕೂಗಿಸಲ್ಲಿ ಭೈರವಿಯೆಂಬ
ಕೊಳವಿದೆ. ಆಕೊಳಕ್ಕೆ ದೇವಕನ್ಯಕೆಯರು ಬಂದು ಜಲಕ್ರೀಡೆಯ
ನ್ನಾಡಿ ಪಾಡಿ ಆ ಭೈರವನ ಪೂಜಿಸಿ ಪೋಗುವರು_ಎಂದ ಮಾತ ಕೇಳಿ, ರಾಯ
ಅದ ನೋಡಬೇಕೆಂದು ಅಕ್ಷಣವೇ ಆಕಾಶಮಾರ್ಗದಲ್ಲಿ ಅಲ್ಲಿಗೆ ಹೋಗಿ,
ಆ ಕೊಳದಲ್ಲಿ ಸ್ನಾನವ ಮಾಡಿ ಭೈರವನ ಪೂಜಿಸಿ, ಅಲ್ಲಿ ಇರುವಲ್ಲಿ
ಎಂಟುಮಂದಿ ಸ್ತ್ರೀಯರು ಆಕೊಳದಿಂದ ಮೇಲಕ್ಕೆ ಬಂದು ಕನಕ
ಪ್ರತಿಮೆಯಂತೆ ಕಣ್ಣಿಗೆ ಕಾಣಿಸಿ ಭೈರವನ ಪೂಜಿಸಿ ಕೊಳದಲ್ಲಿ ಜಲಕ್ರೀಡೆ
ಯಾಡಿ ಪಾಡಿ ಪೋಗುವುದ ಕಂಡು, ರಾಯನು ಅವರ ಹಿಂದೆ ಹೋಗಲಾಗಿ;
ಅಲ್ಲೊಂದು ಬಿಲದ್ವಾರವ ಕಂಡು ಅದರಲ್ಲಿ ಹೊಕ್ಕು ಪಾತಾಳಲೋಕಕ್ಕೆ
ಹೋಗಿ, ಅಲ್ಲಿ ಹೇಮಾವತಿಯೆಂಬ ಪಟ್ಟಣವ ಕಾಣಲಾಗಿ; ರಾಯ ಅಲ್ಲಿಗೆ
ಹೋಗಿ, ಸುವರ್ಣಮಯವಾದ ಕೋಟೆ ಕೊತ್ತಲವ ನೋಡುತ್ತ ಒಳಗೆ
ಹೋಗಲಾಗಿ; ಅಲ್ಲಿರುವ ಗೃಹಗಳು ನವರತ್ನಖಚಿತವಾಗಿರುವುದಕ್ಕೆ ಆಶ್ಚ
ರ್ಯಪಡುತ್ತ, ಅರಮನೆಯ ಬಳಿಯಲ್ಲಿ ನಿಂದಿರುವ ರಾಯನ ಬಾಗಿಲ ಕಾವಲ
ಗಾರರು ಕಂಡು—ನೀವು ಯಾರೆಂದು ಕೇಳಲಾಗಿ; ರಾಯನು ತನ್ನ ವೃತ್ತಾಂ
ತವ ಹೇಳಲಾಗಿ, ಕಾವಲುಗಾರರು ವೇಗವಾಗಿ ಹೋಗಿ ತಮಗೆ ಅರಸಾಗಿ
ರುವ ವೇದಾವತಿಗೆ ಹೋಗಿ ರಾಯನ ಸಮಾಚಾರವ ಹೇಳಲಾಗಿ; ಅವಳು
ಕೇಳಿ ಎದುರುಗೊಂಡು ಬಂದು, ರಾಯನ ಕರೆದುಕೊಂಡು ಹೋಗಿ ತನ್ನ
ಸಿಂಹಾಸನದಲ್ಲಿ ಕುಳ್ಳಿರಿಸಿ, ರಾಯನ ಕುಶಲ ಕ್ಷೇಮವ ವಿಚಾರಿಸಿ, ರಾಯ
ನಿಗರ್ಘ್ಯಪಾದ್ಯಾಚಮನಂಗಳಿಂದುಪಚರಿಸಿ, ನವರಸ ಭರಿತವಾದ ರಾಗದಿಂ
ಪಾಡಿ, ರಾಯನ ಮೆಚ್ಚಿಸಿ, ಇಂತೆಂದಳು:-ಎಲೈ ಮಹಾರಾಯನೇ! ನಿನ್ನ ವೀರ
ವಿತರಣಾದಿ ಉದಾರವ ಕೇಳಿ ನಾನು ನಿನ್ನ ವಿವಾಹವಾಗಬೇಕೆಂದು ಚಿಂತಿ

ಸುತ್ತ ಇದ್ದೆ. ನನ್ನ ಪುಣ್ಯದಿಂದ ನೀನೇ ಇಲ್ಲಿಗೆ ಬಂದುದು ಉತ್ತಮವಾಯಿತು. ಇನ್ನು ಕೈವಿಡಿದು ಪಾಲಿಸೆನ್ನಲಾಗಿ; ರಾಯನಿಂತೆಂದನು:—ನನಗೆ ಏಕಪತ್ನೀವ್ರತ. ಅನ್ಯಸ್ತ್ರೀಯರು ಜನನಿಯು ಸಮಾನ. ಆದಾಗ್ಯೂ ನನಗೊಬ್ಬ ಸೋದರಳಿಯನಿದ್ದಾನೆ. ಅವನನ್ನು ಮದುವೆಯಾಗು ಎಂದು ಹೇಳಲಾಗಿ; ಆ ವೇದಾವತಿಯಿಂತೆಂದಳು:—ನಾರಿಯೆಂದರೆ ಹೆಂಗಸರಿಗೂ ಹೆಸರು ; ನಾರಿಯೆಂದರೆ ಬಿಲ್ಲಿನ ನಾರಿಗೂ ಹೆಸರು ; ಆದುದರಿಂದ ನಾರಿಯೆಂಬ ಹೆಸರಿಗೆ ಬೀಗಿದ ಮರವೂ ಬಿಲ್ಲಾಗಿ ಬಾಗುವುದು. ಪ್ರತ್ಯಕ್ಷವಾಗಿ ಕಚಕುಚವ ನಾರಿಯರ ಕಂಡು ಮೋಹಿಸದವರು ಯಾರು ? ನೀನು ಮಹಾದೃಢಪುರುಷನೆಂದು ಆ ಬಳಿಕ ರಾಯನಿಗೆ ಅಷ್ಟೈಶ್ವರ್ಯ ಕೊಡುವಂಥ ಎಂಟು ರತ್ನಗಳ ಕೊಟ್ಟು ಕಳುಹಿಸಲಾಗಿ; ರಾಯ ಅಲ್ಲಿಂದ ಬಿಲದ್ವಾರದಲ್ಲಿ ಮೇಲಕ್ಕೆ ಬಂದು ಖೇಚರಮಾರ್ಗದಿಂದಿಲ್ಲಿಗೆ ಬಂದು ಸೋಮದತ್ತನಿಗೆ ಆಯೆಂಟು ರತ್ನವ ಕೊಟ್ಟು ಬಲಸಮೇತನಾಗಿ, ದಂಡೆತ್ತಿ ಹೋಗಿ ಆ ಸೋಮದತ್ತನ ದಾಯಾದಿಗಳ ಜಯಿಸಿ ಜಯಂತಿಯೆಂಬ ಪಟ್ಟಣವನ್ನು ಯಥಾಪ್ರಕಾರವಾಗಿ ಸೋಮದತ್ತನಿಗೆ ಪಟ್ಟಾಭಿಷೇಕವ ಮಾಡಿ ಇರಿಸಿಬಿಟ್ಟು, ಶರಣಾಗತರಕ್ಷಕನೆಂಬ ಬಿರುದ ಪಡೆದು ಅಲ್ಲಿಂದ ತಾನಿಲ್ಲಿಗೆ ಬಂದು ಸುಖವಾಗಿ ಇದ್ದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಪದ್ಮನಯನೆನೆಂಬ ಪುತ್ಥಳಿ ಪೇಳಿದ ಇಪ್ಪತ್ತೆರಡನೆಯ ಕಥೆ.

ಇಪ್ಪತ್ತುಮೂರನೆಯ ಕಥೆ.

ಇಪ್ಪತ್ತುಮೂರನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು, ಸರ್ವಾಭರಣಾಲಂಕೃತನಾಗಿ, ಭೂರಿ ದಾನಗಳ ಮಾಡಿ, ಚಿತ್ರಶರ್ಮನ ಕೈಲಾಗಿನಿಂದ ಆಸ್ಥಾನ ಮಂಟಪದ ಸಿಂಹಾಸನದ ಬಳಿಗೆ ಬಂದು, ಬಲಗಾಲ ನೀಡುವ ಸಮಯದಲ್ಲಿ

ಆ ಸೋಪಾನದ ರತಿರೂಪಿಣಿಯೆಂಬ ಪುತ್ತಳಿ—ಹೋ ಹೋ! ನಿಲ್ಲುನಿಲ್ಲು ಎಂದು ಧಿಕ್ಕರಿಸಲಾಗಿ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ:—

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದು ದಿಸ ರತಿದೇವಿಯಂತಿರುವ ತನ್ನ ಮಗಳು ಲಲಿತಾಂಗಿ ಬರುವುದ ಕಂಡು,—ಇವಳಿಗೆ ತಕ್ಕ ವರನಾಗಬೇಕೆಂದು ಯೋಚಿಸುತ್ತಿರುವಲ್ಲಿ '[1]ಸಿಂಹಳ ದ್ವೀಪದ' ಭುವನೈಕವೀರನೆಂಬ ಅರಸಿನ ಮಗ ದಿಲೀಪನೆಂಬವನು ಮಹಾ ಬುದ್ಧಿಶಾಲಿ ರೂಪಸನೆಂಬುವುದ ಕೇಳಿ, ರಾಯನಿಂತೆಂದನು:—[2]ಹೆಣ್ಣು ಕೊಡುವಲ್ಲಿ ಕುಲ ಶೀಲ ವಿದ್ಯೆ ಬಳಗ ಯೌವನ ಶರೀರದಾರ್ಢ್ಯ, ಧನವಿರುವುದ ನೋಡಿ, ಈ ಏಳು ಗುಣಗಳಿದ್ದವನಿಗೆ ಹೆಣ್ಣು ಕೊಡಬೇಕು; ಮಿಕ್ಕ ಗುಣಗಳೆಲ್ಲಾ ದೈವಾಧೀನವೆಂಬ ನೀತಿಯಿರುವುದು ಎಂದು ಹೇಳಿ, ಲಗ್ನ ನಿಶ್ಚಯವಮಾಡಿ ಚಪ್ಪರ ಮೇಲುಕಟ್ಟು ಕಟ್ಟಿಸಿ, ನಂಟರಿಷ್ಟರ ಕರೆಯ ಕಳುಹಿಸಿ, ಸಕಲ ಸಂಭ್ರಮದಿಂದ ರಾಯ ಭೂರಿಯ ಬ್ರಾಹ್ಮಣರಿಗೆ ಕೊಡುತ್ತಿರುವಲ್ಲಿ-ಅವರೊಳಗೊಬ್ಬ ಬ್ರಾಹ್ಮಣೋತ್ತಮ ರಾಯನ, ಕೈಯಲಿ ದಾನವ ತೆಗೆಯದೆ ಇರಲವನ ರಾಯ ಕೇಳಿದನು:— ನಾವು ಕೊಟ್ಟಂಥ ದಾನ ಎಲ್ಲರೂ ತೆಗೆದುಕೊಂಡುದ ಕಂಡು, ನೀನು ತೆಗೆಯದಿರುವ ಕಾರಣವೇನೆಂದು ಶಂಕಿಸಿ ಕೇಳಲಾಗಿ; ಅವನಿಂತೆಂದನು:—ಕೇಳೈಯ ರಾಯನೇ! ನಿನಗೆ ಪುತ್ರಸಂತಾನವಿಲ್ಲದ ನಿಮಿತ್ತ ನಿನ್ನ ಕೈ ದಾನವ ತೆಗೆಯಲಾಗದೆಂದ ಮಾತ ರಾಯ ಕೇಳಿ, ಕೋಪವ ತಾಳಿ, ಅವನ ಊರ ಬಿಟ್ಟು ಹೊಱಡಿಸಿ ಬಿಡಲಾಗಿ; ಅವನು ಊರ ಮುಂದಿರುವ ಚಂಡಿಕಾದೇವಿಯ ಗುಡಿಗೆ ಹೋಗಿ ಬಹು ಕ್ಷುತ್ತಿನಿಂದ ಬಳಲಿ ಇಂತೆಂದನು:—ಹಸಿವು ರೂಪ ಕೆಡಿಸುವುದು, ತಡವ ಮಾಡುವುದು, ಸಂಭೋಗದ ಇಚ್ಛೆ ತಪ್ಪಿಸುವುದು, ದೃಷ್ಟಿ ಕಾಣಿಸದಂತೆ ಮಾಡುವುದು, ತಪಸ್ಸ ಕೆಡಿಸುವುದು, ಸತಿಸುತರು ಮುಂತಾಗಿ ಎಲ್ಲರಲ್ಲಿಯೂ ಭೇದಗಳ ಹುಟ್ಟಿಸುವುದು,

---

ಪಾ—1. ಸಿಂಗದೇಶದ. 2. ಬಲವಿದ್ಯಾಯಾಪಯ ಹೊನ್ನು ಉಂಟಾಗಿ ಶರೀರ ಭದ್ರವಾಗಿ ಇರುವುದು. ಈ ಏಳು ಗುಣಗಳು ನೋಡಿ ಇದ್ದವನಿಗೆ ಕೊಡಬೇಕೇಹೊಱತು.

ಲಜ್ಜೆಯ ತೋಱಿಸುವುದು: ಇಂಥ ಕ್ಷುತ್ತೆನ್ನ ಬಾಧಿಸುತ್ತಲಿದೆ ಎಂದು ಹೇಳುತ್ತ ಮೈಮಱೆದು, ನಿದ್ರೆಗೆಯುತ್ತ ಮಲಗಿರುವಲ್ಲಿ—ಚಂಡಿಕಾದೇವಿ ರಾಯನ ಮಗಳ ವಿವಾಹವ ನೋಡಬೇಕೆಂದು ಮಲಗಿರುವ ಬ್ರಾಹ್ಮಣನ ಬಳಿಯಲ್ಲಿ ಬೇತಾಳನ ಕಾವಲಿರಿಸಿ, ಆದೇವಿ ಊರೊಳಗೆ ಹೋದ ಬಳಿಕ, ಬೇತಾಳ ಆ ಬ್ರಾಹ್ಮಣನಿಗೆ ಎಚ್ಚಱವಾಗದಂತೆ ಎತ್ತಿಕೊಂಡು, ತಾನೂ ದೇವಿಯ ಹಿಂದುಗಡೆ ಹೋಗಿ, ಖೇಚರದಲ್ಲಿ ನೋಡುತ್ತಿರಲು—ಲಗ್ನವೇಳೆ ಬಂದುದ ಕಂಡು ಮದುವೆಯ ಗಂಡು ಮಲಗಿರುವ ಬಳಿಯಲ್ಲಿ ಈ ಬ್ರಾಹ್ಮಣನ ಮಲಗಿಸಿ, ಮದವಣಿಗನ ಎತ್ತಿಕೊಂಡು ಬಂದು ಮತ್ತೊಂದು ಪಾಳುಗುಡಿಯಲ್ಲಿ ಮಲಗಿಸಿಬಿಟ್ಟು, ಯಥಾಪ್ರಕಾರ ತಾನು ಹೋಗಿ ಆಕಾಶದಲ್ಲಿ ನೋಡುತ್ತಿರಲಾಗಿ—ಲಗ್ನವು ಬರಲು ಅರಸಾದ ಭುವನೈಕವೀರ ಶ್ರುತಿಮಂಡಲನೆಂಬ ವಿಪ್ರನಿಗೆ ತನ್ನ ಮಗನೆಂದು ನವರತ್ನಾಭರಣ ಮುಂತಾಗಿ ಅಲಂಕರಿಸಿ, ಅಂದಳದಲ್ಲಿ ಕುಳ್ಳಿರಿಸಿಕೊಂಡು, ಮದುವೆಯ ಚಪ್ಪರಕ್ಕೆ ಕರೆತರುವಲ್ಲಿ—ರಾಯನು ಎದಿರುಗೊಂಡು ಹೋಗಿ ಕರೆತಂದು ಶುಭಮುಹೂರ್ತದಲ್ಲಿ ಧಾರೆಯೆಱೆದು ಹೋಮವ ಮಾಡಿಸಿ, ದಂಪತಿಯ ಸೆಱಗ ಗಂಟಿಕ್ಕಿ, ಬೇಱೆ ಶಯ್ಯಾಗೃಹಕ್ಕೆ ಕಳುಹಿಸಿ ಬಿಡಲಾಗಿ—ಅಲ್ಲಿ ಮಂಚದ ಮೇಲೆ ಕ್ಷುತ್ತಿನಿಂದ ಬಳಲಿ ಕುಳಿತಿರುವ ಪತಿಗೆ ಆಗ ಲಲಿತಾಂಗಿ ಸುಗಂಧಾನುಲೇಪನವ ಮಾಡಿ, ಪರಿಮಳಂಗಳ ತೀಡಿ, ಕುಸುಮಂಗಳ ಮುಡಿಸಿ, ಅನೇಕವಾಗಿ ಉಪಚರಿಸಿ, ಆಬಳಿಕ ವೀಣೆಯ ತೆಗೆದುಕೊಂಡು, ಮೋಹನ ಮೊದಲಾದ ರಾಗಗಳ ನುಡಿಸಿ ಪಾಡಿದಾಗ್ಯೂ ಶ್ರುತಿಮಂಡಲ ಮರುಳುಹಿಡಿದಂತೆ ಸುಮ್ಮನಿರುವುದ ಕಂಡು ಲಲಿತಾಂಗಿ ಯಿಂತೆಂದಳು:—ಮೋಹನವಾದ ಶಯ್ಯಾಮಂದಿರದ ಚಪ್ಪರ ಮಂಚದಲ್ಲಿ ಕುಳಿತು ಪೂರ್ಣಚಂದ್ರೋದಯದಲ್ಲಿ ನವಮೋಹನಾಂಗಿಯಾದವಳು ವೀಣೆಯ ನುಡಿಸುತ್ತ ಕೂಡ ಪಾಡಿದರೆ ಚತುರಪತಿಯಾದವನು ಮಾತನಾಡದೆ ಇರುವುದೇನೆಂದು ಬೆಸಗೊಳ್ಳಲಾಗಿ, ಅವನಿಂತೆಂದನು:—ಎಲೆ ಸತಿಯೇ! ಕ್ಷುತ್ತಿನಿಂದ ಬಳಲಿರುವಾಗ ಯಾವುದೂ ಸೈರಿಸದು_ಎಂದ ಮಾತ ಕೇಳಿ,ಆಲಲಿತಾಂಗಿಯಾಕ್ಷಣವೆ ಚಿನ್ನದ ಹರಿವಾಣದಲ್ಲಿ ಷಡ್ರಸವಾದ ಪಂಚಭಕ್ಷ್ಯ ಪರಮಾನ್ನವ ತೆಗಿಸಿಕೊಂಡು ಬಂದು ಮುಂದಿರಿಸಲಾಗಿ— ಅದ ಆಗ ಭೋಜನವ ಮಾಡಿ,

ಬಳಿಕ ವೀಳೆಯವ ಸೇವಿಸಿ, ಸಂಭ್ರಮದಿಂದ ನಾನಾರತಿಗಳಂ ಕ್ರೀಡಿಸಿ ದಂಪತಿಗಳಿಬ್ಬರು ಮೈಮಱೆತು ನಿದ್ರೆಗೆಯ್ಯುವಲ್ಲಿ--ಬೇತಾಳ ಮೊದಲ ಮದುವೆಯ ಗಂಡನ ತಂದು ಲಲಿತಾಂಗಿಯ ಮಗ್ಗುಲಲ್ಲಿ ಮಂಚದ ಮೇಲೆ ಮಲಗಿಸಿ ಆಶ್ರುತಿಮಂಡಲನ ತಂದು ಎಂದಿನಂತೆ ಚಂಡಿಕಾದೇವಾಲಯದಲ್ಲಿ ಮಲಗಿಸಿರಲಾಗಿ—ಶ್ರುತಿಮಂಡಲನು ಬೆಳಗ್ಗೆ ಎದ್ದು ರಾತ್ರೆ, ತನಗೆ ಭೋಜನವಾಗಿ ನವರತ್ನಾಲಂಕೃತನಾಗಿ ವಿವಾಹವಾಗಿ, ಸ್ತ್ರೀಸಂಭೋಗ ಮುಂತಾದುದು ಎಲ್ಲ ಕನಸಾಗಿದೆ ಎನುತ್ತ, ತನ್ನಲ್ಲಿ ತಾನೇ ಆಲೋಚಿಸುತ್ತಿರುವಾಗ, ಇಲ್ಲಿ ಲಲಿತಾಂಗಿಯೆದ್ದು ಮುಖವನೊಱಸಿಕೊಂಡು, ಕನ್ನಡಿನಾಗುವಳಿಯು (?) ನೋಡಿ, ಆಬಳಿಕ ಮಲಗಿರುವನ ಕಂಡು, ರಾತ್ರೆಯ ಕುಱುಹೊಂದೂ ಕಾಣದೆ ಅತಿವ್ಯಸನದಿಂದ ತಂದೆಯ ಬಳಿಗೆ ಬಂದು, ತಂದೆಯ ಕರೆದುಕೊಂಡು ಹೋಗಿ ಮಲಗಿರುವನ ತೋಱಸಿ--ಈತ ನನ್ನಪತಿಯಲ್ಲವೆಂದು ಹೇಳಲಾಗಿ; ರಾಯ ಕೇಳಿ ವಿಸ್ಮಿತನಾಗಿ--ಎಲೆ ಮಗಳೇ ! ನಿನಗೆ ಭ್ರಾಂತೆ ? ರಾತ್ರಿ ಮದುವೆಯಾದ ಪುರುಷನ ಹಗಲು ಗುಱುತಱಿಯದಿರುವರೆ ? ಎಂದ ಮಾತಿಗೆ ಆಮಗಳಿಂತೆಂದಳು ;--ರಾತ್ರಿ ತಾ ಮಾಡಿದುಪಚಾರವನ್ನು ಲಜ್ಜೆಯಿಂದ ತಂದೆಗೆ ವಿವರಿಸಿ, ಇದಲ್ಲದೆ-ನಾನೊಂದು ಸಮಸ್ಯೆ ಹೇಳಿದುದಕ್ಕೆ ಪೂರ್ತಿ ಹೇಳಿದ್ದಾರೆ ಎಂದ ಮಾತ ಕೇಳಿ, ರಾಯ ಮಲಗಿರುವನ ಏಳಿಸಿ ಕೇಳಲಾಗಿ—ಅವ ನಾನೊಂದೂ ಅಱಿಯೆನೆಂದುದ ಕೇಳಿ, ರಾಯ—ಇದೇನಾಶ್ಚರ್ಯವೆಂದು, ಮಗಳು ಸಮಸ್ಯೆ ಹೇಳಿದುದನೋಲೆಯಲ್ಲಿ ಬರೆಸಿ, ಬುದ್ಧಿವಂತನಾದ ಊಳಿಗದವನ ಕರೆಸಿ, ಅವನ ಕೈಯಲ್ಲಿ ಆ ವೋಲೆಯ ಕೊಟ್ಟು, ಅದಱಲ್ಲಿ ಬರೆದಿರುವುದ ಪೂರ್ತಿಮಾಡಿ ಯಾವನು ಹೇಳುತ್ತಾನೋ, ಅವನ ಬಿಡದೆ ಕರೆದುಕೊಂಡು ಬಾ ಎಂದು ನೇಮಿಸಿ, ಕಳುಹಿಸಲಾಗಿ; ಆಊಳಿಗದವನು ಚೌದಿಕ್ಕಿನಲ್ಲಿಯೂ ಹುಡುಕುತ್ತ, ಓಲೆಯಂ ತೋಱುತ್ತ ಬಂದವರೂ ಯಾರೂ ಹೇಳದೆ ಇರಲು; ಹಿಂತಿರಿಗಿ ಬರುತ್ತ ಬಾಯಾಱಿ ಚಂಡಿಕಾದೇವಿಯ ಗುಡಿಯ ಬಳಿಯ ಕೊಳಕ್ಕೆ ಹೋಗಿ, ನೀರ ತೆಗೆದುಕೊಂಡು, ನೆಳಲಲ್ಲಿ ಕುಳಿತಿರಲು; ಆ ಊಳಿಗದವನ ಶ್ರುತಿಮಂಡಲನು ಕಂಡು—ನೀನೆಲ್ಲಿಗೆ ಬಂದೆ? ಎಲ್ಲಿಗೆ ಹೋಗುವೆ ? ಎಂದು ಕೇಳಲಾಗಿ; ಅವನು ತಾ ಬಂದ ವೃತ್ತಾಂತವ ಹೇಳಿದುದ ಕೇಳಿ, ಆ ಓಲೆಯ ತೆಗೆದು

ಕೊಂಡು ನೋಡಿ, ಸಮಸ್ಯೆಯ ಪೂರ್ತಿಮಾಡಿ ಬರೆದುಕೊಡಲಾಗಿ; ಆ ಓಲೆಯ ತಂದು ರಾಯನಿಗೆ ಕೊಡಲಾಗಿ; ರಾಯ ನೋಡಿ ಮಗಳ ಕರೆಸಿ, ಓಲೆಯ ಕೊಡಲು; ಅವಳು ನೋಡಿ ಕೊಂಡು-ಈ ಗುಱುತು ನಿಜವೆಂದ ಮಾತ ರಾಯ ಕೇಳಿ, ಆಕ್ಷಣ ಅಶ್ರುತಿಮಂಡಲನ ಕರೆತಂದು, ಇಂಥವ ಮಗಳ ಪತಿಯಾಗಬಹುದೆಂದು ಸಂತೋಷವ ಮಾಡಿಕೊಂಡು, ಆಳಿಯನ ಮಗಳ ಅರಮನೆಗೆ ಕಳುಹಿಸಿ, ಬಳಿಕ ಸಿಂಹಳದ್ವೀಪದರಸಿನ ಮಗನಿಗೆ ಮತ್ತೊಬ್ಬ ಮಗಳ ಮದುವೆಯ ಮಾಡಿಸಿದನು— ಎಂದ ಮಾತಿಗೆ ರತಿರೂಪಿಣಿಯೆಂಬ ಪುತ್ತಳಿ ಹಾಸ್ಯಗೆಯ್ದು ನಗುತ್ತ ಪೇಳಿದ ಉಪಕಥೆ:-

ಕೇಳೈಯ್ಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಪಾಲಿಸುವ ವೇಳೆಯಲ್ಲಿ ಒಂದುದಿನ ಒಬ್ಬ ಬೇಂಟೆಗಾಱ ಯಮುನಾನದಿಗೆ ಹೋಗಿ ಮೀನಿನ ಬೇಂಟೆಯಾಡುತಿರುವಲ್ಲಿ ಒಂದು ಮೊಸಳೆ ಅವನ ತಿನ್ನುವುದಕ್ಕೆ ಯತ್ನೀಕರಿಸಿ ಇರುವುದ ಕಂಡವರು ಬಂದು ಆ ಬೇಡನ ಹೆಂಡತಿಗೆ ಹೇಳಲಾಗಿ; ಅವಳು ಓಡಿಬಂದು ರಾಯನಿಗೆ ಹೇಳಿದ ಕಾರಣ, ರಾಯ ತೆಗೆದುಕೊಳ್ಳುವ [1]ಔಪಾಸನವ[1] ಬಿಟ್ಟು ಶೀತಾಳಪತ್ರವ ತೆಗೆದುಕೊಂಡು ತನ್ನ ಮೊಸಳೆ ಬಡಿದೀತೆಂಬ ಭೀತಿಯಿಲ್ಲದೆ ನೀರಿಗಿಳಿದು ಆ ಮೊಸಳೆಯ ಬಾಯ ಸೀಳಿ, ಆ ಬೇಟೆಗಾಱನ ಬಿಡಿಸಲಾಗಿ; ಅವ ಶರಣಾಗತನಾಗಿ—ಎಲೈ ಮಹಾರಾಯ! ನಿಮ್ಮಿಂದ ನಾನು ಜೀವದಿಂದುಳಿದೆನು ಎಂದು ಸಾಷ್ಟಾಂಗವಾಗಿ ನಮಿಸಲಾಗಿ; ರಾಯ ಅವನಿಗೆ ಕೋಟಿದ್ರವ್ಯವ ಕೊಟ್ಟು ಮನ್ನಿಸಿ, ಆಬಳಿಕ ಅವನ ನೀನೇನಾದರೂ ಅತಿಶಯವ ಕಂಡುದುಂಟೆ? ಎಂದು ಕೇಳಲಾಗಿ; ಅವನಿಂತೆಂದನು:—ಇಲ್ಲಿಗೆ ಬಹುದೂರದಲ್ಲಿ ಚಂಡಿಕಾದೇವಿಯ ಗುಡಿಯ ಬಳಿಯಲ್ಲಿ ಇರುವ ಕೊಳದ ಗಟ್ಟದೊಳೊಬ್ಬ ಬ್ರಾಹ್ಮಣ ಮುನಿ ಇಷ್ಟಾರ್ಥವಂ ಪಡೆಯಬೇಕೆಂದು ಬಹುಕಾಲದಿಂದ ತಪಸ್ಸು ಮಾಡಿದಾಗ್ಯೂ ಆ ದೇವಿಯು ವರವಿಲ್ಲದಿರುವುದಂ ಕಂಡು ಇರುವೆನೆಂದು ಹೇಳಿದುದ ಕೇಳಿ, ಅದ ನೋಡಬೇಕೆಂದು ರಾಯ ಅವನ ಕರೆದುಕೊಂಡು, ಆ ಕ್ಷಣವೇ ಖೇಚರದಲ್ಲಿ ಅಲ್ಲಿಗೆ ಹೋಗಿ, ಆ ದೇವಿಯ ಷೋಡಶೋಪಚಾರದಿಂದ ಪೂಜಿಸಿ ನಮಿಸಲಾಗಿ; ಆ ದೇವಿಯು ಪ್ರಸನ್ನ

ಪಾ—1. ಆಪೋಶನವ.

ಳಾಗಿ—ಎಲೈ ರಾಯ ! ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ಬೇಕಾದ ವರ ಗಳ ಕೇಳಿಕೋ, ಕೊಡುವೆನೆನ್ನಲಾಗಿ ; ರಾಯನಿಂತೆಂದನು :—ಎಲೌ ತಾಯೇ ! ನಿನ್ನ ಕುಱಿತು ಈ ಬ್ರಾಹ್ಮಣಮುನಿ ಬಹುಕಾಲದಿಂದ ತಪಸ್ಸು ಮಾಡಿದ್ದಾನೆ. ಈತನ ಇಷ್ಟಾರ್ಥವ ಸಲಿಸಬೇಕೆಂದು ರಾಯ ಕೇಳಿದ ನಿಮಿತ್ತ ಚತುರ್ವಿಧ ಪುರುಷಾರ್ಥವ ಕೊಟ್ಟು, ನೀನಾವಿಪ್ರನಿಗೆ ಕೊಡು ಎಂದು ಹೇಳಿ ದೇವಿ ಮಾಯವಾಗಲು ; ಆಬಳಿಕ ರಾಯನಾಮುನಿಯ ಬಳಿಗೆ ಬಂದು—ದೇವಿ ನಿಮಗಿಷ್ಟಾರ್ಥವ ಪಾಲಿಸಿದ್ದಾಳೆ, ತೆಗೆದುಕೊಳ್ಳಿ ಎಂದು ಕೊಡಲಾಗಿ ; ಆಮುನಿ ತೆಗೆದುಕೊಂಡು ರಾಯನ ಕೊಂಡಾಡಿ ತನ್ನ ಮಡಿ ಜೋಲದಲ್ಲಿದ್ದ ವಿಭೂತಿಯ ರಾಯನಿಗೆ ಕೊಟ್ಟು, ಇದ ಅಂಗಕ್ಕೆ ಲೇಪಿಸಿ ದರೆ ಕಾಯಸಿದ್ಧಿಯಾಗುವುದೆಂದು ಹೇಳಲಾಗಿ ; ರಾಯ ಆವಿಭೂತಿಯ ತೆಗೆ ದುಕೊಂಡು ಅಲ್ಲಿಂದ ಬರುವ ಮಾರ್ಗದಲ್ಲಿ ಒಬ್ಬ ಅರಸು ರಾಜ್ಯ ಹೋಗಿ ಅಸಸ್ಯಹನಿ ಮೆಯ್ಯೆಲ್ಲಾ ಕುಷ್ಠವಾಗಿರುವನ ಕಂಡು ಅವನ ವರ್ತಮಾ ನವ ಕೇಳಿ, ಆಗ ಅವನಿಗೆ ಆ ವಿಪ್ರಮುನಿ ಕೊಟ್ಟ ವಿಭೂತಿಯ ಕೊಟ್ಟು, ಅವನ ದೇಹ ಶುದ್ಧಿಯಾದ ಬಳಿಕ, ಅವನಿಗೆ ಅರ್ಧರಾಜ್ಯವ ಕೊಟ್ಟು, ಅವನ ಕಳುಹಿಸಿ, ತಾನಿಲ್ಲಿಗೆ ಬಂದು ಸುಖವಾಗಿದ್ದನು—ಎಂದು ರತಿರೂಪಿಣಿ ಪೇಳಲು ; ರಾಯನು ಲಜ್ಜಿತನಾಗಿ ತನ್ನ ಅರಮನೆಗೆ ಪೋದನು.

ಇಂತು ಕರ್ಣಾಟಕಭಾಷಾವಿರಚಿತವಾದ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ರತಿರೂಪಿಣಿಯೆಂಬ ಪುತ್ಥಳಿ ಹೇಳಿದ ಇಪ್ಪತ್ತು ಮೂಱನೆಯ ಕಥೆ.

ಇಪ್ಪತ್ತುನಾಲ್ಕನೆಯ ಕಥೆ.

ಇಪ್ಪತ್ತುನಾಲ್ಕನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವ ತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು, ಎಂದಿನಂತೆ ಸಿಂಹಾಸ ನದ ಬಳಿಗೆ ಬಂದು, ಬಲಗಾಲ ನೀಡುವ ಸಮಯದಲ್ಲಿ ಆ ಸೋಪಾನದ ಹಂಸಗಮನೆಯೆಂಬ ಪುತ್ಥಳಿಯು—ಹೋಹೋ ! ನಿಲ್ಲು ನಿಲ್ಲು. ನಮ್ಮ ವಿಕ್ರಮಾದಿತ್ಯರಾಯನಂತೆ ಸಾಹಸ ವೀರವಿತರಣಗುಣಗಳುಳ್ಳೊಡೆ ಈ ಸಿಂ ಹಾಸನವೇಱು, ಇಲ್ಲವಾದರೆ ಕೆಲಸಾರು ಎಂದು ಧಿಕ್ಕರಿಸಲಾಗಿ ; ಭೋಜರಾ

ಯನು ಖಿನ್ನನಾಗಿ ಬೇಱೆ[3] ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ.

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದು ದಿನ ಆಸ್ಥಾನದಲ್ಲಿ ಕವಿಗಳು ವಿದ್ವಾಂಸರು ಮಂತ್ರಿಗಳು ಮುಂತಾಗಿ ಸಕಲರೂ ಕುಳಿತಿರುವಲ್ಲಿ ರಾಯನಿಂತೆಂದನು :— ಕೇಳಿರೈ, ಒಬ್ಬ ಸ್ತ್ರೀ ಇಂದೀವರಾಕ್ಷಿಯಿಂದ ಪವಳದ ಅಧರದಿಂದೊಪ್ಪುವಳ ಮಾರ್ಗದಲ್ಲಿ ಬರುವುದ ಕಳ್ಳರು ಕಂಡು, ಅವಳ ಅಡ್ಡಗಟ್ಟಿ, ಸಕಲ ಒಡವೆಗಳ ತೆಗೆದುಕೊಂಡು, ಆಣಿಮುತ್ತಿನ ಮೂಗುತಿಯ ಮಾತ್ರ ಬಿಟ್ಟುಹೋದ ಬಗೆಯೇನೆಂದು ರಾಯನು ಕೇಳಲಾಗಿ; ಆಮಾತಿಗೆ, ಎಲ್ಲರು ತಲೆವಾಗಿ ಆಲೋಚಿಸುತ್ತ ಸುಮ್ಮನಿರುವುದ[1] ಸಮ್ಮುಖದ ಸೂಳೆ ಪ್ರಭಾವತಿಯು ಕಂಡು ಇಂತೆಂದಳು :—ಕೇಳೈ ರಾಯನೇ! ಮೇಲೆ ಅವಳ ನೇತ್ರ ಇಂದೀವರದಂತೆ ಕಪ್ಪಾಗಿ, ಕೆಳಗೆ ಅವಳ ತುಟಿ ಪವಳದಂತೆ ಕೆಂಪಾಗಿ ತೋಱೆ[3], ನೇತ್ರದ ಕೆಳಗಣ ತುಟಿಯ ಮೇಲಣ ಮೂಗುತಿಮುತ್ತು ಕಪ್ಪು ಕೆಂಪಾಗಿ ಕಂಡುದಱಿಂದ, ಅದು ಗುಱುಗುಂಜಿಯೆಂದು ಅನುಮಾನಪಟ್ಟು, ಆ ಕಳ್ಳರು ಬಿಟ್ಟುಹೋದರೆಂದು, ಆವೇಶಿಯು ರಾಯನಿಗೆ ಉತ್ತರಕೊಡಲಾಗಿ ; ರಾಯನು ಮೆಚ್ಚಿ ಅವಳಿಗೆ ಸವಾಲಕ್ಷದ್ರವ್ಯವ ಕೊಟ್ಟು, ಕಳುಹಿಸಿದನು—ಎಂದ ಮಾತಿಗೆ ಹಂಸಗಮನೆಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಹೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ರಾತ್ರಿಕಾಲ ಓಲಗವ ತೀರಿಸಿಕೊಂಡು ಅರಮನೆಗೆ ಹೋಗಿ ಭೋಜನವ ಮಾಡಿ ಅಂತಃಪುರದ [2]ಶಯನದಾಲಯ[2]ದೊಳಿರುವ ಚಪ್ಪರಗಾಲ ಶಕುನಿ ತೂಗುವ ಮಂಚದ ಹಾಸಿನಲ್ಲಿ ತನ್ನ ಅರಸಿ ಸಮೇತವಾಗಿ ಮಲಗಿ ಇರುವಾಗ, ಒಂದು ಸ್ವಪ್ನವ ಕಂಡು, ಅದ ಮನದಲ್ಲಿ ಜ್ಞಾಪ್ತಿ ಮಡಗಿದ್ದು, ಬೆಳಗಾದ ಬಳಿಕ ಎಚ್ಚತ್ತು ನಿತ್ಯಕರ್ಮವ ತೀರಿಸಿಕೊಂಡು ಬಂದು, ಓಲಗದಲ್ಲಿ ಕುಳಿತಿರುವ ವೇಳೆಯಲ್ಲಿ—

ಪಾ—1. ವರರುಚಿ, ಕಾಳಿದಾಸ, ಮಯೂರ ಮೊದಲಾದ ಕವಿಗಳು ಸುಮ್ಮನಿರಲು.
2. ಸಜಿವನೆ.

ವಿದ್ವಾಂಸ ಕವಿಗಳ ಮುಖವ ನೋಡಿ ರಾಯನಿಂತೆಂದನು :—ಕೇಳಿರೈಯ! ರಾತ್ರಿ ಮಲಗಿರುವಾಗ ಸ್ವಪ್ನವ ಕಂಡೆ. ಅದೇನೆಂದರೆ—ಎಣ್ಣೆಯೊತ್ತಿಸಿಕೊಂಡು ಕೋಣನ ಮೇಲೆ ಕುಳಿತು ಬರುತ್ತ ದಾರಿಯಲ್ಲಿ ಅನ್ನವುಣುತ್ತ, ತೆಂಕಣ ದಿಕ್ಕಿನಲ್ಲಿ ಓಲಗ ತೆಗೆದುಕೊಳ್ಳುವಂತೆ ಕಂಡೆ. ಇದರ ಫಲವೇನು? ಎಂದು ಕೇಳಲಾಗಿ ; ವಿದ್ವಾಂಸ ಕವಿಗಳಿಂತೆಂದರು :—ಕನಸಿನಲ್ಲಿ ಭಂಡಿ, ತೊಲೆ, ಅಂದಣ, ಕೋಣ, ಎಣ್ಣೆ, ಬೋಗಾರ, ಕೆಲಸಿ ಮುಂತಾಗಿ ಇದ್ದುದರಲ್ಲಿ ಯಾವುದ ಕಂಡರೂ ಹಾನಿಯೆಂದ ಮಾತಿಗೆ ಅವರೊಳಗೊಬ್ಬ ವಿವೇಕತಿಲಕನೆಂಬವನು—"ಒಳ್ಳೆಯ ಕನಸ ಪ್ರಕಟಮಾಡಬೇಕು; ದುಸ್ಸ್ವಪ್ನವ ಕಂಡರೆ ಮುಚ್ಚಿಸಬೇಕು" ಎಂಬ ನೀತಿಯಿರುವುದರಿಂದ ಈ ಮೇರೆಗೆ ವಿವರಿಸಿ ರಾಯರೊಡನೆ ಹೇಳಲಾಗದೆಂದು ಎಲ್ಲರನ್ನೂ ಶಂಕಿಸಿ ಕೇಳಿ, ಆ ಬಳಿಕ ಅವನು—ಕೇಳೈ ಮಹಾರಾಯನೇ! ಅಪಮೃತ್ಯು ಪರಿಹಾರಾರ್ಥವಾಗಿ ದಾನಂಗಳ ಮಾಡು ಎಂದು ಹೇಳಿದ ನೀತಿಚಾತುರ್ಯಕ್ಕೆ ರಾಯ ಮೆಚ್ಚಿ, ಆಗ ಪಂಚಲೋಹಗಳು, ಕರಿತುರಗಗಳು, ಗೋ ಭೂ ಗೃಹಗಳು, ಪಂಚರತ್ನಗಳು, ಸುಗಂಧ ಪರಿಮಳ ಮುಂತಾದುವೆಲ್ಲ ದಾನವ ಕೊಟ್ಟು, ಸಭಾಸಾಮಾಜಿಕರಾದ ವಿದ್ವಾಂಸಕವಿಗಳಿಗೆಲ್ಲ ಲಕ್ಷ ಲಕ್ಷ ದ್ರವ್ಯವ ಕೊಟ್ಟು, ಆ ವಿವೇಕತಿಲಕನೆಂಬವನಿಗೆ ಕೋಟಿದ್ರವ್ಯವ ಕೊಟ್ಟು ದುಸ್ಸ್ವಪ್ನಶಾಂತಿಯ ಮಾಡಿಕೊಂಡು, ಸುಖವಾಗಿ ಇದ್ದನು—ಎಂದು ಹಂಸಗಮನೆ ನುಡಿಯಲು ; ಭೋಜರಾಯನು ಲಜ್ಜಿತನಾಗಿ ತನ್ನ ಅರಮನೆಗೆ ಹೋದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ಹಂಸಗಮನೆಯೆಂಬ ಪುತ್ತಳಿ ಪೇಳಿದ ಇಪ್ಪತ್ತನಾಲ್ಕನೆಯ ಕಥೆ.

೨೫ ನೆಯ ಕಥೆ.

ಇಪ್ಪತ್ತೈದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ನವರತ್ನಾಭರಣಾಲಂಕೃತನಾಗಿ ಎಂದಿನಂತೆ ತನ್ನ ಆಸ್ಥಾನಕ್ಕೆ ಬಂದು ಸಿಂಹಾಸನಕ್ಕೆ ತನ್ನ ಬಲಗಾಲ

ನೀಡುವ ಸಮಯದಲ್ಲಿ ಆ ಸೋಪಾನದ [1]ಇಂದ್ರಜಿತೆಯೆಂಬ[1] ಪುತ್ತಳಿ—ಹೋ ಹೋ, ನಿಲ್ಲು ನಿಲ್ಲು. ನಮ್ಮೊಡೆಯನಾದ ವಿಕ್ರಮಾದಿತ್ಯರಾಯನಂತೆ ಉದಾರ ಸಾಹಸ ಗುಣಂಗಳುಳ್ಳೊಡೆ ಸಿಂಹಾಸನವನೇಱು, ಇಲ್ಲವಾದರೆ ಕೆಲಸಾರು. ಮೀಱಿ ಕುಳಿತರೆ ನಿನ್ನ ತಲೆ ಸಹಸ್ರಹೋಳಾಗುವುದು—ಎಂದು ಧಿಕ್ಕರಿಸಿ ನುಡಿಯಲಾಭೋಜರಾಯನು ಶಿರವ ಬಾಗಿಸಿ ಲಜ್ಜಿತನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು ಪ್ರಧಾನಿಯಾದ ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ತಳಿಯೆ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದುದಿನ ಒಡ್ಡೋಲಗಗೊಟ್ಟು ಕುಳಿತಿರುವ ಸಮಯದಲ್ಲಿ [2]ಹೈಸಳ[2]ದೇಶದಿಂದ ಸುಪರಿಕ್ಷಿತನೆಂಬ ಕ್ಷತ್ರಿಯನೊಬ್ಬನು ಬಂದು ಕಾಣಿಕೆಯನಿಕ್ಕಿ ಪೊಡೆಮಟ್ಟು ರಾಯನ ಕಾಣಿಸಿಕೊಳ್ಳಲಾಗಿ; ರಾಯನು ಮರ್ಯಾದೆಯಿಂದ ಆತನ ಸಮೀಪದಲ್ಲಿ ಕುಳ್ಳಿರಿಸಿಕೊಂಡು—ಏನುಕಾರಣ ಬಂದುದು? ಎಂದು ಕೇಳಲಾಗಿ; ಅವನಿಂತೆಂದನು:—ಕೇಳೈ ರಾಯನೇ! ನಿನ್ನ ಸರ್ವರು [3]ಲೋಕಚಂದ್ರನೆಂದು ಪೇಳುವುದ ಕೇಳಿ ನಿನ್ನ ದರ್ಶನವಾಗಬೇಕೆಂದು[3] ಬಂದೆನು. ಇದಲ್ಲದೆ ನಿನ್ನಯ ರಾಜ್ಯದಲ್ಲಿ ಅರದೇಶಿ, ಪರದೇಶಿ, ಕುರುಡರು, ಮೂಗರು, ಕಿವುಡರು, ಗುಜ್ಜಾರಿಗಳು, ಮುಂತಾದ ಸಕಲ ಜನರ ರಕ್ಷಿಸುವ ಪ್ರಭಾವವ ಕೇಳಿ, ಸಂತೋಷವಾಗಿ, ಬಂದೆನು. ನಿನ್ನ ರಾತ್ರಿಯ[4]ಓಲಗವ ಒಂದು ದಿನ ನನಗೆ ಪಾಲಿಸಬೇಕು[4] ಎನ್ನಲಾಗಿ; ರಾಯ ಸಂತೋಷಪಟ್ಟು ಆದಿನ ರಾತ್ರಿಯೋಲಗದಲ್ಲಿ ವಿದ್ವಾಂಸರು ಕವಿಗಳು ಪೌರಾಣಿಕರು ಮಾಂಡಲಿಕರು ಮನ್ನೆಯರು ಗಾಯಕರು ಪರಿಹಾಸಕರು, ಭಟ್ಟರು [5]ಮೊದಲಾದವರು ಸದರಿನಲ್ಲಿ[5] ಕುಳಿತಿರುವಲ್ಲಿ ಸುಪರಿಕ್ಷಿತನ ಕರೆಬಿತಲಾಗಿ; ಆತ ಬಂದ ಬಳಿಕ—ಈ ರಾತ್ರಿಯೋಲಗ ತೆಗೆದುಕೋ ಎಂದು ರಾಯನು ಹೇಳಲಾಗಿ; ಅವನಿಂತೆಂದನು:—

ಪಾ—1. ಇಂದ್ರಾರ್ಜಿತೆ. 2. ಕೈಸಾಳ. 3. ನಿನ್ನ ಪರಲೋಕ ಚಂದ್ರನೆಂಬರು ನಿನ್ನಯ ಕೀರ್ತಿಪ್ರಭಾವವ ಕೇಳಿ ಬಂದೆನು. 4. ಕಾಲದೋಲಗವನೋಡಬೇಕೆಂದು ಬಂದೆನೆಂದು ಸುಪರಿಕ್ಷಿತ ಪೇಳಲು. 5. ಮೊದಲಾದ ಸಪ್ತಾಂಗದವರ ಕರೆಸಿ ಒಡ್ಡೋಲಗಂಗೊಂಡು.

ಎಲೈ ರಾಯನೆ! [1]ವಿದ್ಯೆ ಕಲಿಯಬಹುದು, ನುಡಿಗಳ ಕಲಿವುದು ಉನ್ನತ; ದ್ರವ್ಯಸಂಪಾದಿಸಬಹುದು, ದಾನ ಕೊಡುವುದುನ್ನತ; ಕವಿಯಾಗಬಹುದು, ಭಾವ ತಿಳಿವುದುನ್ನತ; ಮಂತ್ರಿಯಾಗಬಹುದು, ಲೋಕಹಿತನಾಗುವುದು ಉನ್ನತ; ದೊರೆಯಾಗಬಹುದು, ವೀರವಿತರಣ ಗುಣವಿರುವುದು ಉನ್ನತ. ಅದುಕಾರಣ ಸಕಲಸಂಪನ್ನನೆನಿಸಿಕೊಂಬುದು ಸಾಮಾನ್ಯವಲ್ಲ[1] ಎಂದು ಸುಪರೀಕ್ಷಿತ ನುಡಿವುದಕ್ಕೆ ರಾಯನಿಂತೆಂದನು:—ಜಗತ್ತಿನಲ್ಲಿ ಎಲ್ಲವ ಬಲ್ಲವರಿಲ್ಲ; [2]ಏನೂ[2] ಅರಿಯದವರಿಲ್ಲ; ತಮ್ಮ ತಮ್ಮ ಮಟ್ಟಿಗೆ ತಕ್ಕಷ್ಟು ಬಲ್ಲರಲ್ಲದೆ [3]ನೆರೆ ನಿಪುಣರೆನಿಸಿಕೊಳ್ಳುವರಾರು?[3] ಎಂದು ರಾಯನಾಡಿದ ಮಾತಿಗೆ ಸುಪರೀಕ್ಷಿತನಿಂತೆಂದನು:—ಕೇಳೈಯ ರಾಯನೇ! ನಾನೂ ಎರಡು ಪರೀಕ್ಷೆ ಬಲ್ಲೆನು. ಅವೇನೆಂದರೆ—[4]ಊಟ, ಕೂಟ,[4] ಈ ಯೆರಡುಪರೀಕ್ಷೆ ಬಲ್ಲೆನೆನಲಾಗಿ; ರಾಯ ಇವನ ಜಾಣ್ಮೆಯ ನೋಡುವೆನೆಂದು ಸೂಪಶಾಸ್ತ್ರಜ್ಞನ ಕರೆಸಿ [5]ನಳಪಾಕ, ಭೀಮಪಾಕ, ಮುಂತಾದುವರಲ್ಲಿ ಅನೇಕ ತರದ ಭಕ್ಷ್ಯವ ಅಗ್ನಿಮತದಿಂದ ಪರಿಪಕ್ವವ ಮಾಡಿಸಿ,[5] ಆ ಬಳಿಕ ಭೋಜನಶಾಲೆಯಲ್ಲಿ ಈರ್ವರೂ ಏಕಪಙ್ಕ್ತಿಯಲ್ಲಿ ಕುಳಿತುಕೊಂಡು ಸಕಲವಾದ ಶಾಕಪಾಕಗಳ ಬಡಿಸಿ ಮೃಷ್ಟಾನ್ನಗಳ ಭೋಜನವ ಮಾಡಿಕೊಂಡು, ಚಂದ್ರಶಾಲೆಗೆ ಬಂದು ಕುಳಿತುಕೊಂಡು, ಗಂಧ ಕಸ್ತೂರಿ ಪರಿಮಳ ಕುಸುಮ ತಾಂಬೂಲವ ಕೊಟ್ಟು ತೀರಿಸಿಕೊಂಡು, ರಾಯ ಸುಪರೀಕ್ಷಿತನೊಳು—ಭೋಜನವು ಎಂಥದೊ! ಎಂದು ಕೇಳಲಾಗಿ; ಆತನು—ಸಕಲ ಪದಾರ್ಥವೂ ರುಚಿಕರವಾಗಿದ್ದಿತು; [6]ರಾಜಾನ್ನ ಸ್ವಲ್ಪ ನಾಱುತ್ತಿದ್ದಿತು[6] ಎನ್ನಲಾಗಿ;

---

1. ವಿದ್ಯೆಗಳ ಕಲಿಯಬಹುದು, ನುಡಿಗಳ ಕಲಿಯಲಾಗದು; ಧನವ ಗಳಿಸಬಹುದು ದಾನಿಯಾಗಲರಿಯದು, ಕವಿಯಾಗಬಹುದು, ರಸಜ್ಞನಾಗಲರಿಯದು; ಭೋಜನವ ಮಾಡಬಹುದು, ಸ್ವಾರಸ್ಯಗಳ ತಿಳಿಯಲಾಗದು; ಪ್ರಧಾನನಾಗಬಹುದು, ಲೋಕಹಿತನಾಗಲರಿಯದು; ಅರಸಾಗಬಹುದು, ವೀರವಿತರಣವುಳ್ಳವನಾಗಲರಿಯದು. ಅದುಕಾರಣ ಸಕಲ ಗುಣಗಳ ತಿಳಿವುದು ಸಾಮಾನ್ಯವಲ್ಲ. 2. ಏನೂ. 3. ಸಕಲ ಕಲಾಪ್ರವೀಣನಾಗಿ ಸರ್ವಜ್ಞಚಿತ್ತನೆನಿಸಿಕೊಂಬುವನಲ್ಲವೆಂದು. 4. ಭೋಜನದ ಪರೀಕ್ಷೆ, ಸ್ತ್ರೀಯರ ಕೂಟದ ಪರೀಕ್ಷೆ.
5. ಅನೇಕವಿಧ ಭಕ್ಷ್ಯ ಕಜ್ಜಾಯಗಳ, ಪಾರ್ವತೀಮತ ನಳಮತ ಭೀಮಮತ ಅಗ್ನಿಮತ ಇಂತೆಂಬ ಸಕಲ ಮತಗಳಿಂದ ಸಕಲ ಪರೀಕ್ಷೆಗಳ ಮಾಡಿಸಿ.
6. ರಾಜಾನ್ನದಕ್ಕಿ ಅನ್ನವು ಕವರು ನಾಱೀತೆಂದು.

ರಾಯ ಉಗ್ರಾಣದ ಪಾರುಪತ್ಯ ಮಾಡುವವನ ಕರೆಸಿ ಕೇಳಲಾಗಿ; ಅವನು—ಎಲೈ ಸ್ವಾಮಿ! ಗಂಧಶಾಲಿಗದ್ದೆ ಉತ್ತು ಪೈರು ಮಾಡುವಾಗ ಸ್ಮಶಾನದ ಭೂಮಿ ಬೆರೆದಿದ್ದಿತು, ಅದಱಿಂದ ರಾಜಾನ್ನ ನಾಱೀತೆನ್ನಲಾಗಿ ; ರಾಯನು ಸಂತೋಷಚಿತ್ತನಾಗಿ, ಸುಪರೀಕ್ಷಿತನ ಊಟದ ಸುಖಿಯಹುದೆಂದು, ಆಬಳಿಕ ಆ ರಾತ್ರಿಗೆ ತನ್ನ ಅರಮನೆಯ ಸ್ತ್ರೀಯರಲ್ಲಿ ನವಮೋಹನಾಂಗಿಯೆಂಬ ದಾಸಿಯ ಕರೆಸಿ ಕಳುಹಿಸಿಕೊಡಲಾಗಿ; ಅವಳಲ್ಲಿ ಪರಿರಂಭ ಚುಂಬನಾದಿಯಾದ ಕಲೆರತಿಗಳ ಮಾಡಿ, ಬಳಲಿ ಸುಖಸಿದ್ರೆಗೈದು, ಬೆಳಗಾಗೆ ಎದ್ದು ರಾಯನ ಬಳಿಗೆ ಬರಲಾಗಿ; ರಾಯ-ರಾತ್ರಿ ಸಂಭೋಗವೆಂಥದೆಂದು ಕೇಳಲಾಗಿ; ಆತನು ಸ್ತ್ರೀ [1]ಕಾಮಕಲಾಕುಶಲವ ಬಲ್ಲ ಕಲಾಪ್ರವೀಣೆಯಾದರೂ ಹೊಲಸು ಹೊಡೆಯುತ್ತಿದ್ದಾಳ[1] ಎಂದು ನುಡಿಯಲಾಗಿ; ರಾಯ ಅವಳ ಕರೆಸಿ ಪೂರ್ವವೃತ್ತಾಂತವ ಕೇಳದುದಱಿಂದ ಅವಳಿಂತೆಂದಳು :—ನಾನು ಪಾಟಲಾಪುರದ ಪ್ರಧಾನಿ ಸುನೀತಿಯ ಮಗಳು. ನನ್ನ ಹೆಱುತ್ತಲೆ ನನ್ನ ತಾಯಿ ತೀರಿಹೋದುದಱಿಂದ, ದಶದಿನ ಈ ಶಿಶು ಮನೆಯಲ್ಲಿರಲಾಗದೆಂದು ಹಿರಿಯರಾದವರು ಹೇಳದ ಮಾತಿಗೆ, ಆಗ ನನ್ನ ತಂದೆ ಒಬ್ಬ ಮುದುಕಿಯ ಕರೆಯಿಸಿ, ಅವಳಿಗೆ ನನ್ನ ಸಾಕಿಕೊಡು ಎಂದು ಕೊಟ್ಟ ಕಾರಣ, ಆಮುದುಕಿ ನನಗೆ ಆಡಿನ ಮೊಲೆಯೂಡಿ, ಸಾಕಿ, ನಾನು ದೊಡ್ಡವಳಾದ ಬಳಿಕ, ಅರಮನೆಗೆ ನನ್ನ ಕರೆತಂದು ಒಪ್ಪಿಸಿದಳು ಎಂದ ಮಾತ ಕೇಳಿ, ರಾಯನು—ಕೂಟದ ಸುಖಿಯಹುದು ಎಂದು, ಆ ಸುಪರಿಕ್ಷಿತನಿಗೆ ಸವಾಲಕ್ಷದ್ರವ್ಯವ ಕೊಟ್ಟು ಕಳುಹಿಸಿದನು—ಎಂದ ಮಾತಿಗೆ ಇಂದ್ರಜಿತೆಯೆಂಬ ಪುತ್ತಳಿಯು ನಗುತ್ತ ಹಾಸ್ಯಗೆಯ್ದು ಪೇಳದ ಉಪಕಥೆ :—

ಕೇಳಯ್ಯಾ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬ ಗೊರವ ಮೆಯ್ಗೆಲ್ಲಾ ಕುಂಕುಮವ ಲೇಪಿಸಿ, ರುದ್ರಾಕ್ಷೀ ಸ್ಫಟಿಕದ ಸರವ ಧರಿಸಿಕೊಂಡು, ತ್ರಿಶೂಲವ ಪಿಡಿದು, ಕೆಂಜೆಡೆಯ ಬಿಟ್ಟು, ರಾಯನೆದುರಾಗಿ ಬಂದು, ತನ್ನ ನಾನಾ

ಪಾ—1. ಕಾಮಕಲಾಕುಶಲಂಗಳ ಬಲ್ಲವಳು, ಚೌಷಷ್ಟಿಕಲಾಪ್ರವೀಣೆಯಹುದು, ಆದರೂ ಜಿಡ್ಡುನಾಱುವಳು.

ವಿಧದ ವಿದ್ಯೆಗಳ ತೋರಿಸಲಾಗಿ ; ರಾಯ ಮೆಚ್ಚಿ ಅವನಿಗೆ ಕೋಟಿಹೊನ್ನ ಕೊಟ್ಟು, ಮನ್ನಣೆಯಿಂದ ಮನ್ನಿಸಿ, ಆ ಬಳಿಕ-ನೀನೆಲ್ಲಿಂದ ಬಂದೆಯೆನ್ನ ಲಾಗಿ ; ಅವನಿಂತೆಂದನು :—ಕೇಳ್ಳೈಯ್ಯಾ ಮಹಾರಾಯನೇ ! ನಾನು ಗೊಂಡಾ ರಣ್ಯದಲ್ಲಿ ಕಪಿಲಮುನಿಯಾಶ್ರಮದ ಬಳಿಯಲ್ಲಿರುವ ಮೈಲಾರಲಿಂಗನ ಗುಡಿಯಿಂದ ಬಂದೆನೆನ್ನಲಾಗಿ ; ರಾಯ—ಅಲ್ಲೇನತಿಶಯವೆಂದು ಕೇಳಲಾಗಿ ; ಆತನಿಂತೆಂದನು :—ಆ ಗುಡಿಯ ಮುಂದೆ ಸಾವಿರ ಕಾಲಿನದೊಂದು ನೆಲವು ಕಟ್ಟಿಯಿದೆ. ಅದರ ಕೆಳಗೆ ಅತಿಲಕ್ಷಣವಾದ ಕತ್ತಿಗಳು ನಿಲ್ಲಿಸಿ ಇವೆ. ಆವನಾನೊಬ್ಬ ವೀರನಾದವನು ಆ ನೆಲುವಿನ ಮೇಲೆ ಕುಳಿತು ಬಂದೊಂದಾಗಿ ಅದರ ಕಾಲುಗಳ ತನ್ನ ಕೈಯ ಉಗುರಿನಿಂದ ಕತ್ತರಿಸಿ, ಆಕತ್ತಿಗಳ ಮೇಲೆ ಬೀಳುವ ಸಮಯದಲ್ಲಿ ಆದೇವರು ಪ್ರಸನ್ನವಾಗಿ ಪಿಡಿದೆತ್ತಿಕೊಂಡು ಅವ ನಿಗೆ ಇಷ್ಟಾರ್ಥ ಪಾಲಿಸುವುದೆಂದು ಅಲ್ಲಿ ಶಾಸನ ಬರೆದಿರುವುದು ಎಂದ ಮಾತ ಕೇಳಿ, ರಾಯ ಆಕ್ಷಣವೇ ಆಚೋದ್ಯವ ನೋಡಬೇಕೆಂದು ಆಕಾಶ ಮಾರ್ಗದಲ್ಲಿ ಹೊರಟು, ಆಗೊಂಡಾರಣ್ಯದಲ್ಲಿರುವ ಮೈಲಾರಲಿಂಗನ ಗು ಡಿಯ ಬಳಿಗೆ ಹೋಗಿ, ಆ ನೆಲುವಿನಲ್ಲಿ ಕುಳಿತು ತನ್ನ ಉಗುರೊಳಗೆ ಅದರ ಕಾಲುಗಳ ಬಂದೊಂದಾಗಿ ಕತ್ತರಿಸಿ ಕೆಳಗಿರುವ ಕತ್ತಿಗಳ ಮೇಲೆ ಬೀಳುವ ಸಮಯಕ್ಕೆ ಆದೇವರು ಪ್ರಸನ್ನವಾಗಿ, ಆ ಕತ್ತಿಗಳ ಮೇಲೆ ಬೀಳದ ಹಾಗೆ ಅಂತರಿಕ್ಷದ ಮಾರ್ಗದಲ್ಲಿ ಅವನ ಪಿಡಿದೆತ್ತಿಕೊಂಡು ಪ್ರಸನ್ನವಾಗಿ, ತನ್ನ ನಿಜ ರೂಪವ ತೋರಿಸಿ, ಮೆಚ್ಚಿ,—ಎಲೈ ರಾಯನೇ, ನಿನ್ನ ಧೀರತ್ವಕ್ಕೆ ಮೆಚ್ಚಿದೆ ನೆಂದು ರಾಯನಿಗೆ ಚತುರ್ವಿಧಫಲಪುರುಷಾರ್ಥಗಳ ಕೊಡುವ ನವರತ್ನದ ಬಟ್ಟಲ ಕೊಟ್ಟು ಮಾಯವಾಯಿತು. ಆ ಬಳಿಕ ಅಲ್ಲಿಂದ ರಾಯ ಬರುವ ದಾರಿಯಲ್ಲಿ ಒಬ್ಬ ಬ್ರಾಹ್ಮಣೋತ್ತಮ ದರಿದ್ರದಿಂದ ದೇಶಾಂತರ ಸಂಚಾರ ಮಾಡಿ ಅಲ್ಲಲ್ಲಿರುವ ದೇವರ ಪೂಜಿಸಿದಾಗ್ಯೂ ತನ್ನ ದಾರಿದ್ರ್ಯ ತೀರದೆ ನೀರಿ ನಲ್ಲಿ ಬಿದ್ದು ದೇಹವ ಬಿಡಬೇಕೆಂದು ಬರುವನ ಕಂಡು, ರಾಯನು—ಎಲೋ ಬ್ರಾಹ್ಮಣ ! ಎಲ್ಲಿಗೆ ಹೋಗುತ್ತಿದ್ದೀಯೆ ? ಎನ್ನಲಾಗಿ; ಅವನು ತನ್ನ ವಿಚಾ ರವ ಹೇಳಿ ನೊಂದುಕೊಳ್ಳಲಾಗಿ ; ರಾಯ ಅವನ ಕಷ್ಟವ ಕೇಳಿ, ಕರುಣವ ತಾಳಿ ತನಗೆ ಮೈಲಾರದೇವರು ಕೊಟ್ಟಂಥ ಚತುರ್ವಿಧ ಫಲವ ಕೊಡುವ ನವರತ್ನದ ಬಟ್ಟಲ ಕೊಟ್ಟು, ಸುಖವಾಗಿರಿ ಎಂದು ಹೇಳಿ ಕಳುಹಿಸಿ, ತಾನೀ

ಪಟ್ಟಣಕ್ಕೆ ಬಂದು ಸುಖವಾಗಿ ರಾಜ್ಯಗೆಯ್ಯುತ್ತಿದ್ದನು—ಎಂದು ಇಂದ್ರಜಿತೆಯೆಂಬ ಪುತ್ತಳಿ ಹೇಳಲು, ರಾಜನು ದುಃಖಿತನಾಗಿ ತನ್ನ ಅರಮನೆಗೆ ಪೋದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಇಂದ್ರಜಿತೆಯೆಂಬ ಪುತ್ತಳಿ ಪೇಳಿದ ಇಪ್ಪತ್ತೆರಡನೆಯ ಕಥೆ.

೨೩ ನೆಯ ಕಥೆ.

ಇಪ್ಪತ್ತಾಱನೆಯ ದಿವಸದಲ್ಲಿ ಭೋಜರಾಯನು ಸ್ನಾನದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು, ಎಂದಿನಂತೆ ಸಿಂಹಾಸನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ, ಆ ಸೋಪಾನದ ತ್ರೈಲೋಕ್ಯ ಮೋಹಿನಿಯೆಂಬ ಪುತ್ತಳಿಯು ಧಿಕ್ಕರಿಸಲಾಗಿ ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:—

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯವ ಗೆಯ್ಯುವಲ್ಲಿ ಒಂದು ದಿನ ಒಬ್ಬ ಮುದುಕಿ ಬಂದು—ಎಲೈ ರಾಯನೇ! ನನ್ನ ವಿದ್ಯೆಯ ನೋಡಬೇಕು ಎಂದಾಗ ; ರಾಯ-ಅದೆಂಥ ವಿದ್ಯೆ ತೋಱು? ಎನ್ನಲಾಗಿ ; ಆ ಮಾತಿಗವಳು—ನಾನು ಬೆರಣಿಮಾಡುವ ವಿದ್ಯೆಯ ಬಲ್ಲೆ ಎನ್ನಲಾಗಿ ; ಅವಳ ಮಾತ ಕೇಳಿ, ರಾಯನು ಹುಸಿನಗೆಯ ನಗುತ್ತ—ಎಲಾ ಮುದುಕಿ! ಇದೊಂದು ವಿದ್ಯೆಯೆಂದು ಬಂದು ಏನೆಂತ ಹೇಳಿದೆಯೆಂದು ಹಾಸ್ಯವ ಮಾಡಲಾಗಿ, ಅವಳಿಂತೆಂದಳು:-ನಾನು ನಿನ್ನ ಸಭೆಗೆ ಬಂದು ಹೇಳಿದರೆ ಆ ಕುಶಲವ ನೋಡಬೇಕಲ್ಲದೆ ಪರಿಹಾಸ್ಯವ ಮಾಡುವರೆ? ನೀನು ಧರ್ಮಪ್ರಭು—ಎಂದು ನಾನು ಬಂದೆನೆನ್ನಲಾಗಿ ; ಅವಳ ಮಾತ ಕೇಳಿ ರಾಯ ಸೆಗಣಿಯ ತರಿಸಿ ಗುಡ್ಡೆಯ ಹಾಕಿಸಿ ಬೆರಣಿಮಾಡು, ಎನ್ನಲಾಗಿ ; ಆ ಮುದುಕಿ ಆ ಸೆಗಣಿಯೆಲ್ಲವ ಕಲೆಸಿ ಬೆರಣಿಯ ತಟ್ಟಿ ಒಣಗಿಸಿ ರಾಯನ ಸಭೆಗೆ ತಂದು ತಕ್ಕಡಿಯಲ್ಲಿ ತೂಗಲು ಯಾವತ್ತು ಬೆರಣಿಯೂ ಒಂದೇ ತೂಕವಿರಲಾಗಿ ; ರಾಯ ಮೆಚ್ಚಿ ಆ ಮುದುಕಿಗೆ ಸವಾ

ಲಕ್ಷದ್ರವ್ಯವ ಕೊಟ್ಟು ಕಳುಹಿಸಿದನೆಂದ ಮಾತಿಗೆ ತ್ರೈಲೋಕ್ಯಮೋಹಿನಿಯೆಂಬ ಪುತ್ತಳಿ ನಗುತ್ತ ಹಾಸ್ಯಗೈದು ಪೇಳಿದ ಉಪಕಥೆ :—

ಕೇಳೈಯ ಚಿತ್ರಶರ್ಮನೇ ! ನಮ್ಮ ವಿಕ್ರಮಾದಿತ್ಯರಾಯ ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬ ಬಳೆಗಾಱ ಬಂದು ರಾಯನ ಎದುರಾಗಿ ಬಂದು ನಿಂತುಕೊಳ್ಳಲಾಗಿ ; ರಾಯ—ನೀನು ಎಲ್ಲಿಂದ ಬಂದೆ ? ಎಂದು ಕೇಳಿದುದಕ್ಕೆ, ಅವನು—ಎಲೈ ಮಹಾರಾಯನೇ ! ದೇಶ ತಿರುಗುವನಿಗೆ ಬಂದು ಊರೆ, ಎನ್ನಲಾಗಿ ; ರಾಯ—ನೀ ತಿರುಗಿದ ದೇಶದಲ್ಲಿ ಏನತಿಶಯವೆಂದು ಕೇಳಲಾಗಿ ; ರಾಯನ ಮಾತಿಗೆ ಬಳೆಗಾಱನಿಂತೆಂದನು :—ಕನಕಾವತಿಯೆಂಬ ಪಟ್ಟಣದ ಕಾಲಭೈರವನೆಂಬ ಅರಸಿಗೆ ಸೌದಾಮಿನಿಯೆಂಬ ಮಗಳು ಯೌವನಸ್ಥೆಯಾಗಿರುವಳು. ಅವಳು ಹಗಲಿನಲ್ಲಿ ಪಿಶಾಚರೂಪಳಾಗಿ ಇರುವಳು. ರಾತ್ರಿಕಾಲಕ್ಕೆ ಜಗನ್ಮೋಹನ ಸ್ತ್ರೀಯಾಗಿರುವಳು—ಎಂದ ಮಾತ ಕೇಳಿ, ರಾಯ ವಿಸ್ಮಿತನಾಗಿ, ಅದ ನೋಡಬೇಕೆಂದು ಆ ಬಳೆಗಾಱನ ಪಟ್ಟಣದಲ್ಲಿರಿಸಿ, ಭಟ್ಟಿಯ ಕರೆದುಕೊಂಡು ತಾನು ಖೇಚರಮಾರ್ಗದಲ್ಲಿ ಕನಕಾವತಿಯೆಂಬ ಪಟ್ಟಣಕ್ಕೆ ಹೋಗಿ, ಆಸೌದಾಮಿನಿಯ ಕಂಡು ಅವಳ ವಶೀಕಾರ ಮಾಡು ಎಂದು ಭಟ್ಟಿಗೆ ಹೇಳಿ ಕಳುಹಲಾಗಿ ; ಭಟ್ಟಿ ಅವಳ ಬಳಿಗೆ ಹೋಗಿ, ನಾನಾಯುಕ್ತಿಯಿಂದ ಮಾತನಾಡಿಸಿ ಒಡಂಬಡಿಸಿ ಒಪ್ಪಿಸಿ, ಆಮಾತ ರಾಯನ ಬಳಿಗೆ ಬಂದು ಹೇಳಲಾಗಿ ; ಆ ಬಳಿಕ ರಾಯ ಅಲ್ಲಿಗೆ ಹೋಗಿ, ಅವಳಲ್ಲಿ ಏಳೆಂಟುದಿನ ಕೂಡಿದ್ದು, ಆ ಮೇಲೆ—ನೀನು ಹಗಲು ಪಿಶಾಚರೂಪವಾಗಿರುವ ಕಾರಣವೇನೆಂದು ಕೇಳಿದ ಮಾತಿಗೆ ಅವಳಿಂತೆಂದಳು :—ಕೇಳೈ ಮಹಾರಾಯ ! ಲಂಕಾಪುರಿಯಿಂದೊಬ್ಬ ಸಿದ್ಧಪುರುಷ ಇಲ್ಲಿಗೆ ಬಂದು ನನ್ನ ರೂಪು ರೇಖೆ ಲಾವಣ್ಯವ ಕಂಡು ಮೋಹದಿಂದ ಭ್ರಮಿಸಿ, ತನ್ನ ಸತಿಸುತರ ಬಿಟ್ಟು ನನ್ನಲ್ಲಿ ಕೂಡಿದ್ದು ಕೆಲವು ದಿನದ ಮೇಲೆ ನನ್ನನಗಲಿರಲಾಱದೆ ತನ್ನ ಲಂಕಾಪುರಿಗೆ ನನ್ನ ಬಾರೆಂದು ಕರೆಯಲಾಗಿ ನಾನು ಬರುವುದಿಲ್ಲ ಎಂದುದಕ್ಕೆ ಕೋಪಿಸಿ—ನೀನು ಹಗಲೆಲ್ಲಾ ಪಿಶಾಚಿಯಾಗು, ರಾತ್ರಿಕಾಲಕ್ಕೆ ಸ್ತ್ರೀಯಾಗೆಂದು ಶಪಿಸಿದನು. ಆ ಬಳಿಕ ನಾನು—ದೈನ್ಯದಿಂದ ವಿಮೋಚನೆಯೆಂದಿಗೆ ? ಎಂದು ಕೇಳಲಾಗಿ ; ಆತ—ನೀನು ಲಂಕಾಪುರಿಗೆ ಬಂದಾಗ ವಿಮೋಚನೆಯಾಗುವುದೆಂದು ಹೇಳಿ ಹೋದನು. ಆದುದಱಿಂದ ಹಗಲು ಪಿಶಾ

ಚರಗೂಪಿನಲ್ಲಿರುವೆನೆಂದು ಹೇಳಿದ ಮಾತ ರಾಯ ಕೇಳಿ—ನಮ್ಮ ಪಟ್ಟಣಕ್ಕೆ ಹೋಗುವ ಬಾರೆಂದು ರಾಯ ಕರೆಯಲಾಗಿ, ಆಮಾತಿಗವಳು ಸಮ್ಮತಿಪ ಟ್ಟಿದರಿಂದ ರಾಯ ಭಟ್ಟಿಯ ಬಳಿಗೆ ಬಂದು—ಅವಳೊಪ್ಪಿ ಸಂಗಡ ಬರುತ್ತಲಿದ್ದಾಳೆ ಎಂಬ ವಿಚಾರವ ಭಟ್ಟಿಯ ಸಂಗಡ ಹೇಳಲಾಗಿ; ಆ ಭಟ್ಟಿ—ಎಲೈ ರಾಯನೇ ! ಸ್ತ್ರೀಯರ ನಂಬಕೂಡದು. ನಿನ್ನ ಕಾರ್ಯವಾದ ಬಳಿಕ ನಮ್ಮ ಸ್ಥಳಕ್ಕೆ ನಾವು ಹೋಗುವುದು ಮೇಲು—ಎಂದ ಮಾತ ಅವಳು ಹಿಂದೆ ಬಂದಿದ್ದು ಕೇಳಿಕೊಂಡು ಹೋಗಿ, ರಾಯ ಅಲ್ಲಿಗೆ ಬಂದ ಬಳಿಕ ಇಂತೆಂದಳು :—ಎಲೈ ಪತಿಯಾದ ಮಹಾರಾಯನೇ! ನಾನು ನಿನ್ನ ಪಟ್ಟಣಕ್ಕೆ ಬಂದು ಅಲ್ಲಿಯೂ ಪಿಶಾಚಿಯಾಗಿರಬಾರದೆಂದು ಹೇಳಿದುದಕ್ಕೆ, ರಾಯ—ಅದಕ್ಕೇನ ಮಾಡಬೇಕೆಂದು ಕೇಳಲಾಗಿ ; ಆಗ ಅವಳು ಇಂತೆಂದಳು :—ನನ್ನ ಮುಡಿಯ ತೆಗೆದು ಲಂಕಾಪುರಿಯ ಕುಂಭಿನೀದೇವತೆಗೊಪ್ಪಿಸಿದರೆ ಈ ಪಿಶಾಚತ್ವ ಬಿಡುವುದೆನ್ನಲಾಗಿ ; ರಾಯ—ಹಾಗಾದರೆ ನಡೆ ಹೋಗುವ ಎಂದ ಮಾತಿಗೆ, ಅವಳು—ನನ್ನ ಮುಡಿಯ ತೆಗೆದರೆ ಲೋಕದ ಜನಕ್ಕೆ ಹಾಸ್ಯವಾಗಿ ತೋರುವುದು. ನೀನು ರಾಯ, ನಿನ್ನ ಮುಡಿಯ ಕೊಡಲಾಗದು ; ನಿನ್ನ ಭಟ್ಟಿಯ ಮುಡಿಯ ತಂದರೆ ಶೀಘ್ರದಲ್ಲಿ ಹೋಗಿ ಹರಕೆಯ ಒಪ್ಪಿಸಿ ಬರಬಹುದು-ಎಂದ ಮಾತ ಕೇಳಿ, ರಾಯ ಆ ಮಾತ ಭಟ್ಟಿಗೆ ಬಂದು ಹೇಳಲಾಗಿ; ಭಟ್ಟಿ—ಇವಳ ಮಾತೆಲ್ಲ ಸುಳ್ಳು ಎಂದು ಹೇಳಿದರೂ ಕೇಳದೆ, ರಾಯ ಅವಳ ಮಾತೇ ನಿಜವೆಂದು ಭಟ್ಟಿಯ ತಲೆಯ ಬೋಳಿಸಿ, ಆಮುಡಿಯ ಅವಳಿಗೆ ತಂದು ಕೊಡಲಾಗಿ ; ಅದ ತೆಗೆದುಕೊಂಡು, ಆ ಬಳಿಕ ಅವಳು ರಾಯನಕೂಡ ಲಂಕಾಪುರಿಗೆ ಹೋಗುವಲ್ಲಿ ಭಟ್ಟಿ ಹಿಂದೆ ಹೋಗುತಿದ್ದನು. ಅವಳು ರಾತ್ರಿಯ ಕಾಲವಾದ ಬಳಿಕ—ನಡೆಯಲಾರೆ, ನನ್ನ ಎತ್ತಿಕೋ—ಎನ್ನಲಾಗಿ ; ರಾಯ ಅವಳ ಕಪಟವರಿಯದೆ ಸಹಜವೆಂದು ತನ್ನ ಹೆಗಲಲ್ಲಿ ಕುಳ್ಳಿರಿಸಿಕೊಂಡು ಲಂಕಾಪುರಿಗೆ ಹೋಗಲಾಗಿ ; ಅವಳ ಮೊದಲ ದಿವ್ಯಪುರುಷನು ಕಂಡು, ಈರ್ವರ ತನ್ನ ಮನೆಗೆ ಕರಕೊಂಡು ಹೋಗಿ, ರಾಯನ—ಶಹಬಾಸು ! ನನ್ನ ಸತಿಯ ಕರೆದು ತಂದವನೆಂದು ಬಹು ಉಪಚರಿಸಿ, ರಾಯನಿಗೆ ಹದಿನೆಂಟು ಕೋಟಿ ದ್ರವ್ಯವ ಕೊಟ್ಟು ಕಳುಹಿಸುವಲ್ಲಿ, ಅವಳಿಂತೆಂದಳು :—ಎಲೈ ರಾಯ ! ನಾವಿಬ್ಬರೂ ಬಂದು

ಹರಕೆಯೊಪ್ಪಿಸುವ ಸಮಯದಲ್ಲಿ—ನನ್ನ ಪೂರ್ವದ ಪುರುಷನ ಕಂಡೆನು, ನೀನು ಹೋಗು ಎಂದ ಮಾತಿಗೆ ರಾಯ ಲಜ್ಜಿತನಾಗಿ, ಭಟ್ಟಿಯ ಬಳಿಗೆ ಬಂದು,—ನಿನ್ನ ಮಾತ ಕೇಳದೆ ಕಾರ್ಯ ಕೆಟ್ಟಿತೆನ್ನಲಾಗಿ; ಭಟ್ಟಿಯಿಂತೆಂದನು :—ಎಲೈ ರಾಯ! [1]ಹಿಂದೆ ಸ್ತ್ರೀಯರ ಮಾತಿಗೊಳಗಾಗಿ ಬಹುಜನ ಕೆಟ್ಟರು. ಅವಳ ಮಾತು ಬದ್ಧವೆಂದು ನೀನು[1] ಅವಳಿಗೆ ಕುದುರೆಯಾದೆ, ನಾನು ಬೋಳನಾದೆನು--ಎಂದು ರಾಯನಿಗೆ ತಿಳಿಯ ಹೇಳಿ, ಅಲ್ಲಿಂದೀರ್ವರೂ ಇಲ್ಲಿಗೆ ಬಂದು, ರಾಯ ಆ ಬಳಿಗಾರನಿಗೆ ಹದಿನೆಂಟು ಕೋಟಿದ್ರವ್ಯವ ಕೊಟ್ಟು ಕಳುಹಿಸಿ, ತಾನು ಸುಖವಾಗಿದ್ದನು—ಎಂದು ಪುತ್ತಳಿ ನುಡಿಯಲು; ಭೋಜರಾಯನು ಲಜ್ಜಿತನಾಗಿ, ತನ್ನ ಅರಮನೆಯ ಪೊಕ್ಕನು.

ಇಂತು ಕರ್ಣಾಟಕ ಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ತ್ರೈಲೋಕ್ಯ ಮೋಹಿನಿಯೆಂಬ ಪುತ್ತಳಿ ಹೇಳಿದ ಇಪ್ಪತ್ತಾರನೆಯ ಕಥೆ.

೨೭ ನೆಯ ಕಥೆ.

ಇಪ್ಪತ್ತೇಳನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ಎಂದಿನಂತೆ ಸಿಂಹಾಸನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ—ಆ ಸೋಪಾನದ ಕನಕಾವತಿಯೆಂಬ ಪುತ್ತಳಿಯು—ಹೋ ಹೋ! ನಿಲ್ಲು ನಿಲ್ಲು! ಎಂದು ಧಿಕ್ಕರಿಸಲಾಗಿ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ :—

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದು ದಿನ ತನ್ನ ಚತುರಂಗಬಲ ಸಮೇತವಾಗಿ ಸ್ವಾರಿ ಬರುವಾಗ, ಒಬ್ಬ ಸಿರ್ಧಸಿಕನು ಕಟ್ಟಿಗೆಯ ಹೊರೆಯ

ಪಾ—1. ಹಿಂದಣ ಗತಿಗಳೆಲ್ಲಾ ಹೀಗೆ. ಹೆಂಗಸರ ಮಾತ ಕೇಳಿದವರು ಮಹಾ ಮಹಾ ಜನಂಗಳು ಮಣ್ಣಿಗೆ ಮಣ್ಣು ಕೂಡಿಹೋದರು. ಈ ಕಥೆಯು ಆಶ್ಚರ್ಯವೆಂದು ನೀನು.

ಹೊತ್ತುಕೊಂಡು ಬರುವನ—ರಾಯ ಕಂಡು [1]"ಯಥಾ ಬಾಧತಿ ಬಾಧತೇ" ಎನ್ನಲಾಗಿ ; ಎಲೈ ರಾಯನೆ! ಈ ಸವುದೆ ಹೊಱೆಯು ಬಾಧಿಸುವುದಿಲ್ಲ ; ನೀನು "ಬಾಧತಿ" ಎಂದ ಮಾತು ಬಾಧಿಸುತ್ತಲಿದೆ.[1] ಆದಾಗ್ಯೂ ನಿನ್ನಂಥ ಮಹಾರಾಯ ಈ ಕಷ್ಟವ ತಪ್ಪಿಸಬೇಕಲ್ಲದೆ ಈ ರೀತಿಯಾಡಬಹುದೇ! ಎಂದು ಉತ್ತರವ ಕೊಡಲಾಗಿ ; ರಾಯನು ಮೆಚ್ಚಿ ಅವನಿಗೆ ಸವಾಲಕ್ಷದ್ರವ್ಯ ಕೊಟ್ಟು ಕಳುಹಿಸಿದನು ಎಂದ ಮಾತಿಗೆ ಕನಕಾವತಿಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :—

ಕೇಳೈಯ ಚಿತ್ರಶರ್ಮನೇ! ನಮ್ಮ ರಾಯ ಈ ರಾಜ್ಯ ಪರಿಪಾಲಿಸುವ ವೇಳೆಯಲ್ಲಿ ಒಂದು ದಿನ ದಿಗ್ವಿಜಯಕ್ಕಾಗಿ ತನ್ನ ಚತುರಂಗಸೇನೆ ಸಹಿತ ಹೊಱಟು ವೈರಿಗಳ ಜಯಿಸಿ ಶರಣಾಗತರ ಪಾಲಿಸಿ ಬರುವ ದಾರಿಯಲ್ಲಿ ಒಂದು ಆಲದ ಮರದ ನೆಳಲಿನಲ್ಲಿ, [2]ಒಬ್ಬ ಭೀಮರೂಪ ಕುಳಿತಿರುವುದ[2] ಕಂಡು,—ನೀನು ಯಾವ ದೇಶದಿಂದ ಬಂದೆ ಎನ್ನಲಾಗಿ ; ಅವನು [3]ಸಿಂಧುದೇಶದ ಕಾಂತಾವತಿಯೆಂಬ ಪಟ್ಟಣದಿಂದ ವ್ಯಾಪಾರನಿಮಿತ್ತವಾಗಿ ಬಂದೆನು, ಎಂದ[3] ಮಾತ ರಾಯ ಕೇಳಿ, ದಂಡು ಯಾವತ್ತು ಮುಂದೆ ಹೋಗಲಿ ಎಂದು ಅಪ್ಪಣೆ ಕೊಡಿಸಿ, ಹಿಂದೆ ರಾಯ ವ್ಯಾಪಾರಿ ಸಹ ಬರುತ್ತಿರುವಲ್ಲಿ— ದೂರದಲ್ಲಿ ಒಂದು ಆನೆ ಬರುವುದ ಕಂಡು, ಒಂದು ಮರದ ಕೆಳಗಿರ್ವರು ನಿಂತು, ವ್ಯಾಪಾರಿಯಿಂತೆಂದನು :—ಕೇಳೈ ಮಹಾರಾಯನೆ! ಬರುವ ಆನೆಯ ಮೇಲೆ ಕುಳಿತಿರುವಳು ಹೆಂಗಸು, ಗರ್ಭಿಣಿ, ಆ ಆನೆಗೆ ಬಲಗಣ್ಣು ಕುರುಡು, ಎನ್ನುತ್ತಿರುವಲ್ಲಿ ಒಬ್ಬ ರಾಜಕುಮಾರ ಅಲ್ಲಿಗೆ ಬಂದು ತಾಂಬೂಲವ ತೆಗೆದು ಯಾರಿಗೂ ಕೊಡದೆ ತಾನೇ ಸೇವಿಸುತ್ತ ಬರುವನ ನೋಡಿ,-ಇವನು ಕೋಮಟಿಗೆ ಜನಿಸಿದವನೆಂದು ಹೇಳಲು ; ಈ ಮಾತುಗಳೆಲ್ಲ ರಾಯ ಕೇಳಿ, ಆಶ್ಚರ್ಯಪಟ್ಟು—ನೀನು ತಿಳಿದ ಬಗೆ ಹೇಗೆ? ಎಂದು ಕೇಳಲಾಗಿ ; ಆವ್ಯಾಪಾರಿ

ಪಾ—2. ಎತ್ತಬಾರದ ಬಾಧೆಯೆನ್ನಲಾಗಿ; ಈ ಸವುದೆಹೊಱೆಯು ಬಾಧಕವಿಲ್ಲ. ನೀನು ಬದುಕಿರಾ.

ಪಾ—3. ಅಭಿರೂಪನೆಂಬ ಮಾರ್ಗಸ್ಥ ಕುಳಿತಿರಲು.

ಪಾ—4. ಸಿಂಧೂರದ ಕಾಂತಿಮತಿ ಎಂಬ ಪಟ್ಟಣದ ವ್ಯವಹಾರಿಕ ದರಿದ್ರ ದೋಷದಿಂದ ನೊಂದು ನಿನ್ನ ಕೀರ್ತಿಪ್ರತಾಪವ ಕೇಳಿ ಬಂದೆನೆಂಬುದ.

ಕೇಳೈಯ ರಾಯನೇ! ಬರುವ ಆನೆ ತನಗೆ ಎಡಗಡೆ ಇರುವ ಮರಗಳ ಮುರಿಯುವುದ ನೋಡಿ ಅದಕ್ಕೆ ಬಲಗಣ್ಣು ಕುರುಡು ಎಂದೆನು. ಆನೆ ಯಾವ ಕಡೆಗೆ ಹೋದರೂ ಸುಮ್ಮನೆ ಕುಳಿತಿರುವುದಕ್ಕೆ ಅವಳು ಹೆಂಗಸು ಎಂದೆನು. ಅವಳು ಆನೆಯ ಮೇಗಣಿಂದ ಕೆಳಗಿಳಿದು ಜಲಬಾಧೆ ಮಾಡಿ ಕೈಯೂರಿ ಎದ್ದುದಕ್ಕೆ ಅವಳು ಗರ್ಭಿಣಿಯೆಂದೆನು. ಈ ರಾಜಕುಮಾರ ಯಾರಿಗೂ ತಾಂಬೂಲ ಕೊಡದೆ ತಾನೇ ಸೇವಿಸುತ್ತ ಬರುವುದಕ್ಕೆ ಕೋಮಟಿಗನಿಗೆ ಉದಿಸಿದವನು, ಎಂದೆನು-ಎಂದ ಮಾತ ಕೇಳಿ, ರಾಯ ಮೆಚ್ಚಿ, ಇಲ್ಲಿಗೆ ಅವನ ಕರೆತಂದು ಒಂಬತ್ತುಕೋಟಿ ದ್ರವ್ಯವ ಕೊಟ್ಟು, ತಾನು ಸುಖವಾಗಿ ದ್ದನು ಎಂದು ಹೇಳಲು—ಭೋಜರಾಯ ಲಜ್ಜಿತನಾಗಿ ತನ್ನ ಅರಮನೆಯ ಹೊಕ್ಕನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಕನಕಾವತಿಯೆಂಬ ಪುತ್ಥಳಿ ಪೇಳಿದ ಇಪ್ಪತ್ತೇಳನೆಯ ಕಥೆ.

೨೮ ನೆಯ ಕಥೆ.

ಇಪ್ಪತ್ತೆಂಟನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾ ರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ಎಂದಿನಂತೆ ಸಿಂಹಾಸ ನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ—ಆ ಸೋಪಾನದ ಅನಂಗಸೇನೆಯೆಂಬ ಪುತ್ಥಳಿಯು ಧಿಕ್ಕರಿಸಲಾಗಿ; ಭೋಜರಾಯನು ಬೇಂಚಿ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲೆ ಪುತ್ಥಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯ ಸುಖ ರಾಜ್ಯಗೆಯ್ಯುವಲ್ಲಿ ಒಂದು ದಿನ ಅಗ್ರಹಾರದ ದೇವಶರ್ಮನೆಂಬ ಬ್ರಾಹ್ಮಣ ದರ್ಭೆಗಳ ನಿಮಿತ್ತವಾಗಿ ಅರಣ್ಯದಲ್ಲಿ ಚರಿಸುತ್ತಿರುವಲ್ಲಿ, ಒಂದು ಬಳಿ ಯಲ್ಲಿ ಒಂಬತ್ತುಕೋಟಿ ದ್ರವ್ಯವ ಕಂಡು, ಅದ ತೆಗೆದುಕೊಂಡು ಹೋಗಿ, ತನ್ನ ಶ್ರಮವ ತೀರಿಸಬೇಕೆಂದು ಯೋಚಿಸಿ, ಅಷ್ಟಱಲ್ಲೇ—ತನ್ನ ಸತಿಯ ಬಾಯಿ ಬಳ್ಳಿಯದಲ್ಲ, ಯಾರ ಸಂಗಡಲಾದರೂ ಹೇಳಿದರೆ ರಾಜರುಗಳಿಂದ

ಉಪಾಧಿ ತಪ್ಪಿತೆಂದು ತನ್ನ ಸತಿಯ ಚಿತ್ತವ ಪರಿಶೋಧಿಸಿ ಬಂದು, ತೆಗೆದು ಕೊಂಡು ಹೋಗುವ—ಎಂದು ಊರಿಗೆ ಬಂದು, ತನ್ನ ಮನೆಯಲ್ಲಿ ಸ್ನಾನದೇವತಾರ್ಚನೆ ಭೋಜನವ ಮಾಡಿ, ಏಕಾಂತದಲ್ಲಿ ತನ್ನ ಸತಿಯ ಸಂಗಡ ಭಿನ್ನ ತಂತ್ರವಾಗಿ ಇಂತೆಂದನು :—ಎಲೌ ಸತಿಯೇ ! ನಾನು ಅರಣ್ಯದಲ್ಲಿ ಬಹಿರ್ಭೂಮಿಗೆ ಹೋದಲ್ಲಿ ಆಸನದಲ್ಲಿ ಒಂದು ಬಿಳಿಯ ಕಾಗೆ ಬಿದ್ದಿತು, ಈ ಮಾತ ಯಾರಿಗೂ ಹೇಳಬೇಡವೆನ್ನಲಾಗಿ ; ಅವಳು ಒಬ್ಬರಿಗೂ ಹೇಳುವುದಿಲ್ಲ ಎಂದು ಪತಿಯ ಕೂಡೆ ಹೇಳಿ, ಆಕ್ಷಣವೇ ನೆರೆಯವರ ಕೂಡೆ ತನ್ನ ಗಂಡನ ಕುಂಡೆಯಲ್ಲಿ ಮೂಱು ಬಿಳಿಯ ಕಾಗೆ ಹುಟ್ಟಿತೆಂದು ಊರಿಗೆಲ್ಲಾ ಹೇಳಿ, ಅದ ಕೇಳಿದವರು ದೇವಶರ್ಮನ ಹೊಟ್ಟೆಯಲ್ಲಿ ನೂಱು ಬಿಳಿಯ ಕಾಗೆ ಹುಟ್ಟಿತೆಂದು ಊರಿಗೆಲ್ಲಾ ಹೇಳಿದ ವರ್ತಮಾನವ ರಾಯ ಕೇಳಿ, ಆತನ ಕರೆತರಿಸಿ—ಎಲೈ ನಿನ್ನ ಗುದದಿಂದ ನೂಱು ಬಿಳಿಯ ಕಾಗೆ ಹುಟ್ಟಿತೆಂದು ಹೇಳುತ್ತಾರೆ. ಇದು ನಿಜವೇ ? ಎನ್ನಲಾಗಿ ; ಆವನು—ಕೇಳೈಯ ರಾಯನೇ ! ಅರಸುಗಳಲ್ಲಿ ಮಿತ್ರರಲ್ಲಿ ಹಿರಿಯರಲ್ಲಿ ಗುರುವಿನಲ್ಲಿ ತಾಯಿತಂದೆಗಳಲ್ಲಿ ಸುಳ್ಳು ಆಡಬಾರದು ಎಂಬ ನೀತಿಯಿರುವುದಱಿಂದ, ನಿನ್ನ ಕೂಡ ಅಬದ್ಧವ ನುಡಿಯಲಾಗದೆಂದು ಇಂತೆಂದನು:—ನನ್ನ ಸತಿಯ ಸಂಗಡ ಒಂದು ಬಿಳಿಯ ಕಾಗೆ ಆಸನದಲ್ಲಿ ಬಿದ್ದಿತೆಂದು ಹೇಳಿದುದುಂಟು. ಅದೇತಕೆಂದರೆ-ಅರಣ್ಯದಲ್ಲಿ ಒಂಬತ್ತು ಕೋಟಿ ನಿಕ್ಷೇಪದ್ರವ್ಯವ ಕಂಡು ಮಱೆಸಿ ಈ ಮೇರೆ ಹೇಳಿದೆನೆಂದು ಹೇಳಲಾಗಿ ; ರಾಯ ಈತನಲ್ಲಿ ಕಪಟವಿಲ್ಲದುದಱಿಂದ ತಾನು ಕಂಡ ಸ್ಥಿತಿ ಹೇಳಿದ. ಯಥಾರ್ಥವಾದಿ-ಎಂದು, ಅವನ ಮಾತ ಕೇಳಿ ಪರಿತೋಷವ ಮಾಡಿಕೊಂಡು, ಅರಣ್ಯದಲ್ಲಿ ಆತ ಕಂಡಿದ್ದ ದ್ರವ್ಯವ ತೆಗೆಸಿ, ಆತನಿಗೆ ಕೊಟ್ಟು ತಾನೂ ಸವಾಲಕ್ಷ ಹೊನ್ನ ಕೊಟ್ಟು ಕಳುಹಿಸಿದನು—ಎಂದ ಮಾತಿಗೆ ಅನಂಗಸೇನೆಯೆಂಬ ಪುತ್ತಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :—

ಕೇಳೈಯ ಚಿತ್ರಶರ್ಮನೇ ! ನಮ್ಮ ಮಹಾರಾಯ ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬ ಯತಿ ಬಂದು ರಾಯನಿಗೆ ಆಶೀರ್ವಾದವ ಮಾಡಲಾಗಿ ; ರಾಯ ನಮಿಸಿ ಕುಳ್ಳಿರಿಸಿಕೊಂಡು—ಎಲ್ಲಿಂದ ಬಂದಿರಿ ? ಎನ್ನಲಾಗಿ ; ಆ ಯತಿ—ಎಲೈ ಮಹಾರಾಯನೇ, ಹಿಮವತ್ಪರ್ವತದಿಂದ

ಬಂದೆನು ? ಎನ್ನಲಾಗಿ ;—ಅಲ್ಲೀನತಿಶಯವೆಂದು ಕೇಳಿದುದಕ್ಕೆ, ಅಲ್ಲಿರುವ ಹಿಮವತ್ಕೇತಾರೇಶ್ವರನ ಗೋಪುರದ ಬಳಿಯಲ್ಲೊಂದು ಕೊಳವಿದೆ. ಅದ ಱಲ್ಲಿ ಸ್ನಾನ ಮಾಡಿದವರ ಆನೆ ನುಂಗುವುದು. ಅದಕ್ಕೆ ತಪ್ಪಿಸಿಕೊಂಡು ಸ್ನಾನಮಾಡಿದರೆ ಹದಿನಾಲ್ಕು ಲೋಕದಲ್ಲಿ ನಡೆವ ವರ್ತಮಾನವೆಲ್ಲಾ ತಿಳಿ ಯುವುದು ಎಂದು ಹೇಳಿದ ಮಾತ ಕೇಳಿ, ರಾಯ ಅದ ನೋಡಲೇಬೇಕೆಂದು. ಆಕ್ಷಣವೇ ಆಕಾಶಮಾರ್ಗದಲ್ಲಿ ಅಲ್ಲಿಗೆ ಹೋಗಿ, ಆ ಕೇತಾರೇಶ್ವರನ ಪೂಜಿಸಿ, ಆ ಕೊಳದಲ್ಲಿ ಸ್ನಾನವ ಮಾಡುವ ಸಮಯದಲ್ಲಿ ಆನೆ ನುಂಗುವು ದಕ್ಕೆ ಬರಲಾಗಿ; ಶೀತಾಳಪತ್ರದಿಂದ ಆನೆಯ ಸೀಳಿ, ಆ ಕೊಳದಲ್ಲಿ ಸ್ನಾನವ ಮಾಡಿ, ಸಕಲಲೋಕದ ವಿದ್ಯೆಯ ತಿಳಿದು, ಅಲ್ಲಿಂದ ಮೇಲಕ್ಕೆ ಬಂದು ನಿಂದಿ ರಲಾಗಿ ; ಆ ಕೇತಾರೇಶ್ವರನು ಪ್ರಸನ್ನನಾಗಿ—ಎಲೈ ರಾಯ ! ನಿನ್ನ ಧೈರ್ಯ ಸಾಹಸಕ್ಕೆ ಮೆಚ್ಚಿದೆನು. ನಿನಗೆ ಬೇಕಾದ ವರವ ಬೇಡು—ಎನ್ನಲಾಗಿ ; ರಾಯನು—ಎಲೈ ದೇವನೇ ! ಈ ಯತಿಗಿಷ್ಟಾರ್ಥವಿತ್ತರೆ ನನಗೆ ಕೊಟ್ಟಂತೆ, ಎನ್ನಲಾಗಿ; ರಾಯನ ಮಾತಿಗಾಗಿ ಆ ಯತಿಗೆ ಇಷ್ಟಾರ್ಥವ ಪಾಲಿಸಿ, ರಾಯನ —ನೀನು ಪರೋಪಕಾರಿಯಹುದೆಂದು ಹೇಳಿ, ಆದೇವನು ಸಕಲ ಕಾಮ್ಯಾ ರ್ಥವೀವುದೊಂದು ರತ್ನವ ಕೊಟ್ಟು, ಅದೃಶ್ಯವಾದನು. ರಾಯ ಆ ರತ್ನವ ತೆಗೆದುಕೊಂಡು,—ಆ ಯತಿಯ ಸುಖವಾಗಿರುತ್ತಿರಿ ಎಂದು ಹೇಳಿ, ಅಲ್ಲಿಂದ ಬರುವ ದಾರಿಯಲ್ಲಿ ಒಬ್ಬ ಅರಸು ರಾಜ್ಯಭ್ರಷ್ಟನಾಗಿ ಬರುವುದ ಕಂಡು— ನೀನು ಯಾವ ದೇಶ ? ಎಲ್ಲಿಗೆ ಹೋಗುವೆ ? ಎಂದು ಕೇಳಲಾಗಿ ; ರಾಯನಿಗೆ ತಾನು ಶರಣಾಗತನಾಗಿ—ನಾನು ಕುಂತಲದೇಶದರಸು, ಎಂದು ತನ್ನ ವೃತ್ತಾಂ ತವ ವಿವರಿಸಲಾಗಿ ; ರಾಯ ಮರುಗಿ ದೇವ ತನಗೆ ಕೊಟ್ಟಿದ್ದ ಸಕಲ ಕಾಮ್ಯಾರ್ಥವೀವ ರತ್ನವ ಆ ಅರಸಿಗೆ ಕೊಟ್ಟು,—ಈ ರತ್ನ ಏನು ಬಯಸಿ ದಾಗ್ಯೂ ಕೊಡುವುದೆಂದು ಹೇಳಿ, ಆತನ ಸಂತೈಸಿ ಕಳುಹಿಸಿ, ತಾನು ಇಲ್ಲಿಗೆ ಬಂದು ಸುಖವಾಗಿದ್ದನು,—ಎಂದು ಹೇಳಲು, ಭೋಜರಾಯನು ಅಪ್ರಯೋ ಜಕನಾದೆನೆಂದು ಖಿನ್ನನಾಗಿ ತನ್ನ ಅರಮನೆಯ ಸೇರಿಕೊಂಡನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಅನಂಗಸೇನೆಯೆಂಬ ಪುತ್ತಳಿ ಪೇಳಿದ ಇಪ್ಪತ್ತೆಂಟನೆಯ ಕಥೆ.

೨೯ ನೆಯ ಕಥೆ.

ಇಪ್ಪತ್ತೊಂಬತ್ತನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು, ಎಂದಿನಂತೆ ಸಿಂಹಾಸನದ ಬಳಿಗೆ ಬಂದು, ಬಲಗಾಲ ನೀಡುವ ಸಮಯದಲ್ಲಿ—ಆ ಸೋಪಾನದ ಸಂಧ್ಯಾವತಿಯೆಂಬ ಪುತ್ತಳಿಯು—ಹೋ!ಹೋ! ಎಂದು ಧಿಕ್ಕರಿಸಲಾಗಿ ; ಭೋಜರಾಯನು ಖಿನ್ನನಾಗಿ, ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಹೇಳಿಸಿದ ಕಥೆ :—

ಎಲೆ ಪುತ್ತಳಿಯೆ ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯ ಗೆಯ್ಯುವಲ್ಲಿ—ನೆರೆಜಾಣರುಂಟೋ ಇಲ್ಲವೋ ತಿಳಿಯಬೇಕೆಂದು, ಸೀಮೆ ಗ್ರಾಮಾಂತರಗಳಿಗೆಲ್ಲಾ—[1]ಸತ್ತವನ ಕೈರಸವ[1] ಸೀನೀರಿನ ಬಾವಿಯ ಸಹ ಕಳುಹಿಸುವುದೆಂದು ನಿರೂಪಗಳಲ್ಲಿ ಬರೆಯಿಸಿ, ಊಳಿಗದವರ ಕೈಯಲ್ಲಿ ಕೊಟ್ಟು ಕಳುಹಿಸಲಾಗಿ ; ಆ ಊಳಿಗದವರು ಗ್ರಾಮಗ್ರಾಮಕ್ಕೆ ಹೋಗಿ, ಆ ನಿರೂಪಗಳ ಕೊಟ್ಟುದ ನೋಡಿ, ಬರೆದಿರುವ ಬಕ್ಕಣೆಗೆ ಯಾರೂ ಉತ್ತರವ ಕೊಡದೆ ಇರುವ ಕಾರಣ, ಪ್ರವೀಣವೀರಪಟ್ಟಣದ ವಚನಶೂರ ಕಂಡು ರಾಯನ ನಿರೂಪವ ತೆಗೆದುಕೊಂಡು, ಬಕ್ಕಣೆಯ ಓದಿನೋಡಿ [2](ರಸ) ವೆಂಬುದು[2] ಲವಣ, ಸತ್ತವನೆಂದರೆ ದರಿದ್ರನು ಎಂದು ನಿಶ್ಚೈಸಿ, ಬಾವಿಗೆ ಉತ್ತರತೋಱದೆ ಆಗ ಒಬ್ಬ ದರಿದ್ರನ ಕರೆತಂದು ಅವನ ಕೈಯಲ್ಲಿ ಉಪ್ಪುಕೊಟ್ಟು, ಬದಲು ಬಿನ್ನವತ್ತಲೆಯಲ್ಲಿ—ತಮ್ಮ ಅಪ್ಪಣೆ ಮೇರೆಗೆ ಸತ್ತವನ ಕೈರಸ ಕಳುಹಿಸಿದ್ದೇನೆ. ಬಾವಿಸಿ ಕಳುಹಿಸುವೆನೆಂದರೆ ಬಾವಿ ಬಹು ಅಗಡಾಗಿ ಇದೆ. ತಮ್ಮ ಸನ್ನಿಧಿಯಲ್ಲಿ ಸ್ವಾದಾಗಿರುವ ಬಾವಿಯ ನನ್ನ ಮೇಲೆ ಕಟಾಕ್ಷವಿಟ್ಟು ಇಲ್ಲಿಯ ತನಕ ಕಳುಹಿಸಿಕೊಟ್ಟರೆ, ಆ ಎರಡೂ ತೆಕ್ಕೆಯಹಾಕಿ ಕಳುಹಿಸುತ್ತಲಿದ್ದೇನೆ ಎಂದು ಅದಱಲ್ಲಿ ಬರೆದುಕೊಟ್ಟು ಕಳುಹಿಸಲು ; ಹಾಗೆ ಬರೆದಿರುವ ಬಿನ್ನವತ್ತಲೆಯ ರಾಯ ಓದಿಸಿ, ಕೇಳಿ, ಸಂತೋಷಪಟ್ಟು—ಇಂಥ ಚತುರತೆಯುಳ್ಳವನು ನಮ್ಮ ಬಳಿಯಲ್ಲಿ ಇರಬೇಕೆಂದು, ಅವನ ಕರೆಸಿ, ಸಮ್ಮುಖದಲ್ಲಿ ಇರಿಸಿಕೊಂಡು

ಪಾ—1. ಸತ್ತವನಕೈಯಲ್ಲಿ ಸರ್ಪರಸವ. 2. ಸರ್ಪರಸ, ಸರ್ಪಬಾವಿಯನ್ನೂ.

ಕಾಪಾಡಿದನೆಂದುದಕ್ಕೆ ಸಂಧ್ಯಾವಳಿಯೆಂಬ ಪುತ್ಥಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ :—

ಕೇಳೈಯ ಚಿತ್ರವರ್ಮನೇ ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದು ದಿನ ಒಬ್ಬಳು ಹೆಣ್ಣು ಬಂದಳು. ಅವಳು ಹೇಗಿದ್ದಳೆಂದರೆ— ಚಿನ್ನದಂತೆ ದೇಹ, ಕಮಲದಂತೆ ಮೊಗು, ಚಕ್ರವಾಕಪಕ್ಷಿಯಂತೆ ಕುಚ, ಹಂಸೆಯಂತೆ ನಡೆ, ಸಿಂಹದಂತೆ ನಡು, ಕುಮುದದಂತೆ ನೇತ್ರ, ದುಂಬಿಯಂತೆ ಮುಂಗುರುಳು ; ದೃಷ್ಟಿ ಚಂಚಲಿಸುತ್ತ ಬಂದು ರಾಯನ ಎದುರಾಗಿ ನಿಂತು ಕೈಮುಗಿದು ಇಂತೆಂದಳು :— ಕೇಳೈಯ ಮಹಾರಾಯನೇ ! ಬಾಹ್ಲೀಕ ದೇಶದ ಪುಂಡರೀಕಪಟ್ಟಣದ ಕುಮುದ್ವತಿಯೆಂಬ ಮೋಹನಾಂಗಿ ನಿನ್ನ ರೂಪ ಸ್ವಪ್ನದಲ್ಲಿ ಕಂಡು ಕಾತರಿಸುತ್ತ ನಿನ್ನಮೇಲಣ ವ್ಯಾಮೋಹದಿಂ[1] ದಿರುವುದ ಕಂಡುಅಲರಂಬನು ಪೀಡಿಸುತ್ತಿರಲಾಗಿ, ಅವಳು ಪರವಶದಿಂದ ಒಂಬತ್ತನೆಯ ಅವಸ್ಥೆಗೊಳಗಾಗಲಾಗಿ; ಅವಳಿಗೆ ತಳಿರ ಹಾಸಿಗೆ ಪನ್ನೀರು ಮೊದಲಾಗಿ ಶೈತ್ಯೋಪಚಾರಗಳ ಮಾಡಿದಾಗ್ಯೂ ವಿರಹೋದ್ರೇಕವಾಗಿ, ಚಂದ್ರಕಿರಣದಿಂದ (ಅತಿ ಕಷ್ಟದ) ಅವಸ್ಥೆ ಹೊಂದಿರುವಳು.[1] ನೀನು ಅಗತ್ಯವಾಗಿ ಈಕ್ಷಣವೇ ದಯೆಗೈಯಬೇಕು. ತಾಮಸಮಾಡಿದರೆ ಜೀವ ಹೋಗುವುದೆಂದು ಪೇಳಿದುದ—ರಾಯ ಕೇಳಿ, ಕರುಣವ ತಾಳಿ, ಭಟ್ಟಿಸಹಿತವಾಗಿ ಹೊರಟು, ಆಕಾಶಮಾರ್ಗದಲ್ಲಿ ಅಲ್ಲಿಗೆ ಹೋಗಿ ಇರಲಾಗಿ ; ಅವಳ ದೂತಿಯು ಹೋಗಿ ರಾಯ ಬಂದ ವರ್ತಮಾನವ ಪೇಳಿದುದಕ್ಕೆ, ಆ ಕುಮುದ್ವತಿಯು ಸಂಭ್ರಮದಿಂದ ಆಗ ಮಡಿಯ ಕಟ್ಟಿ ಅಲಂಕೃತಳಾಗಿ, ಸಾಯಂಕಾಲವಾದ ಬಳಿಕ ತನ್ನ ದೂತಿಯ ಕಳುಹಿಸಿ, ರಾಯನ ಕರೆಸಿಕೊಂಡು, ಆ ರಾತ್ರಿ ರಾಯನೊಡನೆ ಸುಖದಿಂದಿದ್ದು ಬಳಲಿ ನಿದ್ರೆಗೈದು ಬೆಳಗಾದ ಬಳಿಕ, ಎದ್ದು, ರಾಯ ಭಟ್ಟಿಯ ಬಳಿಗೆ ಬಂದು, ತನ್ನ ಬಾಯಿಸಿಂದ—ಕುಮುದ್ವತಿ ಏನು ಕೇಳಿದರೂ ಕೊಡುವೆನೆಂದು ಎಂದ ಮಾತಿಗೆ ಭಟ್ಟಿಯಿಂತೆಂದನು:—ಕೇಳೈಯ ರಾಯನೇ! ಸ್ತ್ರೀಯರ ನಂಬಲಾಗದು, ಅವರ ಮನಸ ಕಾಣಕೂಡದು, ಅದುಕಾರಣ ಇದೆಲ್ಲಾ [2]ಕಾರ್ಯಕಾರಣವೆಂದು[2] ಹೇಳಿದ ಮಾತನುಲ್ಲಂಘಿಸಿ, ಮತ್ತೊಂದು ದಿನ

ಪಾ—1. ಬೇಗುದಿಯಾಗಿ ದಿವಾರಾತ್ರಿಯಲ್ಲೂ ನಿಮ್ಮ ಸ್ಮರಣೆಯ ಮಾಡುತ್ತ ಕಡೆಮೆಯ ಅವಸ್ಥೆಯ ಮರೆದಿರುವಳು. 2. ಕಾರ್ಯವಾಶಿಯದಪ್ಪದು.

ರಾಯ ಅವಳಲ್ಲಿ ಹೋಗಿ ಬೆರೆದುಬರುವಾಗ—ಕುರುಳು ಬೆರಳ ಕೇಳಲಾಗಿ, ಎರಡನೂ ತೆಗೆದು ಕೊಟ್ಟುದ ರಾಯ ತೆಗೆದುಕೊಂಡು ಬಂದು, ಭಟ್ಟಿಗೆ ತೋಱಿ—ಅವಳ ಸಂಚಲಾಗದು ಎಂದೆಯಲ್ಲ! ಎನ್ನಲಾಗಿ ; ಭಟ್ಟಿ—ಎಲೈ ರಾಯನೇ ! ಸಕಲವ ತಿಳಿದಿರುವಲ್ಲಿ ರಾಜೋತ್ತರಕ್ಕೆ ಪ್ರತ್ಯುತ್ತರವುಂಟೆ, ಎನ್ನಲಾಗಿ ; ಮತ್ತಿಂತೆಂದನು:—ನಾರಿಯ ಚಿತ್ತ, ಕುದುರೆಯ ಹೃದಯ, ಮಿಂಚಿನೋಟ, ಮಂಜಿನಡಿ, ಸುರಚಾಪದ ನೆಲೆ-ಇವ ತಿಳಿಯುವುದಕ್ಕೆ ಹರಿಹರಬ್ರಹ್ಮಾದಿಗಳಿಗಾಗದು ಎಂದು ಹೇಳಲು ; ಭಟ್ಟಿಯ ರಾಯ ಜಱಿದು, ಅವಳ ಗುಣವ ತೋಱುವೆನೆಂದು, ಬಱಿದೆ ದೇಹಕ್ಕೆ ಲಘುವಿಲ್ಲವೆಂದು ಮೂಱುನಾಲ್ಕು ದಿನ ಹೋಗದೆ ಇದ್ದು, ಐದನೆಯ ದಿವಸ ರಾತ್ರಿ ಯೋಗಾಭ್ಯಾಸದಿಂದ ಪರಮಾತ್ಮನ ಬ್ರಹ್ಮರಂಧ್ರದಲ್ಲಿ ನಿಲ್ಲಿಸಿ ನಿರ್ಜೀವಿಯಾಗಿ ಮಲಗಿರುವ ರಾಯನ ಅವಳು ನೋಡಿ, ಏಳಿಸಿ ಮಾತನಾಡಿಸಿದರೂ ಏಳದೆ ಮಾತನಾಡದೆ ಮಲಗಿರುವುದಕ್ಕೆ ಕೆಟ್ಟೆನೆಂದು ವ್ಯಾಕುಲಪಡುತ್ತ, ಇಂತಪ್ಪ ಕಾಂತನಾದ ರಾಯ ಹೋದ ಬಳಿಕ ಸಹಗಮನವೇ ಸರಿ ಎನುತ್ತ ಕೊಂಡವ ತೆಗೆಸಿ, ಬೆಂಕಿಯ ಹಾಕಿಸಿ, ಅದಱಲ್ಲಿ ಬೀಳುವ ವೇಳೆಯಲ್ಲಿ, ಪ್ರಾಣ ಬಂದಂತೆ ರಾಯ ಎದ್ದು, ಕಣ್ಣ ತೆಱೆದು, ಅವಳ ಮುಖವ ನೋಡಲಾಗಿ ; ಅವಳು ಅತಿಹರ್ಷದಿಂದ ಈರ್ವರೂ ಆಲಿಂಗಿಸಿ ಅವಳ ಸಂತೈಸಿ ಅಲ್ಲಿಂದ ಭಟ್ಟಿಯ ಬಳಿಗೆ ಬಂದು, ನಡೆದ ವೃತ್ತಾಂತವ ಪೇಳಲಾಗಿ ; ಭಟ್ಟಿಯು—ಎಲೈ ರಾಯನೇ ! ಇನ್ನು ಹೇಳುವೆ ಕೇಳು, ನೀರಿನಲ್ಲಾದರೂ ಮೀನಿನ ಅಡಿ ಕಾಣಬಹುದು, ಸ್ತ್ರೀಯರ ಚಿತ್ತವ ಕಾಣಕೂಡದು, ಎನ್ನಲು ; ರಾಯ—ನಿನ್ನ ಮನಸೊಪ್ಪುವ ರೀತಿಗೆ ಪರೀಕ್ಷೆ ಕೊಡುವೆನೆಂದು ಭಟ್ಟಿಯೊಡನೆ ಪೇಳಿ, ಮತ್ತೊಂದು ದಿನ ಅವಳಲ್ಲಿ ಹೋಗಿ ಕ್ರೀಡಾವಿಲಾಸದಿಂದ ಸುಖಿಸಿ, ಆ ಬಳಿಕ ಬಱಿಯ ಕಲಹವ ತೆಗೆದು ಕೋಪಿಸಿಕೊಂಡು ಹೊಱಟು ಬರಲಾಗಿ ; ಅವಳು ರಾಯನ ಹಿಂದೆ ಬರುವಲ್ಲಿ ಮಾರ್ಗದಲ್ಲಿ ಕಾಡುಗಿಚ್ಚು ಹತ್ತಿ ಉರಿಯುವುದ ಕಂಡು ರಾಯ ಅಗ್ನಿಸ್ತಂಭ ಕಲಿತಿರುವುದಱಿಂದ ಆ ಕಿಚ್ಚಿನಲ್ಲಿ ಹೊಕ್ಕು ಮಱೆಯಾಗಲಾಗಿ ; ಅವಳು ಆ ಕಿಚ್ಚಿನಲ್ಲಿ ಹೊಕ್ಕುದ ಕಂಡು, ಅಲ್ಲಿಗೆ ಬಂದು ರಾಯನ ಕಾಣದೆ,—ರಾಯನೆಲ್ಲಿ ? ಎಂದು ಭಟ್ಟಿಯು ಕೇಳಲಾಗಿ ; ರಾಯ ಕಿಚ್ಚಿನಲ್ಲಿ ಬಿದ್ದು ಸತ್ತನೆಂದು ಹೇಳಲಾಗಿ ; ಭಟ್ಟಿಯು ಪೇ

ಳಿದ ಮಾತ ಕೇಳಿ, ಆ ಕಿಚ್ಚಿನಲ್ಲಿ ಅವಳು ಬಿದ್ದು ಹೋದುದ ರಾಯ ಕಂಡು,—ಕಾಂತೆ ಹೋದಳೇ! ಎಂದು ಅವಳ ಗುಣವ ಆಡುತ್ತ, ರಾಯನು—ಎಲೆ ಕಾಂತೆಯೇ! ನಿನ್ನ ನಿರ್ಧಾರದ ನಡತೆಗೆ ಮೆಚ್ಚಿದೆ, ನಿನಗೇನು ಬೇಕಾದರೂ ಕೊಡುವೆನು ಕೇಳಿಕೋ ಎನ್ನಲಾಗಿ; ತನ್ನ ಜೀವವ ಪಡೆದುದ ಕಂಡು, ಅವಳು ಮುಗುಳುನಗೆಯಿಂದ ತೋರಣಗಂಭದಲ್ಲಿ ಒಬ್ಬ ಭೈರವ ಜೋಗಿ ಶೂಲದಲ್ಲಿರುವನು, ಅವನ ಪ್ರಾಣ ತಂದುಕೊಡಬೇಕು ಎಂದುದಕ್ಕೆ, ರಾಯ—ಅವನು ಯಾರು? ಎನ್ನಲಾಗಿ; ಆತ ನನ್ನ ಪತಿಯಾಗಬೇಕೆಂದ ಮಾತ ಕೇಳಿ, ಭಟ್ಟಿಯು ಹೇಳಿದ ಮಾತು ಸರಿ ಬಂದಿತು ಎಂದು ಯೋಚಿಸುವಲ್ಲಿ; ಅದ ಭಟ್ಟಿಯು ತಿಳಿದು—ರಾಯನೊಡನೆ ಇಂತೆಂದನು:—ಕೇಳೈಯ ರಾಯನೇ! ನಿನ್ನ ಸಾಹಸ ಪರಾಕ್ರಮ ಉದಾರಗುಣ ಲೋಕವಿಖ್ಯಾತಿಯಾಗಿರುವುದ ಕೇಳಿ, ಇವಳು ತನ್ನ ಕಾರ್ಯಕ್ಕೋಸ್ಕರ ನಿನ್ನ ಕನಸಿನಲ್ಲಿ ಕಂಡೆನೆಂದು ಕಪಟದಿಂದ ತನ್ನ ದೂತಿಯ ಕೂಡೆ ಹೇಳಿ ಕಳುಹಿಸಿ, ನಿನ್ನ ಬರಮಾಡಿಕೊಂಡು, ಅಲ್ಲಿ ತಾನು ನಿನ್ನಲ್ಲಿ ವಶೀಕರವಾದಂತೆ ತೋಱಿಸಿ, ವ್ಯಾಮೋಹ ಹುಟ್ಟಿಸಿ, ಪ್ರಾಣಪರ್ಯಂತರ ಮೆಚ್ಚಿಸಿ, ತನ್ನ ಕಾರ್ಯ ಸಾಧಿಸಿಕೊಂಡಳು-ಎಂದು ಪೇಳಿದ ವಾಕ್ಕಿಗೆ ರಾಯನೊಡಂಬಟ್ಟು, ಮಾತಿಗೆ ತಪ್ಪಬಾರದೆಂದು, ಇವಳ ಕಪಟದ ಮಾತ ಸಲ್ಲಿಸಿ ಕೊಡುವ ಬಾರೆಂದು ಭಟ್ಟಿಯು ಸಹಿತ ಅವಳ ಕರೆದುಕೊಂಡು, ಟೀಚರದಲ್ಲಿ ನೀಲಾವತಿಯೆಂಬ ಪಟ್ಟಣವ ಅಂಬಿಕಾದೇವಿಯ ಗುಡಿಯ ಮುಂದಣ ತೋರಣಗಂಭದ ಶೂಲದ ಬಳಿಗೆ ಹೋಗಿ, ಆ ಶೂಲದಲ್ಲಿದ್ದವನ ಸಂಜೀವನ ವಿದ್ಯದಿಂದ ಬದುಕಿಸಿ, ತನಗೊಲಿದವಳು ಅನ್ಯವಶವಾದಳೆಂಬ ವಿರೋಧವಿಲ್ಲದೆ ಅವನಿಗೆ ಕೋಟಿ ದ್ರವ್ಯವ ಕೊಟ್ಟು, ಸುಖವಾಗಿರಿ ಎಂದು ಹೇಳಿ, ಅಲ್ಲಿಂದ ಭಟ್ಟಿ ಸಹಿತ ಇಲ್ಲಿಗೆ ಬಂದು ತಾನು ಸುಖವಾಗಿ ಇದ್ದನು—ಎಂದು ಹೇಳಲು; ಭೋಜರಾಯನು ಶಿರವ ಬಾಗಿಸಿಕೊಂಡು ತನ್ನ ಅರಮನೆಗೆ ಹೊಕ್ಕನು.

ಇಂತು ಕರ್ಣಾಟಕಭಾಷಾ ವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಸಂಧ್ಯಾವತಿಯೆಂಬ ಪುತ್ತಳಿ ಪೇಳಿದ ಇಪ್ಪತ್ತೊಂಬತ್ತನೆಯ ಕಥೆ.

ಮೂವತ್ತನೆಯ ಕಥೆ.

ಮೂವತ್ತನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ಎಂದಿನಂತೆ ಸಿಂಹಾಸನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ, ಆ ಸೋಪಾನದ ಕಾಮಕರ್ಣಿಕೆಯೆಂಬ ಪುತ್ತಳಿಯು—ಹೋಹೋ ನಿಲ್ಲು ನಿಲ್ಲು ! ಎಂದು ಧಿಕ್ಕರಿಸಲಾಗಿ ; ಭೋಜರಾಯನು ಲಜ್ಜಿತನಾಗಿ ಜೇಱಿ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ :–

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖದಿಂದ ರಾಜ್ಯಗೆಯ್ಯುವಲ್ಲಿ ಬಂದು ದಿನ ಆ ಪುರದ ವಿಕ್ರಮನೆಂಬ ವೀರನು ಬಹುದರಿದ್ರನಾಗಿ ಸತಿಸುತರ ಸಾಕಲಾಱದೆ ಬಂದು ದಿನ ಊರಮುಂದಿರುವ ಭೈರವನ ಗುಡಿಗೆ ಹೋಗಿ, ಆ ದೇವರ ಷೋಡಶೋಪಚಾರದಿಂದ ಪೂಜಿಸಿ, ಕೊರಲಿಗೆ ಗಂಡುಗತ್ತರಿಯ ಹಾಕಿಕೊಂಡು ಶಿರವ ಕತ್ತರಿಸುವ ವೇಳೆಯಲ್ಲಿ ಆ ಭೈರವನು ಪ್ರಸನ್ನನಾಗಿ—ನಿನಗೆ ಬೇಕಾದ ವರವ ಕೇಳಿಕೋ ಎನ್ನಲಾಗಿ ; ಅವ ತನ್ನ ದರಿದ್ರವ ಬಿಡಿಸಿ ಸಕಲೈಶ್ವರ್ಯ ಪಾಲಿಸೆಂದು ಬೇಡಿದುದಕ್ಕೆ—ಆ ದೇವ ತನ್ನ ಕೈಯಲಿದ್ದ ಡಮರುಗವ ಕೊಟ್ಟು—ಇದು ನೀನು ಕೇಳಿದುದ ಕೊಡುವುದು, ನಿನ್ನ ನೆರೆಮನೆಯವರಿಗೆ ನಿನಗಿಂತ ಭಾಗ್ಯ ಹೆಚ್ಚಾಗಿ ಬರುವುದು ; ಅವ ಕಂಡು ನೀನು ವ್ಯಸನಪಡಬೇಡ—ಎಂದು ಹೇಳಿ ಕಳುಹಿಸಲಾಗಿ ; ಅವನು ಡಮರುಗವ ತೆಗೆದುಕೊಂಡು, ತನ್ನ ಮನೆಗೆ ಬಂದು ನೆರೆಮನೆಯವರಿಗೆ ನನಗಿಂತ ಮಿಗಿಲಾಗಿ ಭಾಗ್ಯಬಂದರೆ ನಾನು ಹೇಗೆ ಸೈರಿಸಲಿ ಎಂದು ತನಗೆ ಹತ್ತು ವರಹ ಬರಲೆಂದು ಆ ಡಮರುಗವ ಬಡಿದು ಭಜಿಸಲಾಗಿ ; ನೆರೆಯವರಿಗಿಪ್ಪತ್ತು ತನಗೆ ಹತ್ತು ವರಹ ಬಂದುದ ತಿಳಿದು, ತನಗೆ ಇಪ್ಪತ್ತು ವರಹ ಬರಲಿ ಎಂದು ಮಿಡಿದುದಕ್ಕೆ ನೆರೆಯವರಿಗೆ ನಾಲ್ವತ್ತು ವರಹ ತನಗೆ ಇಪ್ಪತ್ತು ವರಹ ಬರಲಾಗಿ ; ಈ ಮೇರೆ ಆ ಡಮರುಗವ ಮಿಡಿಯುತ್ತ ನೂಱಾಱು ಕೋಟಿದ್ರವ್ಯವುಂಟಾಗಿ ನೆರೆಯವರಿಗೆ ಬಂದಕ್ಕರಡಾಗಿರುವುದ ಕಂಡು, ಅವರ ಕೆಡಿಸುವ ಯೋಚನೆಯ ಪ್ರತಿನಿತ್ಯ ಮಾಡುವುದ ಅವನ ಸತಿಸುತರು ತಿಳಿದು,—ಅವರವರ ಪುಣ್ಯದಿಂದ ನೆರೆಹೊರೆಯು

ಬದುಕಿದರೆ ನೀನೇಕೆ ವ್ಯಸನ ಪಡುವೆ? ಲೋಕದಲ್ಲಿ ಸಕಲರೂ ಬದುಕುವುದ ಎಣಿಸಬೇಕಲ್ಲದೆ ಕೇಡ ಯೋಚಿಸಬಾರದೆಂದು ನುಡಿದು, [1]ಅದೇಲಾದರೂ ಹೇಗೆಂದರೆ[1] "ಸ್ವಾದೂದಕವಾದ ನದಿಗಳು, ಕೆರೆಗಳು ಪರೋಪಕಾರಕ್ಕಾಗಿ ಇರುವುದಲ್ಲದೆ ತಮ್ಮ ರುಚಿಯ ತಾವು ತಿಳಿಯಲಿಲ್ಲ; ತರುಗಳು ಪರೋಪಕಾರಕ್ಕಾಗಿ ಫಲ ಬಿಡುವುವಲ್ಲದೆ ತಮ್ಮ ಹಣ್ಣ ತಾವು ತಿನ್ನಲಿಲ್ಲ; ಪಶುಗಳು ಪರೋಪಕಾರಕ್ಕಾಗಿ ಹಾಲ ಕೊಡುವುವಲ್ಲದೆ ತಮ್ಮ ಹಾಲ ತಾವು ಕುಡಿಯಲಿಲ್ಲ; ಸತ್ಪುರುಷರು ಪರೋಪಕಾರಕ್ಕಾಗಿ ತಾವು ಬದುಕುವರು" ಎಂಬ ನೀತಿಯಿರುವುದ ತಿಳಿದು ಪರರು ಬದುಕುವುದಕ್ಕೆ ಸಂತೋಷಪಡಬೇಕಲ್ಲದೆ, ಹೀಗೆ ಸಂಕಟಪಡಬಾರದೆಂದು ಹೇಳಿದ ಸತಿಸುತರ ಜರಿದು, ನೆರೆಯವರು ಕೆಡುವ ಯೋಚನೆ ಮಾಡಿದನು. ಅದೇನೆಂದರೆ—ತಾನು ಸಂಪಾದಿಸಿದ ದ್ರವ್ಯ ಯಾವತ್ತು ನೆರೆಯವರದೂ ಹೋಗಲೆಂದು ಡಮರುಗವ ಮಿಡಿಯಲಾಗಿ, ಆಗ ನೆರೆಯವರ ಭಾಗ್ಯವೆಲ್ಲಾ ಹೋದುದ ಕಂಡು, ಬಳಿಕ ತನ್ನ ಕಣ್ಣು ಕಾಲು ಹೋಗಲೆಂದು ಡಮರುಗವ ಮಿಡಿಯಲಾಗಿ, ನೆರೆಯವರ ಕಣ್ಣು ಕಾಲು ಹೋಗಲಾಗಿ, ಈ ವರ್ತಮಾನವ ರಾಯನು ಕೇಳಿ, ಆ ವಿಕ್ರಮವೀರನ ಕರೆಯಿಸಿ,—ನೆರೆಯವರಿಗೇನು ಕೃತ್ರಿಮ ಮಾಡಿದೆ ಹೇಳು ಎನ್ನಲಾಗಿ; ಅವನು—ಕೇಳ್ಳೆಯ ರಾಯನೇ! ಪರರು ಬದುಕುತ್ತ ಇದ್ದರೆ ನಾನು ನೋಡಿ ಸೈರಿಸಲಾರೆ. ಅದುದರಿಂದ ನಾನು ಇಂಥ ಮಾಯ ಮಾಡಿದೆನೆಂದು ತನ್ನ ಗುಣವ ರಾಯನೊಡನೆ ಮರೆಯದೆ ಹೇಳಿದ ಮಾತಿಗೆ ರಾಯನು ಮೆಚ್ಚಿ, ಅವನಿಗೆ ಸವಾಲಕ್ಷ ದ್ರವ್ಯವ ಕೊಟ್ಟು ಮುಂದೆ—ಇನ್ನು ಇಂಥ ದುರ್ಬುದ್ಧಿ ಯೋಚಿಸದಿರು ಎಂದು ಬುದ್ಧಿಯ ಕಲಿಸಿ, ಮನ್ನಿಸಿ, ಕಳುಹಿದನು—ಎಂದ ಮಾತಿಗೆ ಕಾಮಕರ್ಣಿಕೆಯೆಂಬ ಪುತ್ತಳಿಯು ನಗುತ್ತ ಹಾಸ್ಯಗೆಯ್ದು ಹೇಳಿದ ಉಪಕಥೆ :—

ಕೇಳ್ಳೆಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಈ ರಾಜ್ಯವ ಪಾಲಿಸುವ ವೇಳೆಯಲ್ಲಿ ಒಂದು ದಿನ ಉಜ್ಜಿನಿ ಪಟ್ಟಣದಲ್ಲಿ ವಾಸವಾಗಿರುವ ಪಾಂಚಾಲ ದೇಶದ ವರ್ತಕನಾದ ಭದ್ರಸೇನನ ಪತ್ನಿ ತನ್ನ ತಮ್ಮನಾದ ಜಯಪಾಲನ ಕರೆದು ಚಿನ್ನದ ವ್ಯಾಪಾರವ ಮಾಡೆಂದು ಸಾವಿರ

ಪಾ—1. ಮತ್ತಿಂತೆಂದರು ಲೋಕದಲ್ಲಿ.

ವರಹವ ಕೊಡಲಾಗಿ ; ಅವನು ಆ ಹಣವ ತೆಗೆದುಕೊಂಡು ಬಂದು ಪೇಟೆ ಪೇಟೆ ತಿರಿಗಿ ಯಾರೂ ಕೊಳ್ಳದಿರಲಾಗಿ ; ಆ ಸಮಯಕ್ಕೆ ಆ ಪಟ್ಟಣದೊಳೊಬ್ಬ ಕಾಲಜ್ಞಾನಿಯೆಂಬುವನು ಒಂದು ಚೀಟಿನಲ್ಲಿ "ನದಿಯ ಫಲ, ವೃಕ್ಷದ ಫಲ, ಭೇರಿಯ ಫಲ, ಉದ್ದಿನ ಹಿಟ್ಟು, ಹೆತ್ತ ತುಪ್ಪ ಇರುವುದು" ಎಂದು ಬರೆದು, ಈ ಚೀಟಿ ಯಾರಾದರೂ ಸಾವಿರ ವರಹಕ್ಕೆ ತೆಗೆದುಕೊಳ್ಳರೆಂದು ಪೇಟೆ ಕೋಟೆಯಲ್ಲಿ ಸಾರುತಿದ್ದನು. ಯಾರೂ ತೆಗೆದುಕೊಳ್ಳದಿರುವುದ ಜಯಪಾಲನು ಕಂಡು ತಮ್ಮ ಅಕ್ಕ ತನಗೆ ವ್ಯಾಪಾರಕ್ಕೆ ಕೊಟ್ಟದ್ದ ಸಾವಿರ ವರಹವ ಕೊಟ್ಟು ಆ ಚೀಟಿ ಕೊಂಡುಕೊಂಡ ಸುದ್ದಿಯ ಭದ್ರಸೇನ ಕೇಳಿ, ಅವನ ಕರೆಸಿ, ಬೈದು,—ಎಲ್ಲಾದರೂ ಹೋಗು ಎಂದು ಊರಬಿಟ್ಟು ಹೊಱಡಿಸಲಾಗಿ ; ಅವನು ಅಲ್ಲಿಂದ ಅನೇಕ ವ್ಯಸನ ಪಡುತ್ತ ಒಬ್ಬನೆ ಬಂದು ದಾರಿಯಲ್ಲಿ ಹೋಗುವಲ್ಲಿ, ಅಲ್ಲೊಂದು ನದಿಯ ಕಂಡು ಸ್ನಾನವ ಮಾಡಿ ತಡಿಯಲ್ಲಿ ಕುಳಿತಿರುವಲ್ಲಿ—ಒಂದು ನಿಕ್ಷೇಪದ ಬಿಂದಿಗೆ ಆ ನದಿಯಲ್ಲಿ ತೇಲಿ ಬಂದುದಱಿಂದ ಅದ ಕಂಡು ಈಚೆಗೆ ತೆಗೆದುಕೊಂಡು ಕೈಯಲಿದ್ದ ಚೀಟಿ ನೋಡಿಕೊಂಡು ನದಿ ಫಲವಾಗುವುದೆಂದು ಬರೆದಿರುವುದ ತಿಳಿದು, ಅದಱಿಂದಿದು ಸಿಕ್ಕಿತೆಂದು ಆ ಬಿಂದಿಗೆಯ ತೆಗೆದುಕೊಂಡು ಅಲ್ಲಿಂದ ಮುಂದಕ್ಕೆ ಹೋಗುವಲ್ಲಿ—ದಾರಿಯಲ್ಲಿ ಒಂದು ವೃಕ್ಷದ ಕೆಳಗೆ ಕಳ್ಳರು ಕದ್ದು ತಂದ ಹಣ ಒಡವೆ ವಸ್ತುಗಳ ಹಂಚಿಕೊಳ್ಳುತಿರುವಲ್ಲಿ ಜಯಪಾಲನ ಕಂಡು ಯಾವನೋ ನಮ್ಮ ಹಿಡಿಯುವುದಕ್ಕೆ ಬರುತ್ತಾನೆಂದು ಅದನೆಲ್ಲ ಅಲ್ಲೇ ಬಿಟ್ಟು ಓಡಿಹೋಗುವುದ ಕಂಡು, ಅಲ್ಲಿಗೆ ಹೋಗಿ ನೋಡಿ ಅದನೆಲ್ಲ ತೆಗೆದುಕೊಂಡು ಚೀಟಿ ತೆಗೆದುಕೊಂಡು ಅದಱಲ್ಲಿ ವೃಕ್ಷ ಫಲವಾಗುವುದೆಂದು ಬರೆದಿರುವುದ ಓದಿ ನೋಡಿಕೊಂಡು, ಅಲ್ಲಿಂದ ತನ್ನ ಪಟ್ಟಣಕ್ಕೆ ಬಂದು ಚರಿಸುತ್ತಿರುವಲ್ಲಿ—ಆಗ ಪಟ್ಟಣದಲ್ಲಿರುವ ಸುರಭಿಯೆಂಬ ಸೂಳೆ-ಬಹು ಭಾಗ್ಯ ಸಂಪಾದಿಸಿದುದ ಅನುಭವಿಸುವರಿಲ್ಲ ; ಮುಂದಿನ್ನು ಸಂಪಾದಿಸಿ ಫಲವೇನೆಂದು ತನ್ನಲ್ಲಿ ತಾನೇ ಯೋಚಿಸಿ, ತನ್ನ ಮನೆಯ ಬಾಗಿಲ ಮುಂದೆ ಬಂದು ಭೇರಿಯನಿರಿಸಿ, ಈ ಭೇರಿಯ ಬಂದು ಹೊಡೆದವನಿಗೆ ನಾನು ಹೆಂಡತಿಯಾಗಿರುವೆನೆಂದು ಅವಳು ಇರುವಲ್ಲಿ—ಜಯಪಾಲ ಚರಿಸುವಲ್ಲಿ ಆ ಭೇರಿಯ ಕಂಡು ಧ್ವನಿ ಮಾಡಲಾಗಿ, ಅವಳಾಸದ್ದ ಕೇಳಿ ಹೊಱಗೆ ಬಂದು ಜಯಪಾಲನ

ಕಂಡು—ಈತನೇ ತನಗೆ ಪತಿಯೆಂದು ಮನೆಗೆ ಕರೆದುಕೊಂಡು ಹೋಗಿ ಅವನಿಗೆ ಮಜ್ಜನ ಭೋಜನವ ಮಾಡಿಸಿ ಸಕಲಪರಿಮಳ ಸುಗಂಧ ತಾಂಬೂಲವ ಕೊಟ್ಟು ಅವನಲ್ಲಿಅನ್ಯೋನ್ಯದಿಂದ ಕ್ರೀಡಿಸಿ ಆ ಬಳಿಕ ತನ್ನ ವೃತ್ತಾಂತವ ಪೇಳಿ,—ಎನಗೆ ನೀನೇ ಪತಿಯೆಂದು ಇರಿಸಿಕೊಳ್ಳಲಾಗಿ; ಆಮೇಲೆ ಚೀಟಿ ನೋಡಲು ಅದಱಲ್ಲಿ ಭೇರಿಯ ಹೊಡೆದ ಫಲವಾಗುವುದೆಂದು ಬರೆದು ಇರುವುದ ಓದಿ ನೋಡಿಕೊಂಡು ಸಂಭ್ರಮದಿಂದವಳೊಡನೆ ಕೂಡಿಯಿರುತ್ತಿರುವಲ್ಲಿ—ಆ ಪಟ್ಟಣದ ವರ್ತಕನಾಗಿದ್ದ ರತ್ನಶರ್ಮನೆಂಬವನಿಗೆ ಮಕ್ಕಳಿಲ್ಲದೆ ಮರಣವಾಗಲು, ಅವನ ಹೆಂಡತಿ ಅವನೊಡನೆ ಸಹಗಮನವಾದುದಱಿಂದ ಈ ಸಮಾಚಾರವ ಈ ಜಯಪಾಲನು ಕೇಳಿ, ತನ್ನ ಸಮಾನಿಕನಾದವನು ಸತ್ತನೇ ಹರಹರ! ಎಂದು ಅವನಿಗೆ ಉತ್ತರ ಕ್ರಿಯೆಗಳ ತಾನು ಮಾಡಿದನು. ಅವನ ವರ್ತಮಾನವ ನಮ್ಮ ರಾಯ ಕೇಳಿ, ಹರುಷ ಪಟ್ಟು, ಜಯಪಾಲನ ಕರೆಸಿ ತನ್ನ ಬಳಿಯಲ್ಲಿ ಇರಿಸಿಕೊಂಡಿದ್ದು ಕೆಲವು ದಿನದ ಮೇಲೆ ರಾಯ—ಜಯಪಾಲನೇ! ನೀನು ಗಟ್ಟಕ್ಕೆ ಹೋಗಿ ಸಕಲ ವ್ಯಾಪಾರವ ತೆಗೆದುಕೊಂಡು ಬಾರೆಂದು ಬೇಕಾದಷ್ಟು ದ್ರವ್ಯವ ಕೊಟ್ಟು ಹಡಗ ಮಾಡಿಸಿ ಅದಱಲ್ಲಿ ಉದ್ದಿನ ಹಿಟ್ಟು ಹೆತ್ತ ತುಪ್ಪ ಮುಂತಾದ ಸಕಲ ಪದಾರ್ಥವ ತುಂಬಿಸಿ ಕಳುಹಿಸಲಾಗಿ; ಜಯಪಾಲನು ಹಡಗಿನಲ್ಲಿಕುಳಿತು ಸಮುದ್ರದಲ್ಲಿ ಹೋಗುವಾಗ ಹುಚ್ಚುಗಾಳಿಯು ಬೀಸಿ ಹಡಗ ಸುವರ್ಣದ್ವೀಪಕ್ಕೆ ತೆಗೆದುಕೊಂಡು ಹೋಗಲಾಗಿ ; ಅಲ್ಲಿ ಮಣ್ಣೆಲ್ಲ ಚಿನ್ನವಾಗಿ ಜನಸಂಚಾರವಿಲ್ಲದಿರುವುದ ಕಂಡು, ಜಯಪಾಲ ಅತಿ ವ್ಯಸನ ಪಡುತ್ತ ಆ ಸುವರ್ಣದ ಮಣ್ಣ ಹಡಗಿಗೆ ತುಂಬಿ ಅಲ್ಲೊಂದು ಗಟ್ಟದಲ್ಲಿಳಿದಿರಲಾಗಿ ; ಕೊಂಡು ಹೋಗಿದ್ದ ಪದಾರ್ಥವೆಲ್ಲ ಮುಗಿದು ಆಹಾರಕ್ಕಿಲ್ಲದೆ ಬಹು ನಿಗ್ರಹವಾದುದಱಿಂದ ಆಗ ಕೈಯಲಿದ್ದ ಚೀಟಿ ತೆಗೆದು ಓದಿನೋಡಲಾಗಿ ಉದ್ದಿನ ಹಿಟ್ಟು ಹೆತ್ತ ತುಪ್ಪ ಇರುವುದೆಂದು ಬರೆದಿರುವುದ ಕಂಡು ಅದ ಭಕ್ಷಿಸಿಕೊಂಡು ಇರುವಷ್ಟಱಲ್ಲಿ, ಪುನಃ ಅದೇಮೇರೆಗೆ ಹುಚ್ಚುಗಾಳಿಯು ಬೀಸಿ ಹಡಗ ಆ ದಾರಿಗೆ ತಂದು ಬಿಡಲಾಗಿ ; ಇನ್ನು ನಾನು ಬದುಕಿದೆನೆಂದು ಹಡಗ ಸಾಗಿಸಿಕೊಂಡು ಬಂದು ರಾಯನಿಗೆ ತಾನು ತಂದ ಸುವರ್ಣದ ಮಣ್ಣನೊಪ್ಪಿಸಿ ರಾಯನೊಡನೆ ತನಗಾದ ವೃತ್ತಾಂತವೆಲ್ಲ ಅಱಿಕೆಯ ಮಾಡಲಾಗಿ;

ರಾಯ ಕೇಳಿ ಇಂತೆಂದನು:—ಕೇಳೈಯ, "ಪುಣ್ಯಕಾಲಕ್ಕೆ ಅರಣ್ಯದಲ್ಲಿದ್ದರೂ ಸುಖವುಂಟು ; ಪುಣ್ಯ ತಪ್ಪಿದರೆ ಬೆಣ್ಣೆ ಮೆದ್ದರೂ ಹಲ್ಲು ಮುರಿಯುವುದು" ಎಂದು ಹೇಳಿ, ನಿನ್ನ ಯೋಗ ಚೆನ್ನಾಗಿರುವಾಗ ಬಂದ ವಿಪತ್ತುಗಳೆಲ್ಲಾ ಬಯಲಾಯಿತೆಂದು, ನಮ್ಮ ರಾಯನು ಜಯಪಾಲನ ಸಂತವಿಟ್ಟು, ಆ ಬಳಿಕ ತಾನು ಖೇಚರದಲ್ಲಿ ಆ ಸುವರ್ಣದ್ವೀಪಕ್ಕೆ ಹೋಗಿ, ಆ ಮಣ್ಣು ತೆಗೆಸಿಕೊಂಡು ಬಂದು, ಈ ಪಟ್ಟಣವನೆಲ್ಲಾ ಸುವರ್ಣಮಯವ ಮಾಡಿ, ಸಕಲರಿಗೂ ಸಂಪತ್ತುಂಟುಮಾಡಿ ಜಯಪಾಲನಿಗೆ ಹತ್ತು ಕೋಟಿ ದ್ರವ್ಯವ ಕೊಟ್ಟು, ತಾನು ಸುಖವಾಗಿದ್ದನು-ಎಂದು ಹೇಳಲು; ಭೋಜರಾಯನು ಲಜ್ಜಿತನಾಗಿ ತನ್ನ ಅರಮನೆಯ ಸೇರಿದನು.

ಇಂತು ಕರ್ಣಾಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ ಕಾಮಕರ್ಣಿಕೆಯೆಂಬ ಪುತ್ತಳಿ ಪೇಳಿದ ಮೂವತ್ತನೆಯ ಕಥೆ.

೩೧ ನೆಯ ಕಥೆ.

ಮೂವತ್ತೊಂದನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು ಎಂದಿನಂತೆ ಸಿಂಹಾಸನದ ಬಳಿಗೆ ಬಂದು ಬಲಗಾಲ ನೀಡುವ ಸಮಯದಲ್ಲಿ ಆ ಸೋಪಾನದ ಕರ್ಣಾವತಿಯೆಂಬ ಪುತ್ತಳಿಯು-ಹೋ! ಹೋ! ನಿಲ್ಲು!ನಿಲ್ಲು!ಎಂದು ಧಿಕ್ಕರಿಸಲಾಗಿ; ಭೋಜರಾಯನು ಖಿನ್ನನಾಗಿ ಬೇಱೆ ಸಿಂಹಾಸನದಲ್ಲಿ ಕುಳಿತು, ಚಿತ್ರಶರ್ಮನಿಂದ ಪೇಳಿಸಿದ ಕಥೆ :—

ಎಲೆ ಪುತ್ತಳಿಯೇ! ಕೇಳು. ಧಾರಾಪುರದಲ್ಲಿ ನಮ್ಮ ರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದು ದಿನ ಒಬ್ಬ ನೆರೆಜಾಣನ ಕರೆತರಿಸಿ ಈ ಪಟ್ಟಣದಲ್ಲಿ ಶೂರನ ವೀರನ ಧೀರನ ಮೂಱುಮಂದಿಯ ಕರತರ ಹೇಳಿ ಕಟ್ಟು ಮಾಡಿ ಕಳುಹಿಸಲಾಗಿ ; ಅವನು ಕೋಟೆ ಪೇಟೆ ಬೀದಿಗಳಲ್ಲಿ ಹುಡುಕುತ್ತ ಎಲ್ಲಿಯೂ ಕಾಣದೆ ಸೂಳೆಗೇರಿಯಲ್ಲಿ ಬರಲಾಗಿ ; ಪದ್ಮಾವತಿ

ಯೆಂಬ ಸೂಳೆ ಅತಿದಿವ್ಯವಾದ ಮುತ್ತಿನ ಮೂಗುತಿಯಿಟ್ಟಿರುವುದ ಬರ್ವ ನೆರೆಜಾಣನು ಕಂಡು—ಇಂಥ ಮುತ್ತು ನಿನಗೆಲ್ಲಿ ಬಂದಿತು? ಎಂದು ಕೇಳಲು; ಅವಳು-ಬಡ್ಗದ್ವೀಪಿಯೆಂಬ ಶೂರನು ಅರಣ್ಯದಲ್ಲಿ ಆನೆಯ ಬೇಟೆಯಾಡಿ ಆನೆಯ ಕುಂಭಸ್ಥಳವ ಕಡಿದು ಅದರಲ್ಲಿದ್ದ ಈ ಮುತ್ತ ಆನೆಯ ಕೊಂಬಿನ ದಂತ ಸಹ ನನಗೆ ತಂದುಕೊಟ್ಟು ನನ್ನಲ್ಲಿ ಕೂಡಿದ್ದು ಹೋದನೆಂದ ಮಾತ ನೆರೆಜಾಣ ಕೇಳಿ, ಅವನೇ ಶೂರನೆಂದು ತಿಳಿದು ಕರೆಸಿ, ಕರೆದುಕೊಂಡು, ವೀರನ ಹುಡುಕುತ್ತ ಬರಲಾಗಿ—ಒಬ್ಬ ಮುನಿಕುಮಾರ ಭಿಕ್ಷಾಟನ ನಿಮಿತ್ತ ಊರೊಳಗೆ ಕೇರಿಕೇರಿಯಲ್ಲಿ ತಿರುಗುತ್ತ ತಿಳಿಯದೆ ಭಿಕ್ಷಕ್ಕೆ ಆ ಸೂಳೆಯ ಬಳಿಗೆ ಹೋಗಲಾಗಿ, ಆಸೂಳೆ ಅವನ ಕಂಡು ಭ್ರಮಿಸಿ ಮೇಲೆ ಬಿದ್ದರೂ ಅವನು ಉಪಾಯದಿಂದ ಅವಳಿಗೆ ಸಿಕ್ಕದೆ ತಪ್ಪಿಸಿಕೊಂಡು ಬಂದುದ ನೆರೆಜಾಣ ಕಂಡು,—ಇವನೇ ವೀರನೆಂದು ತಿಳಿದು, ಅವನ ಕರೆದುಕೊಂಡು, ಧೀರನ ಹುಡುಕುತ್ತ ಬರುವಲ್ಲಿ—ಒಬ್ಬ ಓಲೆಕಾರರ ನಾಯಕನೂ ಮತ್ತೊಬ್ಬನೂ ಹೊಡೆದಾಡುತ್ತಿರುವಲ್ಲಿ ಅವನ ಕಡೆ ಓಲೆಕಾರ ಆನಾಯಕನ ಹಿಂದಿಕ್ಕಿಕೊಂಡು, ತಾನು ಮುಂದುವರಿದು ಹೊಡೆದಾಡುವನ ನೆರೆಜಾಣ ಕಂಡು,-ಇವನೇ ಧೀರನೆಂದು ತಿಳಿದು, ಅವನ ಸಹ ಕರೆದುಕೊಂಡು ಬಂದು ರಾಯನ ಎದುರಾಗಿ ನಿಲ್ಲಿಸಿ, ಕೈಮುಗಿದು,-ತಮ್ಮ ಅಪ್ಪಣೆಮೇರೆಗೆ ಈಮೂವರ ಕರೆತಂದು ಇದ್ದೇನೆ ಎನ್ನಲಾಗಿ; ರಾಯ—ಇವರ ಗುಣಗಳ ನೀನು ತಿಳಿದ ಬಗೆ ಹೇಗೆ? ಎಂದು ಕೇಳಲಾಗಿ; ನೆರೆಜಾಣ ಈ ಮೂವರುಮಂದಿ ಮಾಡಿದ ವಿವರ ಶ್ರುತಪಡಿಸಲಾಗಿ; ರಾಯನು ಮೆಚ್ಚಿ ಆನೆರೆಜಾಣನಿಗೆ ಸವಾಲಕ್ಷ ದ್ರವ್ಯವ ಕೊಟ್ಟು ಕಳುಹಿಸಿದನು-ಎಂದ ನುಡಿಗೆ ಕರ್ಣಾವತಿಯೆಂಬ ಪುತ್ಥಳಿ ನಗುತ್ತ ಹಾಸ್ಯಗೆಯ್ದು ಪೇಳಿದ ಉಪಕಥೆ:—

ಕೇಳೈಯ ಚಿತ್ರಶರ್ಮನೇ! ನಮ್ಮ ವಿಕ್ರಮಾದಿತ್ಯರಾಯನು ಸುಖ ರಾಜ್ಯ ಪಾಲಿಸುವ ವೇಳೆಯಲ್ಲಿ ಒಂದುದಿನ ಕೊಂಕಣದೇಶದ ಶೂರನೆಂಬವನು ತನ್ನ ಪತ್ನಿಸಹಿತ ಬಂದು ರಾಯನಿಗೆ ಕೈಮುಗಿದು—ಎಲೈ ಮಹಾರಾಯನೇ! ನಿನ್ನ ಕೀರ್ತಿಯ ಕೇಳಿ ನಿನ್ನ ಬಳಿಯಲ್ಲಿ ಊಳಿಗವ ಮಾಡಿಕೊಂಡು ಇರಬೇಕೆಂದು ಬಂದೆನು ಎನ್ನಲಾಗಿ; ರಾಯ_ನಿನಗೆ ಸಂಬಳವೇನು ಎಂದು ಕೇಳಲಾಗಿ; ಅವನು ತಿಂಗಳೊಂದಕ್ಕೆ ಸಾವಿರವರಹ ಸಂಬಳ ಕೊಟ್ಟರೆ

ಇರುವೆನು ಎಂದುದಕ್ಕೆ, ರಾಯ ಅದೇಪ್ರಕಾರ ಸಂಬಳವನ್ನು ನೇಮಕ ಮಾಡಿ ತನ್ನ ಬಳಿಯಲ್ಲೇ ಇಟ್ಟುಕೊಂಡಿರಲಾಗಿ; ಅವನು ಹಗಲಿರುಳಾಗಿ ಅರ ಮನೆಯ ಬಾಗಿಲಲ್ಲಿ ಕಾದಿರುವಲ್ಲಿ—ಒಂದುದಿನ ಸಮರಾತ್ರಿಯಲ್ಲಿ ಊರ ಹೊ ರಗಿರುವ ಮಹಂಕಾಳಿಯ ಗುಡಿಯ ಬಳಿಯಲ್ಲಿ ಭಯಂಕರವಾದ ಒಂದು ಕೂ ಗ ರಾಯ ಕೇಳಿ ಆ ಶೂರನ ಕರೆದು—ಈ ಕೂಗೇನು ? ತಿಳಿದು ಬಾರೆಂದು ಹೇಳಲಾಗಿ ; ಆಕ್ಷಣವೇ ಕತ್ತಿಯ ಬಿಚ್ಚಿಕೊಂಡು ಹೆಂಡತಿಯು ಸಹವಾಗಿ ಅಲ್ಲಿಗೆ ಹೋಗುವಲ್ಲಿ, ರಾಯ ಅವನ ಶೂರತ್ವದ ಮೋಸವ ಮಾಡಬೇ ಕೆಂದು ಅವನು ಕಾಣದಂತೆ ತಾನೂ ಅವನ ಹಿಂದೆ ಹೋಗಿ ನೋಡುತ್ತಿರುವಲ್ಲಿ, ಆಗಲಾಶೂರನು ಭೀತಿಯ ಪಡದೆ ಆ ದೇವಿಯ ಗುಡಿಯ ಹೊಕ್ಕು ಚೌ ದಿಕ್ಕಿನಲ್ಲಿ ನೋಡುವಲ್ಲಿ ಅಲ್ಲಿಯೊಬ್ಬ ರಾಕ್ಷಸಿ ಅಟ್ಟಹಾಸದಿಂದಳುತ್ತ ಆರ್ಭಟಿಸುತ್ತ ಆತನ ಮೇಲೆ ಬಂದು ಬೀಳಲಾಗಿ; ಅವನು ಅಂಜದೆ ಧೈರ್ಯ ದಿಂದ ನಿಂತು ಆ ರಾಕ್ಷಸಿಯ ಸಂಗಡ ಯುದ್ಧವ ಮಾಡಿ, ಅವಳ ಹತವ ಮಾಡಲಾಗಿ; ಆ ದೇವಿಯು ಪ್ರಸನ್ನಳಾಗಿ—ಎಲೋ ಶೂರ! ನಿನ್ನ ಧೈರ್ಯಕ್ಕೆ ಮೆಚ್ಚಿದೆನು ಎನ್ನಲಾಗಿ; ಅವನು—ಎಲೌ ತಾಯೇ! ಈ ಮಧ್ಯರಾತ್ರಿಯಲ್ಲಿ ಮಹಾಕೂಗಾದ ಕಾರಣವೇನೆಂದು ಕೇಳಲಾಗಿ ; ಆ ದೇವಿಯು—ನಿನ್ನ ರಾಯ ನಿಗೆ ನಾಳೆದಿನ ಅಪಮೃತ್ಯು ತಗಲುವುದು, ಎಂದ ಮಾತ ಕೇಳಿ, ಅದಕ್ಕೇನು ಪರಿಹಾರವೆಂದು ಕೇಳಲಾಗಿ ; ಆದೇವಿಯು ಇಂತೆಂದಳು:—ಅಪಮೃತ್ಯುವಿಗೆ ವೀರನಾದವನು ಶಿರವ ಕೊಟ್ಟರೆ ನಿಮ್ಮ ರಾಯನಿಗೆ ತಟ್ಟುವ ಅಪಮೃತ್ಯು ತಪ್ಪುವುದೆಂದು ದೇವಿಯು ಪೇಳಿದ ಮಾತ ಕೇಳಿ, ತಿಂಗಳಿಗೆ ಸಾವಿರ ವರಹನ ಕೊಟ್ಟು ತನ್ನ ಕಾಪಾಡುವಂಥ ರಾಯನಿಗೆ ಬರುವ ಅಪಮೃತ್ಯು ತಪ್ಪಲೆಂದು ಆದೇವಿಗೆ ಎದುರಾಗಿ ತನ್ನ ಶಿರಸ್ಸ ಒಪ್ಪಿಸಲಾಗಿ ; ಆಗಳವನ ಹೆಂಡತಿ ತನ್ನ ಗಂಡನ ಸಂಗಡ ತನಗೆ ಸಹಗಮನ ವಿಹಿತವೆಂದು ಕಟ್ಟಾರಿಯ ತೆಗೆದು, ನಮ್ಮೊಡೆಯನಾದ ರಾಯನಿಗೆ ದೀರ್ಘಾಯುಷ್ಯವಾಗಲೆಂದು ತನ್ನ ತಲೆಯ ಒಪ್ಪಿಸಿದಳು. ಅವರಿರ್ವರ ನಿರ್ವಂಚನೆಯ ರಾಯ ಕಂಡು ಎನಗಾಗಿ ಈಸತಿ ಪತಿಗಳು ತಮ್ಮ ತಲೆಯ ಕೊಟ್ಟರೆಂದು, ಅವರ ಗುಣವ ಆಡುತ್ತ, ಇಂಥ ಇಷ್ಟರು ಹೋದ ಬಳಿಕ ತನ್ನ ದೇಹ ಏತಕ್ಕೆ? ಎಂದು, ಆ ದೇವಿಯ ಮುಂದೆ ತನ್ನ ಕೊರಲಿಗೆ ಗಂಡಗತ್ತರಿಯ ಸೇರಿಸಿ ರಾಯ ಶಿರವ ತೆಗೆದೊಪ್ಪಿಸುವ

ಸಮಯದಲ್ಲಿ, ಆ ದೇವಿಯು ಪ್ರಸನ್ನಳಾಗಿ—ಎಲೈ ರಾಯನೇ! ನಿನ್ನ ಕರುಣಾರಸಕ್ಕೆ ಮೆಚ್ಚಿದೆನು-ಎಂದು ಕೈವಿಡಿದು,-ವರವ ಕೇಳು ಎನ್ನಲಾಗಿ; ರಾಯ ತನ್ನ ಸೇವಕ ಅವನ ಪತ್ನಿಯು ಸಹ ಬದುಕಿಸಿ ಕೊಡಬೇಕು ಎಂದ ಕಾರಣ ಆಗ ಆದೇವಿಯು ಅವರೀರ್ವರ ಬದುಕಿಸಿ ಏಳಿಸಲಾಗಿ; ಆಶೂರನು ರಾಯನ ಕಂಡು ವಂದಿಸಿ ಮುಂದೆ ನಿಂತಿರುವುದಕ್ಕೆ ದೇವಿ ಕಂಡಿತೆಂದಳು:— ಎಲೈ ರಾಯನೇ! ಲೋಕಗಳಲ್ಲಿ ನಿನ್ನಂಥ ರಾಯನು ಈಶೂರನಂಥ ಭಟನು (ಇವಳಂಥ ಸತಿಯು) ಇಲ್ಲವೆಂದು ಮೂವರಿಗೂ ದೀರ್ಘಾಯುಷ್ಯವ ಕೊಟ್ಟು, ರಾಯನಿಗೆ ಅಕ್ಷಯ ಬಂಡಾರಗುಳಿಕೆಯಿತ್ತು ದೇವಿಯು ಮಾಯವಾದಳು. ಆಬಳಿಕ ಅಲ್ಲಿಂದ ರಾಯನು ಶೂರ ಸಹಿತ ಈ ಪಟ್ಟಣದೊಳಗೆ ಬಂದು, ಬೆಳಗಾಗಿ ಶೂರನ ಕರೆಸಿ, ತನ್ನ ರಾಜ್ಯದಲ್ಲಿ ಅರ್ಧರಾಜ್ಯವ ಅವನಿಗೆ ಕೊಟ್ಟು ತನ್ನ ಸಮಾನನ ಮಾಡಿ ಸುಖವಾಗಿದ್ದನು-ಎಂದ ಮಾತಿಗೆ ಭೋಜರಾಯನು ಲಜ್ಜಿತನಾಗಿ ತನ್ನ ಅರಮನೆಗೆ ಹೋದನು.

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ಕರ್ಣಾವತಿಯೆಂಬ ಪುತ್ಥಳಿ ಪೇಳಿದ ಮೂವತ್ತೊಂದನೆಯ ಕಥೆ.

೩೨ ನೆಯ ಕಥೆ.

ಮೂವತ್ತೆರಡನೆಯ ದಿವಸದಲ್ಲಿ ಭೋಜರಾಯನು ಸ್ನಾನ ದೇವತಾರ್ಚನೆ ಭೋಜನ ತಾಂಬೂಲವ ತೀರಿಸಿಕೊಂಡು, ಸಕಲ ಪರಿಮಳ ಸುಗಂಧವ ಲೇಪಿಸಿಕೊಂಡು, ಕುಸುಮಂಗಳ ಮುಡಿದು, ನವರತ್ನಾಲಂಕೃತದಿಂದ ನವವಿಧ ದುಕೂಲವ ಧರಿಸಿ, ತನ್ನ ಮಂತ್ರಿಯಾದ ಚಿತ್ರಕರ್ಮನ ಕೈವಿಡಿದುಕೊಂಡು, ಸಿಂಹಾಸನದೆಡೆಗೆ ಬಂದು, ತನ್ನ ಬಲಗಾಲ ನೀಡುವ ಸಮಯದಲ್ಲಿ ಆ ಸೋಪಾನದ ವಾಮಲೋಚನೆಯೆಂಬ ಪುತ್ಥಳಿಯು—ಹೋಹೋ! ನಿಲ್ಲು ನಿಲ್ಲು ಭೋಜರಾಯನೇ! ನಮ್ಮೊಡೆಯನಾದ ವಿಕ್ರಮಾದಿತ್ಯರಾಯನಂತೆ ವೀರವಿತರಣ ಸಾಹಸ ಪರಾಕ್ರಮೌದಾರ್ಯ ಮುಂತಾದ ಗುಣವಂತನಾದರೆ ಈ ಸಿಂಹಾಸನವ ಏರು, ಇಲ್ಲದೆ ಇದ್ದರೆ ಕೆಲಸಾರು, ಮೀರಿ ಕುಳಿ

ತರೆ ನಿನ್ನತಲೆ ಸಹಸ್ರ ಹೋಳಾಗಿ ಬಿರಿಯುವುದು ಎನ್ನಲಾಗಿ ; ಭೋಜರಾಯನು ಜೋ೨೩ ಸಿಂಹಾಸನದಲ್ಲಿ ಕುಳಿತು ಚಿತ್ರಶರ್ಮನಿಂದ ಪೇಳಿಸಿದ ಕಥೆ:-

ಎಲೆ ಪುತ್ಥಳಿಯೇ ! ಕೇಳು. ಧಾರಾಪುರದಲ್ಲಿ ನಮ್ಮ ಭೋಜರಾಯನು ಸುಖರಾಜ್ಯಗೆಯ್ಯುವಲ್ಲಿ ಒಂದು ದಿನ ರಾಯ ಓಲಗದಲ್ಲಿ ಕುಳಿತಿರುವಾಗ-[1]ವರರುಚಿ ಯಿಂತೆಂದನು:-ಧೈರ್ಯಸ್ಥನಿಗೆ ಸಕಲವೂ ಕೈಗೂಡುವುದು. ಅದು ಹೇಗೆ? ಎಂದರೆ-ದುಂದುಭಿ ಎಂಬ ಪಟ್ಟಣದಲ್ಲಿ ಶಶಿಮುಖನೆಂಬ ಬಿಲ್ವನು[1] ನಿತ್ಯ ಸಾವಿರ ಕಸವರಿಗೆಯ ಮಾಡುವನು. ಈಮೇರೆಗೆ ಮಾಡಿದ ಕಸವರಿಗೆಯೆಲ್ಲ ಕ್ರಯವ ಮಾಡಬೇಕೆಂದು ಆ ಪಟ್ಟಣದ ಬೀದಿಗಳಲ್ಲಿ ಹೊತ್ತು ತಿರುಗಿದರೂ ಒಬ್ಬರೂ ಕೇಳುವರಿಲ್ಲದೆ ಮಲಾಮೆಯಾಗಿ ಮಾಅದೆ ತನ್ನ ಮನೆಗೆ ಹೊತ್ತುಕೊಂಡು ಬಂದು ಇರಿಸಿ, ಆರಾತ್ರಿ ತನ್ನ ಹೆಂಡತಿಯ ಕೂಡೆ—ನಾನು "ಕಸವರಿಗೆ[2] ಮಾಡಿದುದು ಮಾಱಲಿಲ್ಲ. ಮುಂದೆ ನಾವು ಜೀವನವ ಹೇಗೆ ಮಾಡುವ? ಎಂದು ಆಲೋಚಿಸುತ್ತಿರುವಲ್ಲಿ—ಆ ಪಟ್ಟಣದ ಅರಸು ನಗರಶೋಧನೆಗಾಗಿ ಹೋಗಿ ಅವನ ಆಮಾತ ಕೇಳಿ ಬಂದು ಬೆಳಗಾಗಿ ಓಲಗದಲ್ಲಿ ಕುಳಿತಿರುವಾಗ, ಆ ಬಿಲ್ವನ ಕರೆಸಿ-ನೀನು ಮಾಡಿರುವ ಕಸವರಿಗೆ ಯಾವತ್ತು ತಂದು ನಮ್ಮ ಅರಮನೆಯ ಕಣಜಕ್ಕೆ ತುಂಬಿ ಅಲ್ಲಿರುವ ದವಸ ಕೊಂಡುಹೋಗಿ ನಿನ್ನ ಗ್ರಾಸೋಪಾಯವ ಮಾಡಿಕೊ ಎನ್ನಲಾಗಿ; ಅದೇರೀತಿಯಲ್ಲಿ ಅವನು ತನ್ನ ಮನೆಯಲ್ಲಿದ್ದ ಕಸವರಿಗೆ ಯಾವತ್ತೂ ತಂದು ಕಣಜಕ್ಕೆ ತುಂಬಿ ಅಲ್ಲಿದ್ದ ದವಸವ ತೆಗೆದುಕೊಂಡು ಹೋಗಲಾಗಿ ;

---

1. ವರರುಚಿಯು ಮುಖವ ನೋಡಿ ರಾಯನಿಂತೆಂದನು:—"ಕುಹಕಕುಚೋದ್ಯಗಳ ಮಾಡುವನು ಪೂಜ್ಯನೆ ? ಕೞುಬಿನಿಂದ ಒಬ್ಬನ ಶ್ರೇಯಸ್ಸ ನೋಡಿ ಸಂತೋಷಪಡದೆ ಇರುವನು ದೊರೆಯೇ ? ಪರಿಹಾಸಕವ ಮಾಡುವಂಥವನು ಯೋಗ್ಯನೆ? ಭುಜಬಲವಿಲ್ಲದವ ಮನುಷ್ಯನೆ?" ಎಂಬ ನೀತಿಯುಂಟಾಗಿ, ಭುಜಬಲವೂ ಧೈರ್ಯವೂ ಪ್ರಧಾನವೆಂದು ಹೇಳಿ, ಧೈರ್ಯಸ್ಥನಿಗೆ ಸಕಲಕಾರ್ಯವೂ ಕೈಸೇರುವುದೆಂಬಂತೆ ಧೈರ್ಯಗುಂದಬಾರದು, ಧೈರ್ಯದಿಂದ ಸಕಲಕಾರ್ಯವು ಬರುವುದು. ಮುನ್ನೊರ್ವ ರಾಯನು ಧೈರ್ಯದಿಂದ ರಾಜ್ಯವ ಪಡೆದನು. ಆ ಕಥೆಯ ಪೇಳ್ವೆನು ಕೇಳೆಂದು ಇಂತೆಂದನು:—ಮುನ್ನೊಂದು ದುಂದುಭಿಯೆಂಬ ಪಟ್ಟಣದೊಳು ರಿಪುಹನೆಂಬ ರಾಯನು ಸುಖರಾಜ್ಯಗೆಯ್ಯುತ್ತಿರಲು ಆ ಪಟ್ಟಣದಲ್ಲಿ ಒರ್ವ ಶಶಿಮುಖನೆಂಬ ಬಿಲ್ವನು.

2. ಕಸಗೋಲು.

ಬೊಕ್ಕಸ ಬಂಡಾರದಲ್ಲಿದ್ದ ಲಕ್ಷ್ಮಿಯರೆಲ್ಲಾ ಕೂಡಿ ಮಾತಾಡಿದರು. ಯಾರುಯಾರೆಂದರೆ? ಮಹಾಲಕ್ಷ್ಮಿ, ವರಲಕ್ಷ್ಮಿ, ವಿಜಯಲಕ್ಷ್ಮಿ, ಧನಲಕ್ಷ್ಮಿ ಧಾನ್ಯಲಕ್ಷ್ಮಿ, ಪುರಲಕ್ಷ್ಮಿ, ಕೀರ್ತಿಲಕ್ಷ್ಮಿ,—ಇವರೇಳು ಮಂದಿಯೂ-ಈ ಅರಸನ ಭಂಡಾರ ಬೊಕ್ಕಸ ಮುಂತಾದುದರಲ್ಲಿ ನಾವು ತಪ್ಪದೆ ಇದ್ದುಕೊಂಡಿದ್ದೆವು. ಈಗ ಅರಸಿನಲ್ಲಿ ಇರಬಾರದು ಎಂದಾಲೋಚಿಸಿ ಆದಿನ ರಾತ್ರಿ ಅರಸಿನ ಸ್ವಪ್ನದಲ್ಲಿ ಮಹಾಲಕ್ಷ್ಮಿ ನಿಜರೂಪದಿಂದ ಹೋಗಿ, ಇದಿರಾಗಿ ನಿಂತು,—ಎಲೈ ಅರಸೇ! ಈವರೆಗೂ ನಿನ್ನ ಅರಮನೆಯಲ್ಲಿ ನಾವು ಏಳು ಮಂದಿ ಲಕ್ಷ್ಮಿಯರೂ ಸ್ಥಿರವಾಗಿ ಇದ್ದೆವು. ಇನ್ನು ಇರುವುದಿಲ್ಲ. ಅದೇತಕ್ಕೆಂದರೆ, ನಿನ್ನ ಅರಮನೆಗೆ ಅವಲಕ್ಷ್ಮಿಯು ಸೇರಿದಳು. ಅವಳು ಇರುವಲ್ಲಿ ನಾವು ಇರುವುದು ಇಲ್ಲವೆಂದು ಸ್ಥಾಪಿಸಿ ಹೋಗಲಾಗಿ ; ಅರಸು ಧೈರ್ಯಲಕ್ಷ್ಮಿಯಿದ್ದ ಕಾರಣ ಅವರೆಲ್ಲಾ ಹೋದಾಗ್ಯೂ ಆ ಲಕ್ಷ್ಮಿಯ ಬಿಡೆನೆಂದು ಧೈರ್ಯವ ಹಿಡಿದಿರಲಾಗಿ ; ಕೆಲವು ದಿನದಮೇಲೆ ಪರರಾಯರು ಬಂದು ಮಹಾಯುದ್ಧವ ಮಾಡಿ ಪಟ್ಟಣಕ್ಕೆ ಮುತ್ತಿಗೆಯ ಮಾಡಿ, ಕಡುಕಷ್ಟವಾಗಿ ಜಯವಿಲ್ಲದೆ ಅಪಜಯವಾದರೂ ಧೈರ್ಯದಿಂದಿರಲಾಗಿ-ಮಹಾಲಕ್ಷ್ಮಿ ಮುಂತಾಗೆಲ್ಲರು ಕಂಡು, ಅರಸಿನ ಧೈರ್ಯಕ್ಕೆ ಮೆಚ್ಚಿ ಎದುರಾಗಿ ಬಂದು-ಎಲೈ ಅರಸೆ! ನಿನ್ನ ಧೈರ್ಯಕ್ಕೆ ಎಣೆಯಿಲ್ಲವೆಂದು ವರವ ಬೇಡೆನ್ನಲಾಗಿ ; ಅರಸು ಅವರ ಇಂತೆಂದನು:-ಮಹಾಲಕ್ಷ್ಮಿ ಬಂಡಾರದಲ್ಲಿ, ಪುರಲಕ್ಷ್ಮಿ ಪಟ್ಟಣದಲ್ಲಿ, ಕೀರ್ತಿಲಕ್ಷ್ಮಿ ಚಾದಿಕ್ಕಿನಲ್ಲಿ, ವೀರಲಕ್ಷ್ಮಿ ವಿಜಯಲಕ್ಷ್ಮಿ ಭುಜಗಳಲ್ಲಿ, ಧನಲಕ್ಷ್ಮಿ ಬೊಕ್ಕಸದಲ್ಲಿ, ಧಾನ್ಯಲಕ್ಷ್ಮಿ ಕಣಜದಲ್ಲಿ ಸ್ಥಿರವಾಗಿರಬೇಕು ಎನ್ನಲಾಗಿ ; ಅದೇಮೇರೆಗೆ ಮಹಾಲಕ್ಷ್ಮಿಯು ವರವಾದುದರಿಂದ ಆಕ್ಷಣವೇ ಪರರಾಯರಿಗೆ ಅಪಜಯವಾಗಿ ಮುರಿದು ಓಡಿಹೋಗಲಾಗಿ; ಅರಸು ಅವರ ಪಟ್ಟಣವ ಹೊಕ್ಕು, ಅಲ್ಲಿದ್ದ ಹಣಕಾಸು ಧಾನ್ಯ ಒಡವೆ ವಸ್ತ್ರಗಳು ರತ್ನಂಗಳಾದಿಯಾಗಿ ತೆಗೆದುಕೊಂಡು ಬಂದು, ತನ್ನ ಬೊಕ್ಕಸ ಬಂಡಾರ ಕಣಜಕ್ಕೆ ತುಂಬಿಸಿ, ಆ ಕಸವರಿಗೆಯನೆಲ್ಲ ಸುಡಿಸಿಬಿಟ್ಟು, ಆ ಬಿಲ್ವನ ರಕ್ಷಿಸಿ ಸುಖವಾಗಿದ್ದನು. ಅದುಕಾರಣ ರಾಜರಿಗೆ ಧೈರ್ಯವೇ ಪ್ರಧಾನವು-ಎಂದು ಹೇಳಿದ ವರರುಚಿಯ ಮಾತ ಕೇಳಿ, ರಾಯ ಮೆಚ್ಚಿ, ವರರುಚಿಗೆ ಸವಾ ಲಕ್ಷ ದ್ರವ್ಯವ ಕೊಟ್ಟನು—ಎಂದು ಚಿತ್ರಶರ್ಮನು ಹೇಳಿದ ಮಾತಿಗೆ ವಾಮಲೋಚನೆಯೆಂಬ ಪುತ್ಥಳಿ ಹಾಸ್ಯಗೆಯ್ದು ಹೇಳಿದ ಉಪಕಥೆ:—

ಎಲೈ ಚಿತ್ರಶರ್ಮನೇ! ಕೇಳು. ನಮ್ಮ ವಿಕ್ರಮಾದಿತ್ಯರಾಯನು ಈ ಉಜ್ಜಯಿನಿಪಟ್ಟಣದಲ್ಲಿ ರಾಜ್ಯಭಾರವ ಮಾಡುತ್ತ ಸರ್ವರ ಪಾಲಿಸುತ್ತ ಪೊರೆಯುತ್ತಿರುವ ವೇಳೆಯಲ್ಲಿ-ಒಂದುದಿನ ರಾತ್ರಿ ಕಾಲದಲ್ಲಿ ನಗರಶೋಧನೆಗಾಗಿ ತನ್ನ ಸಂಗಡ ನಾಗರಿಕ ಪೀಠಮರ್ದಕರ ಕರೆದುಕೊಂಡು ರಾಯನು ಹೊರಟು ಕೇರಿಕೇರಿಯಲ್ಲಿರುವ ಹದಿನೆಂಟು ಜಾತಿ ಜನರ ಮನೆಯಲ್ಲಿ ನಡೆಯುವ ವರ್ತಮಾನವ ಕೇಳುತ ಬರುವಲ್ಲಿ-ಚಂಡಿಕಾದೇವಿಯ ಗುಡಿಯಲ್ಲಿ ಮಲಗಿರುವ ಪರದೇಶಿಗಳು ಚಾತುರ್ಯವಾಡುತ್ತಿರುವುದ ಆ ಗುಡಿಯ ಪ್ರಾಕಾರದ ಗೋಡೆಯ ಹಿಂದೆ ನಿಂತು ಕೇಳುತ್ತಿರುವಲ್ಲಿ-ಆ ಚಂಡಿಕಾದೇವಿಯ ಗುಡಿಯಲ್ಲಿ ಅಷ್ಟರಲ್ಲೇ-ಚಂದ್ರೋದಯವಾಗಲಾಗಿ, ಆ ಗುಡಿಯಿಂದೊಬ್ಬ ಈಚೆಗೆ ಬಂದು ಹೋಗುವವನ ನೋಡಿ-ಇವ ಕಳ್ಳನೋ, ಬೇಹಿನವನೋ ಎಂದು ಹಿಂದೆ ರಾಯ ಹೋಗಲಾಗಿ ; ಅವನು ಕೋಟೆಯನಿಳಿದು ಉತ್ತರ ದಿಕ್ಕಿನೊಳೊಂದು ಗವಿಯ ಹೊಕ್ಕನು. ಅದ ಕಂಡು ರಾಯ ಆಗವಿಯ ಹೊಕ್ಕು ಅಲ್ಲಿರುವ ಭೂತಪ್ರೇತಗಳ ನವರತ್ನಗಳ ಕಂಡು ವಿಸ್ಮಿತನಾಗಿ ಹೋಗುವಲ್ಲಿ, ಮತ್ತೊಂದು ದ್ವಾರವ ಕಂಡು ಅದರಲ್ಲಿ ಹೊಕ್ಕು ಹೋಗುತ್ತಿರುವಲ್ಲಿ-ಅಲ್ಲೊಂದು ಚಂಡಿಕಾದೇವಿಯಿರುವ ಮಹಾವನದಲ್ಲಿ ಬೂರುಗದ ಮರದೊಳೊಂದು ಉಯ್ಯಾಲೆಯಲ್ಲಿ ತೂಗಾಡುತ್ತಿರುವ ಒಬ್ಬ ಗಂಧರ್ವ ಸ್ತ್ರೀಯ ಕಂಡು, ರಾಯ ವಿಸ್ಮಿತನಾಗಿ-ಈ ಸ್ತ್ರೀಯ ಬ್ರಹ್ಮ ಯಾರಿಗೆ ನೇಮಿಸಿರುವನೆಂದು ನೋಡುತ್ತಿರಲಾಗಿ; ಅವಳು ಉಯ್ಯಾಲೆಯಾಡುತ್ತ ದೇಶಿ, ವರಾಳಿ, ಘೂರ್ಜರಿ, ಮುಖಾರಿ, ಶ್ರೀರಾಗ ಮುಂತಾದ ರಾಗಗಳ ಪಂಚಮ, ಮಂದರ, ಮಧ್ಯ ತಾರಕದಿಂದ ಪಾಡುವ ರಚನೆಗಳೂ ಅವಳ ಲಾವಣ್ಯಸೌಂದರ್ಯಗಳ ಸಹ ನೋಡಿ, ರಾಯ ಭ್ರಮಿಸಿ, ಕಾಮಾಂಧಕಾರದಿಂದ ಭೀತಿಯ ಪಡದೆ ಆ ನವಿಲುಯ್ಯಾಲೆಯ ಮೇಲೆ ಏರಿಹೋಗಲಾಗಿ ಅವಳು ರಾಯನ ಕಂಡು, ಈತನಾರೆಂದು ಅತಿಶಯವ ಪಟ್ಟು-ಇವನೆಂಥ ವೀರನೋ ? ಇಂತಹ ಭಯಂಕರವಾದ ವನಕ್ಕೆ ಬಂದು ನನ್ನ ಯಾರು ಎಂತ ವಿಚಾರಿಸದೆ ಈವುಯ್ಯಾಲೆಯೇರಿ ಬಂದಿದ್ದಾನೆ ಎಂದು ನೋಡಿ, ಅವಳಿಂತೆಂದಳು.-ಎಲೈ ಮಹಾಪುರುಷನೇ! ನೀನು ಯಾರು ? ನರನೋ ? ಕಿನ್ನರನೋ? ಕಿಂಪುರುಷನೋ? ಯಕ್ಷನೋ? ರಾಕ್ಷಸನೋ? ದೇವನೋ?

ಯಾರು? ಎಂದು ಕೇಳಲಾಗಿ;—ನಾನು ವಿಕ್ರಮಾದಿತ್ಯರಾಯ, ಈರಾತ್ರಿ ನಗರಶೋಧನೆಗಾಗಿ ಬರಲಾಗಿ, ಒಬ್ಬ ಪರದೇಶಿ ಈ ಗವಿಯು ಹೊಕ್ಕುದ ಕಂಡು, ನಾನು ಅವನ ಹಿಂದೆ ಬಂದೆ ಎಂದ ಮಾತ ಅವಳು ಕೇಳಿ,—ನೀನು ಬಂದುದು ಲೇಸಾಯಿತೆಂದು ಅವನ ಕುಳ್ಳಿರಿಸಿಕೊಂಡು,—ಪಗಡೆಯು ಆಡುವ ಎನ್ನಲಾಗಿ; ರಾಯ—ಜೂಜಾಟ ಬೇಡ ಎಂದುದಕ್ಕೆ, ಅವಳು ಆ ಮಾತಿಗೆ—ಜೂಜಾಟವ ಕಾಳಗವ ಒಲ್ಲೆನೆನ್ನುವುದು ರಾಜರ ಧರ್ಮವಲ್ಲ ಎಂದು, ಆಬಳಿಕ—ನೀನು ಒಪ್ಪಿದಂತೆ ಆಡೆಂದು ಚಾರಿಯು ಹಾಸಿ, ಕಾಯು ಹೊಡಿ, ಪಗಡೆಯನಾಡಿ ರಾಯನ ಸೋಲಿಸಲಾಗಿ; ರಾಯ ಲಜ್ಜಿತನಾಗಿ—ಇನ್ನೊಂದು ಸಾರಿ ಆಡಿದರೆ ಗೆಲ್ವೆನು ಎನ್ನಲಾಗಿ; ಆ ಮಾತಿಗವಳು—ನಾನು ಕೇಳಿದೊಡವೆಯ ತಂದು ಕೊಟ್ಟರೆ ಆಡುವೆನು ಎಂಬುದಕ್ಕೆ, ರಾಯ-ನಿನಗೇನು ಬೇಕು ಕೇಳು ತಂದುಕೊಡುವೆನು ಎನ್ನಲಾಗಿ; ಅವಳು-ಈ ಮಹಾವನದಲ್ಲಿ ಮುಳ್ಳುಮುತ್ತುಗದ ಮರದಲ್ಲಿ ಒಂದು ಭೇತಾಳ ತಲೆ ಕೆಳಗಾಗಿ ನೇತಾಡುತ್ತಿದೆ. ಅದ ನನಗೆ ತಂದು ಕೊಟ್ಟರೆ ಆದೀತೆಂದು ಹೇಳಲಾಗಿ; ರಾಯ ಒಂದು ಭಯಂಕರವಾದ ಬಳಿಯಲ್ಲಿ ಚಂಡಿಕಾದೇವಿಯ ಗುಡಿಯ ಮುಂದೆ ಮುಳ್ಳುಮುತ್ತುಗದ ಮರದಲ್ಲಿ ತಲೆಕೆಳಗಾಗಿ ಒಣಗಿದ ಶರೀರದಲ್ಲಿ ನೇತಾಡುವ ಭೇತಾಳನ ಕಂಡು ಅದ ಹಿಡಿಯ ಹೋಗಲು, ಆ ಭೇತಾಳನು ಹುಲಿಯಾಗಿ, ಕರಡಿಯಾಗಿ, ನವಿಲಾಗಿ, ಸಿಂಹವಾಗಿ, ಕಾಡುಹಂದಿಯಾಗಿ ಆನೆಯಾಗಿ ನಾನಾಪ್ರಕಾರವಾಗಿ ಕಾಣುವುದ ಕಂಡರೂ ಧೈರ್ಯದಿಂದ ಹಿಡಿದು ಕಟ್ಟಿ ತೆಗೆದುಕೊಂಡು ಬರುವ ದಾರಿಯಲ್ಲಿ—ಆ ಭೇತಾಳನೊಂದು ಕಥೆಯ ಹೇಳಿತು. ರಾಯ ಆ ಕಥೆಗೆ ಉತ್ತರವ ಕೊಟ್ಟು ಕೊನೆಯ ಮಾತಿಗೆ ಉತ್ತರವ ಕೊಡದೆ ಮೌನದಲ್ಲಿ ತಂದು ಅವಳ ಬಳಿಯಲ್ಲಿ ಬಿಡಲಾಗಿ; ಆ ಸ್ತ್ರೀಗೂ ಭೇತಾಳನಿಗೂ ಮುಖದರ್ಶನವಾಗುವುದು ಶಾಪವಿಮೋಚನೆಯಾಗಿ, ಈರ್ವರು ವಿದ್ಯಾಧರಿ ಪುಷ್ಪದಂತರಾಗಿ ರಾಯನೆದುರಿಗೆ ನಿಲ್ಲಲು; ರಾಯ ಕಂಡು ಚೋದ್ಯಂಬಟ್ಟು—ನೀವಾರೆಂದು ಕೇಳಲಾಗಿ; ಆ ಪುಷ್ಪದಂತನಿಂತೆಂದನು:—ಕೇಳೈ ಮಹಾರಾಯನೇ! ಪೂರ್ವದಲ್ಲಿ ಕೈಲಾಸದಲ್ಲಿ ಪರಮೇಶ್ವರನು ಪಾರ್ವತಿ ಸಹ ಸತ್ಕಥಾವಿನೋದದಿಂದಿರುವಲ್ಲಿ, ಪಾರ್ವತಿ ಪರಮೇಶ್ವರನೊಡನೆ ಬ್ರಹ್ಮಕಥೆಯ ನಿರೂಪಿಸಬೇಕೆಂದು ವಿಜ್ಞಾಪಿಸಲಾಗಿ;

ಆಗ ಈಶ್ವರನು ತನ್ನ ಸಮೀಪದಲ್ಲಿದ್ದ ವಿನಾಯಕ ವೀರಭದ್ರ ಭೈರವ ಷಣ್ಮುಖ ಮುಂತಾದ ಪ್ರಮಥಗಣಗಳ ಹೊರಗೆ ಕಳುಹಿಸಿ, ಏಕಾಂತದಲ್ಲಿ ಪಾರ್ವತಿಗೆ ಬ್ರಹ್ಮಕಥೆಯ ಹೇಳುತ್ತಿರುವಲ್ಲಿ ನಾವಿಬ್ಬರೂ ಕೇಳುವುದ ತಿಳಿದು, ನೀವಿರ್ವರೂ ಭೇತಾಳಯಕ್ಷಿಣಿಯರಾಗಿ ಮಹಾವನದಲ್ಲಿ ಇರಿ! ಎಂದು ಶಾಪವ ಕೊಡಲಾಗಿ ; ಅಗ ನಾವಿರ್ವರೂ ಶರಣಾಗತರಾಗಿ—ಈ ಶಾಪವಿಮೋಚನೆ ಎಂದಿಗೆ ? ಎಂದು ಈಶ್ವರನ ಬೇಡಿಕೊಳ್ಳಲಾಗಿ ; ವಿಕ್ರಮಾದಿತ್ಯರಾಯನಿಂದ ಶಾಪವಿಮೋಚನೆಯಾಗುವುದೆಂದು ಈಶ್ವರನು ನಿರೂಪಿಸಲಾಗಿ, ಹೀಗಿಲ್ಲಿದ್ದೆವು. ಇಂದಿಗೆ ನಿನ್ನಿಂದ ನಮ್ಮ ಶಾಪ ತೀರಿತು ಎಂದು, ರಾಯನ ಸ್ತುತಿಯ ಮಾಡಿ, ಪುಷ್ಪದಂತನು ರಾಯನಿಗೆ ಜೀವರತ್ನ, ರಸಾಯನ ರತ್ನ, ರಸರತ್ನ, ಅದೃಶ್ಯರತ್ನ, ಸರ್ವವ ಈವ ರತ್ನ ಎಂಬ ಪಂಚರತ್ನಗಳ ಕೊಟ್ಟು, ಅವರಿರ್ವರು ಕೈಲಾಸಕ್ಕೆ ಹೋಗಲಾಗಿ ; ಬಳಿಕ ಅಲ್ಲಿಂದ ರಾಯನು ಬಿಲದ್ವಾರದಲ್ಲಿ ಹೊಕ್ಕು, ಈಚೆಗೆ ಬಂದು, ಈ ಪಟ್ಟಣಕ್ಕೆ ಬರುವ ದಾರಿಯಲ್ಲಿ ಒಬ್ಬ ವೀರ ಶೂಲದಲ್ಲಿರುವುದ ಕಂಡು, ಆವನಿಗೆ ಜೀವರತ್ನವ ಕೊಟ್ಟು ಬರುತ್ತಿರಲಾಗಿ ; ಒಬ್ಬ ತಪಸ್ವಿ ಬಹುಕಾಲ ತಪಸ್ಸುಮಾಡಿದಾಗ್ಯೂ ರಸವಿದ್ಯ, ಅದೃಶ್ಯವಿದ್ಯ ಸಿದ್ಧಿಸದೆ ಇರುವನ ಕಂಡು ವಿಚಾರಿಸಿ ಆವನಿಗೆ ರಸರತ್ನ, ಅದೃಶ್ಯರತ್ನ ಎರಡೆ ರತ್ನವ ಕೊಟ್ಟು ದಾನಶೂರನೆಂಬ ಪೆಸರ ಉಂಟುಮಾಡಿಕೊಂಡು, ತಾನು ಸರ್ವವ ಈವ ರತ್ನವ ತೆಗೆದುಕೊಂಡು, ಈ ಪಟ್ಟಣಕ್ಕೆ ಬಂದು, ಸಿಂಹಾಸನಾರೂಢನಾಗಿ, ಸತ್ಕಥಾಶ್ರವಣದಿಂದ ಸುಖವಾಗಿ ಈ ರಾಜ್ಯವಾಳುತಿದ್ದನು ಕಣಾ! ನಮ್ಮ ವಿಕ್ರಮಾದಿತ್ಯರಾಯನು—ಎಂದು ಪೇಳಲಾಗಿ ;

ಚಿತ್ರಶರ್ಮನು ಕೇಳಿ ವಿಸ್ಮಿತನಾಗಿ ಭೋಜರಾಜನೊಡನೆ ಇಂತೆಂದನು:—ಎಲೈ ರಾಯನೇ! ಈ ಮೂವತ್ತೆರಡು ಪುತ್ತಳಿಯುಕ್ತವಾದ ಸಿಂಹಾಸನವು ನಮಗಸಾಧ್ಯವೆಂದು ಭೋಜರಾಯನ ಕೈವಿಡಿದು ಕೊಂಡು, ಅರಮನೆಗೆ ಹೋಗಲಾಗಿ; ಭೋಜರಾಯ—ತನಗೆ ಸಾಧ್ಯವಾದಂಥ ವಸ್ತು ಅಸಾಧ್ಯವಾಯಿತೆಂದು ಚಿಂತಿಸುತ್ತಿರುವಷ್ಟರಲ್ಲೇ ಕೈಲಾಸದಿಂದ ವೀರಭದ್ರ ಮುಂತಾದ ಪ್ರಮಥಗಣಗಳು ಬಂದು, ಆಸಿಂಹಾಸನವ ಕೈಲಾಸಕ್ಕೆ ತೆಗೆದುಕೊಂಡು ಹೋಗಲಾಗಿ ; ಭೋಜರಾಯ ಕಂಡು ಚಿತ್ರಶರ್ಮನ ಕೂಡೆ

ಇಂತೆಂದನು:—ಕೇಳೈ ಆಗದ ಕಾರ್ಯ ಏನು ಮಾಡಿದರೂ ಆಗಲರಿಯದು. ಆಗುವ ಕಾರ್ಯ ತನಗೆ ತಾನೇ ಆಗುವುದೆಂಬ ಎರಡು ಬಗೆ ನೀತಿಯ ತಿಳಿದಾಗ್ಯೂ ವ್ಯಾಕುಲ ತಪ್ಪದು ಎನ್ನಲಾಗಿ; ಚಿತ್ರಶರ್ಮನು ಭೋಜರಾಯನ ಚತುರೋಪಾಯದಿಂದೊಡಂಬಡಿಸಿ, ವ್ಯಸನಪಡಲಾಗದೆಂದ ಬಳಿಕ, ರಾಜೇಂದ್ರಚೂಡಾಮಣಿ ಭೋಜರಾಯನು ಮನಸ್ಸಿಗೆ ನೆಮ್ಮದಿ ಮಾಡಿಕೊಂಡು ಧಾರಾಪುರದಲ್ಲಿ ಸುಖರಾಜ್ಯವ ಗೆಯ್ಯುತ್ತಿದ್ದನು.

ಎಂದಿಂತು ಪಾರ್ವತಿಗೆ ಪರಮೇಶ್ವರನಿರೂಪಿಸಿದ[1] ಬೃಹತ್ಕಥೆ[1] ಯೆಂಬ ಬತ್ತೀಸಪುತ್ಥಳಿಯ ಪ್ರಸಂಗದ ಪ್ರಬಂಧವ ಲೋಕಕಾಂತನಾದ ವಿಕ್ರಮಾದಿತ್ಯರಾಯನ ವೀರತ್ವವ [2]ಕನಕಪಾಂಡುರಂಗನಾಥನ ಕುಮಾರ ಭಾಳಲೋಚನನೆಂಬ ಕರಣಿ ಕವೀಶ್ವರನು ದೇವನಿಂದ ನಿರ್ಮಿಸಿದಂಥ ಈ ಧೈರ್ಯಾಮೃತವ ಸುಜನರಾದವರು ಪೇಳಿ ಕೇಳಿದರೆ ಇಷ್ಟಾರ್ಥ ಸಿದ್ಧಿಪುದೆಂದು ಪೇಳಿದನು.[2]

ಇಂತು ಕರ್ಣಾಟಕಭಾಷಾವಿರಚಿತಮಪ್ಪ ವಿಕ್ರಮಾದಿತ್ಯರಾಯನ ಚರಿತ್ರೆಯಲ್ಲಿ
ವಾಮಲೋಚನೆಯೆಂಬ ಪುತ್ಥಳಿಯು ಪೇಳಿದ ಮೂವತ್ತೆರ
ಡನೆಯ ಕಥೆಗೆ ಮಂಗಳಂ.

ಬತ್ತಿಸಪುತ್ಥಳೀಕಥೆ ಸಂಪೂರ್ಣಂ.

ಪಾ—1. ಬ್ರಹ್ಮಸತ್ಕಥೆ.

2. ಕ್ಷೇಮೇಂದ್ರಭೂಭುಜಂ ಪೇಳ್ದ ಹದಿನೆಂಟನೆಯ ಲಂಬಕದ ಬತ್ತೀಸಪುತ್ಥಳಿ ಕಥಾಪ್ರಬಂಧವ, ಇಂಪೊದವಿದ ಬೃಹತ್ಕಥಾರಸದೊಳುಳ್ಳ ಜಗಕ್ಕೆ ನೆಗಳ್ತೆವೆತ್ತ ಸಂದನುಪಮವಿಕ್ರಮಾರ್ಕನ ಸುವೀರತೆಯು,ಕಡುಭೋಗದೆಳ್ಗೆಯೆಂಬ ಅನನುತ್ತಮಾದ ಪುತ್ಥಳಿಯ ಸತ್ಕಥೆಯು ಕನಕಪಾಂಡುರಂಗನಾಥನ ಸುತ ಭಾಳಲೋಚನ ಕರಂ ಕವಿಪೇವನಿಂದ ನೆಗಳ್ಚಿದಂ ಸಲೆ ಧೈರ್ಯಾಮೃತಮಂ ನೆಗಳ್ತವಡೆದಿರ್ಪ ವಾಮನೂರಿಕ ಕಥಾದಿನೆಯುಂ ಮೇಣಾಶಕುನ ಪ್ರಪಂಚಚಯಮಂ ಬತ್ತೀಸಸತ್ಪುತ್ರಿಕಾಸ್ತೀಲ ಸಿಂಹಾಸನದೊಂದು ಸತ್ಕಥೆಗಳಂ ದಕ್ಷಾಧ್ವರಧ್ವಂಸನುಜ್ಜ್ವಲಚಾರಿತ್ರವನ್ನೈದೆ ನಿರ್ಮಿಸಿದನೀ ಭಾಳೇಕ್ಷದೇವೋತ್ತಮಂ. ಕುಳಿರ್ವೆಲರಂತೆ ನಂದನ ತಮಾಲದ ಕಣ್ಗೊಳಂತೆ ಪುಷ್ಪಮಂಡಲನವಗಂಧದಂತೆ ಪುದಿದಿನ್ನವಿರಂತೆ ನಿಜಪ್ರಿಯಾಂಗಸೋಜ್ವಲಿರತಿಯಂತೆ ಚಂದನದಂತೆ ಇದುಯಿನಸೌರಭದಂತೆ ಚಾರುಪುತ್ಥಳಿಯ ಕಥಾರಸದಂತೆ ಜನರಂ ತಲೆದೂಗಿಸದೇ ನಿರಂತರಂ—ಎಂದು ಒಂದು ಪ್ರತಿಯಲ್ಲಿ ಇದೆ.

ಇವು ಕೆಟ್ಟುಹೋದ ಪದ್ಯಂಗಳಂತಿವೆ.

